ಹುಬ್ಬಳ್ಳಿ ಮಂಗಳವಾರ, 5 ಮೇ 2026 ಸಂಪುಟ 16, ಸಂಚಿಕೆ 41, ಪುಟಗಳು 12 ■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413 ▸hosadigantha.com ▸epaper.hosadigantha.com ₹5

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಮತಾ, ಸ್ಟಾಲಿನ್ ಸೋಲು: ಇಂಡಿ ಕೂಟದ ಅಸ್ತಿತ್ವಕ್ಕೇ ಸಂಚಕಾರ

◆ ಪುಟ ೬

ಪಂಚರಾಜ್ಯ ಫಲಿತಾಂಶ ವಿಶೇಷ ಪುಟಗಳು ೩,೧೦

ಬಂಗಾಳದಲ್ಲಿ ಮಮತಾ ಗರ್ವಭಂಗ | ಅಸ್ಸಾಂನಲ್ಲಿ ಬಿಜೆಪಿ ಅಜೇಯ | ತ.ನಾಡಲ್ಲಿ ಜನನಾಯಕ ವಿಜಯ
ನಿತಿನ್‌ಗೆ ಮೊದಲ ಭರ್ಜರಿ ಜಯ | ಕೇರಳ, ಕರ್ನಾಟಕದಲ್ಲಿ ಕೈ ಕಹಳೆ | ಎನ್‌ಡಿಎ ಪಾಲಿಗೆ ಪುದುಚೆರಿ

ದೀದಿ ಜಾಲಮುರಿದ ಮೋದಿ



ಪಶ್ಚಿಮ ಬಂಗಾಳ		ತಮಿಳುನಾಡು		ಕೇರಳ		ಅಸ್ಸಾಂ		ಪುದುಚೇರಿ	
ಬಿಜೆಪಿ	ಟಿಎಂಸಿ	ಟಿವಿಕೆ	ಡಿಎಂಕೆ+	ಯುಡಿಎಫ್	ಎಲ್‌ಡಿಎಫ್	ಬಿಜೆಪಿ+	ಕಾಂಗ್ರೆಸ್+	ಬಿಜೆಪಿ+	ಕಾಂಗ್ರೆಸ್+
208	79	107	74	100	35	102	21	18	6
ಕಾಂಗ್ರೆಸ್	ಇತರೆ	ಎಐಎಡಿಎಂಕೆ+	ಇತರೆ	ಬಿಜೆಪಿ+	ಇತರೆ	ಎಐಯುಡಿಎಫ್	ಇತರೆ	ಇತರೆ	
2	4	53	0	3	2	2	1	6	
ಒಟ್ಟು ಸ್ಥಾನ 293, ಬಹುಮತಕ್ಕೆ 148		ಒಟ್ಟು ಸ್ಥಾನ 234, ಬಹುಮತಕ್ಕೆ 118		ಒಟ್ಟು ಸ್ಥಾನ 140, ಬಹುಮತಕ್ಕೆ 71		ಒಟ್ಟು ಸ್ಥಾನ 126, ಬಹುಮತಕ್ಕೆ 64		ಒಟ್ಟು ಸ್ಥಾನ 30, ಬಹುಮತಕ್ಕೆ 16	





ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದಾಖಲೆ ಜಯ

ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ಇತಿಹಾಸವನ್ನೇ ಸೃಷ್ಟಿಸಿದೆ. ಮಮತಾ ಬ್ಯಾನರ್ಜಿಯ ಕೋಟೆಯನ್ನೇ ಛಿದ್ರಗೊಳಿಸಿ ರಾಜಕೀಯ ಇತಿಹಾಸದಲ್ಲಿ ಬಿಜೆಪಿ ಹೊಸ ಅಧ್ಯಾಯ ಆರಂಭಿಸಿದೆ. ಈ ನಡುವೆ, ಮುಖ್ಯಮಂತ್ರಿ ಪಟ್ಟಕ್ಕಾಗಿ ಪೈಪೋಟಿಯೂ ಜೋರಾಗಿದೆ. ಸುವೇಂದು ಅಧಿಕಾರಿ ಸಿಎಂ ಹುದ್ದೆಗೆ ಪ್ರಮುಖ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದಾರೆ. ನಂದಿಗ್ರಾಮ್ ಹೋರಾಟದಿಂದಲೇ ರಾಜ್ಯ ರಾಜಕೀಯದಲ್ಲಿ ಭಾರೀ ಪ್ರಭಾವ ಬೀರಿದ ಅವರು, ತೃಣಮೂಲ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ ನಂತರ ಪಕ್ಷದ ವಿಸ್ತರಣೆಗೆ ಪ್ರಮುಖ ಶಕ್ತಿಯಾಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ದಿಲೀಪ್ ಘೋಷ್, ಮಾಜಿ ಕೇಂದ್ರ ಸಚಿವ ನಿಸಿತ್ ಪ್ರಮಾಣಿಕ್, ರಾಜ್ಯ ಉಪಾಧ್ಯಕ್ಷೆ ಅಗ್ನಿಮಿತ್ರ ಪಾಲ್, ರೂಪಾ ಗಂಗೂಲಿ ಹೆಸರುಗಳೂ ಸಿಎಂ ರೇಸ್‌ನ ಪಟ್ಟಿಯಲ್ಲಿವೆ. ➡ಪುಟ ೪

ಕೇರಳದಲ್ಲಿ ಯುಡಿಎಫ್

◆ **ತಿರುವನಂತಪುರಂ:** 2026ರ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಭಾರೀ ಬಹುಮತ ಗಳಿಸಿದೆ. ಎಡಪಕ್ಷಗಳ ಒಕ್ಕೂಟದ ಹತ್ತು ವರ್ಷಗಳ ಆಳ್ವಿಕೆಗೆ ನಿರ್ಣಾಯಕ ವಿರಾಮ ಬಿದ್ದಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದೆ. ಇದು ಪ್ರಬಲ ನಾಯಕರ ಭವಿಷ್ಯ ಮತ್ತು ರಾಜಕೀಯ ಅಸ್ತಿತ್ವವನ್ನು ಬದಲಾಯಿಸುವ ಸೂಚನೆಯನ್ನು ನೀಡಿದೆ. ➡ಪುಟ ೪

ತ.ನಾಡಲ್ಲಿ ದಳಪತಿ ದರ್ಬಾರ್

ಚೊಚ್ಚಲ ಚುನಾವಣೆಯಲ್ಲೇ ತಮ್ಮ ಸಿನಿಮಾಗಳಂತೆ ಬ್ಲಾಕ್ ಬಸ್ಟರ್ ವಿಜಯವನ್ನು ದಳಪತಿ ಕಂಡಿದ್ದಾರೆ. ಎರಡೂ ಜಗಜಟ್ಟಿ ದ್ರಾವಿಡ ಪಕ್ಷಗಳ ಹಲವು ದಶಕಗಳ ಪಾರುಪತ್ಯವನ್ನು ವಿಜಯ್ ಕೊನೆಗೊಳಿಸಿದ್ದಾರೆ. 1962ರಲ್ಲಿ ಕಾಂಗ್ರೆಸ್‌ನಿಂದ ಕೆ.ಕಾಮರಾಜ್ ಗೆಲುವು ಸಾಧಿಸಿದ್ದು ಬಿಟ್ಟರೆ, ಡಿಎಂಕೆ–ಎಐಎಡಿಎಂಕೆ ಪಕ್ಷಗಳೇ ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೊಂಡು ಬಂದಿದ್ದವು.




ಅಸ್ಸಾಂನಲ್ಲಿ ಅಚಲ ಬಿಸ್ವಾಸ

ಚಹಾ ತೋಟದ ನಾಡಲ್ಲಿ ಮತ್ತೊಮ್ಮೆ ಕಮಲ ಅರಳಿದ್ದು,



ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗದ್ದುಗೆ ಏರಿದೆ. ಎನ್‌ಡಿಎ ಸ್ಪಷ್ಟ ಬಹುಮತ ಸಾಧಿಸಿದೆ. ಸ್ಥಳೀಯ ಸಮಸ್ಯೆ, ನುಸುಳುಕೋರರಿಂದ ರಕ್ಷಣೆ, ಉದ್ಯೋಗ ಸೃಷ್ಟಿಯ ವಿಚಾರಗಳನ್ನಿಟ್ಟುಕೊಂಡು ಎನ್‌ಡಿಎ ಅಖಾಡಕ್ಕಿಳಿದಿತ್ತು. ಸತತ ಮೂರನೇ ಬಾರಿ ಬಿಜೆಪಿಯತ್ತ ಜನರು ಒಲವು ತೋರಿಸಿದ್ದು ಉತ್ತರ–ಪೂರ್ವ ಭಾರತದಲ್ಲಿ ಬಿಜೆಪಿ ತನ್ನ ಹಿಡಿತ ಇನ್ನಷ್ಟು ಗಟ್ಟಿಗೊಳಿಸಿದೆ. ಹಿಮಂತ್ ಬಿಸ್ವಾ ಶರ್ಮ ಜಾಲುಕ್ ಬಾರಿಯಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ➡ಪುಟ ೪

ಪುದುಚೇರಿಯಲ್ಲಿ ಎನ್‌ಡಿಎ ಜಯಭೇರಿ



ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈ ಬಾರಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಗೆಲುವು ಸಾಧಿಸಿದೆ. 30 ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ 18 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಮತ್ತೊಮ್ಮೆ ಅಧಿಕಾರಕ್ಕೇರಲು ಸಜ್ಜಾಗಿದೆ. ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು ತತ್ತನಚವಾಡಿ ಕ್ಷೇತ್ರವನ್ನು ಗೆದ್ದು ಪ್ರಮುಖ ವಿಜೇತರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ.

- ಸ್ಟಾಲಿನ್, ಮಮತಾಗೆ ಮುಖಭಂಗ, ಇಬ್ಬರೂ ಸಿಎಂಗಳಿಗೆ ಸೋಲು
- 22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ
- ಚುನಾವಣಾ ಫಲಿತಾಂಶ ಹಿನ್ನೆಲೆಯಲ್ಲಿ 242 ಕೋಟಿ ರೂ. ಬೆಟ್ಟಿಂಗ್!

ಅರಳಿತು ತಾವರೆ

ಕಠಿಣ ಪರಿಶ್ರಮದಿಂದ ಕಮಲ ಅರಳಿಸಿದ ಕಾರ್ಯಕರ್ತರಿಗೆ ಅಭಿನಂದನೆ: ಮೋದಿ

◆ **ಹೊಸದಿಲ್ಲಿ:** ಅಹರ್ನಿಶಿ ನೀವು ಪಟ್ಟ ಅವಿಶ್ರಾಂತ ಪ್ರಯತ್ನಗಳಿಂದ ತಾವರೆ ಹೂ ಅರಳಿದೆ ಎಂದು ಪ.ಬಂಗಾಳ, ಅಸ್ಸಾಂ, ಪುದುಚೇರಿಗಳಲ್ಲಿ ಬಿಜೆಪಿಯ ಐತಿಹಾಸಿಕ ವಿಜಯವನ್ನು ಉಲ್ಲೇಖಿಸಿ ಬಿಜೆಪಿ ಕಾರ್ಯಕರ್ತರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಮೂರು ರಾಜ್ಯಗಳಲ್ಲಿ ಬಿಜೆಪಿಯ ಅಭೂತಪೂರ್ವ ಜಯಭೇರಿ ಬಗ್ಗೆ ಪ್ರಧಾನಿ ಮೋದಿ ತುಂಬು ಸಂತಸ ವ್ಯಕ್ತಪಡಿಸಿದ್ದಾರೆ. ದಿಲ್ಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಯಕರ್ತರನ್ನು ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ಇದೇ ವೇಳೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಹಾಕಿದ ಹಾರವನ್ನು ಮೋದಿ ಮರಳಿ ನಿತಿನ್ ನವೀನ್ ಅವರಿಗೇ ಹಾಕಿ ಇದು ನಿಮ್ಮ ಮೊದಲ ಗೆಲುವು ಎಂದು ಶ್ಲಾಘಿಸಿದರು. ಬಂಗಾಳ, ಅಸ್ಸಾಂ, ಪುದುಚೇರಿ, ತಮಿಳುನಾಡು ಮತ್ತು ಕೇರಳದ ಜನತೆಗೆ ನಾನಿಂದು ಗೌರವಪೂರ್ವಕ ತಲೆಬಾಗುತ್ತೇನೆ. ➡ಪುಟ ೪

ಡಾ.ಶ್ಯಾಮ್ ಪ್ರಸಾದ್ ಕನಸು ನನಸು

ಇಂದೀಗ ಬಿಜೆಪಿ ಕಾರ್ಯಕರ್ತನಾಗಿ ಮಗದೊಂದು ಚಿಂತನೆ ನನ್ನ ಮನಸ್ಸಲ್ಲಿ ಮೂಡಿದೆ. ಅದೆಂದರೆ ಇಂದು ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರ ಆತ್ಮಕ್ಕೆ ತುಂಬು ಶಾಂತಿ ಲಭಿಸಿರಬಹುದು ಎಂದು ಹೇಳಿರುವ ಪ್ರಧಾನಿ ಮೋದಿ, ಬಿಜೆಪಿ ವಿಜಯದ ಹಿನ್ನೆಲೆ ನಮ್ಮ ಗಮನ ಬದಲಾವಣೆಗಳತ್ತ ಇರಬೇಕು ವಿನಾ ದ್ವೇಷಸಾಧನೆಯತ್ತ ಅಲ್ಲ. ಭವಿಷ್ಯದತ್ತ ಆದ್ಯತೆ ವಿನಾ ಆತಂಕದತ್ತ ಅಲ್ಲ. ಇನ್ನಾದರು ಅಂತ್ಯರಹಿತ ಹಿಂಸೆಯ ಹಾದಿಯನ್ನು ಸಂಪೂರ್ಣ ತ್ಯಜಿಸಿಬಿಡೋಣ ಎಂದು ಎಲ್ಲಾ ಪಕ್ಷೀಯರನ್ನು ವಿನಂತಿಸಿದರು. ➡ಪುಟ ೪

ರಾಜ್ಯದಲ್ಲಿ ಕೈತಪ್ಪದ ಮತದಾರರ ವಿಶ್ವಾಸ

ಸಮರ್ಥ್ ಶಾಮನೂರು ಗೆಲುವು

◆ **ದಾವಣಗೆರೆ:** ಮುಸ್ಲಿಂ ಬಂಡಾಯದಿಂದ ತೀವ್ರ ಕುತೂಹಲ ಕೆರಳಿಸಿದ್ದ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪ್ರಯಾಸದ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ವಿರುದ್ಧ 5,708 ಮತಗಳ ಅಂತರದಿಂದ ಜಯ ದಾಖಲಿಸಿದ್ದಾರೆ. ಡಾ. ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿದ್ದ ಕ್ಷೇತ್ರ ಉಳಿಸಿಕೊಳ್ಳುವಲ್ಲಿ ಮೊಮ್ಮಗ ಸಮರ್ಥ್ ಯಶಸ್ವಿಯಾದರೂ, ದಾಖಲೆ ಅಂತರದಲ್ಲಿ ಗೆಲುವು ಸಾಧ್ಯವಾಗಿಲ್ಲ. ➡ಪುಟ ೪

ಗೆದ್ದು ಬೀಗಿದ ಉಮೇಶ ಮೇಟಿ

◆ **ಬಾಗಲಕೋಟೆ:** ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ



ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆದ್ದಿದ್ದಾರೆ. ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗಿಂತ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಉಮೇಶ ಮೇಟಿ 98,919 ಮತ ಪಡೆದು ಗೆಲುವು ಸಾಧಿಸಿದ್ದಾರೆ. ಬಾಗಲಕೋಟೆಯ ಮತಕ್ಷೇತ್ರದ ಅಭಿವೃದ್ಧಿಗೆ ನಮ್ಮ ತಂದೆ ಕಂಡಿದ್ದ ಕನಸನ್ನು ನನಸು ಮಾಡುವೆ ಎಂದು ಉಮೇಶ ಮೇಟಿ ಹೇಳಿದ್ದಾರೆ. ➡ಪುಟ ೪

ತಮಿಳು ಮತದಾರನ ಮೂರನೇ ಆಯ್ಕೆ!

- ಡಿಎಂಕೆ ಅಹಂಕಾರಕ್ಕೆ ವಿಜಯ್ ಪೆಟ್ಟು
- ಹಿಂದೂ ದೇವರು, ಧರ್ಮಕ್ಕೆ ಪದೇ ಪದೆ ಅವಮಾನ
- ಸಚಿವರು, ನಾಯಕರ ಅವಹೇಳನ ಖಂಡಿಸದ ಸ್ಟಾಲಿನ್
- ಡಿಎಂಕೆಗೆ ಪರ್ಯಾಯವಾಗಿ ಟಿವಿಕೆ ಸರ್ಕಾರ ಅಸ್ತಿತ್ವಕ್ಕೆ
- ಎಐಎಡಿಎಂಕೆಯ ನಾಯಕ ರಹಿತ ಪಕ್ಷ ಕೈಬಿಟ್ಟ ಜನ

ದಿಗಂತ ವಿಶ್ಲೇಷಣೆ

▸ **ಸೋಮಶೇಖರ ಸಿ.ಜೆ.**

ತಮಿಳುನಾಡಿನ ಮತ ಎಣಿಕೆ ಕೊಠಡಿಗಳಿಂದ ಸೋಮವಾರ ಹೊರಬಂದ




ಸಂಖ್ಯೆಗಳು ಕೇವಲ ಒಂದು ಸರ್ಕಾರವನ್ನು ಬದಲಿಸುತ್ತಿಲ್ಲ, ಆರು ದಶಕಗಳಷ್ಟು ಹಳೆಯ ರಾಜಕೀಯ ವ್ಯಾಕರಣವನ್ನೇ ತಿದ್ದಿ ಬರೆದಿವೆ. ತಮಿಳಗ ವೆಟ್ರಿ ಕಳಗಂ(ಟಿವಿಕೆ) 106 ಕ್ಷೇತ್ರಗಳಲ್ಲಿ, ಎಐಎಡಿಎಂಕೆ 56 ಮತ್ತು ಡಿಎಂಕೆ 72 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಇದು ಮುಗಿಯುತ್ತಿರುವ ಒಂದು ಯುಗದ ಮತ್ತು ಆರಂಭವಾಗುತ್ತಿರುವ ಮತ್ತೊಂದು ಯುಗದ ನಡುವಿನ ಗೆರೆಯನ್ನು ಎಳೆದಿದೆ. 234 ಸ್ಥಾನಗಳ ವಿಧಾನಸಭೆಯಲ್ಲಿ ಬಹುಮತಕ್ಕೆ ಬೇಕಿರುವ 118ರ ಗೆರೆಗೆ ಕೇವಲ 12 ಸ್ಥಾನಗಳ ಅಂತರದಲ್ಲಿ ಒಂದು ಇತ್ತೀಚೆಗಷ್ಟೇ ಹುಟ್ಟಿಕೊಂಡ ಪಕ್ಷ ನಿಂತಿದೆ. ➡ಪುಟ ೪

ಲಾಸ್ಟ್ ಮೊಘಲ್ ಆದ ಕಾಮ್ರೆಡ್ ವಿಜಯನ್

▸ **ಸಂತೋಷ್ ತಮ್ಮಯ್ಯ**

ಕೇರಳದಲ್ಲಿ ಎಲ್‌ಡಿಎಫ್ ಸೋಲುವುದರೊಂದಿಗೆ ಕಮ್ಯುನಿಸ್ಟರ ಶವಪೆಟ್ಟಿಗೆಗೆ ಕೊನೆ ಮೊಳೆ ಬಿದ್ದಂತಾಗಿದೆ. ಆ ಮೂಲಕ ಪಿಣರಾಯಿ ವಿಜಯನ್ ಕೊನೆಯ ಕಾಮ್ರೆಡ್ ಮುಖ್ಯಮಂತ್ರಿ ಎಂದು ಇತಿಹಾಸಕ್ಕೆ ಸಂದಿದ್ದಾರೆ. ಸಮಾನತೆ, ಕ್ರಾಂತಿಗಳ ಹೆಸರಿನಲ್ಲಿ

ಮಲಬಾರ್ ಪ್ರದೇಶದಲ್ಲೇ ಕಾಮ್ರೆಡ್‌ಗಳಿಗೆ ಹಿನ್ನಡೆ



ಹರತಾಳಗಳನ್ನು ನಡೆಸಿ ಜನರನ್ನು ದಿಕ್ಕು ತಪ್ಪಿಸಬಹುದು ಎಂದುಕೊಂಡ ಚಿಂತನೆ ಕೊನೆಗೂ ಕೊನೆಯುಸಿರೆಳೆದಿದೆ. ಕೇರಳದಲ್ಲಿ ರಾಜಕೀಯ ಹತ್ಯೆಗಳ ಕರಾಳ ಅಧ್ಯಾಯಕ್ಕೆ ಮುನ್ನುಡಿ ಬರೆದಿದ್ದ ಮುಖ್ಯಮಂತ್ರಿಯೇ ಭಾರತದ ಕಟ್ಟಕಡೆಯ ಕಮ್ಯುನಿಸ್ಟ್ ಮುಖ್ಯಮಂತ್ರಿಯಾಗಿರುವುದು ವಿಶೇಷ. 2018ರಲ್ಲಿ ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ 20 ವರ್ಷಗಳ ದೀರ್ಘಕಾಲದ ಅಧಿಕಾರ ಕಳೆದುಕೊಂಡಾಗ ಅವರನ್ನು 'ಲಾಸ್ಟ್ ಮೊಘಲ್' ಎಂದು ಕರೆಯಲಾಗಿತ್ತು. ಅದಕ್ಕೆ ತಿರುವನಂತಪುರದಿಂದ ಹೇಳಿಕೆ ನೀಡಿದ್ದ ಪಿಣರಾಯಿ ವಿಜಯನ್, "ನಾನು ಜೀವಂತವಿರುವವರೆಗೆ ಭಾರತದಲ್ಲಿ ಕಮ್ಯುನಿಸಮ್ಮಿಗೆ ಕೊನೆ ಎಂಬುದಿಲ್ಲ" ಎಂದು ಗುಡುಗಿದ್ದರು. ➡ಪುಟ ೪

ಕಿರುಸುದ್ದಿ



ಉಪ್ಪಿನಬೆಟಗೇರಿ: ಅಮ್ಮಿನಬಾವಿ ಗ್ರಾಮದ ಶಿವಪುತ್ರ ಶಿಯೋಗಿಗಳ ಆಶ್ರಮದಲ್ಲಿ ಹಮ್ಮಿಕೊಂಡಿದ್ದ ಸಿದ್ಧಾರೂಢ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ತಾ.ಪಂ. ಮಾಜಿ ಸದಸ್ಯ ಹಾಗೂ ಜೈನ ಸಮಾಜದ ಮುಖಂಡ ಸುರೇಂದ್ರ ದೇಸಾಯಿ ಅವರನ್ನು ಗೌರವಿಸಲಾಯಿತು. ಫಕೀರಪ್ಪ ಹೆಬ್ಬಳ್ಳಿ, ಈರಣ್ಣ ಹಂಚಿನಾಳ, ಬಸವರಾಜ ತಿರಿ, ಚನ್ನಬಸಪ್ಪ ಹೆಬ್ಬಳ್ಳಿ, ಪ್ರಕಾಶ ಚಂದಿ, ಮಲ್ಲಪ್ಪ ಗೋಸಲ, ಬಸಪ್ಪಜಾನಿ, ಶ್ರೀನಿವಾಸ ಭೋವಿ, ಸಿದ್ಧಾರೂಢ ಚಂದಿ, ಚನ್ನಬಸಪ್ಪ ಕಂಬಳಿ ಇದ್ದರು.

ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆ



ಕುಂದಗೋಳ: ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ತಾಲೂಕಿನ ಗುರುವಿನಹಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ ಬಾಗಲ್ ಆಯ್ಕೆ ಮಾಡಲಾಗಿದೆ ಎಂದು ರಾಜ್ಯ ಘಟಕದ ರಾಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವರಾಜ ಬಾಗಲ್ ಮಾತನಾಡಿ, ಸರ್ಕಾರಿ ನೌಕರರಲ್ಲಿ ಇರುವ ವಿವಿಧ ಕಲೆ, ಸಾಹಿತ್ಯದ ಅನಾವರಣ, ಉದ್ಯೋಗದ ಒತ್ತಡದಿಂದ ನೌಕರರನ್ನು ಹೊರತರುವುದು, ಭಾರತದ ಇತಿಹಾಸ, ಪರಂಪರೆ, ಕಲೆಗಳನ್ನು ಉಳಿಸಿ ಬೆಳೆಸುವುದು, ಕನ್ನಡ ಜಾಗೃತಿ ಅಭಿಯಾನ ಆರಂಭಿಸುವುದು, ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ನೌಕರ ಬರಹಗಾರರನ್ನು ಒಟ್ಟುಗೂಡಿಸಿ ಪತ್ರಿಕೆ, ಸಾಹಿತ್ಯ ಮರಣೀಗಳನ್ನು ಹೊರತರುವುದು.ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಲಾಗುವುದೆಂದು ತಿಳಿಸಿದರು.

ಪ್ರವೇಶಾತಿ ಆರಂಭ

ನವಲಗುಂದ: ಪ್ರಸ್ತುತ ಶೈಕ್ಷಣಿಕ ವರ್ಷ 2026 - 27ನೇ ಸಾಲಿನ ಬಿಎ, ಬಿಕಾಂ ಮತ್ತು ಬಿಎಸ್ ಸಿ ಪ್ರಥಮ ಸೆಮಿಸ್ಟರ್ ಗಳ ಪ್ರವೇಶ ಪ್ರಾರಂಭವಾಗಿದ್ದು, ಪಿಯುಸಿ ಪಾಸಾದ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಬಹುದು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವಲಗುಂದದ ಪ್ರಾಚಾರ್ಯ ಡಾ. ಎಂ.ಬಿ.ಬಾಗಡಿ ಹೇಳಿದ್ದಾರೆ.

ಮಹಾವಿದ್ಯಾಲಯವು ನ್ಯಾಕ್ ನಿಂದ 2.88 ಸಿ.ಜಿ.ಪಿ.ಎ ಅಂಕಗಳೊಂದಿಗೆ ಬಿ ++ ಮಾನ್ಯತೆ ಪಡೆದಿದ್ದು, ಇದು ಕಾಲೇಜಿನ ಶೈಕ್ಷಣಿಕ ಗುಣಮಟ್ಟ ಮತ್ತು ಅಭಿವೃದ್ಧಿಯ ದ್ಯೋತಕವಾಗಿದೆ. ಈ ಮಹಾವಿದ್ಯಾಲಯವು ಪರಿಣಿತ ಉಪನ್ಯಾಸಕ ವರ್ಗದವರನ್ನು ಹೊಂದಿದ್ದು ಜೊತೆಗೆ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ವೇತನಗಳು, ಶುಲ್ಕ ವಿನಾಯಿತಿ ಸೌಲಭ್ಯಗಳು, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಇರುವ ಶುಲ್ಕ ವಿನಾಯಿತಿ ಸೌಲಭ್ಯಗಳು ಮತ್ತು ಪದವಿ ನಂತರದ ಉದ್ಯೋಗಾವಕಾಶಗಳ ಮಾಹಿತಿ, ಉದ್ಯೋಗ ನೀಡುವಿಕೆ ಮಾರ್ಗದರ್ಶನ, ಕೌಶಲ್ಯ ತರಬೇತಿಗಳು ಕಂಪ್ಯೂಟರ್ ಲ್ಯಾಬ್, ಸೈನ್ಸ್ ಲ್ಯಾಬ್, ಗ್ರಂಥಾಲಯ ಸೌಲಭ್ಯ, ಎನ್ಎಸ್ಎಸ್, ಭಾರತ ರೆಡ್ ಕ್ರಾಸ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಮತ್ತು ಸುಸಜ್ಜಿತ ಕ್ಯಾಂಪಸ್ ವ್ಯವಸ್ಥೆ ಮುಂತಾದ ಸೌಲಭ್ಯಗಳನ್ನು ಹೊಂದಿದ್ದು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಅವಕಾಶ ಸಹಾಯಕವಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ ಪಾಸಾದ ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಈ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಪ್ರವೇಶ ಪಡೆದುಕೊಂಡು ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗಾಗಿ ಸಂಪರ್ಕಿಸಿ: ಡಾ.ಎಂ.ಬಿ. ಬಾಗಡಿ ಪ್ರಾಚಾರ್ಯರು: 9742843887 ಕಚೇರಿ ದೂರವಾಣಿ ಸಂಖ್ಯೆ: 8147708224, 8095542086, 7795640684, 8277068054. ವಿಳಾಸ: ನೀರಾವರಿ ಕಾಲೋನಿ ನವಲಗುಂದ, ಧಾರವಾಡ ಜಿಲ್ಲೆ Email -gfgcn2007@yahoo.com ಸಂಪರ್ಕಿಸಲು ತಿಳಿಸಲಾಗಿದೆ.

ನಿಧನ ಸುದ್ದಿ

ಸುಶೀಲಾಬಾಯಿ ಕುಲಕರ್ಣಿ



ಹುಬ್ಬಳ್ಳಿ: ಮೂಲತಃ ಮಿಶ್ರಿಕೋಟಿಯವರಾದ ಹುಬ್ಬಳ್ಳಿ ವಿಜಯನಗರದ ನಿವಾಸಿ ಸುಶೀಲಾಬಾಯಿ ನಾರಾಯಣ ರಾವ ಕುಲಕರ್ಣಿ(90)ಅವರು ಸೋಮವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



ಹುಬ್ಬಳ್ಳಿ: ಇಲ್ಲಿಯ KLEITನ 4ನೇ ಸೆಮ್ ECE ವಿದ್ಯಾರ್ಥಿ ಸುದೀಪ್ ಹಿಪ್ಪರಗಿ (ತಂಡದ ನಾಯಕ), ಸೋಮಘೇಬರ್, ತುಷಾರ್ ಅವರು ಡಾ.ಶರಣಬಸಪ್ಪ ಸಜ್ಜನ್ ಮತ್ತು ಪ್ರೊ. ಅಶೋಕ್ ಎಸ್.ಎಲ್. ಅವರ ಮಾರ್ಗದರ್ಶನದಲ್ಲಿ ನಡೆದ KSR-SAC ರಾಜ್ಯ ಮಟ್ಟದ ವಿದ್ಯಾರ್ಥಿ ಆವಿಷ್ಕಾರ ಸ್ಪರ್ಧೆಯಲ್ಲಿ ತೃತೀಯ ಬಹುಮಾನ (25,000) ಪಡೆದರು.

ಪ್ರತ್ಯೇಕ ಪಾಲಿಕೆ ಹೋರಾಟ ಸಭೆ ನಾಳೆ



ಧಾರವಾಡ: ಪ್ರತ್ಯೇಕ ಪಾಲಿಕೆ ರಚನೆ ಕುರಿತು ಸ್ಥಾಪಿತವಾಗಿ ಚರ್ಚಿಸಿ, ಮುಂದಿನ ಹೋರಾಟದ ರೂಪರೇಷ ಸಿದ್ಧಪಡಿಸುವ ಕುರಿತು ಮೇ 6ರಂದು ಬೆಳಗ್ಗೆ 11ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸಭೆ ಕರೆದಿದ್ದಾಗಿ ಸಂಘಟಕ ಗುರುರಾಜ ಹುಣಸಿಮರದ ಹೇಳಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ಬೇಡಿಕೆ ಕುರಿತು ಸಾಮಾನ್ಯ ಸಭೆಯಲ್ಲಿ ಕೈಗೊಂಡ ನಿರ್ಣಯ ಮತ್ತು ಹೋರಾಟದ ಮೂಲಕ ರಾಜ್ಯಪಾಲರಿಗೆ ಒತ್ತಡ ಹಾಕುವ ಬಗ್ಗೆ ಕುಲಂಕುಷವಾಗಿ ಚರ್ಚಿಸುವುದಾಗಿ ತಿಳಿಸಿದರು. ಪ್ರತ್ಯೇಕ ಹಾಗೂ ಬೃಹತ್ ಪಾಲಿಕೆ ಕುರಿತು ಸಾರ್ವಜನಿಕರಲ್ಲಿ ಗೊಂದಲವಿದೆ. ಈ ಕಾರಣಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವ ನಿಟ್ಟಿನಲ್ಲಿ ಧಾರವಾಡಿಗರ ಚಿಂತನ-ಮಂಥನ ನಡೆಯಲಿದೆ. ಸಂಘ-ಸಂಸ್ಥೆಗಳು, ವ್ಯಾಪಾರಸ್ಥರು, ಕನ್ನಡಪರ ಸಂಘಟನೆಗಳು ಪಾಲ್ಗೊಳ್ಳುವಂತೆ ಕೋರಿದರು. ಸಭೆಯಲ್ಲಿ ಧಾರವಾಡ ವಕೀಲರ ಸಂಘ, ಅಂಜುಮನ್ ಸಂಸ್ಥೆ, ಎಲ್ಇಎ ಸಂಸ್ಥೆ, ಮರಾಠಾ ವಿದ್ಯಾಪ್ರಸಾರಕ ಮಂಡಳದ ಅಧ್ಯಕ್ಷರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಚಿಂತಕರು ಪಾಲ್ಗೊಳ್ಳಲಿದ್ದಾರೆ ಎಂದು ಗುಣಸಿಮರದ ಮಾಹಿತಿ ನೀಡಿದರು. ಮುಖಂಡ ಸುಧೀರ ಕ್ಷತ್ರೀಯ ಇದ್ದರು.



ಹುಬ್ಬಳ್ಳಿ: ಸುಕೋ ಬ್ಯಾಂಕ್ ಸಂಸ್ಥಾಪನಾ ದಿನವನ್ನು ಹುಬ್ಬಳ್ಳಿ ಶಾಖೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಚಾಲನೆ ನೀಡಿದರು. ಹುಬ್ಬಳ್ಳಿ ಕ್ಲಸ್ಟರ್ ವ್ಯವಸ್ಥಾಪಕ ವಿಮಲನಾಥ ಪಾಯಪ್ಪನವರ್, ಹುಬ್ಬಳ್ಳಿ ಮುಖ್ಯ ಶಾಖೆಯ ವ್ಯವಸ್ಥಾಪಕಿ ಪ್ರತಿಭಾ ಜಕರಡ್ಡಿ, ಕೇಶ್ವಾಪುರ ಶಾಖೆಯ ವ್ಯವಸ್ಥಾಪಕ ಸಿದ್ದಯ್ಯ ಹಾಗೂ ಧಾರವಾಡ ಶಾಖೆಯ ವ್ಯವಸ್ಥಾಪಕ ಮಂಜುನಾಥ ಉಪಸ್ಥಿತರಿದ್ದರು.

ಕಿತ್ತೂರು ಸಂಸ್ಥಾನದ ಸಂಶೋಧನೆ ಅಗತ್ಯ

ಧಾರವಾಡ: ಐತಿಹಾಸಿಕ ಕಿತ್ತೂರು ಸಂಸ್ಥಾನದ ಕುರಿತು ವಿವಿಧ ಆಯಾಮಗಳಲ್ಲಿ ಹೆಚ್ಚಿನ ಸಂಶೋಧನೆ ನಡೆಸುವುದು ಅಗತ್ಯವಿದೆ ಎಂದು ಗೋವಾ ಇಂಡೋ- ಪೋರ್ಚುಗೀಸ್ ಸಾಹಿತ್ಯ ಪ್ರತಿಷ್ಠಾನದ ನಿರ್ದೇಶಕ ಡಾ. ಅರವಿಂದ ಯಾಳಗಿ ಹೇಳಿದರು.



ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಕಿತ್ತೂರು ಸಂಸ್ಥಾನದ ವಂಶಜರು ಆಯೋಜಿಸಿದ್ದ 1824ರ ನಂತರ ಕಿತ್ತೂರು ಸಂಸ್ಥಾನದ ಹೊಸ ಸಂಶೋಧನೆ ಮತ್ತು ವಂಶಜರು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.


ರಾಣಿ ಚನ್ನಮ್ಮ ನೇತೃತ್ವದಲ್ಲಿ ನಡೆದ ಕಿತ್ತೂರು ಹೋರಾಟವು ಜಾಗತಿಕ ಮಟ್ಟದಲ್ಲಿ ಅಧ್ಯಯನಕ್ಕೆ ಒಳಪಟ್ಟಿದೆ. ಐತಿಹಾಸಿಕ ಸಂಗ್ರಹಾಲಯಗಳು ಮತ್ತು ದಾಖಲೆಗಳು ಕಿತ್ತೂರಿನ ನೈಜ ಇತಿಹಾಸ ತಿಳಿಯಲು ಪ್ರಮುಖ ಮೂಲಗಳಾಗಿವೆ ಎಂದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಿ.ಎಸ್.ಪಾಟೀಲ ಮಾತನಾಡಿ, ಕಿತ್ತೂರಿನ ವಂಶಸ್ಥರ ಬಗ್ಗೆ ಹೆಚ್ಚಿನ ಮಾಹಿತಿ ಈಚೆಗೆ ನಡೆಯುತ್ತಿರುವ ಸಂಶೋಧನೆಗಳಿಂದ ತಿಳಿದು ಬರಬೇಕಿದೆ. ಇವುಗಳ ಕುರಿತು ಯುವಪೀಳಿಗೆ ಆಸಕ್ತಿ ಹೊಂದಲು ಸಲಹೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಎ.ಬಿ.ದೇಸಾಯಿ ಮಾತನಾಡಿ, ಸ್ವತಂತ್ರ ಪೂರ್ವದಲ್ಲಿಯೇ ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ದಿಟ್ಟ ಮಹಿಳೆ. ಪ್ರಸ್ತುತ ಎಲ್ಲ ಕ್ಷೇತ್ರದಲ್ಲಿ ಮಹಿಳೆಯರಿದ್ದು, ರಾಜಕೀಯ ಮೀಸಲು ತರಲಾಗುತ್ತಿಲ್ಲ ಎಂದರು. ಡಾ.ಬಾಳಣ್ಣ ಶೀಗಿಹಳ್ಳಿ, ಡಾ.ಸಂಗಮೇಶ ಕಲ್ಯಾಣಿ, ಮಹೇಶ ಚನ್ನಂಗಿ, ಡಾ. ಎಂ.ವೈ. ಸಾವಂತ, ಡಾ.ಎ.ಬಿ.ವಗ್ಗರ, ಪ್ರೊ. ಎಸ್ .ಸಿ.ಪಾಟೀಲ, ಪ್ರೊ. ಸಿ.ಕೆ.ನಾವಲಗಿ, ಪ್ರೊ. ಮಲ್ಲಿಕಾರ್ಜುನ ಪಾಟೀಲ, ಡಾ.ವೀರಣ್ಣ ರಾಜೂರ ಇತರರಿದ್ದರು.

ವಿಷಯಗಳ ಮಂಡನೆ

ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗಗಳು ಬಗ್ಗೆ ಡಾ.ಕೆ.ಎನ್ .ನರಹರಿ, ಕಿತ್ತೂರು ಪರಿಸರದ ಸಾಂಸ್ಕೃತಿ ಅಧ್ಯಯನದ ಕುರಿತು ಡಾ.ನೀಲಪ್ಪ ವಾಲೀಕಾರ, ಕಿತ್ತೂರು ಸಂಸ್ಥಾನದ ವಂಶಸ್ಥರ ಕುರಿತು ಸೋಮಶೇಖರ ದೇಸಾಯಿ ಹಾಗೂ ಉದಯ ದೇಸಾಯಿ ಹಾಗೂ ಹಂದಿಗನೂರು ದೇಶಗತ್ತಿ ಮನೆತನದ ಕುರಿತು ಅರವಿಂದ ಮಾಮಲೇದೇಸಾಯಿ, ಮೋಡಿಲಿಪಿ ಕುರಿತು ಡಾ.ಹನುಮಾಕ್ಷಿ ಗೋಗಿ ಹಾಗೂ ಸಂಗಮೇಶ ಕಲ್ಯಾಣಿ ವಿಷಯ ಮಂಡಿಸಿದರು.

ಮರೇವಾಡ ಬಸವಣ್ಣನ ರಥೋತ್ಸವ



ಉಪ್ಪಿನಬೆಟಗೇರಿ: ಗುಡುಗು ಮಿಂಚು ಬಾಳೈತ್ರಿಪೋ... ಮಳಿ-ಬೆಳಿ ಸಂಪೈತ್ರಿಪೋ... ಹವಳಾ-ಮುತ್ತು ಉದರತಾವ್ರಿಪೋ...ಮನಿ ಮನಿಯೊಳಗ ಜಗಳ ಅಕ್ಕಾವ್ರಿಪೋ...ರೈತರು ಎಲ್ಲಾರೂ ಕೂಡಿ ಚೆಂದಾಗಿ ಜಾತ್ರಿ ಮಾಡ್ರಿಪೋ...'' ಹತ್ತಿರದ ಧಾರವಾಡ ತಾಲೂಕಿನ ಮರೇವಾಡ ಗ್ರಾಮದಲ್ಲಿ ಆಗಿ ಹುಣ್ಣಿಮೆಯ ದಿನ ಜರುಗಿದ ಬಸವಣ್ಣ(ನಂದೀಶ್ವರ) ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಸಂಜೆ ಭಕ್ತರ ಜಯಘೋಷಗಳ ಮಧ್ಯೆ ಜರುಗಿದ ರಥೋತ್ಸವದ ಕೊನೆಗೆ ರಥದಲ್ಲಿ ಕುಳಿತಿದ್ದ ಅಮ್ಮಿನಬಾವಿ ಬಸವಣ್ಣ ದೇವರ ದೇವಾಲಯದ ಪ್ರಧಾನ ಅರ್ಚಕ ಬಸವರಾಜ ಪೂಜಾರ ವರ್ಷದ ಆಗು-ಹೋಗುಗಳ ಕುರಿತು ನುಡಿದ ಕಾರ್ಣಿಕವಿದು.

ಅಮ್ಮಿನಬಾವಿ ಬಸವಣ್ಣ (ನಂದೀಶ್ವರ) ದೇವರ ಪಾಲ್ಕಿ-ನಂದಿಕೋಲುಗಳು ಬರುತ್ತಿದ್ದಂತೆ ಅಲಂಕೃತ ರಥಕ್ಕೆ ವೈದಿಕರುಗಳಾದ ಸೋಮಲಿಂಗ ಶಾಸ್ತ್ರಿ ಗುಡ್ಡದಮಠ, ಶೇಖರಯ್ಯ ಹಿರೇಮಠ ಹಾಗೂ ಅಂಕಲಯ್ಯ ಯರಗಂಬಳಿಮಠ ಪೂಜೆ ಸಲ್ಲಿಸಿದರು. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿದರು. ರೇಷ್ಮೆ ಮಂಡಳಿ ಮಾಜಿ ಅಧ್ಯಕ್ಷೆ ಸವಿತಾ ಅಮರಶೆಟ್ಟಿ, ಉದ್ಯಮಿ ಮಂಜುನಾಥ ಮಕ್ಕಳಗೇರಿ, ಕಾಂಗ್ರೆಸ್ ಮುಖಂಡ ತವನಪ್ಪ ಅಷ್ಟಗಿ, ಬಸವಂತಪ್ಪ ಗಾಯಕವಾಡ, ಬೆಳಗಾವಿ, ಗದಗ, ಹಾವೇರಿ ಜಿಲ್ಲೆಗಳ ಭಕ್ತಗಣವೂ ಸೇರಿದಂತೆ ಹುಬ್ಬಳ್ಳಿ-ಧಾರವಾಡ ಹಾಗೂ ಸುತ್ತಲಿನ ಗ್ರಾಮಗಳ ಭಕ್ತರು, ದೇವಾಲಯದ ಪ್ರಸಾದ (ದಾಸೋಹ) ಮಂಡಳಿ ಮತ್ತು ಸೇವಾ ಟ್ರಸ್ಟ್ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಜಾತ್ರೆಯ ಅಂಗವಾಗಿ ಶುಕ್ರವಾರ ಪ್ರಾತ:ಕಾಲ ಬಸವಣ್ಣ (ನಂದೀಶ್ವರ) ದೇವರ ಶಿಲಾ ವಿಗ್ರಹಕ್ಕೆ ಏಕಾದಶ ಮಹಾರುದ್ರಾಭಿಷೇಕ, ನೂರೊಂದು ಬಿಲ್ವಾರ್ಚನೆ ಮತ್ತು ಪುಷ್ಪಾಲಂಕಾರದ ವಿಶೇಷಪೂಜೆ ನಡೆಯಿತು. ನಂತರ ನಡೆದ ದಾಸೋಹ ಸೇವೆಯಲ್ಲಿ ನಿರಂತರ ಅನ್ನಸಂತರ್ಪಣೆ ಜರುಗಿತು.

ಗಮನ ಸೆಳೆದ ಸವಾಲ್-ಜವಾಬ್ ಪದಗಳು

ಧಾರವಾಡ: ನಗರದ ಹಾವೇರಿಪೇಟೆಯ ಐತಿಹಾಸಿಕ ದ್ಯಾಮವ್ವ ಮತ್ತು ದುರ್ಗವ್ವ ದೇವಿಯರ 30 ವರ್ಷಗಳ ಬಳಿಕ ನಡೆಯುತ್ತಿರುವ ಜಾತ್ರಾ ಮಹೋತ್ಸವವು ಭಕ್ತಿ ಹಾಗೂ ಜಾನಪದ ಕಲೆಗಳ ಸಮಾಗಮವೂ ಮೇಳೈಸಿದ್ದು ವಿಶೇಷ.


ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಿಗ್ಗೆ ದೇವಿಯರಿಗೆ ವಿಶೇಷ ಅಭಿಷೇಕ, ಅಲಂಕಾರ, ವಿವಿಧ ಪೂಜಾ ವಿಧಿವಿಧಾನಗಳ ನಂತರ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯ ಮತ್ತು ದೇವಿಯರ ಭವ್ಯ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ನಿಗದಿಪಡಿಸಿದ ಸ್ಥಳದಲ್ಲಿ ದೇವಿಯರ ಅದ್ದೂರಿಯ ಹೊನ್ನಾಟ ನಯನ ಮನೋಹರ ದೃಶ್ಯಗಳು ಜನಮನ ಸೆಳೆದವು. ಸಂಜೆ ಹೊನ್ನಾಟ ಮುಗಿಸಿದ ಚೌಕಿ ಮರಳಿ ಗೂಡು ಸೇರಿದ ಬಳಿಕ ರಾತ್ರಿ ಲಕ್ಷ್ಮೀ ನರಸಿಂಹ ಭಜನಾ ಮಂಡಳಿ ಹಾಗೂ ಮದಿಹಾಳದ ಮಹಿಳಾ ಮಂಡಳದಿಂದ ಲಲಿತ ಸಹಸ್ರ ನಾಮಾವಳಿ ಪಠಣ, ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಬಂಕಾಪುರದ ಬಾನುದಾಸ ಸರವೇದ, ಬಸಮ್ಮ ಸುಲ್ತಾನಪುರಿ ಹಾಗೂ ಲಕ್ಕಣ್ಣ ಚುಂಚನೂರ ಅವರ ಕಲಾಬಳಗದಿಂದ ಒಂದು ಗಂಟೆ ಉತ್ತರ ಕರ್ನಾಟಕದ ಗಂಡುಕಲೆ ಎಂದೇ ಹೆಸರಾದ ಸವಾಲ್-ಜವಾಬ್ ಡೊಳ್ಳಿನ ಪದಗಳು ಗಮನ ಸೆಳೆದವು. ಗಾಯಕರ ತಂಡಗಳು ಪರಸ್ಪರ ಆಧ್ಯಾತ್ಮಿಕ ಮತ್ತು ಸಾಮಾಜಿಕ ವಿಷಯದ ಮೇಲೆ ಪ್ರಶ್ನೆಗಳು (ಸವಾಲ್) ಎಸೆಯುತ್ತು ಅದಕ್ಕೆ ಹಾಡಿನ ರೂಪದಲ್ಲಿಯೇ ಚಾಕಚಕ್ಯತೆ ಉತ್ತರ (ಜವಾಬ್) ನೀಡುವುದು ನೇರೆದ ಪ್ರೇಕ್ಷಕರಲ್ಲಿ ರೋಮಾಂಚನ ಮೂಡಿಸಿತು. ಸಾಂಸ್ಕೃತಿಕ ಕಾರ್ಯಕ್ರಮಗಳು ನಾಡಿನ ಕಲೆ ಮತ್ತು ಸಾಹಿತ್ಯ ಅನಾವರಣಕ್ಕೂ ಸಾಕ್ಷಿಯಾಯಿತು. ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಕೆ.ಎಸ್.ಭೀಮಣ್ಣವರ, ಗಂಗಣ್ಣ ಜಮದಾಳೆ, ಗೌರವ ಕಾರ್ಯದರ್ಶಿ ವಿಜಯ ಬೋಸ್ಲೆ, ಖಜಾಂಚಿ ಆರ್.ಜಿ.ಕೆಲಗೇರಿ ಇತರರಿದ್ದರು.



ಜನಪರ ಆಡಳಿತ, ಸಂಘಟನಾ ಶಕ್ತಿಯಿಂದ ಗೆಲುವು

ನವಲಗುಂದ: ರಾಜ್ಯದಲ್ಲಿ ಬಿಜೆಪಿ ಅವರ ಸುಳ್ಳು ಆಪಾದನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಜನಪರ ಆಡಳಿತ ಹಾಗೂ ಸಂಘಟನಾ ಶಕ್ತಿ ಉಪ ಚುನಾವಣೆಯಲ್ಲಿ ಎರಡು ಕ್ಷೇತ್ರವನ್ನು ಗೆಲ್ಲುವ ಮೂಲಕ ರಾಜ್ಯದಲ್ಲಿ ಮುಂಬರುವ 2028ರ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಈ ಚುನಾವಣೆ ದಿಕ್ಸೂಚಿಯಾಗಿದೆ ಎಂದು ನವಲಗುಂದ ಶಾಸಕ ಎನ್.ಹೆಚ್. ಕೋನರಡ್ಡಿ ಹೇಳಿದರು.

ಅವರು ಸೋಮವಾರ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಎಚ್. ಮೇಟಿ ಅವರು ವಿಧಾನಸಭೆಗೆ ಆಯ್ಕೆಯಾಗಿದ್ದಕ್ಕೆ ಸನ್ಮಾನಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ನೀಡಿದ ಪಂಚಗ್ಯಾರಂಟಿ ಯೋಜನೆಗಳನ್ನು ಒಪ್ಪಿ ಕ್ಷೇತ್ರದ ಮತದಾರರು ಅಭೂತಪೂರ್ವ ಗೆಲುವಿಗೆ ಸಾಕ್ಷಿಯಾಗಿದ್ದಾರೆ. ಸಚಿವ ಸತೀಶ ಜಾರಕಿಹೊಳಿ ಅವರ ವಿಶೇಷ ಪ್ರಯತ್ನ , ರಾಜ್ಯ ಉಸ್ತುವಾರಿ ರಣದೀಪಸಿಂಗ ಸುರ್ಜೆವಾಲಾ, ಕಾರ್ಯಾಧ್ಯಕ್ಷ ಜೆ.ಸಿ ಚಂದ್ರಶೇಖರ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಗೃಹ ಸಚಿವ ಜಿ. ಪರಮೇಶ್ವರ, ಪ್ರವಾಸೋದ್ಯಮ ಹಾಗೂ ಕಾನೂನು ಸಚಿವ ಎಚ್.ಕೆ ಪಾಟೀಲ, ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ, ವಸತಿ ಸಚಿವ ಜಮೀರ ಅಹ್ಮದ, ಭಾರೀ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜವಳಿ ಸಚಿವ ಶಿವಾನಂದ ಪಾಟೀಲ, ಪೌರಾಡಳಿತ ಸಚಿವ ರಹಿಂಖಾನ, ಸಚಿವರಾದ ಆರ್.ಬಿ. ತಿಮ್ಮಾಪೂರ, ಸಂತೋಷ ಲಾಡ್, ಎಚ್.ಸಿ ಮಹದೇವಪ್ಪ, ಎಂಎಲ್ಸಿ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಚಿವರಾದ ಎಸ್.ಆರ್. ಪಾಟೀಲ, ಅಜಯಕುಮಾರ ಸರನಾಯ್ಕ, ಶಾಸಕರಾದ ಬೀಮಸೇನ ಚಿಮ್ಮನಕಟ್ಟಿ, ವಿಜಯಾನಂದ ಕಾಶಪ್ಪನವರ, ಜೆ.ಟಿ ಪಾಟೀಲ, ಜಿಲ್ಲಾಧ್ಯಕ್ಷ ಎಸ್‌ಜಿ ನಂಜಯ್ಯನಮಠ ಮುಂತಾದ ಮುಖಂಡರು ಹಾಗೂ ಎಲ್ಲ ಶಾಸಕರ ಮುಖಂಡರು ಕಾರ್ಯಕರ್ತರ ಶ್ರಮ 2 ಉಪ ಚುನಾವಣೆಯ ಗೆಲುವಿಗೆ ಕಾರಣವಾಗಿದೆ ಎಂದರು. ಮಲ್ಲಿಕಾರ್ಜುನ ಮೇಟಿ, ಅಚುತ ಮೇಟಿ, ವಕೀಲರಾದ ರಮೇಶ ಬದ್ನೂರ, ಶ್ರೀಕಾರ ದೇಸಾಯಿ, ಪ್ರವೀಣ ಹುಗ್ಗಿ, ನವಗುಂದ ಪುರಸಭೆ ಮಾಜಿ ಅಧ್ಯಕ್ಷ ಜೀವನ ಪವಾರ, ನವಲಗುಂದ ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಆನಂದ ಹವಳಕೋಡ, ನವಲಗುಂದ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ವಿಕಾಸ ತದ್ದೇವಾಡಿ, ರಾಜ್ಯ ಓಬಿಸಿ ಪ್ರಧಾನ ಕಾರ್ಯದರ್ಶಿ ಅರುಣಕುಮಾರ ಮಜ್ಜಗಿ ಚಂದ್ರು ಅಸುಂಡಿ, ನವೀನ ಹೊಸಗೌಡ್ರ ಮುಂತಾದವರಿದ್ದರು.



ಮೋದಿ ಗ್ಯಾರಂಟಿಗೆ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ಜನ ಮನ್ನಣೆ: ಟೆಂಗಿನಕಾಯಿ



ಹುಬ್ಬಳ್ಳಿ: ಇತ್ತೀಚಿಗೆ ದೇಶದಲ್ಲಿ ಬಹು ಚರ್ಚಿತ ವಿಷಯ ಪಶ್ಚಿಮ ಬಂಗಾಳ, ಪುದುಚೆರಿ ಅಸ್ಸಾಂ ಮತ್ತು ತಮಿಳುನಾಡು ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಜಗತ್ತಿನ ದೊಡ್ಡ ಪಕ್ಷವಾದ ಪಶ್ಚಿಮ ಬಂಗಾಲ ಅಸ್ಸಾಂ ನಲ್ಲಿ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಪ್ರಚಂಡ ಬಹುಮತವನ್ನು ಪಡೆದು ವಿಜಯಶಾಲಿಯಾಗಿ ಇತಿಹಾಸವನ್ನು ಬರೆದಿದೆ. ಈ ಗೆಲುವು ಪಕ್ಷದ ಕಾರ್ಯಕರ್ತರ ಗೆಲುವು ಎಂದು ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ತ್ರಿಣಮೂಲ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಅಲ್ಲಿ ಮಹಿಳೆಯರು ಸುರಕ್ಷಿತವಾಗಿ ಇರಲಿಲ್ಲ. ರಾಜ್ಯದಲ್ಲಿ ಭಯಭೀತ ವಾತಾವರಣ ಇದ್ದು ಜನರು ಬೇಸತಿದ್ದರು. ಎಲ್ಲ ಹಿಂದೂಗಳು ಒಗ್ಗಟ್ಟಾಗಿ ಬಿಜೆಪಿಯನ್ನು ಮತದಾರರು ಬಿಜೆಪಿ ಬೆಂಬಲಿಸಿ ಆಶೀರ್ವದಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಹಾಕಿದ ಶ್ರಮ ಮೆಚ್ಚುವಂಥದ್ದು ಎಂದಿದ್ದಾರೆ.

ಹಿಂದೂಗಳ ಮೇಲೆ ನಡೆದ ದಬ್ಬಾಳಿಕೆಗೆ ದೌರ್ಜನ್ಯ ಕೊಲೆ ಅತ್ಯಾಚಾರಗಳು ಇದಕ್ಕೆ ಸಾಕ್ಷಿ ಎಂದಿದ್ದಾರೆ. ಅಸ್ಸಾಂ ರಾಜ್ಯದಲ್ಲಿ ಹೇಮಂತ್ ಬಿಶ್ವಾ ಕಳೆದ ಎರಡು ಅವಧಿಯಲ್ಲಿ ಉತ್ತಮ ಆಡಳಿತ ನೀಡಿದ್ದಾರೆ. ಅವರ ಆಡಳಿತ ವೈಖರಿ ಮೆಚ್ಚಿ ಮತದಾರರು ಮತ್ತೆ ಬಿಜೆಪಿಗೆ ಹ್ಯಾಟ್ರಿಕ್ ಮಾಡಲು ಮತದಾರರು ಸಮ್ಮತಿಸಿದ್ದಾರೆ. ಪುದುಚೇರಿಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದಿದೆ ಮತ್ತು ತಮಿಳುನಾಡಿನಲ್ಲಿ ಸನಾತನ ಧರ್ಮವನ್ನು ಕಿತ್ತೊಗೆಯಲು ಸ್ಟಾಲಿನ್ ಸರ್ಕಾರ ಪ್ರಯತ್ನವನ್ನು ಮಾಡಿತ್ತು. ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಡಿಎಂಕೆ ಪಕ್ಷ ವಿಫಲವಾಗಿತ್ತು. ಹೀಗಾಗಿ ಪಕ್ಷವು ಇವತ್ತು ನೆಲಕಚ್ಚಿದೆ ಎಂದಿದ್ದಾರೆ. ಸಮ್ಮಿಶ್ರ ಎನ್.ಡಿ.ಎ ಸರ್ಕಾರ ಅಸ್ತಿತ್ವಕ್ಕೆ ಬರುವ ಸಂಭವವಿದೆ. ದೇಶದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಅಯೋಮಯವಾಗಿದ್ದು ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷ ನೆಲ ಕಚ್ಚಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತವನ್ನು ಮತ್ತು ಗ್ಯಾರಂಟಿಗಳನ್ನು ಜನ ಭರವಸೆ ವ್ಯಕ್ತಪಡಿಸಿದ್ದಾರೆ ಎಂದಿದ್ದಾರೆ.

ಬಿಜೆಪಿಗೆ ಗೆಲುವು: ವಿಜಯೋತ್ಸವ



ಕುಂದಗೋಳ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಆಸ್ಸಾಂ ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು ಸಾಧಿಸಿದ ಅಭೂತಪೂರ್ವ ಗೆಲುವಿನ ಹಿನ್ನೆಲೆಯಲ್ಲಿ ಪಟ್ಟಣದ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ತಾಲೂಕು ಮಂಡಲ ಅಧ್ಯಕ್ಷ ನಾಗನಗೌಡ ಸಾತ್ಮರ ಅವರ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಬಿಜೆಪಿ ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮುಖಂಡರಾದ ಪ್ರಕಾಶಗೌಡ ಪಾಟೀಲ, ಬಸವರಾಜ ನಾವಳ್ಳಿ ವಾಗೇಶ ಗಂಗಾಯಿ,ಗಣೇಶ ಕೋಕಾಟೆ, ವಾಗೇಶ ಮನಕಟ್ಟಿಮಠ, ನಾಗರಾಜ ಸುಭರಗಟ್ಟಿ, ಸಿದ್ದು ಧಾರವಾಡ ಶೆಟ್ಟರ, ಹರೀಶ ಕೊನೇರಿ,ರಮೇಶ ಗದಗಿನ, ಸುಭಾಶ ಸಾದರ, ಉಮೇಶ ಬೀಡನಾಳ, ಪಾಂಡು ಕೊಂಕೂರ,ಶಿವರಾಜ ಗಂಗಾಯಿ,ಸಂತೋಷ ಮಲ್ಲಿಗವಾಡ, ರಮೇಶಗೌಡ ಮೇಲಮಾಳಗಿ, ಚನ್ನು ಹುಂಬಿ, ಮಂಜುನಾಥ ಬಂಡಿವಾಡ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಬಿಜೆಪಿ ಕಾರ್ಯಕರ್ತರು ಪಕ್ಷದ ಅಭಿಮಾನಿಗಳು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

ಮೂರು ರಾಜ್ಯದಲ್ಲಿ ಜಯ: ವಿಜಯೋತ್ಸವ

ಧಾರವಾಡ: ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮಬಂಗಾಳ, ಪಾಂಡಿಚೇರಿ ಮತ್ತು ಅಸ್ಸಾಂ ರಾಜ್ಯದಲ್ಲಿ ಬಿಜೆಪಿ ವಿಜಯ ಸಾಧಿಸಿದ ಹಿನ್ನೆಲೆ ಕಾರ್ಯಕರ್ತರು ನಗರದ ಸುಭಾಷ ರಸ್ತೆಯ ಬಿಜೆಪಿ ಕಚೇರಿ ಮುಂಭಾಗ ಸೋಮವಾರ ಸಂಭ್ರಮಾಚಾರಣೆ ಮಾಡಿದರು. ಫಲಿತಾಂಶ ಪ್ರಕಟಗೊಂಡು ಬಿಜೆಪಿ ಸ್ಪಷ್ಟ ಬಹುಮತ ಪಡೆಯುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಗುಲಾಲ್ ಎರಚಿ ವಿಜಯೋತ್ಸವ ಆಚರಿಸಿದರು.

ಬಿಜೆಪಿ ಮುಖಂಡ ಮೋಹನ ರಾಮದುರ್ಗ ಮಾತನಾಡಿ, ದೇಶದ ಭದ್ರತೆಯ ದೃಷ್ಟಿಯಿಂದ ಐದು ರಾಜ್ಯಗಳ ಪೈಕಿ ಮೂರು ರಾಜ್ಯದ ಮತದಾರರು ಬಿಜೆಪಿ ಪರವಾಗಿ ಜನಾದೇಶ ನೀಡಿದ್ದು, ಇದು ಕರ್ನಾಟಕದಲ್ಲೂ ಮುಂದುವರೆಯಲಿದೆ. ಈ ಗೆಲುವು ನರೇಂದ್ರ ಮೋದಿ ನಾಯಕತ್ವ ಹಾಗೂ ಕೇಂದ್ರ ಸರ್ಕಾರದ ಜನಪರ ಯೋಜನೆಗಳಿಗೆ ಸಂದ ಜಯ ಎಂದರು. ಸುನೀಲ ಮೋರೆ, ರಾಕೇಶ ನಾಝರೆ, ಬಸವರಾಜ ಬಾಳಗಿ, ಶಂಕರ ಶೇಳಕೆ, ದತ್ತಾ ಡೋರ್ಲೆ, ಶಿವಾನಂದ ಕವಳಿ, ಭೀಮರಾವ್ ಸವಣೂರ, ಮಲ್ಲಿಕಾರ್ಜುನ ಮಠಪತಿ, ಭಾರತಿ ದಳವಾಯಿ, ಅನಿತಾ ಹೊಸಕೋಟಿ ಅನೇಕರು ಇದ್ದರು.



ಕೃತಕ ಬುದ್ಧಿಮತ್ತೆಯಿಂದ ಐತಿಹಾಸಿಕ ಬದಲಾವಣೆ: ಬಳಿಗೇರ

ನವಲಗುಂದ: ನ.ತಾ.ಶಿ ಸಮಿತಿಯ ಶ್ರೀ ಶಂಕರ ಕಲಾ ಹಾಗೂ ವಾಣಿಜ್ಯ ಮಹಾ ವಿದ್ಯಾಲಯದ ಐ.ಕ್ಯೂ.ಎ.ಸಿ ಅಡಿಯಲ್ಲಿ ಕನ್ನಡ ವಿಭಾಗದಿಂದ ಒಂದು ದಿನದ ಕಾರ್ಯಾಗಾರ ಜರುಗಿತು.



ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಗದಗ ಜೆ. ಟಿ.ಕಾಲೇಜಿನ ಕನ್ನಡ ವಿಷಯದ ಸಹಾಯಕ ಪ್ರಾಧ್ಯಾಪಕ ಡಾ.ನಾಗರಾಜ ಬಳಿಗೇರ ಮಾತನಾಡಿ, ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯವು ಇಂದು ಕೃತಕ ಬುದ್ಧಿಮತ್ತೆಯ ಡಿಜಿಟಲ್ ಲೋಕದೊಂದಿಗೆ ಬೆರೆಯುವ ಮೂಲಕ ಐತಿಹಾಸಿಕ ಬದಲಾವಣೆಗೆ ಸಾಕ್ಷಿಯಾಗುತ್ತಿದೆ. ಇದನ್ನು ಕೇವಲ ಸಂರಕ್ಷಣೆಯಲ್ಲದೆ, ಕನ್ನಡದ ಪಾಲಿನ ಡಿಜಿಟಲ್ ಪುನರುತ್ಥಾನದ ಕಾಲ ಎಂದು ಬಣ್ಣಿಸಲಾಗಿದೆ ಎಂದರು.

ಜಾಗತಿಕ ವೇದಿಕೆಯಲ್ಲಿ ಕನ್ನಡ: ಎನ್‌ಎಂಟಿ ತಂತ್ರಜ್ಞಾನದ ಮೂಲಕ ಸಂಕೀರ್ಣ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್, ಜರ್ಮನ್ ಅಥವಾ ಫ್ರೆಂಚ್ ಭಾಷೆಗಳಿಗೆ ನಿಖರವಾಗಿ ಅನುವಾದಿಸಿ ಜಾಗತಿಕ ಓದುಗರನ್ನು ತಲುಪಿಸಲು ಸಾಧ್ಯವಾಗುತ್ತಿದೆ.ಅಂತಾರಾಷ್ಟ್ರೀಯ ಸಂಶೋಧನೆ ಮತ್ತು ತಾಂತ್ರಿಕ ಜ್ಞಾನವನ್ನು ಕ್ಷಣಾರ್ಧದಲ್ಲಿ ಕನ್ನಡಕ್ಕೆ ತರ್ಜುಮೆ ಮಾಡುವ ಮೂಲಕ ಜ್ಞಾನವು ಕೇವಲ ಇಂಗ್ಲಿಷ್ ಬಲ್ಲವರಿಗೆ ಸೀಮಿತವಾಗದಂತೆ ಎಐ ನೋಡಿಕೊಳ್ಳುತ್ತಿದೆ. ಮಸುಕಾಗಿರುವ ತಾಳೆಗರಿಗಳ ಅಕ್ಷರಗಳನ್ನು ಸ್ಪಷ್ಟಗೊಳಿಸಲು (ಇಮೇಜ್ ಎಂಹಾನ್ಸಮೆಂಟ್) ಮತ್ತು ಹಳೆಯ ಶಾಸನಗಳ ಲಿಪಿಯನ್ನು ಆಧುನಿಕ ಕನ್ನಡಕ್ಕೆ ಪರಿವರ್ತಿಸಲು (ಒ.ಸಿ. ಆರ್) ಎಐ ಬಳಕೆಯಾಗುತ್ತಿದೆ. ಇದರಿಂದ ದಶಕಗಳ ಕಾಲದ ಸಂಶೋಧನಾ ಕೆಲಸ ಕೆಲವೇ ಗಂಟೆಗಳಲ್ಲಿ ಮುಗಿಯುತ್ತಿದೆ ಎಂದರು.

ಮೌಖಿಕ ರೂಪದಲ್ಲಿರುವ ಜನಪದ ಗೀತೆಗಳನ್ನು ಎಐ ನೇರವಾಗಿ ಬರಹದ ರೂಪಕ್ಕೆ ಇಳಿಸಿ ಅಮರವಾಗಿಸುತ್ತಿದೆ. ಬರಹಗಾರರ 'ರೈಟರ್ಸ್ ಬ್ಲಾಕ್' ನಿವಾರಿಸಲು ಕಥೆಯ ಎಳೆಗಳನ್ನು ಸೂಚಿಸುವ ಮೂಲಕ ಮತ್ತು ಭಾಷಾ ಪ್ರೌಢಿಮೆಯನ್ನು ಹೆಚ್ಚಿಸುವ ಮೂಲಕ ಎಐ ಒಂದು ಸೃಜನಶೀಲ ಪಾಲುದಾರನಾಗಿ ಕೆಲಸ ಮಾಡುತ್ತಿದೆ ಎಂದರು.

ಕಾರ್ಯಕ್ರಮ ಆಯೋಜಕ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಂ.ಎನ್ ಹಾರೋಗೇರಿ ೦ ಸ್ವಾಗತ ಮತ್ತು ಪ್ರಾಸ್ತಾವಿಸಿದರು. ಅಧ್ಯಕ್ಷತೆಯನ್ನು ಸಾಂಸ್ಕೃತಿಕ ಸಂಘದ ಕಾರ್ಯಾಧ್ಯಕ್ಷ ಮತ್ತು ಗ್ರಂಥಪಾಲಕ ಡಾ.ರುದ್ರಮುನಿ ಹಿರೇಮಠ,ಡಾ.ಜಿ.ಎಸ್.ಚಿಣಗಿ ಹಾಗೂ ಬಿ.ಕೆ. ಮಹೇಶ ಉಪಸ್ಥಿತರಿದ್ದರು.

ಪಠ್ಯೇತರ ಚಟುವಟಿಕೆಗಳಿಂದ ವಿಕಾಸ

ಧಾರವಾಡ: ಪಾಲಕರು ಮಕ್ಕಳನ್ನು ಕೇವಲ ಪಠ್ಯಕ್ಕೆ ಸೀಮಿತಗೊಳಿಸದೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಲು ಪ್ರೇರೇಪಿಸಬೇಕು. ಅಂದಾಗಲೇ ಮಕ್ಕಳ ಸರ್ವಾಂಗೀಣ ವಿಕಾಸ ಸಾಧ್ಯವಿದೆ ಎಂದು ಚಿಂತಕ ಎಂ.ಎಂ.ಚಿಕ್ಕಮಠ ಸಲಹೆ ನೀಡಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಚಿಲಿಪಿಲಿ ಸಂಸ್ಥೆ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಮಕ್ಕಳ ನಾಟಕೋತ್ಸವಕ್ಕೆ ಚಾಲನೆ ನೀಡಿದ ಅವರು, ಮಕ್ಕಳನ್ನು ರಂಗಭೂಮಿಯಲ್ಲಿ ತೊಡಗಿಸಲು ಸಲಹೆ ನೀಡಿದರು.

ರಂಗಭೂಮಿ ಚಟುವಟಿಕೆಗಳಿಂದ ಮಕ್ಕಳಲ್ಲಿ ಏಕಾಗ್ರತೆ, ಸಹಭಾಳ್ವೆ, ಉನ್ನತಮಟ್ಟದ ಹಾಗೂ ಸಕಾರಾತ್ಮಕ ಗುಣಗಳು ಬೆಳೆಯಲಿವೆ. ಹೀಗಾಗಿ ಪಾಲಕರು ಬೇಸಿಗೆಯ ಶಿಬಿರದಲ್ಲಿ ಮಕ್ಕಳನ್ನು ಕಳುಹಿಸಿ, ಅವರ ವ್ಯಕ್ತಿತ್ವ ವಿಕಸನಕ್ಕೂ ಸಹಕರಿಸುವಂತೆ ಹೇಳಿದರು.

ಕಲಾವಿದೆ ಪ್ರಮೀಳಾ ಜಕ್ಕಣ್ಣವರ ಮಾತನಾಡಿ, ಮಕ್ಕಳ ಮನಸನ್ನು ಅರಳಿಸುವ ನಿಟ್ಟಿನಲ್ಲಿ ಸಂಪನ್ಮೂಲ ವ್ಯಕ್ತಿಗಳು ಸಹಕಾರ ಅಗತ್ಯವಿದೆ. ಬೇಸಿಗೆ ಶಿಬಿರಗಳು ಬಾಲ್ಯದ ನೆನಪು ಮರುಕಳಿಸುವಂತೆ ಮಾಡಲಿದ್ದು, ಮಕ್ಕಳು ಸದ್ಬಳಸಿಕೊಳ್ಳಲು ಹೇಳಿದರು. ಚಿಲಿಪಿಲಿ ಸಂಸ್ಥೆಯ ಅಧ್ಯಕ್ಷ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ಸಿಕಂದರ ದಂಡಿನ್, ಬಿ.ಆರ್.ಜಕಾತಿ, ಉಳವಪ್ಪ ತೇಗೂರ, ವಿಜಯಲಕ್ಷ್ಮೀ ಎಚ್., ಸೋಮು ಕಾರಿಗನೂರ ಇದ್ದರು.



ಸಂವಿಧಾನದಿಂದ ಮಹಿಳಾ ಸಬಲೀಕರಣ ಸಾಧ್ಯ: ಡಾ.ರಮೇಶ

ಧಾರವಾಡ: ಯಾವುದೇ ಒಂದು ದೇಶದ ಅಭಿವೃದ್ಧಿ ಮಹಿಳಾ ಅಭಿವೃದ್ಧಿ ಅವಲಂಬಿಸಿದೆ. ಈ ದೇಶದ ಮಹಿಳೆಯರ ಸ್ಥಿತಿಗತಿ ಕುರಿತು ವೈಜ್ಞಾನಿಕವಾಗಿ ಕೊಡುಗೆ ನೀಡಿರುವ ಶ್ರೇಯಸ್ಸು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತಿದೆ. ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಬೇಕಿದೆ ಎಂದು ಬೆಂಗಳೂರು ಮನಮೋಹನಸಿಂಗ್ ವಿವಿಯ ಕುಲಪತಿ ಡಾ. ರಮೇಶ ಬಿ. ಹೇಳಿದರು.




ನಗರದ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ವಿಭಾಗ ಕವಿವಿ ಸುವರ್ಣ ಮಹೋತ್ಸವ ಭವನದಲ್ಲಿ ಸೋಮವಾರ ಹಮ್ಮಿಕೊಂಡ ಭಾರತದಲ್ಲಿ ಮಹಿಳಾ ಸಬಲೀಕರಣಕ್ಕೆ ಡಾ.ಅಂಬೇಡ್ಕರ್ ಕೊಡುಗೆಗಳು ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಇಂದಿಗೂ ಶೇ.60ರಷ್ಟು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅಲ್ಲದೇ ಮಹಿಳಾ ಶೋಷಣೆಗಳು ಅವ್ಯಾಹತವಾಗಿ ನಡೆಯುವುದು ವಿಷಾದಕರ. ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಸೇರಿಸಿದ ಕೀರ್ತಿಯು ಕೂಡ ಅಂಬೇಡ್ಕರ್‌ಗೆ ಸಲ್ಲಲಿದೆ ಎಂದರು. ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ ಮಾತನಾಡಿ, ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಸಿಗುವಲ್ಲಿ ಅಂಬೇಡ್ಕರ್ ಅವರ ಕಾನೂನುಗಳೇ ಕಾರಣ. ಅವರ ತತ್ವಗಳನ್ನು ಸಮರ್ಪಕವಾಗಿ ಅನುಷ್ಠಾನಿಸಬೇಕು ಮತ್ತು ಎಲ್ಲ ಜನಾಂಗ ಅನುಸರಿಸಬೇಕು ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಶಿವರುದ್ರ ಕಲ್ಲೋಳಿಕರ ಹಾಗೂ ಉದ್ಯಮಿ ಅರವಿಂದ ಘಟ್ಟಿ ಮಾತನಾಡಿ, ಅಂಬೇಡ್ಕರ್ ಅವರ ವಿಚಾರಗಳು ಇಂದಿನ ಯುವಜನಾಂಗ ಅರಿಯಬೇಕು. ಅವರ ಆಶಯದಂತೆ ವಿದ್ಯಾರ್ಥಿಗಳು ಚಟುಟಿಕೆಗಳು ನಡೆಸಲು ಸಲಹೆ ನೀಡಿದರು. ಅಕ್ಷರ ಸೂರ್ಯ ನಿಯತಕಾಲಿಕೆ ಹಾಗೂ ಸಂಶೋಧಕ ತರುಣ ದೊಡಮನಿ ಬರೆದ ಡಾ. ಬಿ.ಆರ್.ಅಂಬೇಡ್ಕರ್ ಆನ್ ಪಬ್ಲಿಕ್ ಫೈನಾನ್ಸ್ ಕೃತಿಯನ್ನು ಕವಿವಿ ಕುಲಪತಿ ಡಾ. ಎ.ಎಂ.ಖಾನ್ ಬಿಡುಗಡೆ ಮಾಡಿದರು. ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಹುಬ್ಬಳ್ಳಿ ತಹಶೀಲ್ದಾರ್ ಮಹೇಶ ಗಸ್ತೆ, ಕವಿವಿ ಕುಲಸಚಿವ ಡಾ. ಎನ್.ವೈ. ಮಟ್ಟಿಹಾಳ, ಸಿಂಡಿಕೇಟ್ ಸದಸ್ಯ ಮಹೇಶ ಹುಲ್ಲಣ್ಣವರ, ಡಾ.ಸದಾಶಿವ ಮರ್ಜಿ, ಸಂಗೀತಾ ಮಾನೆ, ಡಾ.ಮಂಜುಳಾ ಎಸ್.ಆರ್., ಡಾ.ಶ್ಯಾಮಲಾ ರತ್ನಾಕರ, ಡಾ.ಶಿಲಾಧರ ಮುಗಳಿ ಇದ್ದರು.

ಪಶ್ಚಿಮ ಬಂಗಾಳದಲ್ಲಿ ಕೇಸರಿ ಅಲೆ | ಬಿಜೆಪಿಗೆ ಐತಿಹಾಸಿಕ ಜಯ | 15 ವರ್ಷದ ಟಿಎಂಸಿ ಆಡಳಿತಕ್ಕೆ ತೆರೆ

ರಾಜಕೀಯ ಸಮೀಕರಣ ಬದಲಿಸಿದ ಮತದಾರರು | ಪೂರ್ವ ಭಾರತದಲ್ಲೂ ಕಮಲ ಬಲವರ್ಧನೆ

ಬಂಗಾಳ ಕಮಲ ವಿಹಾರಿಣೀ!



ಕಾಂಗ್ರೆಸ್ 2, ಎಡ ಪಕ್ಷ 2, ಇತರರು 2

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಸಾಧನೆ ಮಾಡಿದ್ದು, 200ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವ ಮೂಲಕ ರಾಜ್ಯದಲ್ಲಿ ತನ್ನ ಮೊದಲ ಸರ್ಕಾರ ರಚಿಸಲು ಸಜ್ಜಾಗಿದೆ. ಆ ಮೂಲಕ 15 ವರ್ಷಗಳಿಂದ ಮುಂದುವರಿದಿದ್ದ ಟಿಎಂಸಿ ಆಡಳಿತಕ್ಕೆ ಅಂತ್ಯವಾಡಲು ಜನತೆ ಸ್ಪಷ್ಟ ತೀರ್ಪು ನೀಡಿದ್ದು, ರಾಜ್ಯ ರಾಜಕೀಯದಲ್ಲಿ ಭಾರೀ ಬದಲಾವಣೆಗೆ ನಾಂದಿ ಹಾಡಿದೆ.

ಆರಂಭಿಕ ಮತ ಎಣಿಕೆ ಹಂತದಲ್ಲೇ ಬಿಜೆಪಿ ಮುನ್ನಡೆ ಸ್ಪಷ್ಟವಾಗಿದ್ದು, ಬಳಿಕ ಅದು ದಿಟ್ಟ ಅಲೆಯಾಗಿ ರೂಪುಗೊಂಡಿತು. 294 ಸದಸ್ಯರ ವಿಧಾನಸಭೆಯಲ್ಲಿ ಬಹುಮತದ 148 ಗಡಿ ಸುಲಭವಾಗಿ ದಾಟಿದ ಬಿಜೆಪಿ, ಭರ್ಜರಿ 207 ಸ್ಥಾನಗಳಲ್ಲಿ ಗೆದ್ದು ಬೀಗಿದೆ. ಆಡಳಿತರೂಢ ಟಿಎಂಸಿಗೆ 80 ಸ್ಥಾನಗಳಲ್ಲಿ ಜಯ ಗಳಿಸಿ ಮಾತ್ರ ಸಾಧ್ಯವಾಗಿದೆ.

ಬಿಜೆಪಿಗೆ ಶೇ.45 ಮತ: ಬಿಜೆಪಿಯ ಶೇಕಡಾವಾರು ಮತ ಹಂಚಿಕೆ ಪ್ರಮಾಣದಲ್ಲೂ 2021ರ ಶೇ.38ರಿಂದ ಸುಮಾರು ಶೇ.45ಕ್ಕೆ ಏರಿಕೆಯಾಗಿದೆ. ಇದು ಪಕ್ಷದ ಸಂಘಟನೆ ಶಕ್ತಿ ಹಾಗೂ ಜನಾಧಾರ ವಿಸ್ತರಣೆಯನ್ನು ತೋರಿಸುತ್ತದೆ. ಅದೇ ಸಮಯದಲ್ಲಿ ಟಿಎಂಸಿಯ ಮತ ಶೇ.48ರಿಂದ ಸುಮಾರು ಶೇ.41ಕ್ಕೆ ಕುಸಿದಿದ್ದು, ಅದರ ಬೆಂಬಲದ ಕುಸಿತವನ್ನು ಸ್ಪಷ್ಟಪಡಿಸುತ್ತದೆ.

ರಾಜ್ಯಾದ್ಯಂತ ಬಿಜೆಪಿ ಅಲೆ ಗೋಚರ: ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಭವಾನಿಪುರ ಕ್ಷೇತ್ರದಲ್ಲಿ ಹೀನಾಯ ಸೋಲುಂಡಿದ್ದು, ರಾಜ್ಯದಾದ್ಯಂತ ಬಿಜೆಪಿ ಅಲೆ ಸ್ಪಷ್ಟವಾಗಿ ಗೋಚರಿಸಿದೆ. ನಂದಿಗ್ರಾಮ ಮತ್ತು ಭವಾನಿಪುರದಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಗೆಲುವು ಸಾಧಿಸಿದ್ದು, ಪ್ರಮುಖ ಕ್ಷೇತ್ರಗಳಲ್ಲಿಯೂ ಬಿಜೆಪಿ ಹಿಡಿತ ಸಾಧಿಸಿದೆ. ಉತ್ತರ ಬಂಗಾಳದಿಂದ ಜಂಗಲ್ ಮಹಲ್‌ವರೆಗೆ, ಗಡಿಭಾಗಗಳಿಂದ ಕೈಗಾರಿಕಾ ಪ್ರದೇಶಗಳವರೆಗೆ ಬಿಜೆಪಿ ಸಾಧನೆ ವ್ಯಾಪಕವಾಗಿದೆ. ದಿನ್ಹಾಟಾ, ಗೋಸಾಬಾ, ಬಾಗ್ಮುಂಡಿ, ಬ್ಯಾಂಕುರಾ, ಬಿನ್ಪುರ, ನಾಯಾಗ್ರಾಮ ಮುಂತಾದ ಗ್ರಾಮೀಣ ಹಾಗೂ ಆದಿವಾಸಿ ಪ್ರದೇಶಗಳಲ್ಲೂ ಪಕ್ಷ ಭರ್ಜರಿ ಪ್ರದರ್ಶನ ನೀಡಿದೆ. ಅಸನ್ಸೋಲ್ ದಕ್ಷಿಣ, ದುರ್ಗಾಪುರ ಪೂರ್ವ, ಕೋಲ್ಕತ್ತಾ ಭಾಗಗಳಲ್ಲಿಯೂ ಬಿಜೆಪಿ ಭರ್ಜರಿ ಸಾಧನೆ ಮಾಡಿದೆ.

ಕುಗ್ಗಿದ ಟಿಎಂಸಿ ಪ್ರಭಾವ: ಇದಕ್ಕೆ ವಿರುದ್ಧವಾಗಿ ಟಿಎಂಸಿ ಪ್ರಭಾವ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವುದು ಗೋಚರಿಸಿದೆ. ಬಾಲಿಗಂಜ್, ಎಂಟಾಲಿ ಸೇರಿದಂತೆ ಕೆಲ ನಗರ ಪ್ರದೇಶಗಳು ಹಾಗೂ ಕೆಲವು ಗ್ರಾಮೀಣ ಭಾಗಗಳಲ್ಲಿ ಮಾತ್ರ ಪ್ರತಿರೋಧ ಕಂಡುಬಂದಿದೆ.



> ಜನರು ಬಿಜೆಪಿಗೆ ಸ್ಪಷ್ಟ ಆದೇಶ ನೀಡಿದ್ದು, ಸರ್ಕಾರ ರಚಿಸುತ್ತೇವೆ. ಈ ಚುನಾವಣೆಯಲ್ಲಿ ಹಿಂದು ಮತಗಳು ಬಿಜೆಪಿಯ ಪರ ಏಕೀಕೃತವಾಗಿದ್ದು, ವಿದ್ಯಾವಂತ ಹಿಂದುಗಳು ಮಮತಾ ಬ್ಯಾನರ್ಜಿಯನ್ನು ತಿರಸ್ಕರಿಸಿದ್ದಾರೆ.
>
> ■ **ಸುವೇಂದು ಅಧಿಕಾರಿ**, ಬಿಜೆಪಿ ನಾಯಕ

> ಇದು ನೈತಿಕ ಜಯವಲ್ಲ, ಅನೈತಿಕ ಜಯ. ಚುನಾವಣಾ ಆಯೋಗ, ಕೇಂದ್ರ ಪಡೆಗಳು, ಪ್ರಧಾನಮಂತ್ರಿ ಹಾಗೂ ಗೃಹ ಸಚಿವರು ಮಾಡಿದ್ದು ಸಂಪೂರ್ಣ ಕಾನೂನುಬಾಹಿರ. ಇದು ಕಳ್ಳತನ, ಕಳ್ಳತನ, ಕಳ್ಳತನ. ನಾವು ಅಧಿಕಾರಕ್ಕೆ ಮರಳುತ್ತೇವೆ.
>
> ■ **ಮಮತಾ ಬ್ಯಾನರ್ಜಿ**, ಪ.ಬಂಗಾಳ ಸಿಎಂ

ಸಿಪಿ ಹಂಚಿ ಕಾರ್ಯಕರ್ತರ ಸಂಭ್ರಮ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿರುವ ಹಿನ್ನೆಲೆ ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷದ ಕಾರ್ಯಕರ್ತರು ಉತ್ಸಾಹಭರಿತವಾಗಿ ಸಂಭ್ರಮಾಚರಣೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರಗಳನ್ನು ಹಿಡಿದುಕೊಂಡು ಜೈ ಶ್ರೀ ರಾಮ್ ಘೋಷಣೆ ಕೂಗಿದ ಕಾರ್ಯಕರ್ತರು, ಪಕ್ಷದ ನಾಯಕರಾದ ಅಮಿತ್ ಶಾ, ಸುವೇಂದು ಅಧಿಕಾರಿಯನ್ನು ಗುಣಗಾನ ಮಾಡಿದರು. ಕೋಲ್ಕತ್ತಾದಲ್ಲಿರುವ ಪಕ್ಷದ ರಾಜ್ಯ ಪ್ರಧಾನ ಕಚೇರಿ ಹೊರಗೆ ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿಕೊಂಡು, ದಾರಿಹೋಕರಿಗೂ ನೀಡಿ ಖುಷಿಪಟ್ಟರು. ದಕ್ಷಿಣ 24 ಪರಗಣ ಜಿಲ್ಲೆಯ ಕಾಕ್‌ದ್ವೀಪ್ ಮತ್ತು ಉತ್ತರ 24 ಪರಗಣ ಜಿಲ್ಲೆಯ ಬಂಗಾಂವ್ ಪ್ರದೇಶಗಳಲ್ಲಿಯೂ ಇದೇ ರೀತಿಯ ದೃಶ್ಯ ಕಂಡುಬಂದಿತು. ಬಂಗಾಂವ್ ಪ್ರದೇಶದಲ್ಲಿ ಮತುವಾ ಸಮುದಾಯದ ಜನಸಂಖ್ಯೆ ಹೆಚ್ಚಾಗಿದೆ. ಬಿಜೆಪಿ ಬೆಂಬಲಿಗರು 'ಆಬೀರ್' (ಗುಲಾಲ್) ಹಂಚಿಕೊಂಡು, ಪಲ್ಟಾನೋ ದರ್ಕಾರ್, ಎಬಾರ್ ಬಿಜೆಪಿ ಸರ್ಕಾರ (ಬದಲಾವಣೆ ಬೇಕು, ಈ ಬಾರಿ ಬಿಜೆಪಿ ಸರ್ಕಾರ) ಎಂಬ ಪಕ್ಷದ ಪ್ರಚಾರ ಗೀತೆಗೆ ನೃತ್ಯ ಮಾಡಿದರು. ಬಂಗಾಂವ್‌ನ ಬಿಜೆಪಿ ಬೆಂಬಲಿಗ ಅನುಭಾಬ್ ಬೈರಾಗೀ ಮಾತನಾಡಿ, ಮತುವಾ ಸಮುದಾಯದ ಪೌರತ್ವದ ವಿರುದ್ಧ ಬಿಜೆಪಿ ಕೆಲಸ ಮಾಡುತ್ತಿದೆ ಎಂದು ಟಿಎಂಸಿ ತಪ್ಪು ಪ್ರಚಾರ ನಡೆಸಿತ್ತು. ಆದರೆ, ಬಾಂಗ್ಲಾದೇಶದಿಂದ ವಲಸೆ ಬಂದ ಎಲ್ಲಾ ಹಿಂದುಗಳಿಗೆ ಪೌರತ್ವ ನೀಡಲಾಗುತ್ತದೆ ಎಂದು ಪಕ್ಷ ಸ್ಪಷ್ಟಪಡಿಸಿದೆ. ಈಗಾಗಲೇ ಪೌರರಾಗಿರುವವರಿಗೆ ಯಾವುದೇ ಆತಂಕ ಬೇಡ ಎಂದರು.

ಬಂಗಾಳದಲ್ಲಿ ಗೂಂಡಾರಾಜ್ ಅಂತ್ಯ

ನೆಲೆ ಭದ್ರಪಡಿಸಿಕೊಂಡ ಬಿಜೆಪಿ

ಈ ಚುನಾವಣೆಯಲ್ಲಿ ಬಿಜೆಪಿ ಸಾಧನೆ ಕೇವಲ ಜಯವಷ್ಟೇ ಅಲ್ಲ, ಬಂಗಾಳದ ರಾಜಕೀಯದಲ್ಲಿ ಮೂಲಭೂತ ಬದಲಾವಣೆಯ ಸಂಕೇತವಾಗಿದೆ. ಹಲವು ವರ್ಷಗಳಿಂದ ಹಂತ ಹಂತವಾಗಿ ತನ್ನ ನೆಲೆಯನ್ನು ಬಲಪಡಿಸಿಕೊಂಡಿದ್ದ ಬಿಜೆಪಿ, ಈಗ ಅದನ್ನು ಸಂಪೂರ್ಣ ಅಧಿಕಾರವಾಗಿ ಪರಿವರ್ತಿಸಿಕೊಂಡಿದೆ. ಸಂಘಟನಾ ಮಟ್ಟದಲ್ಲಿ, ಬಿಜೆಪಿ ಮಾಡಿದ ದೀರ್ಘಕಾಲದ ಶ್ರಮ, ಕೇಡರ್ ನಿರ್ಮಾಣ, ಬೂತ್ ನಿರ್ವಹಣೆ ಮತ್ತು ಸಾಮಾಜಿಕ ಪರಿವರ್ತನೆ... ಇವೆಲ್ಲವೂ ಫಲ ನೀಡಿವೆ. ರಾಜಕೀಯವಾಗಿ ಇದು ಬಿಜೆಪಿ ದೇಶವ್ಯಾಪಿ ವಿಸ್ತರಣೆಯ ಮತ್ತೊಂದು ದೊಡ್ಡ ಮೈಲುಗಲ್ಲಾಗಿದೆ.

ಟಿಎಂಸಿಗೆ ಕಠಿಣ ಹಂತ

ಟಿಎಂಸಿಗೆ ಈ ಸೋಲು ದೊಡ್ಡ ಹಿನ್ನಡೆಯಾಗಿದ್ದು, 15 ವರ್ಷದ ಆಡಳಿತದ ನಂತರ ವಿರೋಧ ಪಕ್ಷದ ಪಾತ್ರಕ್ಕೆ ಬದಲಾವಣೆ ಯಾಗಬೇಕಾದ ಪರಿಸ್ಥಿತಿ ಬಂದಿದೆ. ಭ್ರಷ್ಟಾಚಾರದ ಆರೋಪಗಳು, ಆಡಳಿತ ವಿರೋಧಿ ಅಲೆ ಹಾಗೂ ಸಂಘಟನಾ ದೌರ್ಬಲ್ಯ ಟಿಎಂಸಿ ಈ ಸೋಲಿಗೆ ಕಾರಣವಾಗಿವೆ. ಒಟ್ಟಾರೆ, ಬಂಗಾಳದಲ್ಲಿ ಈ ಫಲಿತಾಂಶವು ಬದಲಾವಣೆಯ ಯುಗಕ್ಕೆ ಚಾಲನೆ ನೀಡಿದ್ದು, ಬಿಜೆಪಿ ಆಡಳಿತದ ಹೊಸ ಅಧ್ಯಾಯಕ್ಕೆ ದಾರಿ ಮಾಡಿಕೊಟ್ಟಿದೆ.

ಸಿಎಂ ಸ್ಪರ್ಧೆಯಲ್ಲಿ ಪ್ರಮುಖರು

ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿಯೊಳಗೆ ಮುಖ್ಯಮಂತ್ರಿ ಪಟ್ಟಕ್ಕಾಗಿ ಪೈಪೋಟಿ ಜೋರಾಗಿದೆ. ವಿವಿಧ ನಾಯಕರು ತಮ್ಮ ಅನುಭವ, ಪ್ರಭಾವ ಮತ್ತು ಸಂಘಟನಾ ಶಕ್ತಿಯ ಆಧಾರದ ಮೇಲೆ ಸಿಎಂ ರೇಸ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.



ಸುವೇಂದು ಅಧಿಕಾರಿ

ಬಂಗಾಳದಲ್ಲಿ ಪ್ರಸ್ತುತ ವಿರೋಧ ಪಕ್ಷದ ನಾಯಕರಾಗಿರುವ ಸುವೇಂದು ಅಧಿಕಾರಿ ಸಿಎಂ ಹುದ್ದೆಗೆ ಪ್ರಮುಖ ಅಭ್ಯರ್ಥಿಯಾಗಿ ಪರಿಗಣಿಸಲ್ಪಡುತ್ತಿದ್ದಾರೆ. ನಂದಿಗ್ರಾಮ್ ಹೋರಾಟದಿಂದಲೇ ರಾಜ್ಯ ರಾಜಕೀಯದಲ್ಲಿ ಭಾರೀ ಪ್ರಭಾವ ಬೀರಿದ ಅವರು, ತೃಣಮೂಲ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ ನಂತರ ಪಕ್ಷದ ವಿಸ್ತರಣೆಗೆ ಪ್ರಮುಖ ಶಕ್ತಿಯಾಗಿದ್ದಾರೆ. ಸಂಘಟನಾ ಸಾಮರ್ಥ್ಯ, ಹಿಂದುತ್ವ ಮತಗಳ ಧ್ರುವೀಕರಣ ಮತ್ತು ಭೂಮಿಪುತ್ರ ಇಮೇಜ್ ಇವರ ಬಲವಾಗಿದೆ.



ಸಮಿಕ್ ಭಟ್ಟಾಚಾರ್ಯ

ಬಿಜೆಪಿ ರಾಜ್ಯಾಧ್ಯಕ್ಷರಾಗಿರುವ ಸಮಿಕ್ ಭಟ್ಟಾಚಾರ್ಯ ಸಂಘಟನಾ ಹಂತದಲ್ಲಿ ಶಾಂತ. ಆದರೆ, ಪರಿಣಾಮಕಾರಿ ನಾಯಕನಾಗಿ ಗುರುತಿಸಿಕೊಂಡಿದ್ದಾರೆ. ಆರ್‌ಎಸ್‌ಎಸ್ ಹಿನ್ನೆಲೆಯುಳ್ಳ ಅವರು ವಿವಿಧ ಸಮುದಾಯಗಳಲ್ಲಿ ಪಕ್ಷದ ಆಧಾರ ವಿಸ್ತರಣೆಗಾಗಿ ಕೆಲಸ ಮಾಡಿದ್ದಾರೆ. ನೀತಿ ಮಟ್ಟದ ರಾಜಕಾರಣದಲ್ಲಿ ಪರಿಣತಿ ಹೊಂದಿರುವ ನಾಯಕನಾಗಿ ಇವರ ಹೆಸರು ಸಿಎಂ ರೇಸ್‌ನಲ್ಲಿ ಚರ್ಚೆಯಲ್ಲಿದೆ.



ದಿಲೀಪ್ ಘೋಷ್

ಬಿಜೆಪಿ ರಾಜ್ಯ ಘಟಕವನ್ನು ಬಲಪಡಿಸಿದ ಪ್ರಮುಖ ನಾಯಕರಲ್ಲಿ ದಿಲೀಪ್ ಘೋಷ್ ಪ್ರಮುಖರು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಾಧನೆಗೆ ಅವರ ಸಂಘಟನಾ ಶ್ರಮ ಪ್ರಮುಖ ಕಾರಣವಾಗಿತ್ತು. ತಳಮಟ್ಟದ ಕಾರ್ಯಕರ್ತರಲ್ಲಿ ಹಿಡಿತ, ಸ್ಪಷ್ಟ ಹೇಳಿಕೆಗಳ ಮೂಲಕ ಗಮನ ಸೆಳೆಯುವ ಶೈಲಿ ಇವರಿಗೆ ವಿಶೇಷತೆ.


ಇತರೆ ಸಾಧ್ಯತೆಯ ಅಭ್ಯರ್ಥಿಗಳು

- **ನಿಸಿತ್ ಪ್ರಮಾಣಿಕ್:** ಕೇಂದ್ರ ಮಾಜಿ ಸಚಿವ
- **ಅಗ್ನಿಮಿತ್ರ ಪಾಲ್:** ಪಕ್ಷದ ರಾಜ್ಯ ಉಪಾಧ್ಯಕ್ಷೆ
- **ರೂಪಾ ಗಂಗೂಲಿ:** ಜನಪ್ರಿಯತೆ ಮತ್ತು ಸಾರ್ವಜನಿಕ ಇಮೇಜ್ ಕಾರಣ

ಆದರೆ, ಕೇಂದ್ರ ನಾಯಕತ್ವ, ವಿಶೇಷವಾಗಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಅಭಿಪ್ರಾಯವೂ ಅಂತಿಮ ಆಯ್ಕೆಯಲ್ಲಿ ಪ್ರಮುಖವಾಗಬಹುದು. ಪ್ರಾದೇಶಿಕ ಸಮತೋಲನ ಜಾತಿ–ಸಮುದಾಯ ಸಮೀಕರಣಗಳು ಅಂತಿಮ ನಿರ್ಧಾರವನ್ನು ಪ್ರಭಾವ ಮಾಡಲಿವೆ.

ಅಂಗ, ಬಂಗ, ಕಳಿಂಗ

22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ | ಇಂಡಿ ಕೂಟ 6ಕ್ಕೆ ಕುಸಿತ



ಪಶ್ಚಿಮ ಬಂಗಾಳ ಗೆಲುವಿನೊಂದಿಗೆ ದೇಶದಲ್ಲಿ ಎನ್‌ಡಿಎ ಆಡಳಿತದಲ್ಲಿರುವ ರಾಜ್ಯಗಳ ಸಂಖ್ಯೆ (ಕೇಂದ್ರಾಡಳಿತ ಪ್ರದೇಶಗಳು ಸೇರಿ) 22ಕ್ಕೆ ಏರಿಕೆಯಾಗಿದೆ. ಇನ್ನೊಂದೆಡೆ, ಕೇಂದ್ರದಲ್ಲಿ ಪ್ರಮುಖ ವಿರೋಧ ಪಕ್ಷಗಳ ಮೈತ್ರಿಯಾಗಿರುವ ಇಂಡಿ ಕೂಟ ದೇಶದಾದ್ಯಂತ ಆರು ರಾಜ್ಯಗಳಲ್ಲಿ ತನ್ನ ನೇತೃತ್ವವನ್ನು ಉಳಿಸಿಕೊಂಡಿದೆ. ತಮಿಳುನಾಡು ಕಳೆದುಕೊಂಡರೂ, ಕೇರಳದಲ್ಲಿ ಗೆಲುವು ಸಾಧಿಸಿದೆ. ಕೇರಳದಲ್ಲಿ ಸಾಧಿಸಿದ ಸ್ಪಷ್ಟ ಸಾಧನೆಯ ಹೊರತಾಗಿಯೂ, ಈ ಚುನಾವಣಾ ಫಲಿತಾಂಶಗಳು ಕಾಂಗ್ರೆಸ್ ನೇತೃತ್ವದ ಮೈತ್ರಿಯ ಭವಿಷ್ಯ ಕುರಿತ ಅನಿಶ್ಚಿತತೆಯನ್ನು ಮೂಡಿಸಿವೆ.

ಪಶ್ಚಿಮ ಬಂಗಾಳದ ಜಯದ ನಂತರ ಬಿಜೆಪಿ ಸ್ವತಂತ್ರವಾಗಿ 15 ರಾಜ್ಯಗಳಲ್ಲಿ ಆಡಳಿತ ನಡೆಸಲಿದ್ದು, ಬಿಹಾರ (ಜೆಡಿ(ಯು) ಜತೆಗೆ), ಆಂಧ್ರ ಪ್ರದೇಶ (ಟಿಡಿಪಿ ಜತೆಗೆ), ನಾಗಾಲ್ಯಾಂಡ್(ನಾಗಾ ಪೀಪಲ್ಸ್ ಫ್ರಂಟ್ ಜತೆಗೆ), ಮೇಘಾಲಯ(ನ್ಯಾಷನಲ್ ಪೀಪಲ್ಸ್ ಪಾರ್ಟಿ ಜತೆಗೆ) ಮೈತ್ರಿಯಿಂದ ಒಟ್ಟು ಸಂಖ್ಯೆ 22ಕ್ಕೆ ಏರಿದೆ. ತಮಿಳುನಾಡಿನಲ್ಲಿ ಡಿಎಂಕೆ–ಕಾಂಗ್ರೆಸ್ ಮೈತ್ರಿಯನ್ನು ಹೊಸ ರಾಜಕೀಯ ಶಕ್ತಿ ಜನ ನಾಯಕ ವಿಜಯ್ ನೇತೃತ್ವದ ಟಿವಿಕೆ ಅಧಿಕಾರದಿಂದ ಕೆಳಗಿಳಿಸಿದೆ. ಇತ್ತ, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಸರ್ಕಾರ ರಚಿಸಲು ಸಿದ್ಧವಾಗಿದೆ.

ಚುನಾವಣಾ ಆಯೋಗದ ಅಧಿಕೃತ ಘೋಷಣೆಯ ನಂತರ, ಕಾಂಗ್ರೆಸ್‌ಗೆ ಕೇವಲ ಮೂರು ರಾಜ್ಯಗಳಲ್ಲಿ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ಮಾತ್ರ ಬಹುಮತ ಸರ್ಕಾರ ಉಳಿದಿದೆ. ಜಾರ್ಖಂಡ್‌ನಲ್ಲಿ ಹೇಮಂತ್ ಸೊರೇನ್ ನೇತೃತ್ವದ ಜೆಎಂಎಂ ಜತೆ ಮೈತ್ರಿಯಲ್ಲಿದೆ. ಪಂಜಾಬಿನಲ್ಲಿ ಭಗವಾನ್ ಮಾತ್ರ ನೇತೃತ್ವದ ಎಎಪಿ, ಇಂಡಿ ಕೂಟದ ಮೈತ್ರಿಯ ಭಾಗವಲ್ಲದಿದ್ದರೂ, ಕೇಂದ್ರದಲ್ಲಿ ಬಿಜೆಪಿ ವಿರುದ್ಧ ನಿಲುವು ಹೊಂದಿದೆ.

ಭಾರತದ ಸಂವಿಧಾನದ ಕಲಂ 368 ಪ್ರಕಾರ ತಿದ್ದುಪಡಿ ಮಸೂದೆ ಪಾಸಾಗಲು ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತ ಅಗತ್ಯ. ಕೆಲವು ವಿಶೇಷ ತಿದ್ದುಪಡಿಗಳಿಗೆ ಅರ್ಧಕ್ಕಿಂತ ಹೆಚ್ಚು ರಾಜ್ಯಗಳ ಅನುಮೋದನೆಯೂ ಅಗತ್ಯವಿರುತ್ತದೆ. ಇದರಲ್ಲಿ ಕಲಂ 54, 55, 73, 162, 241 ಹಾಗೂ ಏಳನೇ ಅನುಕ್ರಮಣಿಕೆಯ ವಿಷಯಗಳು ಸೇರಿವೆ.

ಈಗ ಭಾರತದಲ್ಲಿ 29 ರಾಜ್ಯಗಳಿದ್ದು, ಬಹುಮತಕ್ಕೆ 14.5 ರಾಜ್ಯಗಳು ಅಗತ್ಯ. ಬಂಗಾಳದ ಜಯದೊಂದಿಗೆ ಬಿಜೆಪಿ 15 ರಾಜ್ಯಗಳಲ್ಲಿ ಆಡಳಿತ ಸಾಧಿಸಿದೆ.

ದೀದಿಗೆ ಹೀನಾಯ ಸೋಲು

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಹೀನಾಯ ಸೋಲಾಗಿದೆ. ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ 15,114 ಮತಗಳ ಅಂತರದಿಂದ ಸೋತಿದ್ದು, ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಸುವೇಂದುಗೆ ಡಬಲ್ ಧಮಾಕ

ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಅಲ್ಲದೇ ನಂದಿಗ್ರಾಮ ಕ್ಷೇತ್ರದಲ್ಲಿ ಟಿಎಂಸಿಯ ತಮ್ಮ ಪ್ರತಿಸ್ಪರ್ಧಿಗಿಂತ 9 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.



ಆಡಳಿತ ಬದಲಾವಣೆಗೆ ಕಾರಣವಾದ ಅಂಶಗಳು

ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಬದಲಾವಣೆಗೆ ಕಾರಣವಾದ ಅಂಶಗಳು ಹಲವು ಆಯಾಮಗಳಲ್ಲಿ ಚರ್ಚೆಗೆ ಒಳಗಾಗಿವೆ. ದೀದಿ ವಿರೋಧಿ ಅಲೆ ಏಳಲು ಪ್ರಮುಖವಾಗಿ ಮೂರು ಕಾರಣಗಳನ್ನು ವಿಶ್ಲೇಷಕರು ಉಲ್ಲೇಖಿಸುತ್ತಿದ್ದಾರೆ. ಮೊದಲನೆಯದು ಹಿಂದು ಮತಗಳ ಧ್ರುವೀಕರಣ. ಈ ಬಾರಿ ಧಾರ್ಮಿಕ ಆಧಾರಿತ ಮತಗಳ ಏಕೀಕರಣ ಬಿಜೆಪಿಗೆ ಲಾಭ ತಂದಿದೆ. ಎರಡನೆಯದು ಆಡಳಿತ ವಿರೋಧಿ ಅಲೆ. ಟಿಎಂಸಿ ಸರ್ಕಾರದ ವಿರುದ್ಧದ ಅಸಮಾಧಾನ, ಭ್ರಷ್ಟಾಚಾರದ ಆರೋಪಗಳು ಮತ್ತು ಸ್ಥಳೀಯ ಮಟ್ಟದ ಆಡಳಿತದ ವೈಫಲ್ಯಗಳು ಜನಮನದಲ್ಲಿ ಅಸಮಾಧಾನ ಮೂಡಿಸಿವೆ. ಮೂರನೆಯದು ಕೇಂದ್ರ ನಾಯಕತ್ವದ ಆಕ್ರಮಣಕಾರಿ ಪ್ರಚಾರ, ಬೂತ್ ಮಟ್ಟದ ಸಂಘಟನೆ ಬಲಪಡಿಸುವ ಕಾರ್ಯ ಮತ್ತು ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆ ಬಿಜೆಪಿಗೆ ನೆರವಾಗಿದೆ. ಜತೆಗೆ ಯುವ ಮತದಾರರ ಮನೋಭಾವದಲ್ಲಿ ಬದಲಾವಣೆ, ಉದ್ಯೋಗ ಮತ್ತು ಅಭಿವೃದ್ಧಿ ಕುರಿತ ನಿರೀಕ್ಷೆಗಳು ಕೂಡ ಫಲಿತಾಂಶದ ಮೇಲೆ ಪ್ರಭಾವ ಬೀರಿವೆ. ಮಹಿಳಾ ಮತದಾರರ ಒಂದು ವರ್ಗದಲ್ಲೂ ಪರ್ಯಾಯದ ಅಗತ್ಯತೆಯ ಭಾವನೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಲ್ಯಾಣ ಯೋಜನೆಗಳ ಅನುಷ್ಠಾನ ಕುರಿತ ಅಸಮಾಧಾನವೂ ಗಮನಾರ್ಹವಾಗಿದೆ. ಈ ಎಲ್ಲಾ ಅಂಶಗಳಿಗೆ ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಬಿಜೆಪಿ ಹೊಸ ಅಧ್ಯಾಯ ಆರಂಭಿಸಿದೆ.

ತುಷ್ಟೀಕರಣ ರಾಜನೀತಿಗೆ ಮರೆಯಲಾಗದ ಪಾಠ: ಶಾ

ಹೊಸದಿಲ್ಲಿ: ಟಿಎಂಸಿ ತುಷ್ಟೀಕರಣ ರಾಜನೀತಿಯಲ್ಲಿ ಮುಳುಗಿದೆ ಎಂದು ಪಕ್ಷವನ್ನು ತರಾಟೆಗೆತ್ತಿಕೊಂಡ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಕ್ರಮ ನುಸುಳುಕೋರರು ಮತ್ತವರ ಬಗ್ಗೆ ಸಹಾನುಭೂತಿ ತೋರುವವರಿಗೆ ಪ.ಬಂಗಾಳದ ಜನತೆ ಅದ್ಯಾವ ಪರಿ ಪಾಠ ಕಲಿಸಿದ್ದಾರೆಂದರೆ, ತುಷ್ಟೀಕರಣದಲ್ಲಿ ತೊಡಗಿರುವ ಯಾವ ಪಕ್ಷಗಳೂ ಈ ಪಾಠವನ್ನು ಮರೆಯಲಾರರು. ಅದಮ್ಯ ಭರವಸೆ, ಆಶೋತ್ತರಗಳೊಂದಿಗೆ ಪ.ಬಂಗಾಳವು ಪ್ರಧಾನಿ ಮೋದಿ ನಾಯಕತ್ವದಲ್ಲಿ ನಂಬಿಕೆ ಇರಿಸಿ ಬಿಜೆಪಿಯನ್ನು ಬೆಂಬಲಿಸಿದೆ ಮತ್ತು ಜನರ ಆಶೋತ್ತರಗಳನ್ನು ನಾವು ಖಂಡಿತ ಈಡೇರಿಸುತ್ತೇವೆ ಎಂದು ಆಶ್ವಾಸನೆ ನೀಡಿದ್ದಾರೆ. ಮಹಾನ್ ವ್ಯಕ್ತಿತ್ವಗಳಾದ ಚೈತನ್ಯ ಮಹಾಪ್ರಭು, ಸ್ವಾಮಿ ವಿವೇಕಾನಂದ, ಕವಿ ಗುರು ಠಾಗೋರ್, ನೇತಾಜಿ ಸುಭಾಷ್ಚಂದ್ರ ಬೋಸ್, ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರ ಜನುಮಭೂಮಿ ಬಂಗಾಳದ ಗತ ವೈಭವದ ಮರುಕಳಿಕೆಗೆ ಬಿಜೆಪಿ ಅಹರ್ನಿಶಿ ಶ್ರಮಿಸಲಿದೆ ಎಂದು ಸಚಿವ ಶಾ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಮಹಿಳಾ ಹೋರಾಟ ಮುಖಗಳಿಗೆ ಜಯ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಮಹಿಳಾ ಭದ್ರತೆ ಪ್ರಶ್ನೆಯನ್ನು ಮುಂದಿಟ್ಟುಕೊಂಡಿದ್ದ ಬಿಜೆಪಿ ಅಭ್ಯರ್ಥಿಗಳಾದ ರತ್ನಾ ದೇವನಾಥ್ ಹಾಗೂ ರೇಖಾ ಪಾತ್ರಾ, ಭರ್ಜರಿ ಗೆಲುವು ಸಾಧಿಸಿದ್ದಾರೆ. ಆರ್‌ಜಿ ಕರ್ ಆಸ್ಪತ್ರೆಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಅಭಯಳ ತಾಯಿ ರತ್ನಾ ದೇವನಾಥ್, ಪಾನಿಹಾಟಿ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ತೀರ್ಥಂಕರ ಘೋಷ್ ವಿರುದ್ಧ 28,836 ಮತಗಳ ಅಂತರದಿಂದ ಜಯಗಳಿಸಿದರು. ರಾಜಕೀಯಕ್ಕೆ ಹೊಸದಾಗಿ ಕಾಲಿಟ್ಟ ರತ್ನಾ ತಮ್ಮ ಪ್ರಚಾರದ ವೇಳೆ ಮಹಿಳಾ ಸುರಕ್ಷತೆ ವಿಚಾರವನ್ನು ಪ್ರಮುಖವಾಗಿ ಮುಂದಿಟ್ಟಿದ್ದರು. ಇನ್ನೊಂದೆಡೆ, ಸಂದೇಶ್‌ಖಾಲಿ ಪ್ರತಿಭಟನೆಗಳ ಮುಖವಾಗಿದ್ದ ರೇಖಾ ಪಾತ್ರಾ, ಹಿಂಗಲ್‌ಗಂಜ್ ಕ್ಷೇತ್ರದಲ್ಲಿ 5,421 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಗೃಹಿಣಿಯಾಗಿರುವ ಪಾತ್ರಾ, ಟಿಎಂಸಿ ನಾಯಕ ಶಾಜಹಾನ್ ಶೇಖ್ ವಿರುದ್ಧದ ಆರೋಪಗಳ ಹಿನ್ನೆಲೆ ದೇಶವ್ಯಾಪಿ ಗಮನ ಸೆಳೆದಿದ್ದರು.

- ಆರ್‌ಜಿ ಕರ್ ಆಸ್ಪತ್ರೆ ಪ್ರಕರಣದ ಅಭಯ ತಾಯಿಗೂ ಜಯ
- ಸಂದೇಶ್‌ಖಾಲಿ ಹೋರಾಟದ ಮಹಿಳೆಗೂ ವಿಜಯ



ಅಮಿತ್ ಶಾ ತಂಡದ ಅಚ್ಚುಕಟ್ಟಾದ ತಂತ್ರದ ಫಲ | ಮೈಕ್ರೋ ಮಟ್ಟದ ಯೋಜನೆ, ಸಂಘಟನಾ ಬಲ | ಬಿಜೆಪಿ ಐತಿಹಾಸಿಕ ಗೆಲುವಿನ ಒಳನೋಟ

ಕಮಲ ಅರಳಿಸಿದ 5 ಶಿಲ್ಪಿಗಳು

ಕೋಲ್ಕತಾ/ಹೊಸದಿಲ್ಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಸಾಧಿಸಿದ ಐತಿಹಾಸಿಕ ಗೆಲುವಿನ ಹಿಂದೆ ಒಂದು ಸಮಗ್ರ ರಾಜಕೀಯ ತಂತ್ರ ಹಾಗೂ ಬಲಿಷ್ಠ ನಾಯಕತ್ವದ ಸಮನ್ವಯ ಕಾರ್ಯನಿರ್ವಹಿಸಿರುವುದು ಸ್ಪಷ್ಟವಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಕಾರ್ಯನಿರ್ವಹಿಸಿದ ಐದು ಪ್ರಮುಖ ನಾಯಕರಾದ ಸುನಿಲ್ ಬನ್ಸಲ್, ಕೈಲಾಶ್ ವಿಜಯವರ್ಗೀಯ, ಶಿವಪ್ರಕಾಶ್ ಮತ್ತು ಅರವಿಂದ್ ಮೆನನ್ ಈ ಜಯದ ಪ್ರಮುಖ ಶಿಲ್ಪಿಗಳೆಂದು ಗುರುತಿಸಲಾಗಿದೆ.

ಈ ಚುನಾವಣೆಯನ್ನು ಬಿಜೆಪಿ ಕೇವಲ ರಾಜಕೀಯ ಪೈಪೋಟಿಯಾಗಿ ನೋಡದೆ, ದೀರ್ಘಾವಧಿಯ ಸಂಘಟನಾ ಹೋರಾಟವಾಗಿ ಪರಿಗಣಿಸಿತು. ಈ ದಿಕ್ಕಿನಲ್ಲಿ ಅಮಿತ್ ಶಾ ಅವರ ಪಾತ್ರ ನಿರ್ಣಾಯಕವಾಗಿತ್ತು. ರಾಜ್ಯದಾದ್ಯಂತ ವ್ಯಾಪಕ ಪ್ರಚಾರ ನಡೆಸುವುದರ ಜೊತೆಗೆ, ಕ್ಷೇತ್ರವಾರು ವಿಶೇಷ ತಂತ್ರ ರೂಪಿಸಿ, ಬೂತ್ ಮಟ್ಟದ ಮಾಹಿತಿಯನ್ನು ಆಧರಿಸಿದ ಕಾರ್ಯಪದ್ಧತಿಯನ್ನು ಜಾರಿಗೆ ತಂದರು. ಅಕ್ರಮ ವಲಸೆ, ಕಾನೂನು ಸುವ್ಯವಸ್ಥೆ ಮತ್ತು ಅಭಿವೃದ್ಧಿ ವಿಚಾರಗಳನ್ನು ಮತದಾರರ ಮನಸ್ಸಿಗೆ ತಲುಪಿಸುವಲ್ಲಿ ಅವರು ತೋರಿದ ರಾಜಕೀಯ ಚಾಣಾಕ್ಷತನ ಈ ಗೆಲುವಿಗೆ ಬಲವಾಯಿತು.

ಈ ಸಮಗ್ರ ಕಾರ್ಯತಂತ್ರದ ಜತೆಗೆ ಸಂಘಟನಾ ಬಲವನ್ನು ಕಟ್ಟಿದವರು ಸುನೀಲ್ ಬನ್ಸಲ್. ರಾಜ್ಯದ ಪ್ರತಿಯೊಂದು ಬೂತ್ ಮಟ್ಟದಲ್ಲೂ ಕಾರ್ಯಕರ್ತರ ಜಾಲವನ್ನು ಬಲಪಡಿಸುವ ಮೂಲಕ ಬಿಜೆಪಿ ನೆಲಮಟ್ಟದಲ್ಲಿ ಬೇರೂರಲು ಅವರು ಕಾರಣರಾದರು. ಹೊಸ ಸದಸ್ಯರ ಸೇರ್ಪಡೆ, ಕಾರ್ಯಕರ್ತರ ತರಬೇತಿ ಮತ್ತು ನಿರಂತರ ಸಂಪರ್ಕದ ಮೂಲಕ ಪಕ್ಷದ ಮತಶಕ್ತಿಯನ್ನು ವಿಸ್ತರಿಸಿದ ಬನ್ಸಲ್ ಅವರ ಕಾರ್ಯಶೈಲಿ ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿತು.

ಇದಕ್ಕೆ ಪೂರಕವಾಗಿ ಕೈಲಾಶ್ ವಿಜಯವರ್ಗೀಯ ಅವರು ಬಂಗಾಳದಲ್ಲಿ ದೀರ್ಘಕಾಲದಿಂದ ಪಕ್ಷದ ಮುಖವಾಗಿ ಕಾರ್ಯನಿರ್ವಹಿಸಿದರು. ಟಿಎಂಸಿ ವಿರುದ್ಧ ಆಕ್ರಮಣಕಾರಿ ಪ್ರಚಾರ ನಡೆಸಿ, ಸ್ಥಳೀಯ ರಾಜಕೀಯ ಸಮೀಕರಣಗಳನ್ನು ಬದಲಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಅವರ ಶೈಲಿ, ಚುನಾವಣಾ ಕಣದಲ್ಲಿನ ಬಿಜೆಪಿಯ ಚುರುಕುತನವನ್ನು ಹೆಚ್ಚಿಸಿತು.

ಶಿವ ಪ್ರಕಾಶ್ ಅವರು ಸಂಘ ಮತ್ತು ಪಕ್ಷದ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಿ, ನೆಲಮಟ್ಟದಲ್ಲಿ ಶಿಸ್ತುಬದ್ಧ ಕಾರ್ಯಪದ್ಧತಿಯನ್ನು ರೂಪಿಸಿದರು. ಆರ್‌ಎಸ್‌ಎಸ್ ಕಾರ್ಯಕರ್ತರ ಸಕ್ರಿಯ ತೊಡಗಿಸಿಕೊಳ್ಳುವಿಕೆ ಮತ್ತು ತಂತ್ರಾತ್ಮಕ ಮಾರ್ಗದರ್ಶನದ ಮೂಲಕ ಅವರು ಚುನಾವಣಾ ಕಾರ್ಯಾಚರಣೆಗೆ ದಿಕ್ಕು ನೀಡಿದರು. ಇದರಿಂದ ಬಿಜೆಪಿ ಸಂಘಟನೆಯು ಹೆಚ್ಚು ಸಂಯೋಜಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಚುನಾವಣಾ ನಿರ್ವಹಣೆಯ ಇನ್ನೊಂದು ಪ್ರಮುಖ ಅಂಶವನ್ನು ಅರವಿಂದ್ ಮೆನನ್ ಅವರು ನೋಡಿಕೊಂಡರು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಿಂದ ಹಿಡಿದು ಕ್ಷೇತ್ರವಾರು ಪ್ರಚಾರ ತಂತ್ರ ರೂಪಿಸುವವರೆಗೂ, ಸಂಪೂರ್ಣ ಚುನಾವಣಾ ಕಾರ್ಯತಂತ್ರವನ್ನು ಸಮನ್ವಯಗೊಳಿಸುವಲ್ಲಿ ಅವರು ತೋರಿದ ನಿಖರತೆ ಗಮನಾರ್ಹವಾಗಿತ್ತು. ಸಂಪನ್ಮೂಲಗಳ ಸರಿಯಾದ ಹಂಚಿಕೆ ಮತ್ತು ಪ್ರಚಾರದ ಪರಿಣಾಮಕಾರಿ ನಿರ್ವಹಣೆ ಬಿಜೆಪಿ ಪರ ಹಿತಕರ ವಾತಾವರಣ ನಿರ್ಮಿಸಿತು.

ಈ ಎಲ್ಲ ಅಂಶಗಳ ಒಟ್ಟಾರೆ ಪರಿಣಾಮವಾಗಿ, ದೀರ್ಘಕಾಲದಿಂದ ತೃಣಮೂಲ ಕಾಂಗ್ರೆಸ್ ಪ್ರಭಾವದಲ್ಲಿದ್ದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹೊಸ ರಾಜಕೀಯ ಅಧ್ಯಾಯವನ್ನು ಆರಂಭಿಸಿದೆ. ಈ ಫಲಿತಾಂಶ ಕೇವಲ ಒಂದು ರಾಜ್ಯದ ಆಡಳಿತ ಬದಲಾವಣೆಯಷ್ಟೇ ಅಲ್ಲ, ರಾಷ್ಟ್ರ ರಾಜಕೀಯದ ದಿಕ್ಕಿನ ಮೇಲೆಯೂ ಪರಿಣಾಮ ಬೀರುವಂತಹ ಮಹತ್ವದ ಬೆಳವಣಿಗೆಯಾಗಿದೆ.

ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ: ಜೋಶಿ

ನವದೆಹಲಿ: ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ. ಮುಂಬರುವ ಚುನಾವಣೆ ಕರ್ನಾಟಕದಲ್ಲಿಯೂ ಇದೇ ಸ್ಥಿತಿ ಎದುರಾಗಲಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಭವಿಷ್ಯ ನುಡಿದರು.



ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪಂಚ ರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯಿಸಿ, ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಬಿಜೆಪಿ ಆಡಳಿತಕ್ಕೆ ಬಹು ದೊಡ್ಡ ಗೆಲುವು ತಂದು ಕೊಟ್ಟಿದ್ದಾರೆಂದು ಹೇಳಿದರು. ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಪುದುಚೆರಿಯಲ್ಲಿ ಎನ್‌ಡಿಎಗೆ ಅಭೂತಪೂರ್ವ ಗೆಲುವು ಸಿಕ್ಕಿದೆ. ಮೋದಿ ಅವರ 12 ವರ್ಷಗಳ ಸಮರ್ಥ ಆಡಳಿತ, ಅದ್ಭುತ ಕಾರ್ಯ ಕಂಡು ಬಿಜೆಪಿಗೆ ಮನ್ನಣೆ ನೀಡಿದ್ದಾರೆ. ಕೇರಳದಲ್ಲಿ ನಮಗೆ ಯಶಸ್ಸು ಸಿಕ್ಕಿಲ್ಲ. ಆದರೆ, ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಮುಕ್ತವಾಗಿದೆ ಎಂದು ವ್ಯಾಖ್ಯಾನಿಸಿದರು.

ದೇಶಾದ್ಯಂತ ಕಾಂಗ್ರೆಸ್ ಶೂನ್ಯ: ಒಂದು ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟಿದೆ. ಕೇರಳ ಬಿಟ್ಟರೆ ಬೇರೆಲ್ಲಡೆ ಅಸ್ತಿತ್ವ ಕಳೆದುಕೊಂಡಿದೆ. ಪಶ್ಚಿಮ ಬಂಗಾಳ-0, ತಮಿಳುನಾಡು-0, ಅಸ್ಸಾಂ-22-24 ಸ್ಥಾನ ಗೆದ್ದಿದೆ ಅಷ್ಟೇ. ಕಾಂಗ್ರೆಸ್‌ನ ತುಷ್ಟೀಕರಣದ ಪರಮಾವಧಿ, ಭ್ರಷ್ಟಾಚಾರ, ಬಹುಸಂಖ್ಯಾತ ಹಿಂದೂಗಳ ತಿರಸ್ಕಾರ, ವೋಟ್ ಬ್ಯಾಂಕ್ ರಾಜಕಾರಣಕ್ಕೆ ಜನ ತಕ್ಕ ಪಾಠ ಕಲಿಸಿದ್ದಾರೆ ಎಂದು ಜೋಶಿ ವಿಶ್ಲೇಷಿಸಿದರು. ತಮಿಳುನಾಡಲ್ಲಿ ವಿಜಯ್ ಜತೆ ಹೋಗುತ್ತೇವೆ ಎಂದಿದ್ದಾರೆ. ಅಲ್ಲಿ ಹೋಗಲು ಅವರಲ್ಲೇನೂ ಉಳಿದಿಲ್ಲ, ಇನ್ನೇನು ಹೋಗುತ್ತಾರೆ? ಇನ್ನು ಕೇರಳದಲ್ಲಿ ದೇಶ ಇಬ್ಭಾಗ ಮಾಡುವ ಮನಸ್ಥಿತಿಯ ಮುಸ್ಲಿಂ ಲೀಗ್ ಜತೆ ಒಪ್ಪಂದದೊಂದಿಗೆ ಹಿಂದೂ ವಿರೋಧಿಯಾಗಿ ವರ್ತಿಸಿದ್ದರ ಪರಿಣಾಮ ದೇಶದೆಲ್ಲೆಡೆಯೂ ಕಾಂಗ್ರೆಸ್ ಧೂಳೀಪಟವಾಗಿದೆ ಎಂದು ಟೀಕಿಸಿದರು.

ಉಪಚುನಾವಣೆ: ಎನ್‌ಡಿಎ ಗೆಲುವು


ಹೊಸದಿಲ್ಲಿ: ದೇಶದಲ್ಲಿ ನಡೆದ ವಿಧಾನಸಭೆಯ ಏಳು ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಐದರಲ್ಲಿ ಗೆದ್ದಿದೆ. ಇನ್ನು ಎರಡರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಗುಜರಾತ್‌ನ ಉಮ್ರೇತ್, ಮಹಾರಾಷ್ಟ್ರದ ರಾಹುರಿ, ನಾಗಾಲೆಂಡ್‌ನ ಕೊರಿಡಾಂಗ್ ಮತ್ತು ತ್ರಿಪುರಾದ ಧರ್ಮನಗರದಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ. ಅಜಿತ್ ಪವಾರ್ ಅವರ ಸಾವಿನಿಂದ ತೆರವಾದ ಬಾರಾಮತಿಯಲ್ಲಿ ಅವರ ಪತ್ನಿ, ಎನ್‌ಸಿಪಿಯ ಸುನೇತ್ರ ಪವಾರ್ ಅವರು ದಾಖಲೆಯ 2.18 ಲಕ್ಷ ಮತಗಳಿಂದ ಗೆದ್ದಿದ್ದಾರೆ. ವಿಧಾನಸಭೆ ಇತಿಹಾಸದಲ್ಲಿ ಇದು ಅತ್ಯಂತ ದೊಡ್ಡ ಗೆಲುವು ಎಂದು ಬಣ್ಣಿಸಲಾಗಿದೆ.

ಗೆದ್ದು ಬೀಗಿದ ಉಮೇಶ ಮೇಟಿ

ಸಿಎಂ ಭರ್ಜರಿ ಪ್ರಚಾರ: ಬಾಗಲಕೋಟೆಯ ಉಪ ಚುನಾವಣೆ ಆರಂಭವಾಗಿ ಮತದಾನ ಇನ್ನೇನು ಏಳೆಂಟು ದಿನ ಇರುವಾಗಲೇ ಬಾಗಲಕೋಟೆಯ 5 ಕ್ಷೇತ್ರದಲ್ಲಿ ಸಿದ್ದರಾಮಯ್ಯ ಶತಾಗತಾಯ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲು ಗ್ರಾಮೀಣ, ನಗರ ಪ್ರದೇಶದಲ್ಲಿ ಭರ್ಜರಿ ಪ್ರಚಾರ ನಡೆಸಿದರು. ಮೇಟಿಯವರ ಪುತ್ರ ಉಮೇಶನನ್ನು ನಿಮ್ಮ ಜೋಳಿಗೆ ಹಾಕಿದ್ದೇನೆ ಅವನನ್ನು ಗೆಲ್ಲಿಸಿ ಎಂದೇ ಮನವಿ ಮಾಡಿದ್ದರು.

ಕುಗ್ಗುವುದಿಲ್ಲ: ಸೋಲನ್ನು ಸ್ವೀಕರಿಸಿದ್ದೇವೆ. ಚುನಾವಣೆಯಲ್ಲಿ ಸೋತಿದ್ದೇವೆ ಎಂದು ಕುಗ್ಗುವುದಿಲ್ಲ, ಇನ್ನಷ್ಟು ಕ್ಷೇತ್ರದಲ್ಲಿ ಬಿಜೆಪಿ ಗಟ್ಟಿಗೊಳಿಸುವ ಕೆಲಸ ಮಾಡುತ್ತೇವೆ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ತಿಳಿಸಿದ್ದಾರೆ.

ರಾಮ ಬಾಣ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ಚೌತಿ, ನಕ್ಷತ್ರ : ಜ್ಯೇಷ್ಠೆ

ದಿನದ ಮಾತು

ಗರ್ವವನ್ನು ತ್ಯಜಿಸುವವನು ಇತರರ ಪ್ರೀತಿಗೆ ಪಾತ್ರನಾಗುತ್ತಾನೆ.

▲ಮಹಾಭಾರತ

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

ಭಾರತವಲ್ಲದೆ ಇಡೀ ವಿಶ್ವದ ಗಮನ ಸೆಳೆದಿರುವ ಆರೆಸ್ಸೆಸ್ಸನ್ನು ನಿಷೇಧಿಸಲು ಯಾರಿಂದಲೂ ಸಾಧ್ಯವಿಲ್ಲ - ಈಶ್ವರಪ್ಪ

- ಕೆಲವರಿಗೆ ನಿಷೇಧ ಮಾಡುವುದು ಮುಖ್ಯವಲ್ಲ, ನಿಷೇಧ ಮಾಡಲೇ ಬೇಕು ಅಂತಲೂ ಇಲ್ಲ, ಆದರೆ ನಿಷೇಧ ಮಾಡಲು ಭಾರೀ ಪ್ರಯತ್ನ ಮಾಡಿದ್ದೇವೆ ಅಂತ ಬ್ರದರ್ಸ್‌ಗಳಿಗೆ ಕನ್ವಿನ್ಸ್ ಮಾಡುವುದು ಮುಖ್ಯ!

ದಿನ ಭವಿಷ್ಯ

ಮೇಷ ಸಹೋದ್ಯೋಗಿಗಳು ಸಮಸ್ಯೆ ಸೃಷ್ಟಿಸಬಹುದು. ನೆಮ್ಮದಿ ಕಳೆದುಕೊಳ್ಳದಿರಿ. ನಿಮಗೇ ಒಳಿತಾಗುವ ಸಮಯ ಬರುವುದು. ಆಪ್ತ ಸಂಬಂಧ ಗಟ್ಟಿ.

ವೃಷಭ ಮನೆಯ ಹೊಣೆ ಮತ್ತು ವೃತ್ತಿಕಾರ್ಯದ ಮಧ್ಯೆ ಅಸಮತೋಲನ ಉಂಟಾದೀತು. ಇದರಿಂದ ಎಲ್ಲವೂ ಅಸ್ತವ್ಯಸ್ತ. ಹೊಂದಾಣಿಕೆ ಮುಖ್ಯ.

ಮಿಥುನ ಚಿಂತೆಗೆ ಕಾರಣವಾದ ವಿಷಯಗಳೆಲ್ಲ ಇತ್ಯರ್ಥ. ಮಾನಸಿಕ ನಿರಾಳತೆ. ಮುನಿಸಿಕೊಂಡವರು ಸಮೀಪವಾಗುತ್ತಾರೆ. ಕೌಟುಂಬಿಕ ಸಾಮರಸ್ಯ.

ಕಟಕ ವ್ಯವಹಾರದಲ್ಲಿ ಕೆಲವು ಮಹತ್ವದ ಬೆಳವಣಿಗೆ. ಅದೃಷ್ಟವನ್ನೆ ನಂಬಿ ಕೂರಬೇಡಿ. ನಿಮ್ಮ ಪ್ರಯತ್ನವೂ ಅಗತ್ಯವಾಗಿದೆ.

ಸಿಂಹ ಆಪ್ತ ಸಂಬಂಧ ಉಳಿಸಲು ನಿಮ್ಮ ಅಹಂ ಅಡ್ಡಿ ಬಾರದಿರಲಿ. ಖರ್ಚಿನ ದಾರಿ ಹೆಚ್ಚುವುದು. ಆದಾಯ ಗಳಿಕೆಯ ಸಾಧ್ಯತೆ ಕಡಿಮೆ.

ಕನ್ಯಾ ವೃತ್ತಿಯಲ್ಲಿ ಯಶಸ್ಸು. ಆದಾಯ ಹೆಚ್ಚಳ. ಸಮಸ್ಯೆಯೊಂದು ಪರಿಹಾರ, ನೆಮ್ಮದಿ. ಕುಟುಂಬ ಸದಸ್ಯರ ಸಹಕಾರ, ಬೆಂಬಲ.

ತುಲಾ ನಿಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ಎಚ್ಚರಿಕೆ ವಹಿಸಿ. ನಿರ್ಲಕ್ಷ್ಯದಿಂದ ನಷ್ಟ ಉಂಟಾದೀತು. ಇತರರ ಮೇಲೆ ಜವಾಬ್ದಾರಿ ದಾಟಿಸಬೇಡಿ.

ವೃಶ್ಚಿಕ ಕರ್ತವ್ಯ ಕ್ಷಿಪ್ರವಾಗಿ ನಿಭಾಯಿಸುವಿರಿ. ಅದರಿಂದ ಯಶ. ಆರ್ಥಿಕ ಪರಿಸ್ಥಿತಿ ಉತ್ತಮ. ಬಂಧುಗಳಿಂದ ಪ್ರೀತಿ, ಗೌರವ ಪಡೆಯುವಿರಿ.

ಧನು ಮಾನಸಿಕ ಒತ್ತಡ. ನಿಮ್ಮ ಕೆಲಸದ ಮೇಲೆ ಗಮನ ಕಡಿಮೆಯಾಗಲಿದೆ. ಸಂಗಾತಿ ಜತೆಗೆ ಭಿನ್ನಮತ. ಅನವಶ್ಯ ಖರ್ಚು.

ಮಕರ ನಿಮಗಿಂದು ಪೂರಕ ದಿನ. ನಿಮ್ಮ ಕಾರ್ಯ ಸಫಲ. ಆತ್ಮೀಯರಿಂದ ಭಾವನಾತ್ಮಕ ಬೆಂಬಲ. ಕೌಟುಂಬಿಕ ಉದ್ವಿಗ್ನತೆ ಶಮನಗೊಳ್ಳುವುದು.

ಕುಂಭ ಖಾಸಗಿ ವಿಷಯದಲ್ಲಿ ಪೂರಕ ಬೆಳವಣಿಗೆ. ಪ್ರೀತಿಯಲ್ಲಿ ಯಶಸ್ಸು. ನಿಮ್ಮ ಭಾವನೆಗೆ ಸೂಕ್ತ ಸ್ಪಂದನೆ ಪಡೆಯುವಿರಿ. ವಿವಾದಕ್ಕೆ ಆಸ್ಪದ ನೀಡದಿರಿ.

ಮೀನ ಕೊರಗೊಂದು ಕಾಡುತ್ತಿದೆ. ಅದನ್ನು ನಿಭಾಯಿಸಲು ಕಷ್ಟ ಪಡುವಿರಿ. ಸೂಕ್ತ ನೆರವು ಬೇಗನೆ ಒದಗಲಿದೆ. ಆ ಬಳಿಕ ಮನಶ್ಶಾಂತಿ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,1,6,2

ಸಮರ್ಥ್ ಶಾಮನೂರು ಗೆಲುವು

ಸ್ಟ್ರಾಂಗ್ ರೂಮ್ ಒಡೆದರು!: ಮತಎಣಿಕೆಗೂ ಮುನ್ನ ಕೀಲಿಕೈಗಳು ಹೊಂದಿಕೆಯಾಗದ ಕಾರಣ ಸಾಕಷ್ಟು ಪ್ರಯತ್ನದ ನಂತರ ಸ್ಟ್ರಾಂಗ್ ರೂಮ್ ಬಾಗಿಲು ಒಡೆಯಬೇಕಾದ ಪ್ರಸಂಗ ಎದುರಾಯಿತು. ಇದರಿಂದಾಗಿ ಮತ ಎಣಿಕೆ ಕಾರ್ಯ ಅರ್ಧ ಗಂಟೆ ವಿಳಂಬವಾಗಿ ಆರಂಭವಾಯಿತು.

ಅನುಮಾನ: ಸ್ಟ್ರಾಂಗ್ ರೂಂ ಬೀಗ ತೆಗೆಯುವ ಬದಲಿಗೆ ಚಿಲಕಗಳನ್ನು ಒಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಚುನಾವಣಾಧಿಕಾರಿ ಬೀಗ ಮರೆತು ಬರುತ್ತಾರೆ ಎಂದರೆ ಅಲ್ಲೇನೋ ನಡೆದಿದೆಯೆಂದೇ ಅರ್ಥ. ಚುನಾವಣಾಧಿಕಾರಿ ವಿರುದ್ಧ ರಾಜ್ಯ, ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವುದಲ್ಲದೆ ಕಾನೂನು ಹೋರಾಟ ನಡೆಸುತ್ತೇನೆ ಎಂದು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಹೇಳಿದ್ದಾರೆ.

ತಮಿಳು ಮತದಾರನ ಮೂರನೇ ಆಯ್ಕೆ!

1967ರಿಂದೀಚೆಗೆ ತಮಿಳುನಾಡಿನ ಅಧಿಕಾರ ಡಿಎಂಕೆ ಮತ್ತು ಎಐಎಡಿಎಂಕೆ ಈ ಎರಡು ಪಕ್ಷಗಳ ನಡುವೆ ಅತ್ತಿಂದಿತ್ತ ಚಲಿಸುತ್ತಿತ್ತು. ಈ ಎರಡೂ ದ್ರಾವಿಡ ಚಳವಳಿಯ ಗರ್ಭದಲ್ಲಿ ಹುಟ್ಟಿದ ಪಕ್ಷಗಳು. ಸಾಮಾಜಿಕ ನ್ಯಾಯ, ತಮಿಳು ಭಾಷಾಭಿಮಾನ, ಹಿಂದಿ-ವಿರೋಧ, ಜಾತಿ-ವಿರೋಧಿ ಪರಂಪರೆಯ ಸೈದ್ಧಾಂತಿಕ ಚೌಕಟ್ಟಿನಿಂದಲೇ ಎರಡೂ ತಮ್ಮ ಮತಗಳನ್ನು ಬೆಳೆಸಿಕೊಂಡಿದ್ದವು. ಆದರೆ ಇಂದಿನ ಫಲಿತಾಂಶ ಒಂದು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದು, ದ್ರಾವಿಡ ರಾಜಕಾರಣದ ಸೈದ್ಧಾಂತಿಕ ಗಣಿಯಲ್ಲಿ ಇನ್ನೂ ಚಿನ್ನವಿದೆಯೇ? ಅಥವಾ ಗಣಿ ಬರಿದಾಗಿದೆಯೇ?

ಮುಖ್ಯ ಸಂಗತಿ ಎಂದರೆ ಟಿವಿಕೆ ಒಂದು ಕಡೆಯ ಮತಗಳನ್ನು ಸೆಳೆದಿಲ್ಲ. ಬದಲಾಗಿ, ಡಿಎಂಕೆ ಮತ್ತು ಎಐಎಡಿಎಂಕೆಯ ಬುಟ್ಟಿಗೆ ಕೈ ಹಾಕಿ ಸೆಳೆದಿದೆ. ಹೀಗಾಗಿ ಇದು ಒಂದು ಸಾಮಾನ್ಯ ಮೂರನೇ ಶಕ್ತಿಯ ಪ್ರವೇಶವಲ್ಲ. ಹಿಂದೆ ಡಿಎಂಡಿಕೆ (ವಿಜಯಕಾಂತ್), ಎಮ್‌ಎನ್‌ಎಂ (ಕಮಲ್ ಹಾಸನ್), ಪಿಎಂಕೆ (ರಾಮದಾಸ್) ಪ್ರಯೋಗಗಳು ದ್ರಾವಿಡ ಪಕ್ಷಗಳ ಮೈತ್ರಿಕೂಟಗಳ ಬಾಲಗಳಾಗಿ ಬದುಕಿಕೊಂಡವಷ್ಟೆ. ಟಿವಿಕೆ ಮಾತ್ರ ದ್ರಾವಿಡ ಸಿದ್ಧಾಂತದ ಎರಡು ಪಕ್ಷಗಳ ಚೌಕಟ್ಟನ್ನೇ ಒಡೆದಿದೆ. ಇದು ಸಂಖ್ಯಾತ್ಮಕ ಬದಲಾವಣೆಯಲ್ಲ, ಇದಕ್ಕೆ ಬದಲಾಗಿ ಸಾಂಸ್ಥಿಕ ಬದಲಾವಣೆ.



ಅಹಂಕಾರಕ್ಕೆ ತಕ್ಕ ಪಾಠ: ಹಾಗಾದರೆ, ವಿಜಯ್ ಪಕ್ಷದ ಗೆಲುವಿಗೆ ಮುನ್ನ ಡಿಎಂಕೆ ಮತ್ತು ಎಐಎಡಿಎಂಕೆ ಸೋಲಿನ ಬಗ್ಗೆ ಪರಾಮರ್ಶಿಸಬೇಕು. ಕೇವಲ ಆಡಳಿತ ವಿರೋಧಿ ಅಲೆಯಿಂದ ಡಿಎಂಕೆ ಸೋಲಲಿಲ್ಲ, ಬದಲಿಗೆ, ತನ್ನ ಅಹಂಕಾರಿ ಮನೋಭಾವ, ಕುಟುಂಬ ರಾಜಕಾರಣ ಅದನ್ನು ಸೋಲಿಸಿದೆ. ಮತದಾರನ ಸಿಟ್ಟು ಎಷ್ಟು ಗಟ್ಟಿಯಾಗಿತ್ತೆಂದರೆ, ಸ್ವತಃ ಸಿಎಂ ಎಂ.ಕೆ.ಸ್ಟಾಲಿನ್ ಅವರನ್ನೇ ಸೋಲಿಸುವಷ್ಟರ ಮಟ್ಟಿಗೆ ಹೋಗಿದೆ.

ಹಾಗೆಯೇ, ಇಲ್ಲಿನ ಯುವ ಮತದಾರ ಟಿವಿಕೆ ಗೆಲುವಲ್ಲಿ ಹೆಚ್ಚು ಪ್ರಭಾವ ಬೀರಿದ್ದಾನೆ. 35 ವರ್ಷಕ್ಕಿಂತ ಕೆಳಗಿನ ಮತದಾರರು ನೇರವಾಗಿ ವಿಜಯ್ ಕೈಹಿಡಿದ್ದಾರೆ. ಈ ಹಿಂದೆ ಕರುಣಾನಿಧಿ, ಎಂಜಿಆರ್ ಮತ್ತು ಜಯಲಲಿತಾ ಅವರ ನೆನಪಿನಲ್ಲೇ ಮತಹಾಕುತ್ತಿದ್ದ ಹಿರಿಯರನ್ನು ಹಿಂದಿಕ್ಕಿರುವ ಯುವ ಮತದಾರರು ನೂತನ ಸಿನಿ ನಾಯಕ ನಟನೊಬ್ಬನನ್ನು ಆಯ್ಕೆ ಮಾಡಿಕೊಂಡಿದೆ. ಅಲ್ಲದೆ ಎಂಜಿಆರ್ ಸಾಧನೆಯನ್ನೇ ಸರಿಗಟ್ಟಿದ್ದಾರೆ. ಜತೆಗೆ, ತಮ್ಮ ಪ್ರಣಾಳಿಕೆಯಲ್ಲಿ ಯುವ ಮತದಾರರಿಗೆ ಬೇಕಾದ ಅಂಶಗಳನ್ನೇ ಹೆಚ್ಚಾಗಿ ಪ್ರಸ್ತಾಪಿಸಿ, ನಂಬಿಕೆಯನ್ನೂ ಹುಟ್ಟಿಸಿದ್ದಾರೆ.

ಹಿಂದೂ ಅವಮಾನಕ್ಕೆ ಶಾಸ್ತಿ: ಕಳೆದ ಐದು ವರ್ಷಗಳ ಆಡಳಿತದಲ್ಲಿ ಡಿಎಂಕೆ ಉಪಮುಖ್ಯಮಂತ್ರಿ ಉದಯನಿಧಿ ಮತ್ತು ಇನ್ನಿತರ ನಾಯಕರು ಪದೇ ಪದೆ ಹಿಂದೂ ದೇವರುಗಳಿಗೆ ಅವಮಾನ ಮಾಡುತ್ತಲೇ ಬಂದರು. ಇದನ್ನು ಸಿಎಂ ಸ್ಟಾಲಿನ್ ಖಂಡಿಸಲೂ ಇಲ್ಲ, ಇದಕ್ಕೆ ಬದಲಾಗಿ ಇಂಥ ಘಟನೆಗಳಿಗೆ ಪ್ರೋತ್ಸಾಹ ಕೊಡುವಂತೆ ನಡೆದುಕೊಂಡರು. ಇದು ಜನರಲ್ಲಿ ಸಿಟ್ಟಿಗೂ ಕಾರಣವಾಯಿತು. ಇಡೀ ದೇಶದಲ್ಲೇ ಹೆಚ್ಚು ದೇಗುಲಗಳನ್ನು ಹೊಂದಿರುವ ತಮಿಳುನಾಡಿನಲ್ಲಿ ಹಿಂದುತ್ವ ಎಂಬುದು ಕಣ್ಣಿಗೆ ಕಾಣದಿದ್ದರೂ, ಹಿಂದೂ ದೇವರಗಳ ಮೇಲಂತೂ ಅಪಾರ ಗೌರವ, ನಂಬಿಕೆಯಂತೂ ಇದ್ದೇ ಇದೆ. ಇಂಥ ವಿಚಾರಗಳನ್ನು ಜನ ಯಾರಿಗೂ ಹೇಳದಂತೆ ಡಿಎಂಕೆಗೆ ಪಾಠ ಕಲಿಸುವಂತೆಯೇ ಮತ ಹಾಕಿದರು.

ಎಐಎಡಿಎಂಕೆ ಕಥೆ ಏನು?: ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಜಯಲಲಿತಾ ಇನ್ನಿಲ್ಲವಾದ ಮೇಲೆ ಎಐಎಡಿಎಂಕೆಗೆ ನಾಯಕರೇ ಇಲ್ಲದ ಸ್ಥಿತಿ ಉದ್ಭವವಾಗಿದೆ ಎಂಬುದನ್ನು ಈ ಫಲಿತಾಂಶ ತೋರಿದೆ. ಮಾಜಿ ಸಿಎಂ ಪಳನಿಸ್ವಾಮಿಯತ್ತ ಮತದಾರ ಮಣೆಹಾಕಿಲ್ಲ. ಜತೆಗೆ, ತಮ್ಮ ಜತೆ ಇದ್ದ ಒ.ಪನ್ನೀರ್ ಸೆಲ್ವಂ, ಪಿ.ಅಯ್ಯಪ್ಪನ್ ರಂಥ ನಾಯಕರನ್ನು ಹೊರಗಟ್ಟಿದ್ದು ದೊಡ್ಡ ಪೆಟ್ಟೇ ಬಿದ್ದಿದೆ. ಹೀಗಾಗಿ, ಇಲ್ಲಿನ ಈ ನಾಯಕತ್ವದ ಶೂನ್ಯವನ್ನು ವಿಜಯ್ ಗಟ್ಟಿಯಾಗಿ ತಮ್ಮ ಕಡೆ ಸೆಳೆದುಕೊಂಡಿದ್ದಾರೆ.

83 ಸಾವಿರ ಫ್ಯಾನ್ ಕ್ಲಬ್

ಟಿವಿಕೆ ವಿಜಯದ ಹಿಂದೆ ಇರುವ ಕಾರಣಗಳು ಏನು ಎಂಬುದನ್ನೂ ನೋಡಬೇಕು. 2022ರಿಂದಲೂ ತಮ್ಮ 83 ಸಾವಿರ ಫ್ಯಾನ್ ಕ್ಲಬ್ ಗಳ ಮೂಲಕ ಸಮಾಜದಲ್ಲಿ ಕೆಲಸ ಮಾಡುತ್ತಿದ್ದ ವಿಜಯ್, 2021ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಒಂದಷ್ಟು ಸಾಧನೆ ಮಾಡಿದ್ದರು. 2024ರ ಫೆಬ್ರವರಿಯಲ್ಲಿ ಟಿವಿಕೆ ಜನ್ಮತಾಳಿದ್ದು, ಈಗ ಅಧಿಕಾರಕ್ಕೇರುವ ದೊಡ್ಡ ಸಾಧನೆಯನ್ನೂ ಮಾಡಿದೆ. ಪಕ್ಷ ಸಂಘಟನೆ, ಸೈದ್ಧಾಂತಿಕ ಬದ್ಧತೆಗಳು ವಿಜಯ್ ಕೈಹಿಡಿದವು. ಅಂಬೇಡ್ಕರ್, ಪೆರಿಯಾರ್, ಕಾಮರಾಜ್ ರ ಪರಂಪರೆ ಮುಂದುವರಿಸಿಕೊಂಡು ಹೋಗುವ ಬದ್ಧತೆ ತೋರಿದರು. ಕರೂರ್ ಕಾಲ್ತುಳಿತ ದುರಂತದ ವಿಚಾರದಲ್ಲಿ ಡಿಎಂಕೆ ಸರ್ಕಾರ ನಡೆದುಕೊಂಡ ರೀತಿ, ವಿಜಯ್ ಗೆ ಅನುಕಂಪವನ್ನೂ ತಂದುಕೊಟ್ಟವು. ಒಟ್ಟಿನಲ್ಲಿ ವಿಜಯ್ ತಮಿಳುನಾಡು ರಾಜಕೀಯದ ಪರ್ಯಾಯವಾಗಿ ಬೆಳೆದು ನಿಂತಿದ್ದಾರೆ. ಜನರ ವಿಶ್ವಾಸವೂ ಹಾಗೇ ಇದೆ. ಇದನ್ನು ವಿಜಯ್ ಹೇಗೆ ತೆಗೆದುಕೊಂಡು ಹೋಗುತ್ತಾರೆ ಎಂಬುದನ್ನು ನೋಡಬೇಕು.

ಅರಳಿತು ತಾವರೆ: ಪ್ರಧಾನಿ ಮೋದಿ ಹರ್ಷ

ಕೋಟ್ಯಂತರ ಬಿಜೆಪಿ ಕಾರ್ಯಕರ್ತರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಬಿಜೆಪಿ ಕಾರ್ಯಕರ್ತರು ಅವರು ಸಣ್ಣವರಿರಲಿ, ದೊಡ್ಡವರಿರಲಿ ಮತಗೊಮ್ಮೆ ಅಚ್ಚರಿಗಳನ್ನು ಸೃಜಿಸಿದ್ದಾರೆ. ಕಠಿಣ ಪರಿಶ್ರಮದಿಂದ ಕಮಲವನ್ನು ಅರಳಿಸಿದ್ದಾರೆಂದು ಪ್ರಧಾನಿ ಮೋದಿ ತುಂಬು ಹರ್ಷ ವ್ಯಕ್ತಪಡಿಸಿದರು.

ನಿತಿನ್ ನವೀನ್ ಬಿಜೆಪಿ ಅಧ್ಯಕ್ಷರಾದ ನಂತರ ನಡೆದ ಪ್ರಥಮ ವಿಧಾನಸಭಾ ಚುನಾವಣೆಗಳಿವು. ಚುನಾವಣೆಗೆ ಸಂಬಂಧಿಸಿ ಅಧ್ಯಕ್ಷ ನವೀನ್ ಪ್ರತಿಯೋರ್ವ ಕಾರ್ಯಕರ್ತರಿಗೆ ನೀಡಿರುವ ಮಾರ್ಗದರ್ಶನಗಳು ಚುನಾವಣಾ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ನಿತಿನ್ ನವೀನ್‌ರನ್ನು ಪ್ರಧಾನಿ ಮೋದಿ ಕೊಂಡಾಡಿದರು.

ಉಪ ಚುನಾವಣೆಗಳ ಫಲಿತಾಂಶ ಉತ್ತೇಜಕ: ವಿವಿಧ ರಾಜ್ಯಗಳ ಉಪ ಚುನಾವಣೆಗಳ ಇಂದಿನ ಫಲಿತಾಂಶಗಳೂ ಉತ್ತೇಜನಕಾರಿ. ಮಹಾರಾಷ್ಟ್ರ, ಗುಜರಾತ್, ನಾಗಾಲ್ಯಾಂಡ್, ತ್ರಿಪುರಾಗಳಲ್ಲಿನ ಉಪ ಚುನಾವಣೆಗಳಲ್ಲಿ ಜನಾಶೀರ್ವಾದ ಬಲದಿಂದ ನಮ್ಮ ಅಭ್ಯರ್ಥಿಗಳು ಗೆದ್ದಿರುವುದು ಗಮನಾರ್ಹ. ಎನ್‌ಡಿಎ ನಾಯಕ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಸುನೇತ್ರ ಪವಾರ್ ಗಮನಾರ್ಹ ವಿಜಯ ದಾಖಲಿಸಿದ್ದಾರೆ ಎಂದು ಪ್ರಧಾನಿ ಮೋದಿ ಪ್ರಶಂಸಿಸಿದರು.

ಭಾರತದ ಪ್ರಜಾಸತ್ತೆಯ ಜಯ: ಭಾರತವು ಪ್ರಜಾಸತ್ತೆಯ ಮಾತೆಯಾಗಿರುವುದು ಯಾಕೆಂಬುದನ್ನು ಈ ಐದೂ ರಾಜ್ಯಗಳ ಜನತೆ ಇಡೀ ಜಗತ್ತಿಗೆ ಮನವರಿಕೆ ಮಾಡಿದ್ದಾರೆ. ಇಂದು ಭಾರತದ ಪ್ರಜಾಸತ್ತೆಯಷ್ಟೇ ಅಲ್ಲ, ಭಾರತದ ಸಂವಿಧಾನಕ್ಕೂ ವಿಜಯವಾಗಿದೆ. ಇಂದು ನಮ್ಮ ಸಾಂವಿಧಾನಿಕ ಸಂಸ್ಥೆಗಳು ಮತ್ತು ನಮ್ಮ ಪ್ರಜಾತಾಂತ್ರಿಕ ಪ್ರಕ್ರಿಯೆಗಳೂ ಜಯಭೇರಿ ಹೊಡೆದಿವೆ. ಪ.ಬಂಗಾಳದಲ್ಲಿನ ಶೇ. 93 ಮೀರಿ ಮತದಾನ ಸ್ವಯಂ ಐತಿಹಾಸಿಕವೆಂದು ಪ್ರಧಾನಿ ಮೋದಿ ವಿಶ್ಲೇಷಿಸಿದರು.

ಚರಿತ್ರೆ ಮರೆಯದು: ಚುನಾವಣಾ ಆಯೋಗ, ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡ ಎಲ್ಲಾ ಸೋದರ ಸೋದರಿಯರು, ಮುಖ್ಯವಾಗಿ ಭದ್ರತಾ ಪಡೆಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಭಾರೀಯ ಪ್ರಜಾಸತ್ತೆಯ ಘನತೆ ಎತ್ತಿ ಹಿಡಿಯುವಲ್ಲಿ ತಾವು ನೀಡಿರುವ ಕೊಡುಗೆಯನ್ನು ಚರಿತ್ರೆ ಎಂದಿಗೂ ಮರೆಯದು. ಗಂಗೆಯು ಬಿಹಾರದಿಂದಾಚೆಗೆ ಗಂಗಾಸಾಗರವರೆಗೂ ಹರಿಯುವುದು ಎಂದು ಕಳೆದ ವರ್ಷ ನ.14ರಂದು ಬಿಹಾರದ ಚುನಾವಣಾ ಫಲಿತಾಂಶ ಪ್ರಕಟಗೊಂಡಾಗ ನಾನು ಇದೇ ಬಿಜೆಪಿ ಪ್ರಧಾನಕಚೇರಿಯಿಂದ ನಿಮಗೆ ತಿಳಿಸಿದ್ದೆ. ಇಂದೀಗ ಬಂಗಾಳದಲ್ಲಿನ ವಿಜಯದೊಂದಿಗೆ ಗಂಗೋತ್ರಿಯಿಂದ ಗಂಗಾಸಾಗರವರೆಗೂ ಕಮಲ ಅರಳಿದೆ. ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಇದೀಗ ಪ.ಬಂಗಾಳದಲ್ಲೂ ಕಮಲ ನಳನಳಿಸಿದೆ. ಇಂದೀಗ ಗಂಗೆಯ ಸುತ್ತಮುತ್ತಲೂ ನೆಲೆಸಿರುವ ಈ ರಾಜ್ಯಗಳಲ್ಲಿ ಬಿಜೆಪಿ, ಎನ್‌ಡಿಎ ಅಧಿಕಾರ ಸೂತ್ರ ಹಿಡಿದಿದೆ.

ಮಾತೆ ಗಂಗೆ ಕರೆದಳಿಲ್ಲಿಗೆ...: 2013ರಲ್ಲಿ ಪ್ರಧಾನಿ ಅಭ್ಯರ್ಥಿಯಾಗಿ ಬಿಜೆಪಿ ನನ್ನನ್ನು ನೇಮಿಸಿದ್ದಾಗ, ತಾನು ನಾಮಪತ್ರ ಸಲ್ಲಿಸಲು ಕಾಶಿಗೆ ತೆರಳಿದ್ದೆ, ಮಾಧ್ಯಮದವರು ನನ್ನ ಸುತ್ತ ನೆರೆದಿದ್ದರು. ಆಗ ನನ್ನ ಹೃದಯಾಂತರಾಳದಿಂದ ಹೊರಬಂದ ಮಾತುಗಳಿವು. ನಾನು ಸ್ವಂತ ಇಚ್ಛೆಯಿಂದ ಇಲ್ಲಿಗೆ ಬಂದಿಲ್ಲ ಅಥವಾ ಯಾರೂ ನನ್ನನ್ನು ಇಲ್ಲಿಗೆ ಕಳುಹಿಸಿದ್ದಲ್ಲ, ಗಂಗಾಮಾತೆಯೇ ನನ್ನಲ್ಲಿಗೆ ಕರೆಸಿರುವಳು... ಇಂದೀಗ ಗಂಗೆಯ ಜತೆ ಬ್ರಹ್ಮಪುತ್ರಾದ ಆಶೀರ್ವಾದ ಬಲವೂ ನಮಗೊದಗಿದೆ. ಮಾತೆ ಕಾಮಾಕ್ಯ ಮಾತೆಯೂ ನಮ್ಮನ್ನು ಹರಸಿರುವಳು. ಹ್ಯಾಟ್ರಿಕ್ ವಿಜಯದೊಂದಿಗೆ ಅಸ್ಸಾಂನ ಜನತೆ ಕೂಡ ತೃತೀಯ ಅವಧಿಗೆ ಬಿಜೆಪಿ ಮತ್ತು ಎನ್‌ಡಿಎಯಲ್ಲಿ ತುಂಬು ವಿಶ್ವಾಸ ವ್ಯಕ್ತಪಡಿಸಿದ್ದಾರೆಂದರು.

ಬೆಸ್ಟ್ ಪುದುಚೇರಿ ವಿಷನ್: 2021ರಲ್ಲಿ ಶ್ರೇಷ್ಠ ಪುದುಚೇರಿಯ ವಿಷನ್‌ನ್ನು ಪುದುಚೇರಿ ಜನರ ಮುಂದಿಟ್ಟಿದ್ದೆವು. ಪುದುಚೇರಿ ಜನರು ಈ ದೃಷ್ಟಿಕೋನದಲ್ಲಿ ಶ್ರದ್ಧೆಯಿರಿಸಿ ನಮ್ಮನ್ನು ಆಶೀರ್ವದಿಸಿದ್ದಾರೆ. ಈ ವಿಷನ್‌ನ ವಿಸ್ತೃತೆಗಾಗಿ ಎನ್‌ಡಿಎ ಸರಕಾರ ಕಳೆದೈದು ವರ್ಷಗಳಿಂದ ಸಂಪೂರ್ಣ ಸಮರ್ಪಣಾ ಭಾವ ಮತ್ತು ಸಂಕಲ್ಪಬದ್ಧತೆಯಿಂದ ದುಡಿದಿದೆ.

ಡಾ.ಶ್ಯಾಮ್ ಪ್ರಸಾದ್ ಕನಸು ನನಸು

ಬಂಗಾಳವನ್ನು ಭಾರತದ ಅವಿಭಾಜ್ಯ ಭಾಗವಾಗಿ ಕಾಪಾಡಿಕೊಳ್ಳಲು ಶ್ಯಾಮ್ ಪ್ರಸಾದ್



ಮುಖರ್ಜಿ ಭಾರೀ ಹೋರಾಟ ಮಾಡಿದ್ದರು. ಬಲಿಷ್ಠ ಮತ್ತು ಸಂಪನ್ನ ಬಂಗಾಳದ ಅವರ ಕನಸು ದಶಕಗಳಿಂದ ಸಾಕಾರವಾಗಲೇ ಇಲ್ಲ. ಇಂದೀಗ 2026 ಮೇ 4ರಂದು ಬಂಗಾಳದ ಜನತೆ ನಮಗೆ, ಬಿಜೆಪಿ ಕಾರ್ಯಕರ್ತರಿಗೆ ಡಾ.ಶ್ಯಾಮ್ ಪ್ರಸಾದ್ ಕನಸಿನ ಸಾಕಾರಕ್ಕೆ ಅವಕಾಶ ನೀಡಿದ್ದಾರೆ. ಬಂಗಾಳದ ಇತಿಹಾಸದಲ್ಲಿ ಹೊಸ ಅಧ್ಯಾಯ ತೆರೆದಿದೆ. ಇಂದಿನಿಂದ ಬಂಗಾಳವು ಭೀತಿ ಮುಕ್ತವಾಗಿರುವುದು ಮತ್ತು ಅಭಿವೃದ್ಧಿಯ ಆತ್ಮವಿಶ್ವಾಸದಿಂದ ನಳನಳಿಸುವುದು ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಲಾಸ್ಟ್ ಮೊಘಲ್ ಆದ ಕಾಮ್ರೆಡ್ ವಿಜಯನ್

ಹಾಗೆಂದ ಎಂಟೇ ವರ್ಷಗಳಲ್ಲಿ ಪಿಣರಾಯಿ ವಿಜಯನ್ ಲಾಸ್ಟ್ ಮೊಘಲ್ ಆಗಿದ್ದಾರೆ! ಕೇರಳದಲ್ಲಿ 1957ರಲ್ಲಿ ಮೊದಲ ಬಾರಿಗೆ ಖಾತೆ ತೆರೆದ ಕಮ್ಯುನಿಸ್ಟರು ಹಿಂದಿರುಗಿನೋಡಲಿಲ್ಲ, ನಂತರ ಸೈದ್ಧಾಂತಿಕ ಆಧಾರದಲ್ಲಿ ಕಮ್ಯುನಿಸ್ಟರು ಹೋಳಾದರೂ ಚುನಾವಣೆಯನ್ನು ಜತೆಯಾಗಿಯೇ ಎದುರಿಸಿದ್ದವು. 1967ರಲ್ಲಿ ಇ.ಎಂ.ಎಸ್ ನಂಬೂದರಿಪಾಡ್ ಕೇರಳದ ಮುಖ್ಯಮಂತ್ರಿಯಾಗುವುದರೊಂದಿಗೆ ದೇಶದಲ್ಲಿ ಅತಿ ವೇಗವಾಗಿ ಬೆಳೆದು ಅಧಿಕಾರಕ್ಕೇರಿದ ಪಕ್ಷ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಜತೆಗೆ ದೇಶದ ಮೊಟ್ಟಮೊದಲ ಕಮ್ಯುನಿಸ್ಟ್ ಮುಖ್ಯಮಂತ್ರಿ ಎಂಬ ಗೌರವಕ್ಕೂ ಅವರು ಪಾತ್ರರಾಗಿದ್ದರು. ಮೂರು ವರ್ಷ ಅಧಿಕಾರದಲ್ಲಿದ್ದರೂ ನಂಬೂದರಿಪಾಡ್ ಅವರ ನಿಲುವುಗಳು ಕೇರಳದ ಸಾಮಾಜಿಕ ವಾತಾವರಣವನ್ನು ಬದಲಿಸುವಲ್ಲಿ ಯಶಸ್ವಿಯಾಗಿದ್ದವು. ನಂಬೂದರಿಪಾಡ್ ಮಾದರಿಯನ್ನು ಅನುಷ್ಠಾನ ಮಾಡಿಕೊಂಡ ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಗಳಲ್ಲೂ ಕಮುನಿಸಂ ತತ್ತ್ವಗಳನ್ನು ಜನರು ಬೆಂಬಲಿಸಿದವು. ಅದರ ಫಲವಾಗಿ 1977 ರಲ್ಲಿ ಜ್ಯೋತಿ ಬಸು ಅಧಿಕಾರಕ್ಕೆ ಬಂದರು. ಬರೋಬ್ಬರಿ 23 ವರ್ಷ, 137ದಿನಗಳು ಅಧಿಕಾರದ ಗಾದಿಯಲ್ಲಿದ್ದ ಬಸು ಕಾಲದಲ್ಲಿ ರಾಜ್ಯ ಅಭಿವೃದ್ಧಿಯಿಂದ ವಂಚಿತವಾಗುವುದರ ಜತೆಗೆ ರಾಜಕೀಯ ಹತ್ಯೆ ಮತ್ತು ಚುನಾವಣಾ ಅಕ್ರಮಗಳೂ ಹೆಚ್ಚಿತು.

ಮರುವರ್ಷ, ಅಂದರೆ 1978ರಲ್ಲಿ ಬಸು ಒಡನಾಡಿ ನೃಪನ್‌ಚಕ್ರವರ್ತಿ ತ್ರಿಪುರಾದ ಮುಖ್ಯಮಂತ್ರಿಯಾದರು. ಎರಡು ಅವಧಿಯವರೆಗೆ ಮುಖ್ಯಮಂತ್ರಿಯಾಗಿದ್ದ ನೃಪನ್ ಚಕ್ರವರ್ತಿ ಅಧಿಕಾರದಿಂದ ಇಳಿದಾಗ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಕಮ್ಯುನಿಸ್ಟ್ ಸಿಎಂ ಅಧಿಕಾರದಲ್ಲಿದ್ದರು. ಕೇರಳದಲ್ಲಿ ಇ. ಕೆ. ನಾಯನಾರ್ ಮೂರು ಬಾರಿ, ಪ.ಬಂಗಾಳದಲ್ಲಿ ಜ್ಯೋತಿ ಬಸು, ನಂತರ ಬುದ್ಧದೇವ ಭಟ್ಟಾಚಾರ್ಯ ಎರಡು ಅವಧಿಯವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿದ್ದು 'ಕಾಮ್ರೆಡ್ ಇಲ್ಲದ ಸಿಎಂ' ಸ್ಥಿತಿ ಕಮ್ಯುನಿಸ್ಟರಿಗೆ ಬಂದಿರಲಿಲ್ಲ, ಅತ್ತ ತ್ರಿಪುರಾದಲ್ಲಿ ದಶರಥ ದೇವ್ ಒಂದು ಅವಧಿ ಮತ್ತು ನಂತರ ಮಾಣಿಕ್ ಸರ್ಕಾರ್ 20 ವರ್ಷಗಳವರೆಗೆ ಮುಖ್ಯಮಂತ್ರಿಗಳಾಗಿ ಕಾಮ್ರೆಡ್ ಸಿಎಂ ಇಲ್ಲದ ಪರಿಸ್ಥಿತಿ ಕಮ್ಯುನಿಸ್ಟರಿಗೆ ಬಂದಿರಲಿಲ್ಲ.

ಭಾರತದ ಮಣ್ಣಿಗೆ ಒಗ್ಗದ ಸಿದ್ಧಾಂತ, ಮುಖಂಡರ ಅಧಿಕಾರ ಲಾಲಸೆ, ಪರಂಪರೆಗೆ ಗೌರವ ನೀಡದ ಮಾನಸಿಕತೆ, ದೇಶದ ಭದ್ರತೆಯ ವಿಷಯಗಳಲ್ಲಿ ಹಗುರ ಧೋರಣೆ, ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ತೊಲಗದ ಬಡತನ, ಭ್ರಷ್ಟಾಚಾರಗಳ ಕಾರಣ ಒಂದೊಂದಾಗಿ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಳ್ಳುತ್ತಾ ಸಾಗಿದ ಕಮ್ಯುನಿಸ್ಟರು ಅಂತಿಮವಾಗಿ ಕೇರಳದಲ್ಲಿ ಮಾತ್ರ ಕುಟುಕು ಜೀವವಿರಿಸಿಕೊಂಡಿದ್ದರು. ಪಿಣರಾಯಿ ಕಾಲದಲ್ಲಿ ನಡೆದ ಹಗರಣಗಳು, ಹಿಂದು ವಿರೋಧಿ ನೀತಿಗಳ ಕಾರಣಕ್ಕೆ ಇದೀಗ ಅವರೂ ಅಧಿಕಾರದಿಂದ ಕೆಳಗಿಳಿದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದಾಖಲೆ ಜಯ

ಗೆದ್ದು ಬೀಗಿದ್ದು ಹೇಗೆ?: ಪಶ್ಚಿಮ ಬಂಗಾಳದಲ್ಲಿ ಬೀಸಿದ ಬಿಜೆಪಿ ಪರ ಅಲೆ ಭಾರೀ ಬದಲಾವಣೆಗೆ ಕಾರಣವಾಗಿದೆ. ಮಮತಾ ವಿರೋಧಿ ಅಲೆ ಏಳಲು ಧಾರ್ಮಿಕ ಆಧಾರಿತ ಮತಗಳ ಏಕೀಕರಣ ಬಿಜೆಪಿಗೆ ಲಾಭ ತಂದಿದೆ. ಆಡಳಿತ ವಿರೋಧಿ ಅಲೆ ಬಿಜೆಪಿಗೆ ವರವಾಗಿದೆ. ಕೇಂದ್ರ ನಾಯಕತ್ವದ ಆಕ್ರಮಣಕಾರಿ ಪ್ರಚಾರ, ಬೂತ್ ಮಟ್ಟದ ಸಂಘಟನೆ ಬಲಪಡಿಸುವ ಕಾರ್ಯ ಮತ್ತು ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆ ಬಿಜೆಪಿಗೆ ನೆರವಾಗಿದೆ. ನಕಲಿ ಮತದಾರರನ್ನು ಹೊರಗಿಟ್ಟಿದ್ದು, ಚುನಾವಣಾ ಸಮಯದ ಹಿಂಸಾಚಾರವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಿದ್ದು ಕೂಡ ಗೆಲುವಿಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿಯ ಮೊದಲ ಸರ್ಕಾರ: ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಭಾರತೀಯ ಜನತಾ ಪಕ್ಷ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಲು ಸಜ್ಜಾಗಿದೆ. ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಆಡಳಿತ ಅಂತ್ಯವಾಗಿದೆ. ತೃಣಮೂಲ ಕಾಂಗ್ರೆಸ್ ಪಕ್ಷ ವಿರುದ್ಧ ಬಿಜೆಪಿ ಭರ್ಜರಿ ಜಯ ಸಾಧಿಸಿದೆ.

ಬಿಜೆಪಿ ಗೆಲ್ಲಿಸಿದ ಜೋಡಿ: ಈ ಬಾರಿ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಲೇಬೇಕೆಂದು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಖುದ್ದಾಗಿ ಅಖಾಡಕ್ಕೆ ಇಳಿದಿದ್ದರು. ಕಳೆದ 2 ತಿಂಗಳಲ್ಲಿ ಹಲವು ಬಾರಿ ನರೇಂದ್ರ ಮೋದಿ ಬಂಗಾಳಕ್ಕೆ ಆಗಮಿಸಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಅಮಿತ್ ಶಾ ಬಂಗಾಳದಲ್ಲೇ ಬೀಡುಬಿಟ್ಟು ಬಿಜೆಪಿ ಪರ ಅಲೆ ಮೂಡಲು ಶ್ರಮಿಸಿದ್ದಾರೆ.

ಬೂತ್ ನಿಯಂತ್ರಣ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 82,000 ಬೂತ್‌ಗಳಲ್ಲಿ 71,000 ಬೂತ್‌ಗಳ ಮೇಲೆ ನಿಯಂತ್ರಣ ಸಾಧಿಸಿದೆ. ಹಿಂಸಾಚಾರಕ್ಕೆ ಬಲಿಯಾದ ಕಾರ್ಯಕರ್ತರನ್ನು ಪುನಃ ಸಕ್ರಿಯಗೊಳಿಸುವ ಮೂಲಕ ಬಿಜೆಪಿ ತುಳಿತಕ್ಕೆ ಒಳಗಾದವರನ್ನು ತನ್ನ ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಂಡಿತು.

ಡಬಲ್ ಹಣ: ಮಮತಾ ಬ್ಯಾನರ್ಜಿಯವರ ಲಕ್ಷ್ಮೀ ಭಂಡಾರ್ 1,500 ರೂ.ಗೆ ಪ್ರತಿಯಾಗಿ ಬಿಜೆಪಿ ಪ್ರತಿ ಮಹಿಳೆಗೆ ತಿಂಗಳಿಗೆ 3,000 ರೂ. ನೀಡುವುದಾಗಿ ಭರವಸೆ ನೀಡಿತು.

ಗೆದ್ದ ಕ್ರಿಕೆಟಿಗ: ಈ ಗೆಲುವಿನಲ್ಲಿ ಮಾಜಿ ಭಾರತೀಯ ಕ್ರಿಕೆಟ್ ಆಟಗಾರ ಅಶೋಕ್ ದಿಂಡಾ ಕೂಡ ಪಾತ್ರ ವಹಿಸಿದ್ದಾರೆ. ಪೂರ್ವ ಮಿಡ್ನಾಪುರ ಜಿಲ್ಲೆಯ ಮೊಯ್ನಾ ವಿಧಾನಸಭಾ ಕ್ಷೇತ್ರದಲ್ಲಿ ಅಶೋಕ್ ದಿಂಡಾ 16,241 ಮತಗಳಿಂದ ಗೆದ್ದಿದ್ದಾರೆ. ಹಿಂದಿನ ವಿಧಾನಸಭಾ ಚುನಾವಣೆಯಲ್ಲೂ ಜಯಗಳಿಸಿದ್ದರು.

ಸ್ಟಾಲಿನ್‌ಗೆ ಹೀನಾಯ ಸೋಲು: ಹಾಲಿ ಸಿಎಂ ಡಿಎಂಕೆ ನಾಯಕ ಎಂಕೆ ಸ್ಟಾಲಿನ್ ತಮ್ಮ ಭದ್ರಕೋಟೆ ಕೊಳತ್ತೂರಿನಲ್ಲಿ ಸ್ಪರ್ಧಿಸಿರುವ ಎಂಕೆ ಸ್ಟ್ಯಾಲಿನ್, ಟಿವಿಕೆ ವಿಎಸ್ ಬಾಬು ವಿರುದ್ಧ ಹೀನಾಯವಾಗಿ ಸೋತಿದ್ದಾರೆ. ಅಲ್ಲದೆ, ಸಿಎಂ ಎಂಕೆ ಸ್ಟ್ಯಾಲಿನ್ ಸೇರಿದಂತೆ 14 ಡಿಎಂಕೆ ಸಚಿವರು ತಾವು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ತೀವ್ರ ಹಿನ್ನಡೆ ಎದುರಿಸಿದ್ದಾರೆ. ಸ್ಟಾಲಿನ್ ವಿರುದ್ಧ ವಿಎಸ್ ಬಾಬು 8 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮುಖ್ಯಮಂತ್ರಿಯನ್ನು ಸೋಲಿಸಿದ ವಿಎಸ್ ಬಾಬು ಡಿಎಂಕೆ ಮಾಜಿ ನಾಯಕನಾಗಿದ್ದು, ಇತ್ತೀಚೆಗಷ್ಟೇ ಟಿವಿಕೆ ಸೇರ್ಪಡೆಯಾಗಿದ್ದರು.

ಅಜಿತ್ ಪವಾರ್ ಪತ್ನಿಗೆ ದಾಖಲೆ ಗೆಲುವು: ಮಹಾರಾಷ್ಟ್ರದ ಬಾರಾಮತಿ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ದಿವಂಗತ ಡಿಸಿಎಂ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ 1.75 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

242 ಕೋಟಿ ರೂ. ಬೆಟ್ಟಿಂಗ್! ಪಂಚರಾಜ್ಯ ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲಿ, ನಿಷೇಧಿತ ಪಾಲಿಮಾರ್ಕೆಟ್ ವೇದಿಕೆಯಲ್ಲಿ ಕ್ರಿಪ್ಟೋ ಮೂಲಕ 242.8 ಕೋಟಿಗೂ ಹೆಚ್ಚು ಬೆಟ್ಟಿಂಗ್ ನಡೆದಿದೆ. ತಮಿಳುನಾಡಿನಲ್ಲಿ ಬೆಟ್ಟಿಂಗ್ ನಿರೀಕ್ಷೆಗಳು ತಲೆಕೆಳಗಾಗಿದೆ. ವಿಶ್ವದ ಅತಿದೊಡ್ಡ ವಿಕೇಂದ್ರೀಕೃತ ಊಹೆ ಮಾರುಕಟ್ಟೆ ವೇದಿಕೆಯಾಗಿರುವ ಪಾಲಿಮಾರ್ಕೆಟ್ನಲ್ಲಿ ಬೆಟ್ಟಿಂಗ್ ಹೆಚ್ಚಿದ್ದು, ಹಣದ ಹೊಳೆಯೇ ಹರಿದಿತ್ತು. ಫಲಿತಾಂಶಕ್ಕೂ ಮುನ್ನವೇ 242.8 ಕೋಟಿ ರೂ.ನಷ್ಟು ವ್ಯವಹಾರ ನಡೆದಿದೆ.

22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ: ಪಶ್ಚಿಮ ಬಂಗಾಳ ಗೆಲುವಿನೊಂದಿಗೆ ದೇಶದಲ್ಲಿ ಎನ್‌ಡಿಎ ಆಡಳಿತದಲ್ಲಿರುವ ರಾಜ್ಯಗಳ ಸಂಖ್ಯೆ (ಕೇಂದ್ರಾಡಳಿತ ಪ್ರದೇಶಗಳು ಸೇರಿ) 22ಕ್ಕೆ ಏರಿಕೆಯಾಗಿದೆ.

ಕೇರಳದಲ್ಲಿ ಬಿಜೆಪಿಗೆ 3 ಸ್ಥಾನ

ತಿರುವನಂತಪುರಂ: ಕೇರಳದಲ್ಲಿ ನೆಲೆಗೊಳ್ಳಲು ಬಹುಕಾಲದಿಂದ ಹೋರಾಟ ನಡೆಸುತ್ತಿರುವ ಬಿಜೆಪಿಗೆ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಮೂರು ಸ್ಥಾನ ದಕ್ಕಿದೆ. ಈ ಪೈಕಿ ನೇಮಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಜ್ಯ ಘಟಕದ ಅಧ್ಯಕ್ಷರಾದ ರಾಜೀವ್ ಚಂದ್ರಶೇಖರ್ ಅವರ ಗೆಲುವೂ ಪ್ರಮುಖವಾಗಿದೆ. ನಾಲ್ಕು ದಶಕಗಳ ಕಾಲ ಸಿಪಿಐ(ಎಂ) ಹಿಡಿತದಲ್ಲಿದ್ದ ತಿರುವನಂತಪುರಂ ಕಾರ್ಪೊರೇಷನ್ ಅನ್ನು ಬಿಜೆಪಿ ತನ್ನದಾಗಿಸಿಕೊಂಡದ್ದು ಮೊದಲ ಸೂಚನೆಯಾಗಿ ಕಾಣಿಸಿಕೊಂಡಿತು. ಈ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದು, ಹಲವು ಕ್ಷೇತ್ರಗಳಲ್ಲಿ ತನ್ನ ವೋಟ್ ಶೇರ್ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಪಕ್ಷದ ಕಾರ್ಯಕರ್ತರಿಗೆ ಇದು ಕೇರಳ ರಾಜಕೀಯದಲ್ಲಿ ದೀರ್ಘಕಾಲದ ಹೋರಾಟಕ್ಕೆ ಸಿಕ್ಕ ಮಹತ್ವದ ಉತ್ತೇಜನವಾಗಿದೆ.

ಅಸ್ಸಾಂನಲ್ಲಿ ಅಚಲ ಬಿಸ್ವಾಸ

ಹಿಮಂತ ಎರಡನೇ ಬಾರಿ ಸಿಎಂ ಆಗುವ ಸಾಧ್ಯತೆಯಿದೆ. ಕಾಂಗ್ರೆಸ್ ಅಧ್ಯಕ್ಷ ನಾಯಕ ಗೌರವ್ ಗೊಗೊಯ್ ಜೋರ್ಹತ್‌ನಲ್ಲಿ ಸೋತರೆ, ಲುರಿಂಜ್ಯೋತಿ ಗೊಗೊಯ್ ಖೊವಾಂಗ್‌ನಲ್ಲಿ ಸೋತಿದ್ದಾರೆ.

ಐತಿಹಾಸಿಕ ಶತಕ: ಅಸ್ಸಾಂ ಇತಿಹಾಸದಲ್ಲಿ ಮೊದಲ ಬಾರಿಗೆ ಮೈತ್ರಿಕೂಟ ಶತಕ ಬಾರಿಸಿದೆ. ಯಾವುದೇ ಪಕ್ಷ, ಮೈತ್ರಿ ಕೂಟವೂ 100ರ ಗಡಿ ದಾಟಿರಲೇ ಇಲ್ಲ.

ಕೇರಳದಲ್ಲಿ ಯುಡಿಎಫ್

ಯುಡಿಎಫ್ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಮರಳುತ್ತಿದೆ. ಈ ಚುನಾವಣಾ ಫಲಿತಾಂಶವು ಕೇವಲ ಸರ್ಕಾರದ ಬದಲಾವಣೆಯಲ್ಲ, ಸರ್ಕಾರದಲ್ಲಿ ನಿರಂತರತೆಯ ನಷ್ಟದೊಂದಿಗೆ, ಕೇರಳ ರಾಜಕೀಯವನ್ನು ನಿಯಂತ್ರಿಸುವ ಅನೇಕ ನಾಯಕರ ಭವಿಷ್ಯ ಮತ್ತು ಅಸ್ತಿತ್ವವೂ ಇಲ್ಲಿ ಬದಲಾಗುತ್ತಿದೆ. ವಿರೋಧ ಪಕ್ಷದ ನಾಯಕ ವಿ.ಡಿ. ಸತೀಸನ್ ಈ ಅದ್ಭುತ ಗೆಲುವಿನ ರೂವಾರಿ ಎಂದು ಹೇಳಲಾಗುತ್ತಿದೆ.

ಬಿಜೆಪಿ ಹಿನ್ನಡೆಗೆ ಮುಖಂಡರ ಜತೆ ಚರ್ಚೆ: ವಿಜಯೇಂದ್ರ



ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿನ ಹಿನ್ನಡೆ ಕುರಿತು ನಾವು ಮುಖಂಡರ ಜತೆಗೆ ಚರ್ಚೆ ಮಾಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಉಪಚುನಾವಣೆಗಳ ಫಲಿತಾಂಶ ಕುರಿತು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಾಗಲಕೋಟೆಯಲ್ಲಿ 15 ದಿನ ಬೀಡು ಬಿಟ್ಟಿದ್ದರು. ಸಚಿವ ಸಂಪುಟದ ಸದಸ್ಯರೂ ಬೀಡು ಬಿಟ್ಟಿದ್ದರು. ಉಪ ಚುನಾವಣೆ ಗೆದ್ದಿದೆ ಎಂದರೆ ಕಾಂಗ್ರೆಸ್ ಪಕ್ಷದ ಕಡೆ ಒಲವಿದೆ ಎನ್ನಲು ಸಾಧ್ಯವಿಲ್ಲ ಎಂದರು. ಸಂಘಟಿತ ಕಾರ್ಯದ ಕುರಿತು ಕಾರ್ಯತಂತ್ರ ಮಾಡುತ್ತೇವೆ ಎಂದು ತಿಳಿಸಿದರು. ಎರಡೂ ಕ್ಷೇತ್ರದ ಮುಖಂಡರು ತಮ್ಮ ಸಮಸ್ಯೆಗಳನ್ನು ಬದಿಗಿಟ್ಟು ಪಕ್ಷದ ಅಭ್ಯರ್ಥಿ ಪರವಾಗಿ ಒಂದಾಗಿ ಎಲ್ಲರೂ ಶ್ರಮ ಹಾಕಿದ್ದಾರೆ ಎಂದರು.

ಮೋದಿಯವರ ನಾಯಕತ್ವಕ್ಕೆ ಬಲ ತಂದ ಫಲಿತಾಂಶ

ಪಶ್ಚಿಮ ಬಂಗಾಲ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ದೊಡ್ಡ ಶಕ್ತಿ ತುಂಬಿದಂತಾಗಿದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಮೊದಲ ಚುನಾವಣೆ ಇದಾಗಿದೆ. ಬಹುದೊಡ್ಡ ಸಂದೇಶವನ್ನು ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ಲೇಷಿಸಿದರು. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲಿ ಅಮಿತ್ ಶಾ ಅವರು ಚುನಾವಣಾ ಚಾಣಕ್ಯ ಎಂದು ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ. ಅಮಿತ್ ಶಾ ಅವರ ತಂತ್ರಗಾರಿಕೆಯೂ ಈ ಗೆಲುವಿನ ಹಿಂದಿದೆ ಎಂದರು.



ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ವಿಧಾನ ಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ಅಭಿನಂದಿಸಿದರು.

ಕಾಂಗ್ರೆಸ್‌ಗೆ ಭವಿಷ್ಯವಿಲ್ಲ: ಬಿಎಸ್‌ವೈ

ಬೆಂಗಳೂರು: ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಧೂಳೀಪಟವಾದಂತೆ ರಾಜ್ಯದಲ್ಲೂ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ನೆಲಕಚ್ಚಲಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ



ಯಾವುದೇ ಭವಿಷ್ಯ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಪಂಚರಾಜ್ಯ ವಿಧಾನಸಭಾ ಚುನಾವಣೆ ಫಲಿತಾಂಶದ ಕುರಿತು ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಒಂದೆರಡು ಸ್ಥಾನಗಳನ್ನೂ ಗೆಲ್ಲಲೂ ಆಗದ ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದರು. ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಜನತೆಯ ವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ. ಇದೊಂದು ಐತಿಹಾಸಿಕ ಫಲಿತಾಂಶ. ಇದಕ್ಕಾಗಿ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ನಿರಂತರ ಮಾರ್ಗದರ್ಶನ ನೀಡಿದ್ದಾರೆ ಮತ್ತು ಪಕ್ಷವನ್ನು ಸೂಕ್ತವಾಗಿ ಮುನ್ನಡೆಸಿದ್ದಾರೆ ಎಂದ ಅವರು, ರಾಷ್ಟ್ರೀಯ ಅಧ್ಯಕ್ಷರಿಗೆ ಅಭಿನಂದನೆ ತಿಳಿಸಿದರು.

ಅಭಿವೃದ್ಧಿ ಮತ್ತು ವಿಕಸಿತ ಭಾರತ ನಿರ್ಮಾಣ ಮಾಡಬೇಕು ಎಂಬ ಎನ್‌ಡಿಎ ಬದ್ಧತೆಗೆ ಮತದಾರರು ಆಶೀರ್ವಾದ ಮಾಡಿದ್ದಾರೆ ಎಂದು ಪ್ರಶಂಸಿಸಿದರು.



ಸಾರ್ವತ್ರಿಕ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ನೇತೃತ್ವದಲ್ಲಿ ಬಿಜೆಪಿ ಗೆಲುವು ಎನ್‌ಡಿಎ ಭಾಗವಾಗಿರುವ ನನಗೆ ಅತ್ಯಂತ ಖುಷಿ ಮತ್ತು ಹೆಮ್ಮೆ ತಂದಿದೆ. ಕೇರಳದಲ್ಲಿ ಬಿಜೆಪಿ ಸಂಖ್ಯೆ ಸಾಧಾರಣವಾದರೂ ಅದು ಐತಿಹಾಸಿಕ. ಬಿಜೆಪಿ ನಾಯಕರಿಗೆ ನನ್ನ ಅಭಿನಂದನೆ.

■ **ಎಚ್.ಡಿ. ದೇವೇಗೌಡ,** ಮಾಜಿ ಪ್ರಧಾನಿ

ಕಿರುಸುದ್ದಿ

ರೈಲ್ವೇ ಯೋಜನೆಗೆ ₹1300 ಕೋಟಿ ಬಿಡುಗಡೆ

ತುಮಕೂರು: ತುಮಕೂರು?ದಾವಣಗೆರೆ ರೈಲು ಮಾರ್ಗ ಯೋಜನೆಗೆ ಆರಂಭದಲ್ಲಿ 1801 ಕೋಟಿ ರೂ. ಮಂಜೂರು ಮಾಡಲಾಗಿದ್ದು, ಈಗಾಗಲೇ 1300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ನವದೆಹಲಿಯ ಕರ್ನಾಟಕ ರಾಜ್ಯ ವಿಶೇಷ ಪ್ರತಿನಿಧಿ ಹಾಗೂ ಶಿರಾ ಶಾಸಕ ಟಿ.ಬಿ. ಜಯಚಂದ್ರ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಮಾತನಾಡಿ, ಅಮೃತ್ ಸರೋವರ ಯೋಜನೆ ಅಡಿಯಲ್ಲಿ ಶಿರಾ ಭಾಗದಲ್ಲಿ ಬರುವ 35 ಕೆರೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಸದನದಲ್ಲಿಯೂ ಪ್ರಸ್ತಾಪ ಮಾಡಲಾಗಿದೆ ಎಂದು ತಿಳಿಸಿದರು.



ಕೇಂದ್ರ ಮತ್ತು ರಾಜ್ಯ ಸರ್ಕಾರಗಳಡಿ ನಡೆಯುತ್ತಿರುವ ಕಾಮಗಾರಿಗಳನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಪೂರ್ಣಗೊಳಿಸುವುದು ಅತ್ಯಗತ್ಯವಾಗಿದ್ದು, ಈ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಕರೆ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶ್ವಿಜ ಬಿ.ವಿ. ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಇದ್ದರು.

ಹಣ, ಹೆಂಡಕ್ಕೆ ಜಯ: ಬಸವರಾಜ ಬೊಮ್ಮಾಯಿ

ಬೆಂಗಳೂರು: ಕರ್ನಾಟಕದಲ್ಲಿ ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಹಣ ಮತ್ತು ಹೆಂಡದ ಬಲದಿಂದ ಕಾಂಗ್ರೆಸ್‌ಗೆ ಜಯ ಆಗಿದೆ. ಆದರೆ, ರಾಜ್ಯದ ವಾಸ್ತವಿಕ ಸ್ಥಿತಿಯೇ ಬೇರೆ ಇದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಈ ಕುರಿತು ಎಕ್ಸ್ ಮಾಡಿರುವ ಅವರು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿದೆ. ಅಲ್ಲಿನ ಜನರು ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತಾ ಅವರ ನಾಯಕತ್ವಕ್ಕೆ ಕೊಟ್ಟಿರುವ ಮನ್ನಣೆ ಮತ್ತು ಬೆಂಬಲ. ಹೀಗಾಗಿ ಅವರಿಬ್ಬರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಅಲ್ಲದೇ ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾಸ್ ಶರ್ಮಾ, ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೆಂಧು ಅಧಿಕಾರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ವಿರುದ್ಧ ಹೋರಾಟ: ಅಶೋಕ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಗೆಲುವಿನಿಂದ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಲು ನಮಗೆ ಇನ್ನಷ್ಟು ಶಕ್ತಿ ಬಂದಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ವಿಶ್ಲೇಷಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಶೃಂಗೇರಿಯಲ್ಲಿ ಕಾಂಗ್ರೆಸ್ ಪಕ್ಷ ವೋಟ್ ಚೋರಿ ಮಾಡಿತ್ತು. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ರೀತಿ ಒತ್ತಡ ಹಾಕಿದ್ದರು. ಆದರೆ, ಅದಕ್ಕೆ ತಡೆ ಬಿದ್ದಿದೆ. ಮರು ಮತ ಎಣಿಕೆಯಲ್ಲಿ ಅಂತಿಮವಾಗಿ ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆಂದು ವಿವರಿಸಿದರು. ಜೀವರಾಜ್ ಅವರು ಅಧಿಕೃತವಾಗಿ ಗೆಲುವು ಸಾಧಿಸಿದ್ದರೂ ಘೋಷಣೆ ಮಾಡಿರಲಿಲ್ಲ. ಆದರೆ, ಈಗ ಜೀವರಾಜ್ ಅವರೇ ವಿಧಾನಸಭಾ ಸದಸ್ಯರು ಎಂಬ ಪ್ರಮಾಣಪತ್ರವನ್ನು ಚುನಾವಣಾಧಿಕಾರಿ ನೀಡಿದ್ದಾರೆ. ವಿಧಾನಸಭಾಧ್ಯಕ್ಷರ ಬಳಿ ಮಾತನಾಡಿ ಕೂಡಲೇ ಪ್ರಮಾಣವಚನ ಸ್ವೀಕಾರ ಮಾಡಲು ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

ಸಮರ್ಥ್ ಶಾಮನೂರು, ಉಮೇಶ ಮೇಟಿ ಬೆಂಬಲಿಸಿದ ಮತದಾರರು

ಕೈ ಅಭ್ಯರ್ಥಿಗಳಿಗೆ ಜಯ

ದಾವಣಗೆರೆ/ಬಾಗಲಕೋಟೆ: ಪಂಚರಾಜ್ಯಗಳ ಚುನಾವಣೆಯ ಮತ ಎಣಿಕೆ ಜೊತೆಗೆ ರಾಜ್ಯದಲ್ಲಿ ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಹಾಗೂ ಉಮೇಶ ಮೇಟಿ ಜಯ ಸಾಧಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಅವರ ಕೈ ಬಲ ಪಡಿಸಿದ್ದಾರೆ.

ಒಟ್ಟು 25 ಜನ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದ ದಾವಣಗೆರೆ ದಕ್ಷಿಣದ ಮತ ಎಣಿಕೆ ಕಾರ್ಯ ನಗರದ ಡಿಆರ್‌ಆರ್ ಶಾಲೆಯಲ್ಲಿ ಸೋಮವಾರ ನಡೆಯಿತು. 24 ಸುತ್ತಿನ ಮತ ಎಣಿಕೆಯಲ್ಲಿ ಕಾಂಗ್ರೆಸ್ಸಿನ ಸಮರ್ಥ ಶಾಮನೂರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ವಿರುದ್ಧ 5,708 ಮತಗಳ ಅಂತರದಿಂದ ಜಯ ದಾಖಲಿಸಿದ್ದಾರೆ. ಸಮರ್ಥ ಶಾಮನೂರು 68,619 ಮತಗಳನ್ನು ಪಡೆದರೆ, ಶ್ರೀನಿವಾಸ ದಾಸಕರಿಯಪ್ಪ 63,746 ಮತ ಗಳಿಸಲಷ್ಟೇ ಶಕ್ತರಾಗಿದ್ದಾರೆ.

ಹಿರಿಯ ಕಾಂಗ್ರೆಸ್ ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ಕ್ಷೇತ್ರವನ್ನು ಮೊಮ್ಮಗ ಉಳಿಸಿಕೊಳ್ಳುವ ಯಶಸ್ವಿಯಾದರೂ, ಅನುಕಂಪದ ಅಲೆಯ ನಡುವೆಯೂ ದಾಖಲೆಯ ಅಂತರದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ.ಆದರೂ ಸ್ಪರ್ಧಿಸಿದ ಮೊದಲ ಚುನಾವಣೆಯಲ್ಲೇ ಸಮರ್ಥ ಶಾಮನೂರು ಗೆಲುವಿನ ನಗೆ ಬೀರಿದ್ದಾರೆ.



ಸಮರ್ಥ ಶಾಮನೂರು	ಕಾಂಗ್ರೆಸ್	68,619
ಶ್ರೀನಿವಾಸ ದಾಸಕರಿಯಪ್ಪ	ಬಿಜೆಪಿ	63,746
ಗೆಲುವಿನ ಅಂತರ		5,708
ನೋಟಾ		511

ಗಣನೀಯ ಮತ ಪಡೆದ ಎಸ್‌ಡಿಪಿಐ

ಅಲ್ಪಸಂಖ್ಯಾತರಿಗೆ ಟಿಕೆಟ್ ನಿರಾಕರಿಸಿದ್ದನ್ನು ಖಂಡಿಸಿ ಕಾಂಗ್ರೆಸ್ ವಿರುದ್ಧ ಬಂಡಾಯವಾಗಿ ಸ್ಪರ್ಧಿಸಿದ್ದ ಮುಸ್ಲಿಂ ಅಭ್ಯರ್ಥಿಗಳು ಎಲ್ಲರೂ ಸೇರಿ ಸುಮಾರು 23 ಸಾವಿರದಷ್ಟು ಮತ ಪಡೆದಿದ್ದಾರೆ. ಎಸ್‌ಡಿಪಿಐನ ಅಫ್ಸರ್ ಕೊಡ್ಲಿಪೇಟೆ 18,975 ಮತಗಳನ್ನು ಪಡೆದರೆ ಉಳಿದ ಮುಸ್ಲಿಂ ಅಭ್ಯರ್ಥಿಗಳೆಲ್ಲರೂ ಸೇರಿ 3875 ಮತಗಳನ್ನು ಹಂಚಿಕೊಂಡಿದ್ದಾರೆ.

ಸ್ಟ್ರಾಂಗ್ ರೂಮ್ ಬೀಗ ಒಡೆದ ಸನ್ನಿವೇಶ..!

ಮತಎಣಿಕೆಗೂ ಮುನ್ನ ಕೀಲಿಕೈಗಳು ಹೊಂದಿಕೆಯಾಗದ ಕಾರಣ ಸಾಕಷ್ಟು ಪ್ರಯತ್ನದ ನಂತರ ಸ್ಟ್ರಾಂಗ್ ರೂಮ್ ಬಾಗಿಲು ಒಡೆಯಬೇಕಾದ ಪ್ರಸಂಗ ಎದುರಾಯಿತು. ಇದರಿಂದಾಗಿ ಮತ ಎಣಿಕೆ ಕಾರ್ಯ ಸುಮಾರು ಅರ್ಧ ಗಂಟೆಯಷ್ಟು ತಡವಾಗಿ ಶುರುವಾಯಿತು. ತಾಂತ್ರಿಕ ದೋಷ - ವಿವಿ ಪ್ಯಾಟ್ ಮತ ಎಣಿಕೆ ಕೊನೆಯಲ್ಲಿ ಮತ ಎಣಿಕೆಯ ಕೊನೆಯ ಹಂತದಲ್ಲಿ ನಾಲ್ಕು ಇವಿಎಂ ಯಂತ್ರಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ವಿವಿ ಪ್ಯಾಟ್ ಮೂಲಕ ಮತ ಎಣಿಕೆಗೆ ಮೊರೆ ಹೋಗಬೇಕಾಯಿತು.

ಉಮೇಶ ಮೇಟಿಗೆ ಒಲಿದ ಜಯ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026ರ ಮತ ಎಣಿಕೆ ಕಾರ್ಯ ಸೋಮವಾರ ನಡೆದಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಅವರ ಪ್ರತಿ ಸ್ಪರ್ಧಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂಟಿಮಠ ಅವರಿಗಿಂತ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ 98,919 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 76587 ಮತಗಳನ್ನು ಪಡೆದು ಸೋಲು ಅನುಭವಿಸಿದ್ದಾರೆ. ಬಾಗಲಕೋಟೆ ಉಪ ಚುನಾವಣೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 2,60,182 ಮತಗಳು ಇದ್ದು, ಈ ಪೈಕಿ 1,77,073 ಮತಗಳು ಚಲಾವಣೆಗೊಂಡಿದ್ದು, ಅದರಲ್ಲಿ 1,458 ಮತಗಳು ನೋಟಾ ಮತಗಳು ಇರುತ್ತವೆ. 100 ಮತಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಸಾಧಿಸುತ್ತಿದ್ದಂತೆ ಮತ ಎಣಿಕೆ ಕೇಂದ್ರದಲ್ಲಿ ಕಾರ್ಯಕರ್ತರು, ವಿಜಯೋತ್ಸವ ಆಚರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಸ

ಕಾಂಗ್ರೆಸ್ ಸಿದ್ಧಾಂತಕ್ಕೆ ಮತದಾರರ ಒಲವು

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತದಾನ ಮಾಡಿ ಗೆಲ್ಲಿಸಿದ ಸಮಸ್ತ ಮತದಾರ ಬಂಧುಗಳಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಸಂತಸ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ವಿರೋಧಪಕ್ಷಗಳ ಅಪಪ್ರಚಾರ ಮತ್ತು ಹಣದ ಪ್ರಭಾವದ ಹೊರತಾಗಿಯೂ ಎರಡೂ ಕ್ಷೇತ್ರಗಳ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತಚಲಾಯಿಸಿದ್ದಾರೆ. ಈ ಎರಡೂ ಕ್ಷೇತ್ರಗಳ ಮತದಾರರಷ್ಟೇ ಅಲ್ಲ ಇಡೀ ರಾಜ್ಯದ ಜನತೆ ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುತ್ತೇವೆ. ಮುಂದಿನ ವಿಧಾನಸಭಾ ಚುನಾವಣೆ ಯಲ್ಲಿಯೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂದರು.

ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ: ಡಿಸಿಎಂ

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ. ಜನರ ಕಷ್ಟಕ್ಕೆ ನಮ್ಮ ಸರ್ಕಾರ ಸ್ಪಂದಿಸಿದೆ. ಹೀಗಾಗಿ ಕರ್ನಾಟಕ ಉಪಚುನಾವಣೆಗಳಲ್ಲಿ ಉತ್ತಮ ಫಲಿತಾಂಶ ಬಂದಿದೆ. ಬೇರೆ ರಾಜ್ಯಗಳ ಪೈಕಿ ಕೇರಳದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎನ್ನುವ ವಿಶ್ವಾಸವಿತ್ತು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ರಾಜ್ಯದ ಉಪಚುನಾವಣೆ, ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಕುರಿತು ಸೋಮವಾರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣದಲ್ಲಿ ಗೆಲುವಿನ ಅಂತರ ಕಡಿಮೆಯಾಗಿದೆ. ಅಲ್ಲಿ ನಡೆದಿರುವ ಗೊಂದಲಗಳಿಂದ 25-30 ಸಾವಿರ ಅಂತರದ ಗೆಲುವು ಸಿಗುವುದಿಲ್ಲ ಎಂಬುದು ಗೊತ್ತಿತ್ತು. ಆದರೆ ಆರಾಮವಾಗಿ ಗೆಲ್ಲುತ್ತೇವೆ ಎಂದು ಗೊತ್ತಿತ್ತು. ಎಸ್‌ಡಿಪಿಐನಿಂದ ಅಪಾಯವಾಗಿದೆ ಎಂದರು. ಎಸ್‌ಡಿಪಿಐ ಅನ್ನು ಹಗುರವಾಗಿ ನಾವು ಪರಿಗಣಿಸಿರಲಿಲ್ಲ ಎಂದರು.

ಚುನಾವಣೆ ಫಲಿತಾಂಶವು ರಾಜ್ಯದಲ್ಲಿ ಏನೂ ಬದಲಾವಣೆ ತರುವುದಿಲ್ಲ, ನಮ್ಮ ರಾಜ್ಯಕ್ಕೆ ಏನೂ ಆಗುವುದಿಲ್ಲ, ಒಂದಷ್ಟು ಜನಕ್ಕೆ ಸಂತೋಷ, ಒಂದಷ್ಟು ಜನಕ್ಕೆ ಬೇಜಾರಾಗಿರಬಹುದು ಡಬಲ್ ಎಂಜಿನ್ ಸರ್ಕಾರ ಇದ್ದಾಗಲೇ ಅವರಿಗೆ ಏನೂ ಮಾಡಲಾಗಲಿಲ್ಲ.

■ **ಶಿವಕುಮಾರ್,** ಡಿಸಿಎಂ

ಸರ್ಕಾರಕ್ಕೆ ಮತ್ತಷ್ಟು ಬಲ: ಸಚಿವ

ಬೆಳಗಾವಿ: ರಾಜ್ಯದ ಉಪಚುನಾವಣೆಯಲ್ಲಿ ಎರಡೂ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸಲಿದೆ ಎಂದು ಮೊದಲಿನಿಂದಲೂ ವಿಶ್ವಾಸ ಇತ್ತು ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.



ಸೋಮವಾರ ಬೆಳಗಾವಿ ಜಿಲ್ಲೆಯ ಚನ್ನಮ್ಮ ಕಿತ್ತೂರಿನಲ್ಲಿ ನೂತನ ಬಸ್‌ಗಳಿಗೆ ಉದ್ಘಾಟಿಸಿ ಚಾಲನೆ ನೀಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ದಾವಣಗೆರೆಯಲ್ಲಿ ಮತಗಳ ಅಂತರ ಕಡಿಮೆಯಾಗುವ ಸಾಧ್ಯತೆ ಇದ್ದರೂ ಅಂತಿಮವಾಗಿ ಕಾಂಗ್ರೆಸ್ ಜಯ ಸಾಧಿಸಿದೆ ಎಂದರು.

ಟಿಕೆಟ್ ಹಂಚಿಕೆವೇಳೆ ಉಂಟಾದ ಗೊಂದಲ ಈಗ ನಿವಾರಣೆಯಾಗಿದೆ ಎಂದು ಸ್ಪಷ್ಟಪಡಿಸಿದ ಅವರು, ಉಪಚುನಾವಣೆಯಲ್ಲಿ ಬಿಜೆಪಿ ಕೂಡ ಕೆಲ ಕ್ಷೇತ್ರಗಳಲ್ಲಿ ಸೋಲು ಕಂಡಿರುವುದನ್ನು ಉಲ್ಲೇಖಿಸಿದರು. ಶೃಂಗೇರಿ ವಿಧಾನಸಭಾ ಮತ ಎಣಿಕೆಯಲ್ಲಿ ಅಧಿಕಾರಿಗಳ ತಪ್ಪಿನಿಂದ ಬ್ಯಾಲೆಟ್ ಪೇಪರ್ ಎಣಿಕೆ ನಡೆದಿರುವುದಾಗಿ ಆರೋಪಿಸಿದರು.

ಚುನಾವಣಾಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷವಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಹೇಳಿದರು. ಬಳಿಕ ಸಾರಿಗೆ ಇಲಾಖೆಯಿಂದ ನೂತನವಾಗಿ ಬಸ್‌ಗಳ ಲೋಕಾರ್ಪಣೆಯ ಬಗ್ಗೆ ಮಾತನಾಡಿದ ಅವರು, ನಗರ ಸಾರಿಗೆಗೆ ಒಟ್ಟು 750 ಹೊಸ ಬಸ್ ನೀಡಲಾಗಿದೆ. ಡಿಪೋಗಳನ್ನು ನಿರ್ಮಿಸಲು ಕಾಮಗಾರಿ ಆರಂಭಿಸಲಾಗಿದೆ. ಜಿಸಿಸಿ ಮಾದರಿಯಲ್ಲಿ ಬಸ್ ಸೇವೆ ಆರಂಭಿಸಲಾಗುತ್ತಿದೆ. ಬಸ್, ಚಾಲಕರು ಖಾಸಗಿಯವರಾಗಿದ್ದು, ಕಂಡಕ್ಟರ್ ನಮ್ಮವರಾಗಿರುತ್ತಾರೆ. ಬೆಳಗಾವಿಯ 8 ಗ್ರಾಮಗಳಿಗೆ ಬಸ್ ಸೇವೆ ಇಲ್ಲದ ಬಗ್ಗೆ ಪ್ರತಿಕ್ರಿಯಿಸಿದರು.

ಶಾಸಕರಾಗಿ ಜೀವರಾಜ್ ಆಯ್ಕೆ ಅಧಿಕೃತ

ಚಿಕ್ಕಮಗಳೂರು: ಹೈಕೋರ್ಟ್ ಆದೇಶದ ಮೇರೆಗೆ ನಡೆದ ಅಂಚೆ ಮತ ಮತ್ರಗಳ ಮರು ಎಣಿಕೆಯಲ್ಲಿ 52 ಮತಗಳ ಮುನ್ನಡೆ ಸಾಧಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ನೂತನ ಶಾಸಕರಾಗಿ ಅಧಿಕೃತವಾಗಿ ಆಯ್ಕೆಯಾಗಿದ್ದಾರೆ.

ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿ ಗೌರವ್ ಕುಮಾರ್ ಶೆಟ್ಟಿ ಅವರು ಸೋಮವಾರ ಬೆಳಗ್ಗೆ ತಮ್ಮ ನಿವಾಸದ ಬಳಿ ಜೀವರಾಜ್ ಅವರಿಗೆ ಶಾಸಕ ಸ್ಥಾನದ ಪ್ರಮಾಣ ಪತ್ರವನ್ನು ಹಸ್ತಾಂತರಿಸಿದರು. ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಆರ್.ದೇವರಾಜ ಶೆಟ್ಟಿ, ನಗರಾಧ್ಯಕ್ಷ ಸಂತೋಷ್ ಕೋಟ್ಯಾನ್, ಹಿರಿಯ ಮುಖಂಡ ಕೋಟೆ ರಂಗನಾಥ್, ನರೇಂದ್ರ, ದಿನೇಶ್ ಇತರರು ಹಾಜರಿದ್ದು, ಜೀವರಾಜ್ ಪರ ಘೋಷಣೆಗಳನ್ನು ಕೂಗಿ ಸಂತಸ ಹಂಚಿಕೊಂಡರು.

ಈ ವೇಳೆ ನೂತನ ಶಾಸಕ ಡಿ.ಎನ್.ಜೀವರಾಜ್ ಮಾತನಾಡಿ, ಮತ ಎಣಿಕೆ ಮುಗಿದ ತಕ್ಷಣವೇ ನಮ್ಮ ಕೋರಿಕೆ ಮೇರೆಗೆ ಮರು ಮತ ಎಣಿಕೆ ಮಾಡಿದ್ದರೆ ಇದಾವ ಪ್ರಶ್ನೆಗಳು ಏಳುತ್ತಿರಲಿಲ್ಲ. ಅಂದೇ ನಮ್ಮ ಅರ್ಜಿ ಪರಿಗಣಿಸದಿರುವುದು ಬಹಳ ಮೋಸ ಮತ್ತು ಗಂಭೀರವಾದ ವಿಚಾರ. ಅಧಿಕಾರ ದುರುಪಯೋಗ ಮಾಡಿ ಈ ರೀತಿ ಅನ್ಯಾಯ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ ಎಂದರು.



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ ಮುಖಂಡರು ಈ ವಿಚಾರದಲ್ಲಿ ಬಿಜೆಪಿಯಿಂದಲೇ ಹಗರಣ ನಡೆದಿದೆ ಎಂದು ಆರೋಪಿಸಿರುವ ಕುರಿತು ಪ್ರತಿಕ್ರಿಯಿಸಿದ ಜೀವರಾಜ್, ಸ್ಟ್ರಾಂಗ್ ರೂಂನಲ್ಲಿದ್ದ ಮತ ಪೆಟ್ಟಿಗೆಗಳ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾವು ಕಳೆದ ಒಂದೂವರೆ ವರ್ಷದ ಹಿಂದೆಯೇ ನಮ್ಮ ಪಕ್ಷದ ಜಿಲ್ಲಾಧ್ಯಕ್ಷರ ಮೂಲಕ ಜಿಲ್ಲಾಡಳಿತಕ್ಕೆ ಅರ್ಜಿ ಕೊಟ್ಟಿದ್ದೆವು. ಅಲ್ಲದೆ ನ್ಯಾಯಾಲಯದ ಸುಪರ್ದಿಯಲ್ಲೇ ಮತ ಪತ್ರಗಳನ್ನು ಇರಿಸಬೇಕು ಎಂದು ಕೋರ್ಟ್‌ಗೂ ಸಹ ಕೋರಿಕೊಂಡಿದ್ದೆವು. ಅಂದು ರಾಜೇಗೌಡರ ವಕೀಲರು ಅದರ ಅವಶ್ಯಕತೆ ಇಲ್ಲ ಎಂದು ವಾದಿಸಿದ್ದರು. ಹಾಗಾಗಿ ಇದೆಲ್ಲ ದಾರಿತಪ್ಪಿಸುವ ಮತ್ತು ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಟೀಕಿಸಿದರು.

ಜೀವರಾಜ್ ವಿರುದ್ಧ ದೂರು ದಾಖಲು

2023ರ ವಿಧಾನ ಸಭೆ ಚುನಾವಣೆಯ ಮತ ಎಣಿಕೆ ಸಂದರ್ಭದಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಡಿ.ಎನ್.ಜೀವರಾಜ್ ಸೇರಿದಂತೆ ಮೂವರ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಅಂದು ಬಿಜೆಪಿ ಅಭ್ಯರ್ಥಿಯಾಗಿದ್ದ ಡಿ.ಎನ್. ಜೀವರಾಜ್, ಅಂದಿನ ಜಿಲ್ಲಾ ಚುನಾವಣಾಧಿಕಾರಿ ವೇದಾಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿ ರಮೇಶ್ ಕುಮಾರ್ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ. ಅಂಚೆ ಮತ ಎಣಿಕೆ ಸಂದರ್ಭದಲ್ಲಿ ಕಾಂಗ್ರೆಸ್‌ನ ಟೇಬಲ್ ಏಜೆಂಟ್ ಆಗಿದ್ದ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಾಗಿದೆ. ಮತಪತ್ರಗಳನ್ನು ಇರಿಸಲಾಗಿದ್ದ ಸ್ಟ್ರಾಂಗ್ ರೂಂ ಸೀಲ್ ಆಗಿರಲಿಲ್ಲ ಮತ್ತು ಟ್ರಂಕ್‌ಗಳ ಲಾಕ್ ಕಟ್ ಆಗಿತ್ತು ಎಂದು ದೂರುದಾರರು ಆರೋಪ ಮಾಡಿದ್ದಾರೆ. ಮತ ಪತ್ರಗಳನ್ನು ಟ್ಯಾಂಪರಿಂಗ್ ಮಾಡಲಾಗಿದೆ ಎಂದು ದೂರು ದಾಖಲಿಸಿಕೊಂಡಿದ್ದಾರೆ.

ಕಾಂಗ್ರೆಸ್ ಸಂಘಟಿತ ಹೋರಾಟ | ಪ್ರಜಾಪ್ರಭುತ್ವವಾದಿ ಜನರ ಪರವಾದ ತೀರ್ಪು

ಕೇರಳದಲ್ಲಿ ನಿರೀಕ್ಷೆ ಮೀರಿ ಕಾಂಗ್ರೆಸ್ ಗೆಲುವು

ಬೆಂಗಳೂರು: ದಕ್ಷಿಣದ ರಾಜ್ಯಗಳಾದ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಂತೆ ಕೇರಳ, ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿಯ ಕೋಮು ವಾದಿ ರಾಜಕಾರಣಕ್ಕೆ ಪ್ರವೇಶ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ನೀಡಿರುವ ಎರಡು ರಾಜ್ಯಗಳ ಮತದಾರರನ್ನು ದೇಶದ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನರ ಪರವಾಗಿ ಅಭಿನಂದಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ನಿರೀಕ್ಷಿತವಾಗಿತ್ತು. ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಪ್ರಚಾರದ ಕಾರ್ಯತಂತ್ರದ ವರೆಗೆ ಎಲ್ಲವನ್ನೂ ಆ ರಾಜ್ಯದ ಕಾಂಗ್ರೆಸ್ ನಾಯಕರು ಸಂಘಟಿತರಾಗಿ ನಡೆಸಿದ್ದಾರೆ. ಕೇರಳ ರಾಜ್ಯದೊಂದಿಗೆ ವಿಶೇಷವಾದ ಬಾಂಧವ್ಯವನ್ನು ಬೆಳೆಸಿಕೊಂಡಿರುವ ನಮ್ಮ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರು ಪಕ್ಷದ ಗೆಲುವಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಕಳೆದ ಮೂರು ಅವಧಿಗೆ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿ ವಿರುದ್ಧ ಸಹಜವಾಗಿಯೇ ಪ್ರಬಲ ಆಡಳಿತ ವಿರೋಧಿ ಅಲೆ ಇತ್ತು. ಇದರ ಜೊತೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿನ ಮೋಸದಾಟವೂ ಸೇರಿದಂತೆ ಕೇಂದ್ರ ಚುನಾವಣಾ ಆಯೋಗದ ಕೈವಾಡದಿಂದಾಗಿ ಮಮತಾ ಬ್ಯಾನರ್ಜಿಯವರು ಸೋತಿದ್ದಾರೆ.

ತಮಿಳುನಾಡು ಚುನಾವಣೆಯ ಈ ಭಾರಿಯ ಫಲಿತಾಂಶವನ್ನು ನಾನು ನಿರೀಕ್ಷಿಸಿರಲಿಲ್ಲ. ಆಡಳಿತ ವಿರೋಧಿ ಅಲೆ ಇದ್ದರೂ ಡಿಎಂಕೆ ಸರ್ಕಾರದ ಜನಪರ ಆಡಳಿತ ಮತ್ತು ಕಾರ್ಯಕ್ರಮಗಳನ್ನು ಅಲ್ಲಿನ ಜನ ಮೆಚ್ಚಿಕೊಂಡಿದ್ದರು. ತಮಿಳುನಾಡಿನ ಯುವಜನರು ಮತ್ತು ಮಹಿಳೆಯರಲ್ಲಿ ಸಿನೆಮಾ ನಟ ವಿಜಯ್ ಅವರ ಬಗೆಗಿನ ಆಕರ್ಷಣೆಗೆ ಬಲಿಯಾಗಿದ್ದಾರೆ ಎಂದು ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದ್ದಾರೆ.

ತ.ನಾಡಿನ ಫಲಿತಾಂಶ ಅಚ್ಚರಿ ತಂದಿದೆ: ಉಪ ಮುಖ್ಯಮಂತ್ರಿ ಶಿವಕುಮಾರ್

ಬೆಂಗಳೂರು: ತಮಿಳುನಾಡಿನದ್ದು ಅಚ್ಚರಿಯ ಫಲಿತಾಂಶ. ಅಲ್ಲಿ ಹೊಸ ಯುಗ ಪ್ರಾರಂಭವಾಗಿದೆ. ಜನರ ನಾಡಿಮಿಡಿತವನ್ನು ನಾವು ಗ್ರಹಿಸಲು ಆಗಲಿಲ್ಲ. ಸ್ಥಳೀಯ ನಾಯಕರು ಈ ಬಗ್ಗೆ ಹೇಳಿದ್ದರು. 40 ವರ್ಷಗಳ ರಾಜಕೀಯದಲ್ಲಿ ಸಂಬಂಧ, ನೆಂಟಸ್ತನ ಬಿಡಲು ಆಗುತ್ತದೆಯೇ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸೋಮವಾರ ಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ವಿಜಯ್ ಅವರು ಸೆಲೆಬ್ರಿಟಿ ಅನ್ನುವ ಕಾರಣಕ್ಕೆ ಶೇ. 30-40 ರಷ್ಟು ಮತ ಹೋಗಬಹುದು ಎಂದು ಕೊಂಡಿದ್ದೆವು. ಆದರೆ ಅದಕ್ಕೂ ಹೆಚ್ಚು ಮತ ಅವರಿಗೆ ಹೋಗಿದೆ. ಅವರು ನಿರೀಕ್ಷೆಗೂ ಮೀರಿ ಮತ ಗಳಿಕೆ ಮಾಡಿದ್ದಾರೆ ಎಂದು ತಿಳಿಸಿದರು. ಅಸ್ಸಾಂನಲ್ಲಿ ನಾವು 50- 60 ಸ್ಥಾನ ಬರುತ್ತೇವೆ ಎಂದು ಕೊಂಡಿದ್ದೆವು. ಅಲ್ಲಿನ ಸ್ಥಳೀಯ ನಾಯಕರೂ 50 ಸ್ಥಾನಗಳನ್ನು ಮುಟ್ಟುತ್ತೇವೆ ಎಂದು ಹೇಳಿದ್ದರು. ಕ್ಷೇತ್ರ ಮರುವಿಂಗಡಣೆ ಮಾಡುವಾಗ ಅಲ್ಪಸಂಖ್ಯಾತರು ಒಂದೇ ಕಡೆ ಬರುವಂತೆ ಮಾಡಿದ್ದಾರೆ. ಉಪಾಯವಾಗಿಯೇ ಇದನ್ನು ಮಾಡಲಾಗಿದೆ ಇದೇ ಸೋಲಿಗೆ ಕಾರಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಸೋಲು: ಡಿ.ಕೆ. ಶಿವಕುಮಾರ್

ಮರು ಎಣಿಕೆ ಫಲಿತಾಂಶ ಮಾರಕ

ಬೆಂಗಳೂರು: ಶೃಂಗೇರಿ ಮರು ಎಣಿಕೆ ಫಲಿತಾಂಶವು ಇಡೀ ದೇಶಕ್ಕೇ ಮಾರಕ. ಬಿಜೆಪಿಯಲ್ಲಿ ಇಷ್ಟರ ಮಟ್ಟಿಗಿನ ಕ್ರಿಮಿನಲ್‌ಗಳಿದ್ದಾರೆ ಎಂದು ನಾನು ಎಣಿಸಿರಲಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು, ಗೆಲುವು ಸಾಮಾನ್ಯ. ಆದರೆ ಇಲ್ಲಿ ನಡೆದಿರುವುದು ಷಡ್ಯಂತ್ರ. ಅತ್ಯಂತ ಆಘಾತಕಾರಿ ವಿಚಾರ. ನಾವು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿಸುತ್ತೇವೆ. ಕಾನೂನಾತ್ಮಕವಾಗಿಯೂ ಹೋರಾಟ ಮಾಡುತ್ತೇವೆ ಎಂದರು.

ಇದೊಂದು ಅಂತಾರಾಷ್ಟ್ರೀಯ ಸಂಚಿನ ರೀತಿ ನಡೆದಿದೆ. ನಮಗೆ ಅನುಮಾನ ಇದ್ದರೆ ಸುಪ್ರೀಂಕೋರ್ಟ್‌ಗೆ ಹೋಗುತ್ತಿದ್ದೆವು. ಇಲ್ಲಿ ಮತ ಎಣಿಕೆ ಬಾಕ್ಸ್‌ಗಳನ್ನು ತೆರೆಯಲಾಗಿದೆ. ಕೆಲವರನ್ನು ಉಪಯೋಗಿಸಿಕೊಂಡು ನಮಗೆ ಮತ ಬಿದ್ದ ಬ್ಯಾಲೆಟ್ ಪೇಪರ್‌ಗಳ ಮೇಲೆ ಮತ್ತೊಂದು ಗುರುತು ಹಾಕಲಾಗಿದೆ. ಎಲ್ಲಾ ಬಂಡಲ್‌ಗಳು ಮಾನ್ಯ ಎಂದು ತೀರ್ಮಾನ ಆದ ಮೇಲೆ ಈ ತಿದ್ದುಪಡಿ ಹೇಗಾಯಿತು ಎಂದು ಡಿಸಿಎಂ ಪ್ರಶ್ನಿಸಿದರು.

ರಾಜ್ಯಕ್ಕೆ ಕಳಂಕದ ಪ್ರಕರಣ

ಫಲಿತಾಂಶದ ಬಗ್ಗೆ ಚುನಾವಣಾಧಿಕಾರಿ ನ್ಯಾಯಲಯಕ್ಕೆ ಕಳುಹಿಸಬೇಕಿತ್ತು. ಸಂಬಂಧಿಸಿದ ಅಧಿಕಾರಿ ಇದನ್ನೆಲ್ಲಾ ಗಮನಿಸಿದ್ದಾರೆ. ಇದು ಇಡೀ ರಾಜ್ಯಕ್ಕೆ ಕಳಂಕದ ಪ್ರಕರಣ. ಗಾಯತ್ರಿ ಶಾಂತನಗೌಡ ಅವರ ವಿಚಾರವನ್ನು ನ್ಯಾಯಲಯದಲ್ಲಿ ಬ್ಲಾಕ್ ಮಾಡಿಕೊಂಡೆ ಬರುತ್ತಿದ್ದಾರೆ. ಸೌಮ್ಯ ರೆಡ್ಡಿ ಅವರು 12 ಮತಗಳ ಅಂತರದಲ್ಲಿ ಸೋತಿದ್ದಾರೆ. ಅದು ಇನ್ನು ಎಣಿಕೆಯಾಗಿಲ್ಲ. ಇದು ಹೇಗೆ ಎಣಿಕೆಯಾಗುತ್ತದೆ ಎಂದರು.

ಇಂತಹವರಿಗೆ ಮತ ಬಿದ್ದಿದೆ ಎಂದು ಪ್ರತಿ ಮತಗಳನ್ನು ಎಲ್ಲರಿಗೂ ತೋರಿಸಿರುತ್ತಾರೆ. ಇದನ್ನು ಕ್ಯಾಮೆರಾದಲ್ಲಿಯೂ ದಾಖಲೀಕರಣ ಮಾಡಿಕೊಳ್ಳಲಾಗಿರುತ್ತದೆ. ಎಲ್ಲಾ ಎಣಿಕೆಯಾದ ಮೇಲೆ ಬಂಡಲ್‌ಗಳನ್ನು ಒಳಗೆ ಹಾಕಿ ಸೀಲ್ ಮಾಡಲಾಗಿರುತ್ತದೆ. ಇದಾದ ನಂತರ ಬಂಡಲ್ ತೆಗೆದು ಮತ್ತೊಂದು ಗುರುತು ಮಾಡಲಾಗಿದೆ. ಈಗ ಅದು ಮಾತ್ರ ಎಣಿಕೆಯಾಗಬೇಕು ಎಂದು ನ್ಯಾಯಲಯದ ಮೂಲಕ ಆದೇಶ ತಂದು ಈ ರೀತಿ ಮಾಡಲಾಗಿದೆ ಎಂದರು.

ಸಂಪಾದಕೀಯ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಶಕೆ, ತಮಿಳ್ನಾಡಲ್ಲಿ ವಿಜಯ್ ಜನನಾಯಕ

ಪಶ್ಚಿಮ ಬಂಗಾಳದಲ್ಲಿ ಏನಿದ್ದರೂ ತನ್ನದೇ ಆಟ, ಬೇರೆಯವರು ಲೆಕ್ಕಕ್ಕಿಲ್ಲ ಎಂದು ತೃಣಮೂಲ ಕಾಂಗ್ರೆಸಿನ ಮಮತಾ ಬ್ಯಾನರ್ಜಿ ಹೇಳುತ್ತಿದ್ದುದಿತ್ತು. ಆದರೆ ಈಗ ಮಮತಾ 'ಆಟ' ಮುಗಿದಿದೆ. 15 ವರ್ಷಗಳ ಅವರ ದುರಾಡಳಿತಕ್ಕೆ ಅಂತ್ಯ ಬಿದ್ದಿದೆ. ಅಲ್ಲೀಗ ಬಿಜೆಪಿ ತನ್ನ ಹೊಸ ಆಟ ಆರಂಭಿಸಿದೆ. ಮಮತಾ ಬ್ಯಾನರ್ಜಿಯವರ ಕೆಟ್ಟ ಆಡಳಿತ, ಹದಗೆಟ್ಟ ಕಾನೂನು ವ್ಯವಸ್ಥೆ, ಅತಿರೇಕದ ಅಲ್ಪಸಂಖ್ಯಾತ ತುಷ್ಟೀಕರಣ, ಬಾಂಗ್ಲಾ ದೇಶಿ ಮುಸ್ಲಿಮರಿಗೆ ಸಿಗುತ್ತಿರುವ ರಾಜಮರ್ಯಾದೆ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಮುಂತಾದ ಎಲ್ಲಾ ಅಪಸವ್ಯಗಳಿಂದ ರೋಸಿಹೋದ ಜನರು ಮಮತಾ ಬ್ಯಾನರ್ಜಿಗೆ ಸೋಲುಣಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದಾರೆ. ಬಿಜೆಪಿಯಿಂದ ಅಭಿವೃದ್ಧಿಯ ಹೊಸ ಪಥ ಬಯಸಿದ್ದಾರೆ.

ನಿಜಕ್ಕಾದರೆ ಕಳೆದ ಚುನಾವಣೆಯಲ್ಲೇ ಮಮತಾ ಬ್ಯಾನರ್ಜಿಗೆ ಬಿಜೆಪಿ ಪ್ರಬಲ ಸವಾಲು ಒಡ್ಡಿತ್ತು. ಆದರೆ ತೃಣಮೂಲ ಕಾಂಗ್ರೆಸ್ ಪಕ್ಷವು



ಮತದಾರರನ್ನು ಬೆದರಿಸಿ, ಮತಗಟ್ಟೆ ವಶೀಕರಣ ಮಾಡಿ ಮತ್ತು ಅಕ್ರಮ ಮಾರ್ಗಗಳ ಮೂಲಕ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಾ ಬರುತ್ತಿದೆಯೆನ್ನುವ ಅನುಮಾನ ಕೂಡಾ ಅದೇವೇಳೆ ಹುಟ್ಟಿಕೊಂಡಿತ್ತು. ಹಾಗಾಗಿಯೇ ಈ ಬಾರಿ ಚುನಾವಣಾ ಆಯೋಗವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿತ್ತು. ಕೇಂದ್ರ ಮೀಸಲು ಪಡೆಯನ್ನು ದೊಡ್ಡ ಮಟ್ಟದಲ್ಲಿ ನಿಯೋಜಿಸುವ ಮೂಲಕ ಜನರು ನಿರ್ಭೀತಿಯಿಂದ ಮತದಾನ ಮಾಡಲು ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಚುನಾವಣಾ ಅಕ್ರಮಗಳನ್ನೆಸಗಲು ತೃಣಮೂಲ ಕಾರ್ಯಕರ್ತರಿಗೆ ಸಾಧ್ಯವಾಗಿರಲಿಲ್ಲ. ಚುನಾವಣಾ ಪಟ್ಟಿ ವಿಶೇಷ ಪರಿಷ್ಕರಣೆ(ಎಸ್ಐಆರ್)ಯ ಮೂಲಕ ನಕಲಿ ಮತದಾರರನ್ನು ಹಾಗೂ ಬಾಂಗ್ಲಾ ದೇಶೀಯರನ್ನು ಮತದಾರ ಪಟ್ಟಿಯಿಂದ ತೆಗೆದುದು ಕೂಡಾ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿರುವುದು ಸ್ಪಷ್ಟವಾಗಿದೆ. ಇದೀಗ ಪಶ್ಚಿಮ ಬಂಗಾಳದಲ್ಲಿ ಮಮತಾ ಆಡಳಿತ ಕೊನೆಗೊಂಡಿರುವುದು ಇಡೀ ದೇಶಕ್ಕೇ ನಿರಾಳತೆ ತರುವ ವಿಚಾರವಾಗಿದೆ. ದೇಶದ ಸಮಗ್ರತೆಗೇ ಅಪಾಯವೊಡ್ಡುವ ರೀತಿಯಲ್ಲಿ ಅಲ್ಲಿ ಬಾಂಗ್ಲಾ ದೇಶಿ ಮುಸ್ಲಿಮರು ವ್ಯಾಪಿಸಿದ್ದು, ನಮ್ಮ ದೇಶದ ಸವಲತ್ತುಗಳನ್ನು ಪಡಕೊಳ್ಳುತ್ತಿದ್ದಾರೆ. ಮಮತಾ ಸರಕಾರವು ಅವರಿಗೆ ಆಶ್ರಯತಾಣದಂತಾಗಿತ್ತು. ಇನ್ನೀಗ ಬಿಜೆಪಿ ಸರಕಾರದಡಿಯಲ್ಲಿ ಪಶ್ಚಿಮ ಬಂಗಾಳವು ಹೊಸ ಶಕೆಯೆಡೆಗೆ ಪಯಣ ಬೆಳೆಸುವುದೆಂದು ಆಶಿಸಬೇಕಾಗಿದೆ.

ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ಕೂಡಾ ಆಡಳಿತ ವಿರೋಧಿ ಅಲೆಗಳು ಹಾಲಿ ಸರಕಾರವನ್ನು ಉರುಳಿಸಿವೆ. ಆಶ್ಚರ್ಯಕರ ಬೆಳವಣಿಗೆಯಲ್ಲಿ ತಮಿಳುನಾಡಿನ ಜನರು ವಿರೋಧ ಪಕ್ಷವಾದ ಎಐಎಡಿಎಂಕೆಗಿಂತಲೂ ಚಿತ್ರನಟ ವಿಜಯ್ ಅವರ ನೂತನ ಪಕ್ಷವನ್ನು ಆದರಿಸಿದ್ದಾರೆ. ಅವರ ಪಕ್ಷವು ಬಹುಮತ ಪಡೆಯುವುದರಿಂದ ಬೆರಳೆಣಿಕೆಯಷ್ಟು ಸ್ಥಾನಗಳಿಂದ ಮಾತ್ರ ವಂಚಿತರಾಗುವಂತಿದೆ. ಸರಕಾರ ರಚಿಸಲು ಅವರಿಗೆ ಇತರ ಪಕ್ಷದ ನೆರವು ಬೇಕಾಗಬಹುದು. ಒಟ್ಟಿನಲ್ಲಿ ಚಿತ್ರನಟರನ್ನು ಅಧಿಕಾರಕ್ಕೇರಿಸುವ ತಮ್ಮ ಹಳೆಯ ಸಂಪ್ರದಾಯವನ್ನು ತಮಿಳುನಾಡಿನ ಜನತೆ ಮತ್ತೆ ಮುಂದುವರಿಸಿದ್ದಾರೆ. ಎಂಜಿಆರ್, ಜಯಲಲಿತಾ ಹಾದಿಯಲ್ಲಿ ಈಗ ವಿಜಯ್ ಕೂಡಾ ಹೆಜ್ಜೆ ಹಾಕಲಿದ್ದಾರೆ. ಎರಡೂ ದ್ರಾವಿಡ ಪಕ್ಷಗಳ ರಾಜಕೀಯವು ತಮಗೆ ಬೇಕಾಗಿಲ್ಲ ಎಂಬ ಸ್ಪಷ್ಟ ಸಂದೇಶ ಕೂಡಾ ತಮಿಳುನಾಡು ಜನತೆಯಿಂದ ರವಾನೆಯಾಗಿದ್ದು, ಇದನ್ನು ಅಲ್ಲಿನ ಪಕ್ಷಗಳು ಮನನ ಮಾಡಿಕೊಳ್ಳಬೇಕಾಗಿದೆ. ಸಿನಿಮಾಗಳಲ್ಲಿ ದುಷ್ಟರನ್ನು ದಮನಿಸಿ ಸಿಳ್ಳೆ ಗಿಟ್ಟಿಸುವ ವಿಜಯ್ ನಿಜ ಜೀವನದಲ್ಲಿ 'ಜನನಾಯಕ'ನ ಹೊಣೆಗಾರಿಕೆಯನ್ನು ಹೇಗೆ ನಿಭಾಯಿಸುತ್ತಾರೆಂದು ನೋಡಬೇಕಾಗಿದೆ. ಡಿಎಂಕೆಯ ಸ್ಟಾಲಿನ್ ಆಡಳಿತವು ಉತ್ತರ ಭಾರತವನ್ನು ದ್ವೇಷಿಸುವಂತಹ ವಾತಾವರಣವನ್ನು ಸೃಷ್ಟಿಸಿದ್ದು, ಪ್ರತ್ಯೇಕತಾ ಭಾವಕ್ಕೆ ಇಂಬು ನೀಡುವಂತೆ ವರ್ತಿಸುತ್ತಿತ್ತು. ಜನರು ಅದನ್ನು ತಿರಸ್ಕರಿಸಿ ಅವರಿಗೆ ತಕ್ಕ ಪಾಠ ಕಲಿಸಿದ್ದಾರೆ.

ಕೇರಳವು ಅಧಿಕಾರವನ್ನು ಪರ್ಯಾಯವಾಗಿ ಬದಲಿಸುವ ತನ್ನ ಹಳೆಯ ಸಂಪ್ರದಾಯಕ್ಕೆ ಮತ್ತೆ ಆತುಕೊಂಡಿದೆ. ಕಳೆದ ಬಾರಿ ಎಲ್‌ಡಿಎಫ್‌ಗೆ ಮರುಅಧಿಕಾರ ನೀಡಿ ಈ ಸಂಪ್ರದಾಯ ಮುರಿದಿದ್ದರೂ ಈ ಬಾರಿ ಯುಡಿಎಫ್‌ಗೆ ಅಧಿಕಾರ ನೀಡಿದೆ. ದೇಶದೆಲ್ಲೆಡೆ ಹಿನ್ನಡೆ ಕಾಣುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಕೇರಳದ ಈ ಗೆಲುವು ತುಸು ನೆಮ್ಮದಿ ನೀಡಬಹುದು. ಆದರೆ ಬಿಜೆಪಿ ಕೇರಳದಲ್ಲಿ ತನ್ನ ನಿರೀಕ್ಷೆಯನ್ನು ಉಳಿಸಿಕೊಳ್ಳದೆ ತುಸು ನಿರಾಶೆ ಅನುಭವಿಸಿದೆ. ಕೇರಳದಲ್ಲಿ ಬಿಜೆಪಿ ಕ್ರಮಿಸಬೇಕಾದ ಹಾದಿ ಇನ್ನೂ ಬಹಳಷ್ಟಿದೆ ಎಂಬುದು ಇದರಿಂದ ನಿಚ್ಚಳವಾಗಿದೆ.

ಮೂರು ರಾಜ್ಯಗಳು 'ಆಡಳಿತ ವಿರೋಧಿ ಅಲೆ'ಯನ್ನು ತೆರೆದಿಟ್ಟಿದ್ದರೆ, ಬಿಜೆಪಿ ಆಳ್ವಿಕೆಯ ಅಸ್ಸಾಂ ಮತ್ತು ಪುದುಚೇರಿಗಳು ಇದಕ್ಕೆ ವಿರುದ್ಧವಾಗಿ ಕಾರ್ಯಾಚರಿಸಿವೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಅವರ ಸಮರ್ಥ ನೇತೃತ್ವದಲ್ಲಿ ಬಿಜೆಪಿ ಸತತ ಮೂರನೇ ಅವಧಿಗೆ ಅಧಿಕಾರಕ್ಕೇರಿದೆ. ಅವರು ನೀಡಿದ ಉತ್ತಮ ಆಡಳಿತ, ಜನಮೆಚ್ಚುಗೆಯ ಕಾರ್ಯಕ್ರಮಗಳು, ಅಕ್ರಮ ನುಸುಳುಕೋರರ ವಿರುದ್ಧ ಅವರು ತಳೆದಿರುವ ಕಠಿಣ ನಿಲುವುಗಳು ಅವರನ್ನು ಜನಪ್ರಿಯ ನಾಯಕನನ್ನಾಗಿಸಿವೆ. ಹಾಗಾಗಿ ಭಾರೀ ಬಹುಮತದಿಂದಲೇ ಜನರು ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತಂದಿದ್ದಾರೆ. ಪುದುಚೇರಿಯಲ್ಲಿ ಕೂಡಾ ಬಿಜೆಪಿ ನೀಡಿದ ಸುಶಾಸನವು ಅದನ್ನು ಮತ್ತೆ ಅಧಿಕಾರಕ್ಕೇರಿಸುವಲ್ಲಿ ಸಫಲವಾಗಿದೆ.

ಒಂದಂತೂ ನಿಜ, ಭಾರತದಲ್ಲಿ ಪ್ರಜಾತಂತ್ರವು ಅತ್ಯಂತ ಜೀವಂತವಾಗಿದೆ ಹಾಗೂ ಜನರು ಹೆಚ್ಚೆಚ್ಚು ಪ್ರಬುದ್ಧರಾಗುತ್ತಿದ್ದಾರೆ ಎಂಬುದನ್ನು ಈ ಚುನಾವಣಾ ಫಲಿತಾಂಶಗಳು ತೋರಿಸಿಕೊಟ್ಟಿವೆ.

ಜೀವನದಲ್ಲೂ ಎರಡನೇ ಇನ್ನಿಂಗ್ಸ್ ಇದೆ...ನೆನಪಿರಲಿ


ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ತೊಂಬತ್ತರ ದಶಕದ ಭಾರತವನ್ನು ನೋಡಿದವರಿಗೆ ರೇಡಿಯೋ, ದೂರದರ್ಶನ, ಅಂಬಾಸೆಡರ್ ಕಾರು, ಅಟ್ಲಾಸ್ ಸೈಕಲ್, ಟೇಪ್ ರೆಕಾರ್ಡರು, ಟ್ರಿಂಗ್‌ಟ್ರಿಂಗ್ ಟೆಲಿಫೋನ್, ಗೋಲಿಯಾಟ ಮುಂತಾದ ಸವಿನೆನಪುಗಳೊಂದಿಗೆ ಬಜಾಜ್ ಚೇತಕ್ ಸ್ಕೂಟರ್ ಕೂಡಾ ಅಚ್ಚಾಗಿರುತ್ತದೆ. ಶ್ರೀಮಂತರು ಎಂದರೆ ಕಾರು ಮತ್ತು ಬೈಕಿರುವವರು ಎಂದ ಮಾತು ಚಾಲ್ತಿಯಲ್ಲಿದ್ದ ಕಾಲದ ಈ ಚೇತಕ್ ಸ್ಕೂಟರ್ ಭಾರತದ ಮಧ್ಯಮವರ್ಗದ ಅತ್ಯುತ್ತಮ ಪ್ರತಿನಿಧಿಯೆನ್ನಬಹುದು. ರಜಪೂತ ರಾಜ ಮಹಾರಾಣಾ ಪ್ರತಾಪನ ಕುದುರೆಯ ಹೆಸರಿಟ್ಟುಕೊಂಡು 1972ರಲ್ಲಿ ರಸ್ತೆಗಿಳಿದ ಈ ಚೇತಕ್ ಸ್ಕೂಟರ್ ಭಾರತದ ಅತ್ಯಂತ ಜನಪ್ರಿಯ ಸ್ಕೂಟರ್ ಆಗಿದ್ದು ಮಾತ್ರವಲ್ಲ, ಭಾರತದ ಅತ್ಯಂತ ಮೌಲ್ಯಯುತ ಬ್ರಾಂಡ್ ಕೂಡ ಆಗಿತ್ತು. ಇದಕ್ಕೂ ಮುಂಚೆ 1950ರ ಆಸುಪಾಸಿನಲ್ಲಿ ಆಟೋಮೊಬೈಲ್ ಪ್ರಾಡಕ್ಟ್ಸ್ ಆಫ್ ಇಂಡಿಯಾ (API) ಇಟಲಿಯಿಂದ ಆಮದು ಮಾಡಿ ಮಾರುತ್ತಿದ್ದ ಲ್ಯಾಂಬ್ರೆಟ್ಟಾ, ಭಾರತದ ಮೊತ್ತಮೊದಲ ಸ್ಕೂಟರ್ ಆಗಿತ್ತು. ಬಜಾಜ್ ಕೂಡ 1960ರಲ್ಲಿ ಇಟಾಲಿಯನ್ ಕಂಪನಿ ಪಿಯಾಜ್ಜಿಯೋದ ಸಹಯೋಗದಲ್ಲಿ ವೆಸ್ಪಾ ಸ್ಕೂಟರುಗಳನ್ನು ಮಾರುತ್ತಿದ್ದ ಕಂಪನಿಯೇ. 1972ರಲ್ಲಿ ಈ ಪಾಲುದಾರಿಕೆ ಕೊನೆಯಾಗಿ, ಬಜಾಜ್ ತನ್ನದೇ ಆದ ಎಂಜಿನ್ ತಯಾರಿಸಿ, ಚೇತಕ್ ಅನ್ನು ಸಂಪೂರ್ಣವಾಗಿ ಭಾರತದಲ್ಲೇ ತಯಾರಾದ ಮೊತ್ತಮೊದಲ ಸ್ಕೂಟರ್ ಎನಿಸಿದರು.

ಜಾಗತಿಕವಾಗಿ ನೋಡಿದರೆ, ಈ ಸ್ಕೂಟರಿನ ಜನಕರು ಜರ್ಮನ್ನರು. 1817ರಲ್ಲೇ ಜರ್ಮನ್ನರು Laufmaschine (ಜರ್ಮನ್ ಭಾಷೆಯಲ್ಲಿ 'ಓಡುವ ಮಶೀನ್' ಎಂದೇ ಇದರರ್ಥ) ಎಂಬ ಹೆಸರಿನ ಮೊಪೆಡ್ ಒಂದನ್ನು ತಯಾರಿಸಿದ್ದರು. ಒಂದುನೂರು ವರ್ಷದ ಬಳಿಕ ಇದರ ಸುಧಾರಿತ ಮಾಡೆಲ್ ಆದ ಆಟೋಪೆಡ್ ಅನ್ನು ಅಮೇರಿಕನ್ನರು ಮಾರುಕಟ್ಟೆಗೆ ಬಿಟ್ಟರು. ಆಗಿನ್ನೂ ಜನಪ್ರಿಯವಾಗುತ್ತಿದ್ದ ಮೋಟಾರುಕಾರುಗಳ ಹುಚ್ಚಿನಲ್ಲಿದ್ದ ಅಮೇರಿಕಾದಲ್ಲಿ ಇದು ಹೆಚ್ಚೇನೂ ಜನಪ್ರಿಯವಾಗಲಿಲ್ಲವಾದರೂ, ಕಾರು ಕೊಳ್ಳಲಾಗದ ಕೆಳಮಧ್ಯಮ ವರ್ಗಕ್ಕೆ ಈ ಆಟೋಪೆಡ್ ಸ್ವಲ್ಪ ಹಿಡಿಸಿತು. ಆದರೆ ಈ ಲಾವುಫ್ಮಶೀನ್ ಆಗಲೀ, ಆಟೋಪೆಡ್ ಆಗಲೀ ನಾವು ನೀವು ಕಲ್ಪಿಸಿಕೊಳ್ಳುವ ಸ್ಕೂಟರುಗಳ ರೀತಿ ಇರಲೇ ಇಲ್ಲ. ಬದಲಿಗೆ ಹಿಡಿದುಕೊಳ್ಳಲೊಂದು ಹ್ಯಾಂಡಲ್ಲು, ನಿಲ್ಲಲಿಕ್ಕೊಂದು ಮಣೆಯಂತದ್ದು ಮಾತ್ರ ಇತ್ತು. ಹೆಚ್ಚೂಕಮ್ಮಿ ಇಂದಿನ ಎಲೆಕ್ಟ್ರಿಕ್ ಸೆಗ್‌-ವೇಗಳ ತರ ಇದ್ದವು. 1946ರಲ್ಲಿ ವೆಸ್ಪಾ ಬರುವವರೆಗೂ ಸ್ಕೂಟರುಗಳೇನೂ ಜಗತ್ತಿಗೆ ಅಷ್ಟೊಂದು ಇಷ್ಟವಾದ ಸಾರಿಗೆಯ ವಿಧಾನವೂ ಆಗಿರಲಿಲ್ಲ. ರಸ್ತೆಯ ಮೇಲೆ ಕಾರುಗಳೇ ರಾಜರಾಗಿದ್ದ ಕಾಲದಲ್ಲಿ, ಹಳ್ಳಿಯಿಂದ ಹಳ್ಳಿಗಳ ನಡುವಿನ ಸಣ್ಣ ಪ್ರಯಾಣಗಳಿಗೆ ಹಾಗೂ ನಗರದ ಒಳಗೇ ಪ್ರಯಾಣಿಸಲಿಕ್ಕೆಂದು ಬಂದ ವೆಸ್ಪಾ ಸ್ಕೂಟರ್ ಜಗತ್ತಿನಲ್ಲಿ ಚೆಂದದೊಂದು ಸಣ್ಣನೆಯ ಬಿರುಗಾಳಿಯನ್ನೆಬ್ಬಿಸಿತು.

ತಮಾಷೆಯ ವಿಷಯವೆಂದರೆ ಇದನ್ನು ಕಂಡುಹಿಡಿದ ಹಾಗೂ ವಿನ್ಯಾಸಗೊಳಿಸಿದ ವ್ಯಕ್ತಿಗೆ ಸ್ಕೂಟರುಗಳ ಬಗ್ಗೆ ಏನೇನೂ ಗೊತ್ತಿರಲಿಲ್ಲ ಹಾಗು ಸ್ಕೂಟರುಗಳ ಬಗ್ಗೆ ಅಷ್ಟೇನೂ ಆಸ್ಥೆಯುಳ್ಳವನೂ ಆಗಿರಲಿಲ್ಲ. ಕೊರ್ರಾಡಿನೋ ಡ'ಎಸ್ಕಾನಿಯೋ ಎಂಬ ಈ ವ್ಯಕ್ತಿ ಮೂಲತಃ ವಿಮಾನಗಳ ಎಂಜಿನಿಯರ್ ಆಗಿದ್ದವ. ಹಲವಾರು ಹೆಲಿಕಾಪ್ಟರುಗಳನ್ನೂ, ಕೆಲ ಸಣ್ಣ ವಿಮಾನಗಳನ್ನೂ ವಿನ್ಯಾಸಗೊಳಿಸಿದವ. ಎರಡನೇ ಮಹಾಯುದ್ಧದ ಕಾಲದ ಇಟಲಿಯ ಮಟ್ಟಿಗೆ ಇವ ರೈಟ್ ಸಹೋದರ ಸಮಾನನೆಂದೇ



ಆಟೋಪೆಡ್



ವೆಸ್ಪಾ

ಹೇಳಬಹುದು. ಆತ ಕೆಲಸ ಮಾಡುತ್ತಿದ್ದ ಕಂಪನಿ ಪಿಯಾಜ್ಜಿಯೋ ಕೂಡ ಮೂಲತಃ ರೈಲು ಮತ್ತು ವಿಮಾನಗಳ ವಿನ್ಯಾಸ ಮತ್ತು ಎಂಜಿನ್ ಮತ್ತಿತ್ಯಾದಿ ಭಾಗಗಳನ್ನು ತಯಾರಿಸುತ್ತಿದ್ದ ಕಂಪನಿಯೇ ಆಗಿದ್ದದ್ದು. ಆದರೆ ಎರಡನೇ ಮಹಾಯುದ್ಧದ ಬಳಿಕ, ಇಟಲಿಯ ಎಲ್ಲಾ ಕೈಗಾರಿಕೆಗಳೂ ದಿವಾಳಿಯೆದ್ದು ಸ್ಥಗಿತಗೊಂಡಿದ್ದವು. ಮಾತ್ರವಲ್ಲದೇ ಜರ್ಮನಿಯ ಸ್ನೇಹಿತನಾಗಿದ್ದ ಕಾರಣ ಇಟಲಿಯ ಮೇಲೆ ಮಿತ್ರರಾಷ್ಟ್ರಗಳು ಹಲವಾರು ನಿರ್ಬಂಧಗಳನ್ನೂ ಹೇರಿದ್ದರಿಂದ ಪಿಯಾಜ್ಜಿಯೋ ಬಳಿ ಬೇರೇನೂ ಕೆಲಸಗಳೂ ಇರಲಿಲ್ಲ. ಆ ನಿರ್ಬಂಧಗಳಲ್ಲೊಂದು 'ನೀವಿನ್ನು ವಿಮಾನಗಳನ್ನು ತಯಾರಿಸುವಂತಿಲ್ಲ' ಎಂಬುದೂ ಆಗಿತ್ತು. ಮಾತ್ರವಲ್ಲದೇ ಯುದ್ಧಕಾಲದಲ್ಲಿ ಪಿಯಾಜ್ಜಿಯೋದ ಹಲವಾರು ಫ್ಯಾಕ್ಟರಿಗಳು ಮಿತ್ರರಾಷ್ಟ್ರಗಳ ವಿಮಾನಧಾಳಿಗೆ ಬಲಿಯಾಗಿದ್ದವು. ಆದರೆ ನೂರಾರು ಜನರಿಗೆ ಕೆಲಸ ಕೊಟ್ಟಿದ್ದ ಕಂಪನಿಯ ವ್ಯವಹಾರ ಹೇಗಾದರೂ ಮುಂದುವರಿಯಬೇಕಲ್ಲ, ಇದ್ದಬದ್ದ ಸಂಪನ್ಮೂಲಗಳನ್ನೆಲ್ಲಾ ಕ್ರೋಡೀಕರಿಸಿ ನಾವು ಮುಂದೇನು ಮಾಡಬಹುದು ಎಂದು ಯೋಚಿಸಿದ ಕಂಪನಿಯ ಆಡಳಿತಮಂಡಳಿಗೆ ಹೊಳೆದದ್ದು, ಆರ್ಥಿಕವಾಗಿ ಅತ್ಯಂತ ಕಡಿಮೆ ಬಂಡವಾಳ ಬೇಕಿದ್ದ ಹಾಗೂ ಮಾರಾಟ ಅಥವಾ ದಿವಾಳಿಯ ರಿಸ್ಕ್ ಅತ್ಯಂತ ಕಡಿಮೆಯಿದ್ದ ಸಣ್ಣದೊಂದು ಸ್ಕೂಟರಿನ ತಯಾರಿಕೆಯ ಆಲೋಚನೆ. ಫೆರಾರಿ, ಲ್ಯಾಂಬೋರ್ಗಿನಿ, ಅಲ್ಫಾ ರೋಮಿಯೋ ಎಲ್ಲರದ್ದೂ ಕಾರಿನ ವ್ಯವಹಾರ ಇಳಿಮುಖವಾಗಿದ್ದ ಕಾಲದಲ್ಲಿ, ಪಿಯಾಜ್ಜಿಯೋ ತನ್ನ ಎಂಜಿನಿಯರುಗಳಿಗೆ ಸ್ಕೂಟರ್ ಒಂದನ್ನು ವಿನ್ಯಾಸಗೊಳಿಸುವ ಕೆಲಸ ಕೊಟ್ಟೇಬಿಟ್ಟಿತು.

ಡ'ಎಸ್ಕಾನಿಯೋ ಸ್ವತಃ ಕಾರಿನಲ್ಲೇ ಕೆಲಸಕ್ಕೆ ಬರುತ್ತಿದ್ದರೂ ಯುದ್ಧದ ಬಳಿಕ ರಸ್ತೆಗಳೆಲ್ಲಾ ಬಾಂಬ್, ಶೆಲ್ ಇತ್ಯಾದಿಗಳಿಂದಾಗಿ ಹೊಂಡಬಿದ್ದದ್ದನ್ನು ಗಮನಿಸಿ, ತನ್ನ ಸ್ಕೂಟರ್ ಅನ್ನು ವಿನ್ಯಾಸಗೊಳಿಸುವಾಗ, ಅಂದಿನ ಬೈಕುಗಳಂತೆ ಆಚೀಚೆ ಕಾಲುಹಾಕಿ ಕೂರುವ ಬದಲು, ಎರಡೂ ಕಾಲನ್ನು ಮುಂದೆಯೇ ಇಟ್ಟುಕೂರುವಂತೆ ಒಂದು ಚೇದಿಕೆಯನ್ನೂ, ಅದರ ಮುಂದೆ ಒಂದು ಅಗಲವಾದ ಗುರಾಣಿಯಂಥ ವಿನ್ಯಾಸದಿಂದ ಪ್ರಾರಂಭಿಸಿದ. ಇದರಿಂದಾಗಿ ಸ್ಕೂಟರ್ ಚಾಲಕರ ಪ್ಯಾಂಟು ಹಾಗೂ ಸ್ಕರ್ಟುಗಳ ಮೇಲೆ ಕೊಚ್ಚೆ ಮಣ್ಣು ಹಾರುವುದು ತಪ್ಪಿತು. ಈ ಗುರಾಣಿಗೆ ಅವನು ಕೊಟ್ಟ ಹೆಸರೇ ಮಡ್‌-ಗಾರ್ಡ್. ಕಾಲನ್ನು ಮುಂದಿಟ್ಟು ಕೂತಾಗ ಎಂಜಿನ್ ಎಲ್ಲಿಡಬೇಕು? ಹಾಗಾಗಿ ಈ ವಿನ್ಯಾಸದಲ್ಲಿ ಎಂಜಿನ್ ಹಿಂದಕ್ಕೆ ಹೋಯಿತು. ಈ ಹೊಂಡಬಿದ್ದ ರಸ್ತೆಗಳಲ್ಲಿ ತನ್ನದೇ ಕಾರುಗಳ ಟೈರುಗಳು ಆಗಾಗ ಕೈಕೊಡುವುದನ್ನು ಗಮನಿಸಿ, ಸದಾ ಒಂದು ಟೈರು ಜೊತೆಯೇ ಇರುವಂತೆ ಆಲೋಚಿಸಿ, ಹಿಂದಿನ ಸೀಟಿನ ಕೊನೆಯಲ್ಲಿ ಒಂದು ಎಕ್ಸ್ಟ್ರಾ ಟೈರನ್ನೂ ಕೂರಿಸಲಾಯ್ತು. ಹಿಂದಿನಿಂದ ಸ್ವಲ್ಪ ಅಗಲವಾಗಿ, ಮಧ್ಯದಲ್ಲಿ ಚಿಕ್ಕದಾಗಿದ್ದು, ಕರ್‌ರ್ ಎಂದು ಶಬ್ದ ಮಾಡುವ ಎರಡು ಸ್ಟ್ರೋಕಿನ ಎಂಜಿನ್ ಉಳ್ಳ ಈ ವಾಹನಕ್ಕೆ ಕಣಜದ ಹುಳ(wasp)ದ್ದೇ ಈ ಮೂರೂ ಗುಣಗಳಿದ್ದದ್ದರಿಂದ, ಇಟಾಲಿಯನ್ ಭಾಷೆಯಲ್ಲಿ ಕಣಜಕ್ಕಿದ್ದ ಪದವಾದ ವೆಸ್ಪಾ ಎಂದೇ ಹೆಸರಿಡಲಾಯ್ತು.

ಈ ಸಣ್ಣ ಬದಲಾವಣೆಗಳಿಂದಾಗಿ ವಿನ್ಯಾಸವಾದ ಈ ಸ್ಕೂಟರ್, ಅಂದಿನ ಜನರಿಗೆ ಆಕರ್ಷಕವಾಗಿ ಕಂಡಿದ್ದು ಮಾತ್ರವಲ್ಲ, ಆರ್ಥಿವಾಗಿ ಕೂಡ ಕೈಗೆಟುವವಂತಿತ್ತು. ಒಂದೇ ವರ್ಷದಲ್ಲಿ ಪಿಯಾಜ್ಜಿಯೋದ ವೆಸ್ಪಾ ಇಟಲಿಯ ಬೀದಿಬೀದಿಗಳಲ್ಲಿ ಕಾಣಲಾರಂಭಿಸಿತು. ವಿಮಾನ ತಯಾರಿಸುವ ಕಂಪನಿಯೊಂದು, ಯುದ್ಧದ ಅನಿವಾರ್ಯತೆಗಳಿಂದಾಗಿ ಸ್ಕೂಟರ್ ಕಂಪನಿಯಾಗಿ ಬದಲಾಗಿದ್ದು ಮಾತ್ರವಲ್ಲದೇ, ಜಗತ್ತಿಗೆ ಒಂದು ಅತ್ಯಂತ ಜನಪ್ರಿಯ ವಾಹನವನ್ನು ಕೊಟ್ಟಿತು. ವಿಮಾನದ ಕಂಪನಿಯಾಗಿ ಪಡೆದಿದ್ದ ಪ್ರಸಿದ್ಧಿ ಹಾಗೂ ಆರ್ಥಿಕ ಸಫಲತೆಗಿಂಥ ಹೆಚ್ಚನ್ನು, ಈ ಎರಡನೇ ಇನ್ನಿಂಗ್ಸಿನಲ್ಲಿ ಗಳಿಸಿತು.

ಇದು ಪಿಯಾಜ್ಜಿಯೋ ಒಂದರ ಕಥೆ ಮಾತ್ರವಲ್ಲ, ಜಪಾನಿನ ವಿಮಾನ ತಯಾರಿಕಾ ಕಂಪನಿಯಾಗಿದ್ದ ಕವಾನಿಶಿಯದ್ದು ಕೂಡ ಇದೇ ಕತೆ. ವಿಮಾನಗಳನ್ನು ತಯಾರಿಸಲು ಸಾಧ್ಯವಾಗದೇ, ಕವಾನಿಶಿ ಕೂಡ ಸ್ಕೂಟರ್ ಮತ್ತು ಬೈಕುಗಳ ತಯಾರಿಕೆಗೆ ಇಳಿದು, ಜಗತ್ತಿಗೆ ಸೂಪರ್ ಲಾಸ್ಸೀ ಮೋಟರ್ ಸೈಕಲ್ ಅನ್ನು ಕೊಟ್ಟಿತು. ನಾವು ನೀವು ಇವತ್ತು ಬಳಸುವ ಬೈಕುಗಳಲ್ಲಿ ಮುಂದೆ ಕಂಡುಬರುವ ಫ್ಯೂಯಲ್ ಟ್ಯಾಂಕ್ ವಿನ್ಯಾಸ ಏನಿದೆ, ಅದು ಸೂಪರ್ ಲಾಸ್ಸೀಯ ಕೊಡುಗೆ. ವಿಮಾನಗಳಲ್ಲಿ ಕಂಡುಬರುವ ಸಂಯೋಜಿತ ವಿನ್ಯಾಸದ (integrated design) ತತ್ವಗಳು, ಕವಾನಿಶಿಯಿಂದಾಗಿ ಸಾಮಾನ್ಯ ಬೈಕುಗಳಿಗೂ ಬಂದಿಳಿಯಿತು. ಜಗತ್ತಿಗೆ ಮೊತ್ತಮೊದಲ ಜೆಟ್ ಪ್ರೊಪಲ್ಷನ್ ವಿಮಾನವನ್ನೂ, ಜಗತ್ತಿನ ಮೊತ್ತಮೊದಲ ದ್ರವ ಇಂಧನ ಚಾಲಿತ ರಾಕೆಟ್ ವಿಮಾನವನ್ನೂ ಕೊಟ್ಟ ಜರ್ಮನ್ ಕಂಪನಿಯಾದ ಹೈನ್ಕೆಲ್‌ನದ್ದೂ ಇದೇ ಕಥೆ. ವಿಮಾನದ ವ್ಯವಹಾರಗಳನ್ನು ಮಾಡುವಂತಿಲ್ಲ ಎಂಬ ಆಜ್ಞೆಯಿಂದಾಗಿ, ಹೈನ್ಕೆಲ್ ವೆಸ್ಪಾದ್ದೇ ಇನ್ನೊಂದು ರೂಪವಾದ (ಅಷ್ಟೇನೂ ಚೆಂದವಿಲ್ಲದ) ಹೈನ್ಕೆಲ್ ಟೂರಿಸ್ಟ್ ಎನ್ನುವ ಸ್ಕೂಟರ್ ಅನ್ನು ಜರ್ಮನಿಯಲ್ಲಿ ಬಿಡುಗಡೆ ಮಾಡಿದರು. ಹೈನ್ಕೆಲ್ ಬಬಲ್ ಎಂಬ ಕಾರು ಕೂಡ ಮಾರುಕಟ್ಟೆಗೆ ಬಂದಿಳಿಯಿತು.

ಹೀಗೆ, ಹಲವಾರು ಕಂಪನಿಗಳು ಪರಿಸ್ಥಿತಿಯ ಒತ್ತಡದಿಂದ ಮುಚ್ಚುವ ನಿರ್ಧಾರಕ್ಕೆ ಮುಂದಾದರೆ, ತಮಗಿದ್ದ ಜ್ಞಾನವನ್ನೇ ಬಳಸಿಕೊಂಡು ಸಣ್ಣಮಟ್ಟಿನ ಬದಲಾವಣೆಗಳಿಂದ ಎರಡನೇ ಜೀವಪಡೆದು ಮುಂದುವರೆದು ಸಫಲತೆ ಕಂಡಿವೆ. ಮಹಾಯುದ್ಧವನ್ನೇ ಎದುರಿಸಿ ಬದುಕಿಳಿದು ಪಿಯಾಜ್ಜಿಯೋ ವೆಸ್ಪಾವನ್ನು ತಯಾರಿಸಬಹುದಾದರೆ, ನಮ್ಮ ನಿಮ್ಮ ಕಷ್ಟಗಳನ್ನೂ ನಾವು ಎದುರಿಸಿ ನಿಂತು ಗೆಲ್ಲಲಾರೆವೇ? ಒಮ್ಮೆ ಯೋಚಿಸಿ ನೋಡಿ.

ಹೋರಾಟಕ್ಕೆ ಹೆಸರಾದ ಅಮೃತ್‌ಮಹಲ್ ತಳಿ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಅಮೃತ್ ಮಹಲ್ ಈ ದೇಶ ಕಂಡ ಗೋತಳಿಗಳಲ್ಲೇ ಅತ್ಯಂತ ಪ್ರಸಿದ್ಧ ಹಾಗೂ ಐತಿಹಾಸಿಕ ತಳಿಯಾಗಿದೆ. ಈ ತಳಿ ಪ್ರಸಿದ್ಧಿ ಪಡೆದಿದ್ದೇ ತನ್ನ ಹೋರಾಟ ಮನೋಭಾವದಿಂದ ಎಂದರೆ ತಪ್ಪಾಗಲಾರದು. ಎಷ್ಟರ ಮಟ್ಟಿಗೆ ಎಂದರೆ ಯುದ್ಧಗಳಲ್ಲಿ ಇದರ ಹಿಂಡನ್ನು ಕಂಡರೇನೆ ಶತ್ರು ಸೈನ್ಯ ದಿಕ್ಕಾಪಾಲಾಗಿ ಓಡುತ್ತಿತ್ತು. ಹೀಗೆ ತನ್ನ ಕೆಚ್ಚೆದೆಯ ಕಿಚ್ಚಿನಿಂದಲೇ ಗೆಲುವು ತಂದುಕೊಡುತ್ತಿದ್ದ ಈ ತಳಿಗಳನ್ನು 'ವಾರಿಯರ್ ಬ್ರೀಡ್ಸ್' ಎಂಬುದಾಗಿಯೂ ಕರೆಯುತ್ತಿದ್ದರು. ದಣಿವಿಲ್ಲದೆ ಸತತ 16 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡುವ ಶಕ್ತಿಯನ್ನು ಹೊಂದಿರುವ ಇವುಗಳು ಪ್ರಪಂಚದಲ್ಲೇ ಏಕೈಕ ಕೆಲಸಗಾರ ಮತ್ತು ಹೋರಾಟದ ತಳಿ ಎಂಬ ಪ್ರಶಂಸೆಗೂ ಪಾತ್ರವಾಗಿವೆ. ಪ್ರಪಂಚದಲ್ಲೇ ಮೊಟ್ಟ ಮೊದಲು ಅಭಿವೃದ್ಧಿ ಪಡಿಸಲಾದ ದನದ ತಳಿ ಎಂಬ ಹೆಗ್ಗಳಿಕೆ ಸಹ ಇದರದ್ದು. ಇಂಗ್ಲೆಂಡಿನಲ್ಲಿ ಅತ್ಯಂತ ಹಳೆಯ ತಳಿಯೆಂದು ಗುರುತಿಸಲ್ಪಡುವ 'ಶಾರ್ಟ್ ಹಾರ್ನ್' ಗಿಂತ ಮೊದಲೇ ಈ ತಳಿಯನ್ನು ಇಲ್ಲಿ ಅಭಿವೃದ್ಧಿಪಡಿಸಲಾಗಿತ್ತು ಎಂಬುದನ್ನು ದಾಖಲೆಗಳು ದೃಢಪಡಿಸುತ್ತವೆ. ಹಿಂದೆ ಈ ತಳಿ ಹಾಲು ಕೊಡುವುದಕ್ಕೂ ಮತ್ತು ಹೊಲ ಉಳುವುದಕ್ಕೂ ಸೈ ಎನಿಸಿಕೊಂಡಿತ್ತು. ಇಂದು ಕೇವಲ ಮೂರ್ನಾಲ್ಕು ಲೀಟರ್ ಹಾಲನ್ನು ನೀಡುವ ಈ ತಳಿ ಒಂದೆರಡು ದಶಮಾನಗಳ ಹಿಂದೆ ಸುಮಾರು 15 ರಿಂದ 16 ಲೀಟರ್ ಹಾಲನ್ನು ನೀಡುತ್ತಿದ್ದುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಒಂದರ್ಥದಲ್ಲಿ ಈ ತಳಿಗಳನ್ನು ಭಾವನಾ ಜೀವಿಗಳು ಎಂಬುದಾಗಿ ಹೇಳಲಾಗುತ್ತದೆ.

ಕ್ರಿ.ಶ. 1572 ರಿಂದ 1600ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಯಭಾರಿ ತಮ್ಮ ಆಡಳಿತದ ಸುಭದ್ರತೆ, ಸುರಕ್ಷಣೆ ಮತ್ತು ಅನುಕೂಲಕ್ಕಾಗಿ ವಿಜಯನಗರದ ಕರುಹಟ್ಟಿ ಎಂಬಲ್ಲಿಂದ ಕೆಲವು ಉತ್ತಮ ದನಗಳ ಹಿಂಡನ್ನು ತರಿಸಿಕೊಂಡರು. ನಂತರ ಆ ದನಗಳು ಆಗ ಮೈಸೂರಿನಲ್ಲಿದ್ದ ಸ್ಥಳೀಯ ದನಗಳೊಂದಿಗೆ ಸೇರಿ ಅವುಗಳಿಂದ ಉತ್ಪನ್ನವಾದ ಪೀಳಿಗೆಯೇ ಇಂದು ಲೋಕ ಪ್ರಸಿದ್ಧವಾದ ಅಮೃತಮಹಲ್ ದನಗಳು ಎಂಬುದು ಮೈಸೂರಿನ ಚರಿತ್ರೆಯಿಂದ ತಿಳಿದುಬರುತ್ತದೆ. ತನ್ನ ಸದೃಢದೇಹ, ಬಿಗುವಾದ ಮೈಕಟ್ಟು, ಚೂಪಾದ ಕೊಂಬು, ತೀಕ್ಷ್ಣವಾದ ನೋಟದಿಂದಲೇ ನೋಡುವವರ ಎದೆ ನಡುಗಿಸುವ ತಾಕತ್ತನ್ನು ಹೊಂದಿರುವ ಇವುಗಳು ದೇಶದಲ್ಲಿರುವ ಸಾಕಷ್ಟು ಗೋತಳಿಗಳಲ್ಲಿಯೇ ವಿಶೇಷವಾಗಿ ಕಂಡುಬರುತ್ತವೆ. ಸಾಕಿದವರನ್ನು ಬಿಟ್ಟು ಬೇರೆ ಯಾರೇ ಇವುಗಳ ಹತ್ತಿರ ಸುಳಿಯುವುದಕ್ಕೂ ಒಂದು ಕ್ಷಣ ಯೋಚಿಸಬೇಕಾದ ಇವುಗಳಿಗೆ ನೆನೆಪಿನ ಶಕ್ತಿ ಹೆಚ್ಚು.

ಇಂತಹ ಅಮೃತ್‌ಮಹಲ್ ದನಗಳಿಗೆ ಸಂಬಂಧಿಸಿದಂತೆ ಸಾಕಷ್ಟು ರೋಚಕ ಕಥೆಗಳಿವೆ. ಕಾಡಿಗೆ ಮೇಯುವುದಕ್ಕೆ ಹೋಗಿ ಹಿಂತಿರುಗಿ ಬರುವಾಗ ತಮ್ಮ ಕೊಂಬಿಗೆ ಹುಲಿ ಅಥವಾ ಚಿರತೆಯನ್ನು ಸಿಕ್ಕಿಸಿಕೊಂಡು ಬರುತ್ತಿದ್ದವು ಎಂದೆಲ್ಲಾ ಬಣ್ಣಿಸಲಾಗುತ್ತದೆ. ಯಾವುದೇ ಕ್ರೂರ ಪ್ರಾಣಿಗಳೂ ಇವನ್ನು ಸುಲಭದ ತುತ್ತಾಗಿಸುವುದು ಸಾಧ್ಯವಿರಲಿಲ್ಲ. ಮನೆಯಲ್ಲಿ ಒಂದು ನಾಯಿಗಿಂತ ಹೆಚ್ಚಿನ ಪೌರುಷದ ಕೆಲಸವನ್ನು ಈ ತಳಿಗಳೇ ನಿರ್ವಹಿಸುತ್ತಿದ್ದವು. ಇಂತಹ ಪೌರುಷ ಮತ್ತು ತಾಕತ್ತನ್ನು ನೋಡಿಯೇ ರಾಜ ಮಹಾರಾಜರು ಈ ತಳಿಗಳನ್ನು ಅರಮನೆಯಲ್ಲಿ ಸಾಕಿಕೊಳ್ಳುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ ಇವುಗಳದ್ದೇ ಒಂದು ಪ್ರತ್ಯೇಕ ಸೈನ್ಯವನ್ನೇ ಯುದ್ಧಕ್ಕೆ ಸಿದ್ಧಗೊಳಿಸಿಡುತ್ತಿದ್ದರು. ಯುದ್ಧದ ಸಮಯದಲ್ಲಿ ಇವುಗಳ ಹಿಂಡನ್ನು ವೈರಿ ಪಡೆಯ ಮೇಲೆ ನುಗ್ಗಿಸಿದರೆ ಸಾಕು, ಎದುರಿಗೆ ಸಿಕ್ಕ ಸಿಕ್ಕವರನ್ನೆಲ್ಲಾ ಧ್ವಂಸಗೊಳಿಸಿಕೊಂಡು ಮುಂದೆ ನುಗ್ಗುತ್ತಿದ್ದವು. ಹೀಗೆ ನಷ್ಟಗೊಂಡ ಎದುರಾಳಿಗಳನ್ನು ನಂತರ ಹಿಂದೆ ಬರುವ ಸೈನಿಕರು ಸುಲಭವಾಗಿ ಸಂಹಾರ ಮಾಡುತ್ತಿದ್ದರು. ಕೆಲವೊಮ್ಮೆ ರಾತ್ರಿ ವೇಳೆ ಇವುಗಳ ಕೊಂಬಿಗೆ ಉರಿಯುತ್ತಿರುವ ಪಂಜುಗಳನ್ನು ಕಟ್ಟಿ ವೈರಿ ಪಾಳಯಗಳ ಮೇಲೆ ಓಡಿಸಲಾಗುತ್ತಿತ್ತು. ಹೇಗೆಂದರೆ ಹಾಗೆ ಇವುಗಳು ಓಡುವ ಮೂಲಕ ಅಲ್ಲಿದ್ದ ಸೈನಿಕರ ದಿಕ್ಕನ್ನೇ ತಪ್ಪಿಸುತ್ತಿದ್ದವು. ಅಕಸ್ಮಾತ್ ಉಂಟಾಗುತ್ತಿದ್ದ ಈ ಘಟನೆಯಿಂದ ಶತ್ರು ಪಾಳಯ ತಬ್ಬಿಬ್ಬಾಗಿ ಏನು ಮಾಡಬೇಕೆಂಬುದನ್ನೇ ಅರಿಯದೆ ಪಲಾಯನಗೈಯುತ್ತಿತ್ತು.

1777ರಲ್ಲಿ ಹೈದರಾಬಾದಿನ ನಿಜಾಮು ತನ್ನ ಬೃಹತ್ ಸೈನ್ಯದೊಂದಿಗೆ ಅಂದಿನ ಮೈಸೂರು ರಾಜ್ಯದ ಚಿತ್ರದುರ್ಗದ ಕೋಟೆಗೆ ಮುತ್ತಿಗೆ ಹಾಕಿದಾಗ, ಅವನ ಬಳಿ ಸರಿ ಸುಮಾರು 3000ಕ್ಕೂ ಹೆಚ್ಚು ಶಸ್ತ್ರಸಜ್ಜಿತ ಕೆಚ್ಚೆದೆಯ ಸಿಪಾಯಿಗಳು, ಬೃಹತ್ ಶಸ್ತ್ರಾಸ್ತ್ರದ ಖಜಾನೆ, ಬಲಿಷ್ಠ ಆನೆಗಳು, ಕುದುರೆ ದಳ ಮತ್ತು ಸಾಕಷ್ಟು ಅನುಭವವಿರುವ ಪದಾತಿ ದಳವೇ ಇತ್ತು. ಇಂತಹ ಅತ್ಯಂತ ಬಲಿಷ್ಠ ನಿಜಾಮನ ಸೈನ್ಯ ಇದ್ದಕ್ಕಿದ್ದಂತೆಯೇ ನಿರೀಕ್ಷಿಸಿರದ ರೀತಿಯಲ್ಲಿ ಧೂಳೀಪಟವಾಗಿ ಸೋಲೊಪ್ಪಿಕೊಂಡು ಪಲಾಯನ ಮಾಡಿಬಿಡುತ್ತದೆ. ಅದಕ್ಕೆ ಪ್ರಮುಖ ಕಾರಣ ಮೈಸೂರು ಸೈನ್ಯದಲ್ಲಿದ್ದ ಇದೇ ವಾರಿಯರ್ ಬ್ರೀಡ್‌ಗಳು. ಒಮ್ಮೆ ರಾಜನಾದ ಹೈದರಾಲಿಯ ಕೆಲವೇ ಕೆಲವು ಸೈನಿಕರು ಬೃಹತ್ ನಿಜಾಮನ ಸೈನ್ಯದ ಜೊತೆ ಕಾದಾಡುತ್ತಾ ಇನ್ನೇನು ಕಾದಾಡಲು ಸಾಧ್ಯವಾಗದೇ ಸೋಲೊಪ್ಪಿಕೊಳ್ಳುವ ಸಂದರ್ಭದಲ್ಲಿ ಹೈದರಾಲಿಗೆ ನೆನಪಾಗುವುದೇ ತನ್ನ ಮೆಚ್ಚಿನ ಈ 237 ತಳಿಗಳು. ಕೂಡಲೇ ಅವುಗಳನ್ನೇ ಆತ ರಣರಂಗಕ್ಕೆ ನುಗ್ಗಿಸುತ್ತಾನೆ. ನಂತರ ಇವು ರಣರಂಗದಲ್ಲಿ ಮಾಡಿದ್ದು ಅಚ್ಚರಿಯ ಸಾಹಸಗಾಥೆ. ಸೋಲಿನ ದವಡೆಯಿಂದ ಜಯ ತಂದುಕೊಟ್ಟಿದ್ದಷ್ಟೇ ಅಲ್ಲದೆ ನಿಜಾಮನ ಸೈನ್ಯ ಇದರ ಕೊಂಬು ಮತ್ತು ಕಾಲಿಗೆ ಸಿಕ್ಕಿ ಯಾವೊಂದು ಸೈನಿಕ ದಳದವರೂ ಮಾಡಲಾರದಷ್ಟು ನಷ್ಟವನ್ನು ಕೆಲವೇ ಕೆಲವು ತಳಿಗಳು ಮಾಡಿಬಿಟ್ಟಿದ್ದವು. ಇದೇ ದನಗಳ ಸಹಾಯದಿಂದ ಎರಡೂವರೆ ದಿನಗಳಲ್ಲಿ 100 ಮೈಲಿಗಳನ್ನು ನಡೆದು ಚಿದಂಬರಂ ಮುತ್ತಿಗೆಯನ್ನು ಬಿಡುಗಡೆ ಮಾಡಲು ಹೈದರಾಲಿಗೆ ಸಾಧ್ಯವಾಗಿತ್ತು. ಹಾಗೆಯೇ ಅಲ್ಲಿಂದ ಹಿಂದಿರುಗುವಾಗ ಈ ದನಗಳು ದೊಡ್ಡ ತೋಪಿನ ಗಾಡಿಗಳನ್ನು ಎಳೆದುಕೊಂಡು ದಿನಕ್ಕೆ 40 ಮೈಲಿಗಳ ದೂರ ಪ್ರಯಾಣ ಮಾಡಿ ಶತ್ರುಗಳಿಗೂ ಆಶ್ಚರ್ಯವನ್ನುಂಟು ಮಾಡಿದ್ದವು. ಟಿಪ್ಪು ಸುಲ್ತಾನನು ಬಿದನೂರನ್ನು ವಶಪಡಿಸಿಕೊಳ್ಳುವಾಗ ಈ ದನಗಳು 63 ಮೈಲುಗಳ ಹಾದಿಯನ್ನು ಕೇವಲ ಎರಡು ದಿನದಲ್ಲಿ ತಲುಪಿ, ಬ್ರಿಟಿಷ್ ಅಧಿಕಾರಿಯಾದ ಜನರಲ್ ಮೆಡಾಸ್ ಮುಟ್ಟುವುದಕ್ಕಿಂತ ಮುಂಚಿತವಾಗಿ ಮುಟ್ಟಿ ಟಿಪ್ಪುವಿಗೆ ಜಯವನ್ನು ತಂದುಕೊಟ್ಟಿದ್ದವು. ಈ ರೀತಿ ಹೈದರಾಲಿಯ ಯುದ್ಧಗಳಲ್ಲಿ ಸಾಕಷ್ಟು ಐತಿಹಾಸಿಕ ಜಯಗಳನ್ನು ತಂದು ಕೊಡುತ್ತಿದ್ದ ಈ ವಾರಿಯರ್ ಬ್ರೀಡ್‌ಗಳು ಆನಂತರ ಇವನ ಮಗನಾದ ಟಿಪ್ಪುವಿನ ಎಲ್ಲಾ ವಿಜಯಗಳಲ್ಲಿಯೂ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ.

ಇವುಗಳ ಚಲನ ವಲನಗಳನ್ನು ಇಂದಿಗೂ ಭಾರತ ಮತ್ತು ಪಾಕಿಸ್ತಾನದ ಯುದ್ಧದಲ್ಲಿ ಭಾರತದ ಗೆಲುವಿಗೆ ಪ್ರಮುಖ ಕಾರಣವಾದ 'ನ್ಯಾಟ್' ವಿಮಾನಗಳಿಗೆ ಹೋಲಿಸಲಾಗುತ್ತದೆ. ಕ್ರಿ.ಶ. 1914ರಿಂದ 1918ರ ಮೊದಲನೆಯ ವಿಶ್ವ ಯುದ್ಧದಲ್ಲಿ ಬಾಗ್ದಾದಿನ ದಂಡನಾಯಕರು ಮೆಸಪೊಟೋಮಿಯಾಕ್ಕೆ ಹೋದ ಈ ಅಮೃತ್‌ಮಹಲ್ ದನಗಳನ್ನು ಕಂಡು ಮೂಕವಿಸ್ಮಿತರಾಗಿದ್ದರು. ಇವುಗಳು ಒಂಟೆಗಿಂತ ವೇಗವಾಗಿ ನಡೆಯಬಲ್ಲವೆಂದೂ, ಇಕ್ಕಟ್ಟಾದ ಕಣಿವೆ ದಾರಿಗಳನ್ನು ಮತ್ತು ಸಣ್ಣ ಸಣ್ಣ ಸೇತುವೆಗಳನ್ನು ದಾಟುವಾಗ ಅತಿ ಜಾಗರೂಕತೆಯನ್ನು ಮತ್ತು ಜಾಣತನವನ್ನು ತೋರಿಸುತ್ತವೆಯೆಂದೂ ಅವರು ಪ್ರಶಂಸಿಸಿದ್ದರು. ಆಹಾರ ಅಭಾವವಿದ್ದಾಗ ಮತ್ತು ಪ್ರತಿಕೂಲ ಹವಾಮಾನದಲ್ಲೂ ಸಹ ಇವುಗಳು ಜಗ್ಗದೆ ಕುಗ್ಗದೆ ಎಂದಿನಂತೆಯೇ ಜೀವಿಸುವ ವಿಶಿಷ್ಟತೆಯನ್ನು ಹೊಂದಿವೆ ಎಂಬುದಾಗಿಯೂ ಉಲ್ಲೇಖಿಸಿದ್ದರು. 1818ರಲ್ಲಿ ಮೈಸೂರು ಕಮಿಷನರ್ ಟ್‌ರವರು ಅಮೃತ್ ಮಹಲ್ ದನಗಳ ಬಗ್ಗೆ, ಅವು ಚಾಕಚಕ್ಯತೆಯುಳ್ಳವು ಮತ್ತು ಹುರುಪಿನ ಹಾಗೂ ಸಿಟ್ಟಿನ ದನಗಳು ಎಂಬುದಾಗಿ ಹೇಳಿದ್ದುದು ಹಾಗೂ 1842ರಲ್ಲಿ ಬ್ರಿಟಿಷ್ ಅಧಿಕಾರಿಯಾಗಿದ್ದ ಕ್ಯಾಪ್ಟನ್ ಡೇವಿಸನ್, ತಮ್ಮ ಪಡೆಗೆ ಸೇರಿದ್ದ ಈ ಅಮೃತಮಹಲ್ ದನಗಳ ಬಗ್ಗೆ ಪ್ರಶಂಸಿರುವುದು ದಾಖಲಾಗಿದೆ.

ಇವುಗಳು ಅಫ್ಘಾನಿಸ್ತಾನದ ಟಿರಿಯಾ ಬೆಟ್ಟದ ಮೇಲಿನ ಕಣಿವೆ ದಾರಿಯಲ್ಲಿ ಇಳಿದು ಬರುವಾಗ ಸತತ 16 ಗಂಟೆ ನೊಗಕ್ಕೆ ಕಟ್ಟಿದರೂ ಸಹ ಸ್ವಲ್ಪವೂ ಆಯಾಸವಿಲ್ಲದೆ ಬೆಟ್ಟದಿಂದ ಕೆಳಗೆ ಇಳಿದು ಬಂದಿದ್ದವು. ಬೇರೆ ಯಾವ ಜಾತಿಯ ಎತ್ತುಗಳೂ ಇಷ್ಟು ಕಷ್ಟವನ್ನು ಸಹಿಸಲಿಲ್ಲ ಎಂಬುದು ದಾಖಲಿಸಲ್ಪಟ್ಟಿದೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅಮೃತ್‌ಮಹಲ್ ದನಗಳ ಗಟ್ಟಿತನ, ಚುರುಕುತನ, ತೀಕ್ಷ್ಣತೆ ಮತ್ತು ನಡಿಗೆಯಲ್ಲಿನ ವೇಗ, ಇವುಗಳಿಗೆ ಅಂದು ಸೇನೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ತಂದುಕೊಟ್ಟಿತ್ತು. ಸೇನೆಯ ಯುದ್ಧ ಸಾಮಗ್ರಿ, ಮದ್ದುಗುಂಡುಗಳು ಮತ್ತು ತೋಪುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ಉದ್ದೇಶಕ್ಕಾಗಿಯೇ ಹೆಚ್ಚಾಗಿ ಈ ತಳಿಗಳನ್ನು ಬಳಸಲಾಗುತ್ತಿತ್ತು. ಇದಕ್ಕೆ ಪುಷ್ಠಿ ಇಂದಿನ ಮೈಸೂರು ಮತ್ತು ಚಿತ್ರದುರ್ಗದ ಹೆದ್ದಾರಿ ಹಿಂದೊಮ್ಮೆ ಈ ಅಮೃತ್‌ಮಹಲ್ ತಳಿಗಳು ಯುದ್ಧದ ತೋಪುಗಳನ್ನು ಎಳೆದುಕೊಂಡು ಹೋದ ದಾರಿಯೇ ಆಗಿರುವುದು. ಹೀಗೆ ಅಮೃತ್‌ಮಹಲ್ ದನಗಳ ವಿರೋಚಿತ ಹೋರಾಟದ ಕಥಾಪುಂಜವೇ ಇತಿಹಾಸದಲ್ಲಿ ಕಂಡುಬರುತ್ತದೆ. ವಿಪರ್ಯಾಸವೆಂದರೆ ಈ ತಳಿಯಿಂದು ವಿನಾಶದ ಅಂಚಿನಲ್ಲಿರುವುದು..!!

ಮಮತಾ, ಸ್ಟಾಲಿನ್ ಸೋಲು: ಇಂಡಿ ಕೂಟದ ಅಸ್ತಿತ್ವಕ್ಕೇ ಸಂಚಕಾರ

ಸೋಮಶೇಖರ ಸಿ.ಜೆ.

ಭಾರತೀಯ ರಾಜಕಾರಣದಲ್ಲಿ ಒಂದು ಮಾತಿದೆ. ಒಂದು ಚುನಾವಣೆ ಸೋಲು ವ್ಯಕ್ತಿಯ ಸೋಲು, ಆದರೆ ಸರಣಿ ಸೋಲು ಆ ವ್ಯವಸ್ಥೆಯ ಸೋಲು. ಈ ಮಾತು ಇಂದು ಇಂಡಿ ಕೂಟಕ್ಕೆ ಅಕ್ಷರಶಃ ಅನ್ವಯವಾಗುತ್ತಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಕೇವಲ ಒಂದು ರಾಜಕೀಯ ಸೋಲಲ್ಲ, ಅದು ಇಂಡಿ ಕೂಟ ಎಂಬ ಅಸ್ತಿತ್ವಕ್ಕೇ ಮಾರಕವಾದ ಆಘಾತ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ತಮಿಳುನಾಡಿನ ಸಿಎಂ ಎಂ.ಕೆ. ಸ್ಟಾಲಿನ್, ಈ ಇಬ್ಬರು ನಾಯಕರು ಸೋತಿದ್ದಾರೆ ಎಂದರೆ ಅದು ಸಾಮಾನ್ಯ ಸೋಲಲ್ಲ. ಇಂಡಿ ಕೂಟದ ಬೆನ್ನೆಲುಬಾಗಿ ನಿಂತಿದ್ದ, ಕಾಂಗ್ರೆಸ್ ಅನ್ನೂ ತಮ್ಮ ದನಿಗೆ ತಲೆದೂಗುವಂತೆ ಮಾಡಿದ್ದ ಈ ಇಬ್ಬರು ನಾಯಕರ ಪತನ, ಇಡೀ ಕೂಟದ ಭವಿಷ್ಯದ ಚಿತ್ರಣವನ್ನೇ ಬದಲಿಸಿಬಿಟ್ಟಿದೆ.

ಮಮತಾ: ನಾಯಕಿ ಆಗುವ ಕನಸು ಕಮರಿಹೋಯಿತು

ಮಮತಾ ಬ್ಯಾನರ್ಜಿ ಸಾಮಾನ್ಯ ನಾಯಕಿಯಲ್ಲ. ದೀದಿ ಎಂಬ ಒಂದೇ ಹೆಸರಿನಲ್ಲಿ ಕೋಟ್ಯಂತರ ಮತದಾರರ ಭಾವನೆಗಳನ್ನು ತಮ್ಮ ಬೆರಳ ತುದಿಯಲ್ಲಿ ಇಟ್ಟುಕೊಂಡಿದ್ದ ನಾಯಕಿ. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಮಹಾಭಿಲಾಷೆ ಕೇವಲ ಬಂಗಾಳಕ್ಕೆ ಸೀಮಿತವಾಗಿರಲಿಲ್ಲ. ಇಂಡಿ ಕೂಟದ ನಾಯಕನಾಗಿ ರಾಹುಲ್ ಗಾಂಧಿ ಏಕೆ ಆಗಬೇಕು, ತಾನೇಕೆ ಆ ಸ್ಥಾನಕ್ಕೆ ಅರ್ಹಳಲ್ಲ ಎಂಬ ಪ್ರಶ್ನೆಯನ್ನು ಮಮತಾ ಖಾಸಗಿ ಮಾತುಕತೆಗಳಲ್ಲಿ ತೇಲಿಬಿಟ್ಟಿದ್ದರು. ಕೂಟದ ಒಳಗೇ ಕಾಂಗ್ರೆಸ್ ನೇತೃತ್ವವನ್ನು ಪ್ರಶ್ನಿಸುವಷ್ಟು ತಾಕತ್ತು ತೋರಿಸಿದ್ದ ಮಮತಾ ಇಂದು ತಮ್ಮ ರಾಜ್ಯದಲ್ಲಿಯೇ ಸೋತು ನಿಂತಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಮಾತಾಡಿದ ನಾಯಕಿ, ಮೊದಲು ತನ್ನ ಮನೆ ಕಾಯ್ದುಕೊಳ್ಳಲಾಗದಿದ್ದಾಗ ಆ ಮಾತಿಗೆ ಯಾವ ತೂಕ ಉಳಿಯುತ್ತದೆ?

ಸ್ಟಾಲಿನ್: ದ್ರಾವಿಡ ಸಿದ್ಧಾಂತಿಯ ಮೌನ

ಸ್ಟಾಲಿನ್ ಸೋಲು ಇನ್ನಷ್ಟು ಆಳವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಲೋಕಸಭೆ ಕ್ಷೇತ್ರ ಪುನರ್ ವಿಂಗಡಣೆ ವಿಷಯದಲ್ಲಿ ತಾನು ದಕ್ಷಿಣ ಭಾರತದ ಪ್ರತಿನಿಧಿ ಎಂತಲೇ ಹೇಳಿಕೊಂಡು ಗಟ್ಟಿಯಾಗಿ ನಿಂತವರು ಸ್ಟಾಲಿನ್. ಕಾಂಗ್ರೆಸ್ ಸಹ ತಮ್ಮ ಒತ್ತಡಕ್ಕೆ ಮಣಿದು ಅವರ ನಿಲುವಿಗೆ ಬೆಂಬಲ ಕೊಡುವಂತೆ ಮಾಡಿದ ರಾಜಕೀಯ ಚಾಣಾಕ್ಷ ಇವರು. ದ್ರಾವಿಡ ರಾಜಕಾರಣದ ಗತ್ತು ಮತ್ತು ಗಾಂಭೀರ್ಯ ಅವರ ಹಿನ್ನೆಲೆಯಾಗಿತ್ತು. ಆದರೆ ಜನ ನೀಡಿದ ತೀರ್ಪಿನ ಮುಂದೆ ಆ ಗತ್ತು ನಡೆಯಲಿಲ್ಲ. ಸ್ಟಾಲಿನ್ ಸೋಲು ಕೇವಲ ಡಿಎಂಕೆ ಸೋಲಲ್ಲ, ದಕ್ಷಿಣ ಭಾರತ ಇಂಡಿ ಕೂಟದ ಏಕೈಕ ಭದ್ರ ನೆಲೆ ಎಂಬ ನಂಬಿಕೆಗೇ ಬಿದ್ದ ಹೊಡೆತ.

ಕೇಜ್ರಿವಾಲ್ ಮಾದರಿ ಮತ್ತೆ ಪ್ರಸ್ತುತ

ದಿಲ್ಲಿ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ಸೋಲು ನೆನಪಿಸಿಕೊಳ್ಳಿ. ಒಂದು ಕಾಲದಲ್ಲಿ ಆಮ್ ಆದ್ಮಿ ಪಕ್ಷ ಬದಲಾವಣೆಯ ಸಂಕೇತವಾಗಿ ನಿಂತಿತ್ತು. ಇಂಡಿ ಕೂಟದ ಭಾಗವಾಗಿ ಕೇಜ್ರಿವಾಲ್ ತಮ್ಮ ಭ್ರಷ್ಟಾಚಾರ ವಿರೋಧಿ ವರ್ಚಸ್ಸನ್ನೇ ರಾಷ್ಟ್ರ ರಾಜಕಾರಣಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಜನ ಆ ಲೆಕ್ಕಾಚಾರ ಒಪ್ಪಲಿಲ್ಲ. ಈಗ ಮಮತಾ ಮತ್ತು ಸ್ಟಾಲಿನ್ ಸೋಲು ಅದೇ ಮಾದರಿ ಮತ್ತೆ ಕಣ್ಣ ಮುಂದೆ ಬಂದಂತಾಗಿದೆ. ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ದೊಡ್ಡ ಭಾಷಣ ಬಿಗಿದ ನಾಯಕರು ತಮ್ಮ ರಾಜ್ಯಗಳಲ್ಲಿ ಸೋಲುತ್ತ ಬಂದಿದ್ದಾರೆ ಇದೊಂದು ಮಾದರಿಯೇ ಆಗಿ ಬಿಡುತ್ತಿದೆ.

ಇಂಡಿ ಕೂಟದ ಭವಿಷ್ಯ: ಕೂಟ ಉಳಿಯುತ್ತದೆಯೇ?

ಇಂಡಿ ಕೂಟ ಹುಟ್ಟಿದ್ದೇ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಅದೆಂದರೆ ಬಿಜೆಪಿ ವಿರೋಧ. ಆದರೆ ಬಿಜೆಪಿ ವಿರೋಧ ಒಂದೇ ಅಂಶದ ಮೇಲೆ ಕಟ್ಟಿದ ಕೂಟ ಎಷ್ಟು ದಿನ ನಿಲ್ಲುತ್ತದೆ? ಈ ಕೂಟದ ಒಳಗೆ ಒಗ್ಗಟ್ಟಿಗಿಂತ ಅಧಿಕ ಅಹಂಕಾರ ಮತ್ತು ಸ್ಥಾನಮಾನದ ಸ್ಪರ್ಧೆ ಇತ್ತು. ಮಮತಾ ಒಂದು ದಿಕ್ಕಿನಲ್ಲಿ ಎಳೆದರೆ, ಸ್ಟಾಲಿನ್ ಇನ್ನೊಂದು ದಿಕ್ಕಿನಲ್ಲಿ ಎಳೆಯುತ್ತಿದ್ದರು. ಕೇಜ್ರಿವಾಲ್ ಮತ್ತು ಕಾಂಗ್ರೆಸ್ ನಡುವಿನ ಸಂಘರ್ಷ ಮೇಲ್ಮೈಯ ಮೇಲೇ ಗೋಚರವಾಗಿತ್ತು. ಇಂತಹ ಒಳಜಗಳ ತುಂಬಿದ ಕೂಟ ಈಗ ಮತ್ತಷ್ಟು ದುರ್ಬಲವಾಗಿದೆ.

ಇನ್ನು ಮಮತಾ ಮತ್ತು ಸ್ಟಾಲಿನ್ ರಾಜ್ಯ ರಾಜಕಾರಣದಲ್ಲಿ ಸೋತಿರುವ ಕಾರಣ, ಅವರ ರಾಷ್ಟ್ರ ರಾಜಕಾರಣದ ಮಾತಿಗೆ ಹಿಂದಿನ ಮಾನ್ಯತೆ ಸಿಗಲಾರದು. ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳಲು ವಿಫಲರಾದ ನಾಯಕರು ರಾಷ್ಟ್ರ ರಾಜಕಾರಣದಲ್ಲಿ ಯಾರಿಗೆ ಮಾದರಿ? ಆದ್ದರಿಂದ ಇಂಡಿ ಕೂಟದಲ್ಲಿ ಈ ಇಬ್ಬರ ಪ್ರಭಾವ ಗಣನೀಯವಾಗಿ ಕಡಿಮೆಯಾಗಲಿದೆ ಎಂಬುದು ನಿಶ್ಚಿತ.

ರಾಹುಲ್ ಗಾಂಧಿಗೆ ಸಿಕ್ಕಿದ ಅನಿರೀಕ್ಷಿತ ಅವಕಾಶ


ವಿರೋಧಿಗಳ ಸೋಲು ಕೆಲವೊಮ್ಮೆ ನಿಮ್ಮ ಗೆಲುವಿಗೆ ದಾರಿ ಮಾಡುತ್ತದೆ. ಇದಕ್ಕೆ ಸಾಕ್ಷಿ ಈಗಿನ ಫಲಿತಾಂಶ. ಕಾಂಗ್ರೆಸ್‌ನ ನಾಯಕ ಮತ್ತು ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಇಂಡಿ ಕೂಟದ ನಾಯಕ ಎಂಬುದನ್ನು ಈವರೆಗೂ ಔಪಚಾರಿಕವಾಗಿ ಒಪ್ಪಿಕೊಂಡಿರಲಿಲ್ಲ. ಮಮತಾ, ಸ್ಟಾಲಿನ್, ಕೇಜ್ರಿವಾಲ್ ಮೊದಲಾದವರು ಇದ್ದಷ್ಟೂ ದಿನ ಕಾಂಗ್ರೆಸ್ ನೇತೃತ್ವಕ್ಕೆ ಪ್ರಶ್ನೆ ಎದ್ದೇ ಏಳುತ್ತಿತ್ತು. ಆದರೆ ಈ ನಾಯಕರು ಒಬ್ಬೊಬ್ಬರಾಗಿ ದುರ್ಬಲರಾಗುತ್ತ ಹೋದಂತೆ, ರಾಹುಲ್ ಗಾಂಧಿ ಮೇಲೇ ಕೂಟದ ಎಲ್ಲ ತೂಕ ಬಿದ್ದಿದೆ.

ಆದರೆ ಇಲ್ಲಿ ಒಂದು ಪ್ರಮುಖ ಪ್ರಶ್ನೆ ಎದ್ದೇ ಏಳುತ್ತದೆ ಇತರ ನಾಯಕರ ಸೋಲಿನಿಂದ ಸಿಕ್ಕ ನಾಯಕತ್ವ, ತಾಕತ್ತಿನ ನಾಯಕತ್ವ ಆಗಲು ಸಾಧ್ಯವೇ? ರಾಹುಲ್ ಗಾಂಧಿ ಇಂದು ಕೂಟದ ಅತ್ಯಂತ ಹಿರಿಯ ಮತ್ತು ಉಳಿದ ನಾಯಕ ಎಂಬ ಕಾರಣಕ್ಕಾಗಿ ನಾಯಕರಾಗುತ್ತಿದ್ದಾರೆ, ಆದರೆ, ಇದು ಅವರ ತಾಕತ್ತಿನ ಮೇಲೆ ನಿರ್ಧಾರವಾದ ನಾಯಕತ್ವವೇ?. ಇದೊಂದು ಮಹತ್ವದ ವ್ಯತ್ಯಾಸ. ಡೀಫಾಲ್ಟ್ ನಾಯಕ ಮತ್ತು ಚಾಯ್ಸ್ ನಾಯಕ ಎಂಬ ವ್ಯತ್ಯಾಸ ಇಲ್ಲಿದೆ.

ಇದು ಕೊನೆಯ ಅಧ್ಯಾಯವಲ್ಲ, ಆದರೆ...

ಇಂಡಿ ಕೂಟ ಇನ್ನು ಮುಂದೆ ಸಂಪೂರ್ಣ ಮೌನ ತಾಳಿ ಕಣ್ಮರೆಯಾಗಲಾರದು, ಅದು ಸಾಧ್ಯವೂ ಇಲ್ಲ. ಆದರೆ ಮೊದಲಿನಂತಹ ಹುಮ್ಮಸ್ಸು, ಏಕಮುಖ ದನಿ ಮತ್ತು ರಣತಂತ್ರದ ಸ್ಪಷ್ಟತೆ ಮತ್ತೆ ಬರಲು ಇನ್ನಷ್ಟು ಕಾಲ ಹಿಡಿಯಲಿದೆ. ದೊಡ್ಡ ದೊಡ್ಡ ನಾಯಕರೇ ಒಬ್ಬೊಬ್ಬರಾಗಿ ತಮ್ಮ ರಾಜ್ಯಗಳಲ್ಲಿ ಸೋಲುತ್ತ ಹೋದಂತೆ, ಕೂಟದ ಒಳಗಿನ ಚರ್ಚೆ ಮುಂದೇನು? ಎಂಬ ಅನಿಶ್ಚಿತತೆಯ ಸುತ್ತ ಗಿರಕಿ ಹೊಡೆಯಲಿದೆ.

ಭಾರತದ ಮತದಾರ ಒಂದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾನೆ ರಾಷ್ಟ್ರ ರಾಜಕಾರಣದ ಆಟ ಆಡುವ ಮೊದಲು ನಿನ್ನ ರಾಜ್ಯದ ಮನೆ ಸರಿ ಮಾಡಿಕೋ ಎಂದು. ಆ ಮಾತನ್ನು ಇಂಡಿ ಕೂಟ ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತದೆ ಎಂಬುದರ ಮೇಲೆ ಈ ಕೂಟದ ಉಳಿವು ನಿರ್ಧಾರವಾಗಲಿದೆ. ಹಾಗೆಯೇ, ನಾವು ರಾಜ್ಯಗಳ ಲೆಕ್ಕದಲ್ಲಿ ಮೈತ್ರಿ ಮಾಡಿಕೊಂಡಿಲ್ಲ, ರಾಷ್ಟ್ರ ರಾಜಕಾರಣಕ್ಕೆ ಮಾತ್ರ ನಮ್ಮ ಮೈತ್ರಿ ಎಂಬ ವೈರುಧ್ಯಕ್ಕೂ ಈಗ ಉತ್ತರ ಸಿಕ್ಕಿದೆ. ನೋಡಿ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್, ಟಿಎಂಸಿ ಮತ್ತು ಎಡಪಕ್ಷಗಳು ಬೇರೆ ಬೇರೆಯಾಗಿ ಸ್ಪರ್ಧಿಸಿದ್ದವು. ಹಾಗೆಯೇ, ಕೇರಳದಲ್ಲೂ ಕಾಂಗ್ರೆಸ್ ಮತ್ತು ಎಡಪಕ್ಷಗಳು ಎದಿರು ಬದಿರಾಗಿ ಸ್ಪರ್ಧಿಸಿ, ಪರಸ್ಪರ ವಾಗ್ದಾಳಿ ಮಾಡಿಕೊಂಡಿದ್ದವು. ಈ ಮಾದರಿಯ ರಾಜಕಾರಣ ಜನರಲ್ಲಿ ಗೊಂದಲಕ್ಕೂ ಕಾರಣವಾಗುತ್ತದೆ. ಮೈತ್ರಿ ಎಂದರೆ ಅದು ರಾಷ್ಟ್ರ ಮಟ್ಟಕ್ಕಾಗಲಿ, ರಾಜ್ಯದ ಮಟ್ಟಕ್ಕಾಗಲಿ ಒಂದೇ ಇರಬೇಕು. ಒಟ್ಟಾಗಿಯೇ ಹೋಗಬೇಕು. ಮೈತ್ರಿ ಧರ್ಮ ಪಾಲನೆ ಮಾಡುವುದು ತುಂಬಾ ಕಷ್ಟಕರ. ಕೆಲವೊಮ್ಮೆ ದೊಡ್ಡ ಪಕ್ಷವಾಗಿ ನೀವು ಕಡಿಮೆ ಸೀಟು ಗಳಿಸಿದ್ದರೂ, ಮೈತ್ರಿ ಪಕ್ಷಕ್ಕೆ ಸಿಎಂ ಸ್ಥಾನ ಬಿಟ್ಟುಕೊಡಬೇಕು. ಈ ವಿಚಾರದಲ್ಲಿ ಎನ್‌ಡಿಎ ಉತ್ತಮ ಮಾದರಿಯಾಗಿರಬಹುದೇನೋ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	9	4	5	0	8	+0.005
ದಿಲ್ಲಿ	9	4	5	0	8	-0.895
ಕೆಕೆಆರ್	9	3	5	1	7	-0.539
ಮುಂಬೈ	9	2	7	0	4	-0.803
ಲಖನೌ	8	2	6	0	4	-1.106

ಕಿರುಸುದ್ದಿ

ಇಂಗ್ಲೆಂಡಿಗೆ ಮರಳಿದ ಸಾಲ್ಟ್

ಬೆಂಗಳೂರು: ಆರ್‌ಸಿಬಿ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಇಂಗ್ಲೆಂಡಿಗೆ ಮರಳಿದ್ದಾರೆ. ಅವರ ಕೈಬೆರಳಿಗಾದ ಗಾಯವು ವಾಸಿಯಾಗದ ಕಾರಣ ಅವರು ಇಂಗ್ಲೆಂಡಿಗೆ ಮರಳಿದ್ದು ಅಲ್ಲಿ ಚಿಕಿತ್ಸೆ ಪಡೆಯಲಿದ್ದಾರೆ. ಕಳೆದ ಮೂರು ಪಂದ್ಯಗಳಿಂದ ಅವರು ಆರ್‌ಸಿಬಿಗೆ ಅಲಭ್ಯರಾಗಿದ್ದು, ಅವರ ಬದಲಿಗೆ ಬೆಥೆಲ್ ಆರಂಭಿಕರಾಗಿ ಬರುತ್ತಿದ್ದಾರೆ. ಇನ್ನೀಗ ಮುಂದಿನ ಪಂದ್ಯಗಳಿಗೂ ಬೆಥೆಲ್ ಆರಂಭಿಕರಾಗಿ ಮುಂದುವರಿಯುವ ಸಂಕೇತಗಳಿವೆ. ಸಾಲ್ಟ್ ಮತ್ತೆ ಆರ್‌ಸಿಬಿ ಸೇರುವರೆ ಎಂಬುದು ಖಚಿತಗೊಂಡಿಲ್ಲ.

ಫ್ರೆಂಚ್ ಓಪನ್ ಬಹುಮಾನ ಮೊತ್ತಕ್ಕೆ ಆಟಗಾರರ ಅತೃಪ್ತಿ

ಪ್ಯಾರಿಸ್: ಮುಂಬರುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಗೆ ನೀಡಲಾಗುತ್ತಿರುವ ಬಹುಮಾನ ಮೊತ್ತದ ಕುರಿತಂತೆ ಪ್ರಮುಖ ಟೆನಿಸ್ ಆಟಗಾರರು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಜೋಕೋವಿಕ್, ಜಾನಿಕ್ ಸಿನ್ನರ್, ಸಬಲೆಂಕಾ ಸೇರಿದಂತೆ ಹಲವಾರು ಪುರುಷ ಮತ್ತು ಮಹಿಳಾ ಟೆನಿಸಿಗರು ಜಂಟಿ ಹೇಳಿಕೆಯೊಂದರಲ್ಲಿ ತಮ್ಮ ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ಫ್ರೆಂಚ್ ಓಪನ್ ಮೇ 24ರಿಂದ ಆರಂಭಗೊಳ್ಳಲಿದ್ದು, ಒಟ್ಟು ಬಹುಮಾನ ಮೊತ್ತವನ್ನು ಇತ್ತೀಚೆಗೆ ಶೇ.10ರಷ್ಟು ಏರಿಸಲಾಗಿತ್ತು. ಆದರೆ ಈ ಏರಿಕೆಯು ತಮ್ಮ ನಿರೀಕ್ಷೆಗೆ ತಕ್ಕಂತಿಲ್ಲ ಎಂದು ಆಟಗಾರರು ಹೇಳಿದ್ದಾರೆ. ಸಂಘಟಕರು ಗಳಿಸುತ್ತಿರುವ ಮೊತ್ತಕ್ಕೆ ಹೋಲಿಸಿದರೆ ಆಟಗಾರರಿಗೆ ನೀಡುತ್ತಿರುವ ಮೊತ್ತ ಕಡಿಮೆ ಎಂದು ಅವರು ಹೇಳಿದ್ದಾರೆ.

ಕೊನೆಗೂ ಮಿಂಚಿದ ಪೂರಣ್ | ಲಖನೌ 228/5

ಮುಂಬೈಗೆ ಕಠಿಣ ಗುರಿ

ಮುಂಬೈ: ತಮ್ಮ ಅಸಲು ಲಯಕ್ಕೆ ಬಂದ ನಿಕೋಲಸ್ ಪೂರಣ್ ಸಿಕ್ಸರ್‌ಗಳ ಸುರಿಮಳೆಗೈದಿದ್ದು, ಮುಂಬೈ ಇಂಡಿಯನ್ಸ್‌ಗೆ ಲಖನೌ ಸೂಪರ್ ಜೇಂಟ್ಸ್ ಕಠಿಣ ಗುರಿ ನೀಡಿತು.

ಇಂಗ್ಲಿಸ್ ಬಂದ ನಂತರ ಉತ್ತಮ ಆರಂಭ ಪಡೆದ ಲಖನೌ ಪೂರಣ್(63; 21ಎ, 1 ಬೌ, 8ಸಿ) ಹಾಗೂ ಮಾರ್ಷ್(44; 25ಎ, 4 ಬೌ, 3ಸಿ) ಬ್ಯಾಟಿಂಗ್‌ನೊಂದಿಗೆ ದೊಡ್ಡ ಗುರಿಯತ್ತ ಸಾಗಿತು. ಆದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ಭಾರೀ ಕುಸಿದ ನಂತರ ತಂಡ 228 ರನ್ ಗಳಿಸಿದೆ. ಬಾಷ್ 2, ರಘು, ಜ್ಯಾಕ್ಸ್ ಮತ್ತು ಘಜನ್‌ಫರ್ ತಲಾ 1 ವಿಕೆಟ್ ಪಡೆದ ನಂತರ ಮುಂಬೈ 5 ವಿಕೆಟ್ ಪಡೆಯಿತು.

ಭರ್ಜರಿ ಆರಂಭ: ಟಾಸ್ ಗೆದ್ದ ಮುಂಬೈ ಬೌಲಿಂಗ್ ಆಯ್ದುಕೊಂಡಿತು. ಜೋಸ್ ಇಂಗ್ಲಿಸ್ ಇದೇ ಮೊದಲ ಬಾರಿಗೆ ಕಣಕ್ಕಿಳಿದರು. ಮಾರ್ಷ್ ಸ್ವಾಭಾವಿಕ ಬ್ಯಾಟಿಂಗ್ ಶುರು ಮಾಡುತ್ತಿದ್ದಂತೆ ಇಂಗ್ಲಿಸ್ 5 ಬಾಲ್ ಮಾತ್ರದಲ್ಲಿ 3 ಬೌಂಡರಿ ಬಾರಿಸಿ ಘಜನ್‌ಫರ್‌ಗೆ ಕ್ಯಾಚಿತ್ತರು. ಆಗ ಬಂದವರೆ ನಿಕೋಲಸ್ ಪೂರಣ್. ತಮ್ಮ ಅಸಲು ಲಯಕ್ಕೆ ಮರಳಿದ ಅವರು, ಮೈದಾನದುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದರು. ಪವರ್ ಪ್ಲೇನಲ್ಲಿ ಪೂರಣ್ ಆಟ ನಡೆಯಿತು. ಲಖನೌ ಅಲ್ಲಿ 90 ರನ್ ಗಳಿಸಿತು. ಪೂರಣ್(63; 21ಎ, 1 ಬೌ, 8ಸಿ) ಆಟ ನಿಲ್ಲಿಸಂತೆ ಪಂತ್ ಬಂದು ಸಿಕ್ಸರ್, ಬೌಂಡರಿ ಬಾರಿಸಿದರು. ಆದರೆ ಅವರ ಆಟ 15 ರನ್‌ಗೆ ಮಾತ್ರ ಸೀಮಿತವಾಗಿತ್ತು. ಏಡನ್ ಮಾರ್ಕ್ರಂ ನಿಧಾನಗತಿ ಬ್ಯಾಟಿಂಗ್ ಶುರು ಮಾಡಿದರು. ಮೊದಲನೇ ಬಾಲ್‌ನಲ್ಲೇ ಸಿಕ್ಸರ್ ಬಾರಿಸಿದ ಅಕ್ಷತ್ 11 ರನ್‌ಗೆ ವಿಕೆಟ್ ಒಪ್ಪಿಸಿದರು.

ಲಖನೌ ಮಧ್ಯಮ ಕ್ರಮಾಂಕ ತೀರಾ ಕುಸಿಯಿತು. ಆಟ ನಿಧಾನಗೊಂಡಂತೆ ಮಧ್ಯಮ ಓವರ್ ಮುಕ್ತಾಯಗೊಂಡವು. ಲಖನೌ ಅಲ್ಲಿ 102 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಹಿಮ್ಮತ್ ಸಿಂಗ್ ಮತ್ತು ಏಡನ್ ಮಾರ್ಕ್ರಂ ಉತ್ತಮ ಬ್ಯಾಟಿಂಗ್ ಮಾಡಿದರು. ಮೊದಲಿನ ಬಾಲ್‌ಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಹಿಮ್ಮತ್ 2 ಸಿಕ್ಸರ್, 2 ಬೌಂಡರಿ ಬಾರಿಸಿದರು. ಮಾರ್ಕ್ರಂ 31★ ರನ್ ಬಾರಿಸುವಂತೆ ಇನ್ನಿಂಗ್ಸ್ ಮುಗಿಯಿತು. ಹಿಮ್ಮತ್ ಒಟ್ಟನಲ್ಲಿ 40★ ರನ್ ಬಾರಿಸಿದರು. ತಂಡ 228 ರನ್ ಗಳಿಸಿತು. ಡೆತ್ ಓವರ್‌ನಲ್ಲಿ 36 ರನ್ ಬಂದವು.



ಪೂರಣ್ ಸಿಕ್ಸರ್‌ಗಳ ಅಬ್ಬರ

ಇಷ್ಟು ದಿನ ಲಯಕ್ಕಾಗಿ ಪರದಾಟ ನಡೆಸುತ್ತಿದ್ದ ನಿಕೋಲಸ್ ಪೂರಣ್ ಲಯಕ್ಕೆ ಮರಳಿದ್ದಲ್ಲದೆ, ಸಿಕ್ಸರ್‌ಗಳ ಸುರಿಮಳೆಗೈದರು. ತಮ್ಮ ಅಸಲು ಕ್ರಮಾಂಕ ಮೂರನೇ ವಿಕೆಟ್‌ಗೆ ಬ್ಯಾಟಿಂಗ್ ಮಾಡಿದ ಅವರು, ಅಬ್ಬರದ ಆರಂಭ ಕೊಟ್ಟರು. ಮೊದಲನೇ ಎಸೆತದಿಂದ ಸಿಕ್ಸರ್ ಬಾರಿಸಲು ಆರಂಭಿಸಿದರು. 16 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಕೇವಲ 21 ಬಾಲ್ ಮಾತ್ರವಾಡಿದ ಅವರು, 63 ರನ್ ಗಳಿಸಿದರು. ಇದರಲ್ಲಿ 8 ಭರ್ಜರಿ ಸಿಕ್ಸರ್‌ಗಳು ಸೇರಿವೆ.

ದಿಲ್ಲಿ, ಸಿಎಸ್‌ಕೆಗೆ ಪರೀಕ್ಷೆ

ಹೊಸದಿಲ್ಲಿ: ದಿಲ್ಲಿ ಕ್ಯಾಪಿಟಲ್ಸ್ ಇಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನ್ನು ಎದುರಿಸಲಿದ್ದು, ಪ್ಲೇಆಫ್‌ಗೆ ತೇರ್ಗಡೆ ಪಡೆಯಲು ಇಂದಿನ ಪಂದ್ಯದಲ್ಲಿ ಗೆಲುವು ಸಾಧಿಸುವುದು ಎರಡೂ ತಂಡಗಳಿಗೆ ಅಗತ್ಯವಾಗಿದೆ.

ಪ್ರಸ್ತುತ 8 ಅಂಕ ಗಳಿಸಿರುವ ದಿಲ್ಲಿ ಕ್ಯಾಪಿಟಲ್ಸ್ ಮುಂದಿನ ಪಂದ್ಯಗಳನ್ನು ಸತತವಾಗಿ ಗೆಲ್ಲಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಈವರೆಗೆ ತಾನಾಡಿದ 9 ಪಂದ್ಯಗಳಲ್ಲಿ 5ನ್ನು ಸೋತು ನಾಲ್ಕನ್ನಷ್ಟೆ ಗೆದ್ದಿದೆ.

ತಂಡಕ್ಕೆ ಪ್ರಮುಖ ವೇಗಿ ಸ್ಟಾರ್ಕ್ ಮರಳಿರುವುದು ತಂಡದ ವಿಶ್ವಾಸ ಹೆಚ್ಚಿಸಿದೆ. ಹಿಂದಿನ ಪಂದ್ಯದಲ್ಲಿ ಡೆಲ್ಲಿ ಗೆಲುವು ಸಾಧಿಸುವಲ್ಲಿ ಸ್ಟಾರ್ಕ್ ಪ್ರಮುಖ ಪಾತ್ರ ವಹಿಸಿದ್ದರು. ಅದೇರೀತಿ ಸಿಎಸ್‌ಕೆಗೂ ಈ ಪಂದ್ಯ ಮಹತ್ವದ್ದಾಗಿದೆ. ಸಿಎಸ್‌ಕೆ ಆರಂಭದಲ್ಲಿ ಕೆಲವು ಪಂದ್ಯಗಳನ್ನು ಸೋತಿದ್ದರೂ ಬಳಿಕ ಗೆಲುವಿನ ಹಾದಿಗೆ ಮರಳಿದೆ. ಕಳೆದ ಐದು ಪಂದ್ಯಗಳಲ್ಲಿ ಮೂರು ಪಂದ್ಯಗಳನ್ನು ಜಯಿಸಿದೆ.

ಸಿಎಸ್‌ಕೆ ಕೂಡಾ ಈಗ 8 ಅಂಕಗಳನ್ನು ಗಳಿಸಿದ್ದು, ಅದಕ್ಕೆ ಕೂಡಾ ಪ್ಲೇಆಫ್‌ಗೇರಲು ಮುಂದಿನ ಪಂದ್ಯಗಳನ್ನು ಗೆಲ್ಲುವುದು ಮಹತ್ವದ್ದಾಗಿದೆ. ಹಾಗಾಗಿ ಇಂದಿನ ಪಂದ್ಯವು ಉಭಯ ತಂಡಗಳಿಗೂ ಅಂಕಪಟ್ಟಿಯಲ್ಲಿ ಒಂದು ಸ್ಥಾನ ಮೇಲೇರಲು ಅಗತ್ಯವಾಗಿದ್ದು, ಎರಡೂ ತಂಡಗಳು ಗೆಲುವಿಗಾಗಿ ಪೂರ್ಣ ಸಾಮರ್ಥ್ಯ ಹಾಕಲಿವೆ.



ಧೋನಿ ಆಡುವುದಿಲ್ಲ

ಪ್ರತಿಬಾರಿ ಸಿಎಸ್‌ಕೆ ಪಂದ್ಯವಿದ್ದಾಗಲೂ ಧೋನಿ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರ ಆಡುವನೆ ಎಂದು ಕಾತರದಿಂದ ನಿರೀಕ್ಷಿಸುತ್ತಾರೆ. ಆದರೆ ಧೋನಿ ತಂಡದ ಸದಸ್ಯರಾಗಿದ್ದರೂ ಈವರೆಗೆ ಒಂದೂ ಪಂದ್ಯ ಆಡಿಲ್ಲ. ಅವರು ದಿಲ್ಲಿ ಎದುರಿನ ಪಂದ್ಯದಲ್ಲಿ ಆಡುವುದು ಕೂಡ ಅಸಾಧ್ಯವೆನಿಸಿದೆ. ಏಕೆಂದರೆ ಅವರು ಚೆನ್ನೈನಲ್ಲೇ ಉಳಿಕೊಂಡಿದ್ದು ದಿಲ್ಲಿಗೆ ಪ್ರಯಾಣಿಸಿಯೇ ಇಲ್ಲ. ಇಂದಿನ ಸಿಎಸ್‌ಕೆ ಪಂದ್ಯವು ಹೊಸದಿಲ್ಲಿಯಲ್ಲಿ ನಡೆಯಲಿದೆ.

ಚೇಸ್ ಕಲೆ ಕೊಹ್ಲಿಯಿಂದ ಕಲಿಯಬೇಕು: ಬೆಥೆಲ್

ಬೆಂಗಳೂರು: ವಿರಾಟ್ ಚೇಸ್ ಮಾಡುವ ರೀತಿಯನ್ನು ನೋಡಿದರೆ ಬ್ಯಾಟಿಂಗ್‌ನ ನಿಜವಾದ ಕಲೆ ಗೊತ್ತಾಗುತ್ತದೆ ಎಂದು ಆರ್‌ಸಿಬಿ ಬ್ಯಾಟರ್ ಜೇಕಬ್ ಬೆಥೆಲ್ ತಿಳಿಸಿದರು.

ವಿರಾಟ್ ಕೊಹಿ ಅವರ ಬಗ್ಗೆ ಮಾತನಾಡುತ್ತಾ, ಪರಿಸ್ಥಿತಿಗೆತಕ್ಕಂತೆ ಆಟದವೇಗವನ್ನು ಹೇಗೆ ಬದಲಿಸಬೇಕು ಅನ್ನೋದನ್ನು ಅವರಿಂದ ಕಲಿಯಬಹುದು, ಎಂದು ಅಭಿಪ್ರಾಯಪಟ್ಟರು.ಇಲ್ಲಿ ಎಲ್ಲರೂ ಕ್ರಿಕೆಟ್ ಬಗ್ಗೆ ಮಾತನಾಡುತ್ತಾರೆ. ಹೆಚ್ಚು ಮಾಹಿತಿ, ಹೆಚ್ಚು ಆಸಕ್ತಿ ಬಾಲ್ಯದಲ್ಲೇ ಹೆಚ್ಚಿನ ಅನುಭವ ಸಿಗುತ್ತದೆ, ಎಂದು ಹೇಳಿದರು. ಆ್ಯಂಡಿ ಫ್ಲವರ್ ಸರಿಯಾದ ಸಮಯದಲ್ಲಿ ಮಾತ್ರ ಮಾತನಾಡುತ್ತಾರೆ, ಆದರೆ ಹೇಳುವುದನ್ನು ಗಮನದಿಂದ ಕೇಳಬೇಕು. ದಿನೇಶ್ ಕಾರ್ತಿಕ್ ಬೇಗನೆ ದೋಷಗಳನ್ನು ಗುರುತಿಸಿ, ರನ್ ಮಾಡುವ ಮಾರ್ಗಗಳನ್ನು ತಿಳಿಸುತ್ತಾರೆ, ಎಂದರು.

ತಮ್ಮ ವೃತ್ತಿಜೀವನದ ಬಗ್ಗೆ ಮಾತನಾಡಿದ ನಾನು ಬಾರ್ಬಡೋಸ್‌ನಲ್ಲಿ ಬೆಳೆದವನು. ಬಾಲ್ಯದಿಂದಲೇ ಬ್ಯಾಟ್ ಮತ್ತು ಬಾಲ್ ಜೊತೆ ಇದ್ದೆ. ಹತ್ತು-ಹನ್ನೆರಡು ವಯಸ್ಸಿನಲ್ಲಿ ಕ್ರಿಕೆಟ್ ಅನ್ನು ಗಂಭೀರವಾಗಿ ತೆಗೆದುಕೊಂಡೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಟಗಾರ ಜೇಕಬ್ ಬೆಥಲ್ ತಿಳಿಸಿದರು. ಅವರು ಇಂಗ್ಲೆಂಡ್‌ಗೆ ಹೋಗಿ ವಾರ್ವಿಕ್‌ಶೈರ್ ತಂಡಕ್ಕೆ ಸೇರಿ 2021ರಲ್ಲಿ ಮೊದಲ ಒಪ್ಪಂದ ಪಡೆದೆ. ಗಾಯದಿಂದ ಒಂದು ಹಂತದಲ್ಲಿ ಹಿಂದೆ ಬಿದ್ದರೂ, ಮತ್ತೆ ಬಲವಾಗಿ ಹಿಂತಿರುಗಿ ಇಂಗ್ಲೆಂಡ್ ತಂಡಕ್ಕೆ ಆಯ್ಕೆಯಾದೆ. ಈಗ ಬೆಂಗಳೂರು ನನ್ನ ಹೊಸ ಅಧ್ಯಾಯ, ಎಂದು ಹೇಳಿದರು.

ಸ್ಟಾರ್‌ಬಾಯ್ ಎಂಬ ಹೆಸರು ಕುರಿತು ಮಾತನಾಡಿ, ಜನರು ನಿಮ್ಮ ಆಟವನ್ನು ನೋಡಲು ಬರುತ್ತಾರೆ ಅಂದರೆ ಅದು ದೊಡ್ಡ ಗೌರವ. ಭಾರತದಲ್ಲಿ ಜನರು ನನ್ನನ್ನು ಹೀಗೆ ಕರೆಯುತ್ತಾರೆ ಅನ್ನೋದು ನಿಜವಾಗಿಯೂ ವಿಶೇಷ ಅನುಭವ, ಎಂದರು. ಇಲ್ಲಿ ಆಟದ ವೇಗ ತುಂಬಾ ಹೆಚ್ಚು, ನೀವು ಧೈರ್ಯವಾಗಿ ಮತ್ತು ಆಕ್ರಮಣಕಾರಿ ರೀತಿಯಲ್ಲಿ ಆಡಬೇಕು.

ಉತ್ತಮವಾಗಿ ಆಡುವುದೇ ಉದ್ದೇಶ: ಹಿಂದಿನ ವರ್ಷದಿಗಿಂತ ಉತ್ತಮವಾಗಬೇಕು ಅನ್ನೋದು ನನ್ನ ಉದ್ದೇಶ. ಕೆಲವು ಪಂದ್ಯಗಳು ಅಥವಾ ಹೆಚ್ಚು ಪಂದ್ಯಗಳು ಯಾವಾಗಲೂ ಹಸಿವು ಇರಬೇಕು. ಈ ಮಟ್ಟದಲ್ಲಿ ಸುಧಾರಿಸದಿದ್ದರೆ ಮತ್ತೇಲ್ಲಿ? ಎಂದು ಹೇಳಿದರು. ವಿರಾಟ್ ಜೊತೆ ಮೈದಾನಕ್ಕೆ ಇಳಿದಾಗ ಆ ಶಬ್ದ, ಆ ಉತ್ಸಾಹ ಅದನ್ನು ಅನುಭವಿಸುವುದು ವಿಭಿನ್ನ. ನೀವು ಸಂಪೂರ್ಣ ಗಮನದಿಂದ ಇರಬೇಕು, ಎಂದು ಹೇಳಿದರು.





ಐಪಿಎಲ್ ಟಿಆರ್‌ಪಿ ಕುಸಿತ

ಹೊಸದಿಲ್ಲಿ: ಈ ಬಾರಿಯ ಐಪಿಎಲ್ ಟಿಆರ್‌ಪಿ ಶೇ. 18.8, ವೀಕ್ಷಕರ ಸಂಖ್ಯೆ ಶೇ. 26ರಷ್ಟು ಕುಸಿದಿದೆ. ಜಾಹೀರಾತುದಾರರ ಸಂಖ್ಯೆಯೂ ಕುಸಿದಿದೆ ಎಂದು ವರದಿಯಾಗಿದೆ.

ಇತ್ತೀಚೆಗೆ ಹೊರಬಿದ್ದ ವರದಿ ಪ್ರಕಾರ ಐಪಿಎಲ್ ಜನಪ್ರಿಯತೆ ಕಡಿಮೆಯಾಗುತ್ತಿದೆ ಎಂಬುದನ್ನು ಬಹಿರಂಗಪಡಿಸಿದೆ. 2026ರ ಐಪಿಎಲ್‌ನ ಟಿಆರ್‌ಪಿಯಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ಮಾತ್ರವಲ್ಲದೆ ಐಪಿಎಲ್ ವೀಕ್ಷಿಸುವವರ ಸಂಖ್ಯೆಯಲ್ಲೂ ಇಳಿಮುಖ ಕಂಡುಬಂದಿದೆ. ಇದರ ಪರಿಣಾಮವೆಂಬಂತೆ ಜಾಹೀರಾತುದಾರರ ಸಂಖ್ಯೆಯೂ ಕಡಿಮೆಯಾಗಿದೆ. ಐಪಿಎಲ್ 2026ರ ಟಿಆರ್‌ಪಿ ಶೇಕಡಾ 18.8 ರಷ್ಟು ಕಡಿಮೆಯಾಗಿದೆ. 4.57 ರಿಂದ 3.71 ಕ್ಕೆ ಇಳಿದಿದೆ. ಇದರ ಜೊತೆಗೆ ಈ ಬಾರಿಯ ಐಪಿಎಲ್ ವೀಕ್ಷಕರ ಸಂಖ್ಯೆಯೂ ಶೇ.26 ರಷ್ಟು ಕಡಿಮೆಯಾಗಿದೆ. ಅಂದರೆ ಐಪಿಎಲ್ ವೀಕ್ಷಕರ ಸಂಖ್ಯೆ 124 ಮಿಲಿಯನ್‌ನಿಂದ 113.6 ಮಿಲಿಯನ್‌ಗೆ ಕುಸಿದಿದೆ.

ಇತ್ತ ಇನ್ನೊಂದು ಹೊಡೆತದಲ್ಲಿ ವೀಕ್ಷಕರ ಸಂಖ್ಯೆ ಕಡಿಮೆಯಾದ್ದರ ಪರಿಣಾಮವಾಗಿ ಜಾಹೀರಾತುದಾರರು ಸಹ ಆಸಕ್ತಿ ಕಳೆದುಕೊಳ್ಳುತ್ತಿರುವಂತೆ ತೋರುತ್ತಿದೆ. ಐಪಿಎಲ್ 2026 ಜಾಹೀರಾತುದಾರರು ಶೇಕಡಾ 31 ರಷ್ಟು ಕುಸಿತ ಕಂಡಿದ್ದಾರೆ. ಹಿಂದೆ, ಜಾಹೀರಾತುದಾರರ ಸಂಖ್ಯೆ 65 ಮೀರಿತ್ತು, ಆದರೆ ಈಗ ಅದು 45 ಕ್ಕೆ ಕುಸಿದಿದೆ.

ಪಶ್ಚಿಮ ಬಂಗಾಳ, ತಮಿಳುನಾಡಿನಲ್ಲಿ ಪ್ರಮುಖ ಪಕ್ಷಗಳಿಗೇ ಸೋಲು

ಇಂಡಿ ಕೂಟಕ್ಕೆ ಸೋಲಿನ ಆಘಾತ

- ಇಂಡಿ ಕೂಟದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದ ಮಮತಾ, ಸ್ಟಾಲಿನ್
- ಎಡಪಕ್ಷಗಳ ಸೋಲೂ ಪ್ರಮುಖ ಹೊಡೆತ

ಹೊಸದಿಲ್ಲಿ: ಪಂಚ ರಾಜ್ಯಗಳ ಚುನಾವಣಾ ಫಲಿತಾಂಶಗಳ ಬಳಿಕ ಇಂಡಿ ಕೂಟ ಎದುರಿಸುತ್ತಿರುವ ರಾಜಕೀಯ ವಾಸ್ತವಿಕತೆ ಗಂಭೀರ ತಿರುವು ಪಡೆದಿದೆ. ಏಕೆಂದರೆ, ಇಂಡಿ ಕೂಟದ ಪ್ರಮುಖ ಪಕ್ಷಗಳಾದ ಟಿಎಂಸಿ ಮತ್ತು ಡಿಎಂಕೆ ಸೋತು ಸುಣ್ಣವಾಗಿವೆ. ಹೀಗಾಗಿ, ಇಂಡಿ ಕೂಟದ ಮುಂದಿನ ದಿಕ್ಕೇನು ಎಂಬುದೇ ಪ್ರಶ್ನೆಯಾಗಿದೆ.

2014ರ ಲೋಕಸಭೆ ಚುನಾವಣೆ ವೇಳೆ ಒಗ್ಗಟ್ಟು ಪ್ರದರ್ಶಿಸಿದ್ದ ಇಂಡಿ ಕೂಡ, ಆದಾದ ನಂತರದಲ್ಲಿ ಒಂದಾದ ಮೇಲೆ ಒಂದರಂತೆ ರಾಜ್ಯಗಳನ್ನು ಕಳೆದುಕೊಳ್ಳುತ್ತಾ ಬಂದಿತು. ಈಗಂತೂ ತೃಣಮೂಲ ಕಾಂಗ್ರೆಸ್, ಡಿಎಂಕೆ ಮತ್ತು ಎಡಪಕ್ಷಗಳ ಸೋಲು ಇಂಡಿ ಕೂಟದ ಪ್ರಮುಖ ಆಧಾರಸ್ತಂಭಗಳನ್ನೇ ಕದಡಿ ಹಾಕಿದೆ. ಇವು ಲೋಕಸಭೆಯಲ್ಲಿ ಮೈತ್ರಿಯ ಸಂಖ್ಯಾಶಕ್ತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದ ಪಕ್ಷಗಳಾಗಿದ್ದು, ಇವರ ಸೋಲು ಕೇವಲ ರಾಜ್ಯ ರಾಜಕಾರಣದ ಮಟ್ಟದಲ್ಲೇ ಅಲ್ಲ, ರಾಷ್ಟ್ರೀಯ ಮಟ್ಟದಲ್ಲಿಯೂ ಮನೋಭಾವದ ಕುಸಿತಕ್ಕೆ ಕಾರಣವಾಗಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರವೇಶ ಸಾಧಿಸಿರುವುದು, ಮುಂದಿನ 2029ರ ಲೋಕಸಭೆ ಚುನಾವಣೆಗೆ ದಿಕ್ಕು ತೋರಿಸುವ ಬೆಳವಣಿಗೆ ಎನ್ನಬಹುದು.

ಇದಕ್ಕಿಂತ ಮುಖ್ಯವಾಗಿ, ಇಂಡಿ ಕೂಟದ ಒಳರಾಜಕೀಯದಲ್ಲಿ ಹೊಸಸಮೀಕರಣಗಳು ರೂಪುಗೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಇದುವರೆಗೆ ಪ್ರಾದೇಶಿಕ ಪಕ್ಷಗಳು, ವಿಶೇಷವಾಗಿ ಟಿಎಂಸಿ ತಾವು ಬಿಜೆಪಿಗೆ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದೇವೆ ಎಂಬ ಧೋರಣೆಯನ್ನು ಪ್ರದರ್ಶಿಸುತ್ತಿದ್ದವು. ಆದರೆ ಈಗಿನ ಸೋಲು ಆ ಧ್ವನಿಯನ್ನು ಮಂದಗೊಳಿಸಿದೆ. ಇದರಿಂದ ಕಾಂಗ್ರೆಸ್ ಪ್ರಾಬಲ್ಯವು ಮೈತ್ರಿಯೊಳಗೆ ಮತ್ತೆ ಬಲ ತರುವ ಸಾಧ್ಯತೆ ಇದೆ. ರಾಹುಲ್ ಗಾಂಧಿ ಅವರ ನಾಯಕತ್ವದ ವಿರುದ್ಧ ಕೇಳಿಬರುತ್ತಿದ್ದ ಪ್ರಶ್ನೆಗಳೂ ತಾತ್ಕಾಲಿಕವಾಗಿ ಶಮನಗೊಂಡಂತಾಗಿದೆ.

ಇದಲ್ಲದೆ, ಇತ್ತೀಚಿನ ಸಂಸತ್ ರಾಜಕೀಯದಲ್ಲಿ ಕಂಡುಬಂದ ಘಟನೆಗಳು ಈ ಒಳಸಂಘರ್ಷದ ಸೂಚನೆಗಳನ್ನು ಸ್ಪಷ್ಟಪಡಿಸುತ್ತವೆ. ಸಂವಿಧಾನ ತಿದ್ದುಪಡಿ ಮಸೂದೆ ವಿರೋಧಿಸಲು ನಡೆದ ಸಭೆಯಲ್ಲಿ, ಟಿಎಂಸಿ ತನ್ನ ಸಂಸದರನ್ನು ಸಂಪೂರ್ಣವಾಗಿ ಒದಗಿಸಲು ಹಿಂಜರಿದ ಸಂದರ್ಭದಲ್ಲೇ ರಾಹುಲ್ ಗಾಂಧಿ ಕಠಿಣ ನಿಲುವು ತೆಗೆದುಕೊಂಡಿದ್ದರು. ಇದರಿಂದ ಮೈತ್ರಿಯೊಳಗಿನ ಅಸಮಾಧಾನ ಹೊರಹೊಮ್ಮಿದರೂ, ಅಂತಿಮವಾಗಿ ಒಗ್ಗಟ್ಟಿನಿಂದ ಮಸೂದೆ ತಡೆಹಿಡಿಯಲು ಸಾಧ್ಯವಾಯಿತು. ಆದರೆ ಈಗಿನ ಚುನಾವಣಾ ಫಲಿತಾಂಶಗಳು ಆ ಅಸಮಾಧಾನವನ್ನು ಮತ್ತಷ್ಟು ಗಂಭೀರವಾಗಿ ಪರಿವರ್ತಿಸಬಹುದಾಗಿದೆ.

ಕೇರಳದಲ್ಲಿ ಎಡಪಕ್ಷಗಳು ಅಧಿಕಾರ ಕಳೆದುಕೊಂಡಿರುವುದು. ಇದು ಎಡಪಕ್ಷಗಳ ರಾಜಕೀಯ ಇತಿಹಾಸದಲ್ಲೇ ದೊಡ್ಡ ಹಿನ್ನಡೆ. 1977ರಿಂದ ನಿರಂತರವಾಗಿ ಯಾವುದಾದರೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಎಡಪಕ್ಷಗಳು ಈಗ ಸಂಪೂರ್ಣವಾಗಿ ಅಧಿಕಾರವಿಲ್ಲದ ಸ್ಥಿತಿಗೆ ತಲುಪಿರುವುದು ಇಂಡಿ ಕೂಟದ ವ್ಯಾಪ್ತಿಯನ್ನು ಕುಗ್ಗಿಸುತ್ತದೆ.

ತಮಿಳುನಾಡಿನ ರಾಜಕೀಯದಲ್ಲಿಯೂ ಕಾಂಗ್ರೆಸ್ ಕೈಗೊಂಡ ತಂತ್ರಗಳು ಫಲಿಸದಿರುವುದು ಗಮನಾರ್ಹ. ಡಿಎಂಕೆ ಜೊತೆಗಿನ ಸಂಬಂಧ ಮತ್ತು ಪರ್ಯಾಯ ಮೈತ್ರಿ ಸಾಧ್ಯತೆಗಳ ನಡುವಿನ ಗೊಂದಲ ಕಾಂಗ್ರೆಸ್‌ಗೆ ಸ್ಪಷ್ಟ ದಿಕ್ಕಿನ ಕೊರತೆಯನ್ನು ತೋರಿಸಿದೆ. ಆದರೆ ಭವಿಷ್ಯದಲ್ಲಿ ಹೊಸ ಮೈತ್ರಿಗಳ ಸಾಧ್ಯತೆಗಳು ತೆರೆದಿರುವುದರಿಂದ, ಈ ಹಿನ್ನಡೆ ಸಂಪೂರ್ಣ ನಷ್ಟವಲ್ಲ ಎಂಬ ಅಭಿಪ್ರಾಯವೂ ಇದೆ.



ತುಷ್ಟೀಕರಣ ರಾಜನೀತಿ ತಿರಸ್ಕಾರ: ಬಿಜೆಪಿ

ಹೊಸದಿಲ್ಲಿ: ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಚಾರಿತ್ರಿಕ ವಿಜಯ ದಾಖಲಿಸಿದೆ. ಜನತೆ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವವನ್ನು ನಿರ್ಣಾಯಕವಾಗಿ ಅನುಮೋದಿಸಿದ್ದಾರೆ ಮತ್ತು ವಿಪಕ್ಷಗಳ ತುಷ್ಟೀಕರಣ ರಾಜನೀತಿಯನ್ನು ನೇರವಾಗಿ ತಿರಸ್ಕರಿಸಿದ್ದಾರೆ ಎಂದು ಬಿಜೆಪಿ ಬಣ್ಣಿಸಿದೆ. ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ಸಾಕಾರಗೊಂಡಿರುವ ಪ್ರಗತಿ ಮತ್ತು ಉತ್ತಮ ಆಡಳಿತವನ್ನು ಪ.ಬಂಗಾಳ ಮತ್ತು ಅಸ್ಸಾಂ ಚುನಾವಣಾ ಫಲಿತಾಂಶಗಳು ಪ್ರತಿಫಲಿಸಿವೆ. ಮಹಾನ್ ವ್ಯಕ್ತಿಗಳ ಈ ಪುಣ್ಯಭೂಮಿಯೀಗ ಶಾಂತಿ, ಸಂಪನ್ನತೆ ಮತ್ತು ಉತ್ತಮ ಆಡಳಿತದ ನವ ಯುಗದ ಆರಂಭಕ್ಕೆ ಸಾಕ್ಷಿಯಾಗಲಿದೆ. ಪ.ಬಂಗಾಳದ ಅಸ್ಮಿತೆ, ಮಹಾನ್ ಸಂಸ್ಕೃತಿ ಮತ್ತು ಕಳೆದುಹೋಗಿರುವ ಘನತೆಯನ್ನು ಮರಳಿ ಹೊಂದುವ ಅಚಲ ಸಂಕೇತವಾಗಿದೆ ಐತಿಹಾಸಿಕ ವಿಜಯವೆಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ. ಪ.ಬಂಗಾಳದಲ್ಲಿ ಬಹುಮತವನ್ನೂ ಮೀರಿ 200ಕ್ಕೂ ಅಧಿಕ ಸೀಟುಗಳನ್ನು ಗೆದ್ದಿರುವ ಬಿಜೆಪಿ ರಾಜ್ಯದಲ್ಲಿ ಪ್ರಪ್ರಥಮವಾಗಿ ಸರಕಾರ ರಚಿಸಲಿದೆ, ತನ್ಮೂಲಕ ಟಿಎಂಸಿಯ 15ವರ್ಷಗಳ ಅರಾಜಕ ಆಡಳಿತ ಅಂತ್ಯ ಕಾಣಲಿದೆ. ಅಸ್ಸಾಂ, ಪುದುಚೇರಿಗಳಲ್ಲೂ ಬಿಜೆಪಿ ಹ್ಯಾಟ್ರಿಕ್ ವಿಜಯ ಸಾಧಿಸಿದೆ. ತಮ್ಮ ಕುಟುಂಬಗಳು ಟಿಎಂಸಿ ಹಿಂಸಾಚಾರಗಳಿಂದ ಸಂತ್ರಸ್ಥಗೊಂಡಿದ್ದರೂ, ಬಿಜೆಪಿ ಕಾರ್ಯಕರ್ತರ ಹೋರಾಟ ,ತ್ಯಾಗದ ಪರಿಣಾಮವಾಗಿದೆ ಪ.ಬಂಗಾಳದಲ್ಲಿ ಬಿಜೆಪಿಯ ಚಾರಿತ್ರಿಕ ವಿಜಯವೆಂದು ಗೃಹ ಸಚಿವ ಅಮಿತ್ ಶಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ.

ನ್ಯಾಯಾಂಗ ಆದೇಶ ಜಾರಿಗೆ ತರದ ಸಿಬ್ಬಂದಿ ವಿರುದ್ಧ ಅಸಮಾಧಾನ

ತನ್ನದೇ ರಿಜಿಸ್ಟ್ರಿಗೆ ಸುಪ್ರೀಂ ಎಚ್ಚರಿಕೆ

ಹೊಸದಿಲ್ಲಿ: ಸುಮಾರು 37,000 ಕೋಟಿ ರೂ. ಮೊತ್ತದ ಬೃಹತ್ ಆರ್ಥಿಕ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯಕ್ಕೆ ಕಡ್ಡಾಯ ನೋಟಿಸ್ ನೀಡುವಲ್ಲಿ ವಿಫಲವಾದ ತನ್ನದೇ ರಿಜಿಸ್ಟ್ರಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡ ಅಪರೂಪದ ಪ್ರಸಂಗ ನಡೆದಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ, ಮಾರ್ಚ್ 23 ರಂದು ನೀಡಲಾಗಿದ್ದ ನ್ಯಾಯಾಂಗ ಆದೇಶವನ್ನು ಜಾರಿಗೆ ತರದ ಆಡಳಿತಾತ್ಮಕ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದೆ. ರಿಜಿಸ್ಟ್ರಿ ಸಿಬ್ಬಂದಿ ನ್ಯಾಯಾಲಯದ ನಿರ್ದೇಶನಗಳನ್ನು ಮೀರಿ, ತಾವೇ ಸರ್ವೋಚ್ಚ ನ್ಯಾಯಾಲಯದ ಮುಖ್ಯಸ್ಥರಂತೆ ವರ್ತಿಸುತ್ತಿದ್ದಾರೆ, ಎಂದು ಪೀಠ ಅಭಿಪ್ರಾಯಪಟ್ಟಿದೆ.

ಆಂತರಿಕ ವಿಚಾರಣೆಗೆ ಸೂಚನೆ: ನೋಟಿಸ್ ನೀಡದೆ ತಡೆಹಿಡಿದಿರುವ ಆಡಳಿತಾತ್ಮಕ ಲೋಪದ ಬಗ್ಗೆ ತಕ್ಷಣವೇ ಔಪಚಾರಿಕ ತನಿಖೆ ನಡೆಸುವಂತೆ ರಿಜಿಸ್ಟ್ರಾರ್ ಜ್ಯುಡಿಶಿಯಲ್‌ಗೆ ನ್ಯಾಯಾಲಯ ಆದೇಶಿಸಿದೆ. ಜಾರಿ ನಿರ್ದೇಶನಾಲಯದ ನಿರ್ದೇಶಕರಿಗೆ ಪ್ರಸ್ತುತ ಕಾನೂನು ನಡಾವಳಿಗಳ ಬಗ್ಗೆ ತಕ್ಷಣವೇ ಮಾಹಿತಿ ತಲುಪುವುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯ ಈಗ ಹೊಸ ನಿರ್ದೇಶನವನ್ನು ಹೊರಡಿಸಿದೆ. ಬೃಹತ್ ಹೂಡಿಕೆ ಹಗರಣದ ಪ್ರಮುಖ ಆರೋಪಿ ಆಯುಷಿ ಮಿತ್ತಲ್ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಈ ಗಂಭೀರ ಲೋಪ ಬೆಳಕಿಗೆ ಬಂದಿದೆ. ಅರ್ಜಿದಾರರು ತಮ್ಮ ಕುಟುಂಬ ಮತ್ತು ಕಂಪೆನಿಯ ಎಲ್ಲಾ ಆಸ್ತಿಗಳ ಸಂಪೂರ್ಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವವರೆಗೆ ಅವರ ಜಾಮೀನು ಅರ್ಜಿಯನ್ನು ಪರಿಗಣಿಸಲು ನ್ಯಾಯಪೀಠ ಈ ಹಂತದಲ್ಲಿ ನಿರಾಕರಿಸಿದೆ.

ತನಿಖೆಯ ಹಿನ್ನೆಲೆ: ಸದ್ಯಕ್ಕೆ ಸ್ಥಗಿತಗೊಳಿಸಲಾದ ವಿವಿಧ ಬ್ಯಾಂಕ್ ಖಾತೆಗಳಲ್ಲಿರುವ ನೂರಾರು ಕೋಟಿ ರೂಪಾಯಿಗಳಿಗೆ ಸಂಬಂಧಿಸಿದ ವಂಚನೆಯ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಆಂತರಿಕ ಆಡಳಿತಾತ್ಮಕ ವಿಚಾರಣೆಯ ವರದಿ ಸಲ್ಲಿಕೆಯಾದ ನಂತರ, ಮೇ ತಿಂಗಳ ಅಂತ್ಯದಲ್ಲಿ ಈ ಪ್ರಕರಣದ ಮುಂದಿನ ವಿಚಾರಣೆಗಳು ನಡೆಯಲಿವೆ, ಎಂದು ತಿಳಿಸಲಾಗಿದೆ.

ಇರಾನ್ ದಾಳಿ ನಿರಾಕರಿಸಿದ ಅಮೆರಿಕ

ದುಬೈ: ದಿಗ್ಬಂಧನಕ್ಕೊಳಗಾಗಿರುವ ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳಿಗೆ ಅಮೆರಿಕಪಡೆಗಳು ಮಾರ್ಗದರ್ಶನ ನೀಡಲು ಆರಂಭಿಸುತ್ತಿದ್ದಂತೆ, ತನ್ನ ನೌಕಾಪಡೆಯ ಹಡಗಿನ ಮೇಲೆ ಇರಾನ್ ದಾಳಿ ಮಾಡಿದೆ ಎಂಬ ವಾದವನ್ನು ಅಮೆರಿಕಾ ಸೇನೆ ನಿರಾಕರಿಸಿದೆ. ಅಮೆರಿಕದ ಹಡಗಿನ ಮೇಲೆ ದಾಳಿ ಮಾಡಲಾಗಿದೆ ಮತ್ತು ಅದು ಹಿಂತಿರುಗುವಂತೆ ಒತ್ತಾಯಿಸಲಾಗಿದೆ ಎಂಬ ಇರಾನ್ ಸುದ್ದಿ ಸಂಸ್ಥೆಗಳ ವರದಿಗಳ ನಡುವೆಯೇ, ಯಾವುದೇ ನೌಕಾ ಹಡಗುಗಳ ಮೇಲೆ ದಾಳಿಯಾಗಿಲ್ಲ, ಎಂದು ಯುಎಸ್ ಸೆಂಟ್ರಲ್ ಕಮಾಂಡ್ ದೃಢಪಡಿಸಿದೆ.


ಪ್ರಾಜೆಕ್ಟ್ ಫ್ರೀಡಂ ಯೋಜನೆ: ಆಹಾರ ಮತ್ತು ನೀರಿನ ಕೊರತೆಯನ್ನು ಎದುರಿಸುತ್ತಿರುವ ನಾವಿಕರಿಗೆ ಸಹಾಯ ಮಾಡಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಈ ಯೋಜನೆ ಘೋಷಿಸಿದ್ದರು. ನೂರಾರು ಹಡಗುಗಳು ಸಿಲುಕಿಕೊಂಡಿರುವ ಈ ಜಲಮಾರ್ಗದಲ್ಲಿ ವಾಣಿಜ್ಯ ಸಂಚಾರವನ್ನು ಪುನಃಸ್ಥಾಪಿಸಲು 15,000 ಸೇನಾ ಸಿಬ್ಬಂದಿ ಮತ್ತು 100 ವಿಮಾನಗಳನ್ನು ಈ ಕಾರ್ಯಾಚರಣೆಯಲ್ಲಿ ಬಳಸಿಕೊಳ್ಳುವ ಸಾಧ್ಯತೆಯಿದೆ.

ಪ್ರಾದೇಶಿಕ ಭದ್ರತಾ ಎಚ್ಚರಿಕೆ ಇದೇ ವೇಳೆ ಯುಎಇ ತನ್ನ ನಿವಾಸಿಗಳಿಗೆ ತುರ್ತು ಕ್ಷಿಪಣಿ ಎಚ್ಚರಿಕೆ ನೀಡಿದೆ. ಏಪ್ರಿಲ್‌ನಲ್ಲಿ ಕದನ ವಿರಾಮ ಜಾರಿಗೆ ಬಂದ ನಂತರ ನೀಡಲಾದ ಮೊದಲ ಎಚ್ಚರಿಕೆ ಇದಾಗಿದೆ. ಇದೇ ವೇಳೆ, ಜಲಸಂಧಿಯ ಮೂಲಕ ಹಾದುಹೋಗುತ್ತಿದ್ದ ಟ್ಯಾಂಕರ್ ಒಂದನ್ನು ಇರಾನ್ ಎರಡು ಡ್ರೋನ್‌ಗಳ ಮೂಲಕ ಗುರಿಪಡಿಸಿದೆ, ಎಂದು ಯುಎಇ ಆರೋಪಿಸಿದೆ.

ಆಧುನಿಕ ತಂತ್ರಜ್ಞಾನದಿಂದ ಸಿಂದೂರ ಯಶ

ಪ್ರಯಾಗ್‌ರಾಜ್: ಭಯೋತ್ಪಾದಕರು ಮತ್ತವರ ಆಶ್ರಯದಾತರಿಗೆ ನಿರ್ಣಾಯಕ ಹೊಡೆತ ನೀಡಲು, ಆಧುನಿಕ ತಂತ್ರಜ್ಞಾನವನ್ನು ಭಾರತೀಯ ಮಿಲಿಟರಿ ಸೂಕ್ತವಾಗಿ ಬಳಸಿಕೊಂಡದ್ದಕ್ಕೆ ವಿಶಿಷ್ಟ ದೃಷ್ಟಾಂತವಾಗಿದೆ, ಅದರ ಹೆಸರು ಆಪರೇಷನ್ ಸಿಂದೂರ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸೋಮವಾರ ಬಣ್ಣಿಸಿದ್ದಾರೆ. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಪ್ರಥಮ ವಾರ್ಷಿಕೋತ್ಸವ ದಿನ ಸಮೀಪಿಸುತ್ತಿರುವಂತೆ ಸಚಿವ ಸಿಂಗ್ ಕಾರ್ಯಾಚರಣೆ ನಡೆಸಿದ ಭಾರತೀಯ ಸೇನಾ ಪಡೆಯ ಸ್ಥೈರ್ಯ-ಸಾಮರ್ಥ್ಯಗಳನ್ನು ಕೊಂಡಾಡಿದ್ದಾರೆ. ಆಪರೇಷನ್ ಸಿಂದೂರ ಭಾರತೀಯ ಮಿಲಿಟರಿಯ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಜಗತ್ತಿಗೇ ಸಂದೇಶ ನೀಡಿದೆ ಎಂದು ಸಚಿವರು ನಾರ್ತ್ ಟೆಕ್ ಸಿಂಪೋಸಿಸಮ್‌ನ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ನುಡಿದರು. ಕಳೆದ ವರ್ಷ ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಅನ್ಯಾಯವಾಗಿ ಆಹುತಿಯಾಗಿದ್ದ ಭಾರತೀಯ ಪ್ರವಾಸಿಗರ ಸಾವಿಗೆ ನ್ಯಾಯ ನೀಡುವ ರೂಪದಲ್ಲಿ , ಮೇ 7ರಂದು ಆಪರೇಷನ್ ಸಿಂದೂರ ನಡೆದಿತ್ತು. ಪಾಕ್ ನಿಯಂತ್ರಿತ ಪ್ರದೇಶಗಳಲ್ಲಿದ್ದ ಭಯೋತ್ಪಾದಕರ ಮೂಲಸೌಕರ್ಯ-ಶಿಬಿರಗಳನ್ನು ನಿಖರವಾಗಿ ಗುರಿಯಾಗಿಸಿ ಕಾರ್ಯಾಚರಣೆ ನಡೆದಿತ್ತು.

ಬರೇ ಉಗ್ರರ ನಾಶ ಉತ್ತಮ ಅಂತ: ನಾಲ್ಕು ದಿನಗಳ ಕಾಲ ಭೀಕರವಾಗಿ ನಡೆದ ಸಂಘರ್ಷವು, ಮಿಲಿಟರಿ ಕಾರ್ಯಾಚರಣೆ ನಿಲ್ಲಿಸುವ ಬಗ್ಗೆ ಮೇ10ರಂದು ಏರ್ಪಟ್ಟ ಒಡಂಬಡಿಕೆಯಿಂದ ಸ್ಥಗಿತಗೊಂಡಿತ್ತು. ಏಕಕಾಲಕ್ಕೆ ಭಯೋತ್ಪಾದಕರು ಮತ್ತವರ ಆಶ್ರಯದಾತರಿಗೆ ನಮ್ಮ ಯೋಧರು ನೀಡಿದ ನಿರ್ಣಾಯಕ ಪ್ರತ್ಯುತ್ತರ ಬಗ್ಗೆ ಇಡೀ ದೇಶಕ್ಕೆ ದೇಶವೇ ಹೆಮ್ಮೆಪಟ್ಟಿದೆ. ನಾವು ಸಂಯಮ ಮೆರೆದು ಭಯೋತ್ಪಾದಕರನ್ನಷ್ಟೆ ನಿರ್ಮೂಲನಗೈದದ್ದು ಉತ್ತಮ ವಿಚಾರ ಅಥವಾ ನಮ್ಮ ಯೋಧಪಡೆಯ ಸಾಮರ್ಥ್ಯವೇನೆಂಬುದು ಇಡೀ ಜಗತ್ತಿಗೆ ವೇದ್ಯವಾಗಿದೆ. ತಂತ್ರಜ್ಞಾನ ಬಳಕೆಗೊಂದು ವಿಶಿಷ್ಟ ನಿದರ್ಶನವಾಗಿದೆ ಆಪರೇಶನ್ ಸಿಂದೂರ್ ಎಂದು ಸಚಿವರು ಪುನರುಚ್ಚರಿಸಿದರು.




ಶಸ್ತ್ರಗಳ ಆತ್ಮವಿಶ್ವಾಸದಿಂದ ಬಳಸುವ ಸಾಮರ್ಥ್ಯ: ಆಕಾಶ್, ಬ್ರಹ್ಮೋಸ್‌ನಂತಹ ಘನ ಕ್ಷಿಪಣಿಗಳ ಸಹಿತ ಅತ್ಯಾಧುನಿಕ ಸಖತ್ ಶಸ್ತ್ರಾಸ್ತ್ರಗಳು ಕಾರ್ಯಾಚರಣೆಯಲ್ಲಿ ಬಳಕೆಯಾಗಿತ್ತು . ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದಂತೆ ಅತ್ಯಾಧುನಿಕ ತಾಂತ್ರಿಕ ಬದಲಾವಣೆಗಳನ್ನು ಅರಿತುಕೊಂಡು, ಅವನ್ನು ಆತ್ಮವಿಶ್ವಾಸದಿಂದ ಬಳಸಲು ನಮ್ಮ ಯೋಧಪಡೆ ಸಖತ್ ಸಮರ್ಥವಿದೆ ಎಂಬುದನ್ನು ಆಪರೇಶನ್ ಸಿಂದೂರ್ ಸಾಬೀತುಪಡಿಸಿದೆ ಎಂದು ಸಚಿವ ಸಿಂಗ್ ಪ್ರಶಂಸಿಸಿದರು.

ಶತ್ರುಗಳ ಊಹೆಗೂ ನಿಲುಕದ ದಾಳಿ ಸಾಮರ್ಥ್ಯ: ಪ್ರಸ್ತುತ ಸನ್ನಿವೇಶದಲ್ಲಿ ತಂತ್ರಜ್ಞಾನಗಳು ಅಸಾಧಾರಣವೆಂಬಂತೆ ಬದಲಾಗುತ್ತಲೇ ಇವೆ. ಆದರೂ ಮಾನವ ಚರಿತ್ರೆಯಲ್ಲಿ ಇಷ್ಟೊಂದು ಸ್ಫೋಟಕ ಸದೃಶ ವಿಕಸನ ಕಂಡದ್ದಿಲ್ಲ. ಡ್ರೋನ್‌ಗಳು , ಸೆನ್ಸರ್‌ಗಳು ಗೇಮ್ ಚೇಂಜಿಂಗ್ ಅಂಶಗಳಾಗಿ ಹೊರಹೊಮ್ಮಿದ್ದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಇಂತಹ ಸಮಯದಲ್ಲಿ ಯಾವುದು ಶಸ್ತ್ರವಾಗಿ ಮಾರ್ಪಾಡಾದೀತು ಎಂದು ಲೆಕ್ಕ ಹಾಕುವಂತಿಲ್ಲ. ಪೇಜರ್ ಕೂಡ ಅಸ್ತ್ರವಾದರೂ ಆದೀತು. ಹಾಗಾಗಿ ಭವಿಷ್ಯದಲ್ಲಿ ಯಾವುದೆಲ್ಲ ಶಸ್ತ್ರವಾದೀತೆಂಬುದಕ್ಕೆ ಮಿತಿ ಎಂಬುದೇ ಇರುವುದಿಲ್ಲ. ಇಂತಹ ವಸ್ತುಸ್ಥಿತಿಯಲ್ಲಿ ಶತ್ರು ರಾಷ್ಟ್ರಗಳ ಕಲ್ಪನೆಗೂ ನಿಲುಕದ ತೆರ ದಾಳಿಗಳನ್ನು ನಡೆಸಲು ಪೂರಕ ಸಾಮರ್ಥ್ಯಗಳನ್ನು ಭಾರತ ಅಭಿವೃದ್ಧಿಪಡಿಸಬೇಕು ಎಂದು ಸಚಿವ ಸಿಂಗ್ ಅಭಿಪ್ರಾಯಪಟ್ಟರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5974



ಎಡದಿಂದ ಬಲಕ್ಕೆ

2.ಕೈಗಳಿಂದ ಕೆಲಸ ಮಾಡುವ ನೈಪುಣ್ಯ (5)
5.ಸುದ್ದಿ ಸಂಸ್ಥೆಯ ಮುಖ್ಯಸ್ಥ (4)
7.ಏಕ ಆಶಯವಿಲ್ಲಿ ಚಲನಚಿತ್ರವಾಗಿದೆ (4)
10.ಕೆಟ್ಟ ಸ್ವಭಾವದವನು-ದುಷ್ಟ (3)
11.ತೊಟ್ಟುಕೊಳ್ಳುವ ವಸ್ತ್ರ-ಆಭರಣಗಳು (3)
13.ಅಂದವಾಗಿ ಅಣ್ಣ ಅಲಂಕರಿಸಿದ್ದು ಈ ಪಲ್ಲಕ್ಕಿಯನ್ನು (3)
15.ಸತ್ವವೃತ್ತಿ ಹೊಂದಿದವನು (4)
16.ಹತ್ಯಾಕಾಂಡ-ಹಿಂಸಾಚಾರವಿದು (4)
17.ಕಿಟಕಿ ಬಳಿ ನಿಂತು ಆಡಿದ ಚುಚ್ಚುಮಾತು (3)

ಮೇಲಿನಿಂದ ಕೆಳಕ್ಕೆ

1.ಮನಸ್ಸಿನ ನಿರ್ಧಾರವಿಲ್ಲಿ ತಲೆಕೆಳಗಾಗಿದೆ (3)
2. ಹಂದರದ ಕೆಳಗೆ ಕಂಡ ವ್ಯಾಪಾರಿ (3)
3. ದೇವಸ್ಥಾನವಿಲ್ಲಿ ಉಲ್ಟಾ ಕಾಣುತ್ತಿದೆ (3)
4. ಈ ಕ್ರಾಸ್ ಬಗ್ಗೆ ಪೂಚಂತೆ ಬರೆದಿದ್ದಾರೆ (3)
6. ಕೆಟ್ಟ ಕೆಲಸಕ್ಕೆ ಹೆದರುವವನು (4)
8. ಮಕ್ಕಳು ಮರಳಿನಲ್ಲಿ ಕಟ್ಟಿದ ಸಣ್ಣಮನೆ (4)
9.ಗುಪ್ತವಾದ ಕಾಲುಗಳುಳ್ಳದ್ದು-ಹಾವು (4)
10.ಕೆಟ್ಟ ಕಣ್ಣಿನಿಂದ ನೋಡು (4)
12.ಸ್ನೇಹಬಂಧ-ಮಿತ್ರತ್ವವಿದು (4)
13.ಈ ಮೃತ್ಯುದೇವತೆಯನ್ನು ಕಂಡು ಆತಂಕವಾಯ್ತು (3)
14.ಬೆಳಕಿನ ರಶ್ಮಿ ತಲೆಕೆಳಗಾಗಿದೆ (3)

5973 ಉತ್ತರ

ಎಡದಿಂದ ಬಲಕ್ಕೆ:
2.ಗಾಢಾಂಧಕಾರ
5.ವಿರಾಗ 6.ವಿಚಾರ
7.ಲವಲವಿಕೆ
8.ಲತಾಗೃಹ
11.ಸರಸತಿ 13.ರುಧಿರ
14.ಗಾರಿಗೆ 16.ವಾಸುಕಿ
17.ನರವಾನರ

ಮೇಲಿನಿಂದ ಕೆಳಕ್ಕೆ:
1.ನಾಗಮಂಡಲ
2.ಗಾವಿಲ 3.ರವಿಕೆ
4.ನರಕಗತಿ 9.ತಾಳೆಗರಿ
10.ಹಸಿರು 11.ಸದರ
12.ಸರಳಿಸು 15.ನಗೆ
16.ವಾರ

ಕಿರುಸುದ್ದಿ

ಐತಿಹಾಸಿಕ ಮೈಲಿಗಲ್ಲು: ಜಿಗಜಿಣಗಿ



• **ವಿಜಯಪುರ:** ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, ದೇಶದ ಇತಿಹಾಸದಲ್ಲಿಯೇ ಇದೊಂದು ಐತಿಹಾಸಿಕ ಮೈಲಿಗಲ್ಲು, ದೇಶದೆಲ್ಲೆಡೆ ಹೊಸ ಸಂಚಲನ ಸೃಷ್ಟಿಯಾಗಿದ್ದು, ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಇಮ್ಮಡಿಸಿದೆ ಎಂದು ಸಂಸದ ರಮೇಶ ಜಿಗಜಿಣಗಿ ಪ್ರತಿಕ್ರಿಯಿಸಿದ್ದಾರೆ.

ಪಂಚರಾಜ್ಯಗಳ ಚುನಾವಣೆ ಫಲಿತಾಂಶ ಹೊರ ಬೀಳುತ್ತಿದ್ದಂತೆ ಪಶ್ಚಿಮ ಬಂಗಾಳದ ಫಲಿತಾಂಶ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡಿರುವ ಅವರು, ದಶಕಗಳ ಹೋರಾಟದ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ಕೇಸರಿ ಬಾವುಟ ಹಾರಾಡುತ್ತಿದೆ. ಇದು ಶಾಮ್‌ಪ್ರಸಾದ್ ಮುಖರ್ಜಿ ಅವರ ದೂರದೃಷ್ಟಿಯ ಫಲ ಮತ್ತು ಈ ಗೆಲುವು ಅವರ ಕನಸು ನನಸಾಗುತ್ತಿರುವುದರ ಪ್ರತೀಕ ಎಂದು ಕೊಂಡಾಡಿದರು. ಮುಂದಿನ ದಿನಮಾನಗಳಲ್ಲಿ ಕಾಂಗ್ರೆಸ್ ಹೇಳ ಹೆಸರಿಲ್ಲದಂತಾಗಲಿದೆ. ಕಾಂಗ್ರೆಸ್ ಮುಕ್ತ ಭಾರತದ ಕನಸು ನನಸಾಗುವ ದಿನಗಳು ದೂರವಿಲ್ಲವೆಂದು ಜಿಗಜಿಣಗಿ ಪ್ರತಿಕ್ರಿಯಿಸಿದ್ದಾರೆ.

ಬೌದ್ಧ ಸನ್ಯಾಸಿ ಹಂತಕರ ಬಂಧನ



• **ಧಾರವಾಡ/ಮುಂಡಗೋಡ:** ಮುಂಡಗೋಡ ಮೂಲದ ಬೌದ್ಧ ಸನ್ಯಾಸಿಯ ಕೊಲೆ ಪ್ರಕರಣವನ್ನು ಬೇಧಿಸುವಲ್ಲಿ ಧಾರವಾಡ ಗ್ರಾಮೀಣ ಪೊಲೀಸರು ಯಶಸ್ವಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಿದ್ದಾಗಿ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ ತಿಳಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೊಲ್ಲಾಪುರ ಮೂಲದ ಸಂಕೇತ ಸತ್ತಪ್ಪ ಯಾದವ (24), ವೈಭವ ಮಾರುತಿ ಚವ್ಹಾಣ (30), ಸಿದ್ದೇಶ ಸುನೀಲ ಬೋಸ್ಲೆ(18) ಬಂಧಿತ ಆರೋಪಿಗಳು. ಇನ್ನಿಬ್ಬರ ಬಂಧನಕ್ಕೆ ಜಾಲ ಬೀಸಲಾಗಿದೆ ಎಂದು ಮಾಹಿತಿ ನೀಡಿದರು. ಹಣಕ್ಕಾಗಿ ಈ ಕೃತ್ಯ ಎಸಗಿದ ಆರೋಪಿಗಳು, ಕಬ್ಬು ಕಟಾವು ಸೇರಿ ಬೇರೆ ಬೇರೆ ಕೆಲಸಕ್ಕೆ ಆಗಾಗ್ಗೆ ಮುಂಡಗೋಡಕ್ಕೆ ಬರುತ್ತಿದ್ದ ಈ ಆರೋಪಿಗಳು, ಏ.28ರಂದು ಕೊಲ್ಲಾಪುರದಿಂದ ಕಾರಿನಲ್ಲಿ ಮುಂಡಗೋಡಕ್ಕೆ ಬಂದು, ಮೂವರ ಮೇಲೆ ಹಲ್ಲೆ ಮಾಡಿದ್ದಾಗಿಯೂ ತಿಳಿಸಿದರು. ಕೊಲೆಯಾದ ಥಾಶಿ ದೊಂದೊಪ ಅವರನ್ನು ಅಪಹರಿಸಿ, ಹಣಕ್ಕೆ ಬೇಡಿಯೂ ಇಟ್ಟಿದ್ದು, ಕೈಕಾಲು ಕಟ್ಟಿ ತೀವ್ರ ಹಲ್ಲೆ ನಡೆಸಿದ್ದಾರೆ. ಅವರ ಮೂಗಿಗೆ ಬಲವಾಗಿ ಪೆಟ್ಟು ಬಿದ್ದು ಉಸಿರಾಟದ ಸಮಸ್ಯೆಯಿಂದ ಕಾರಿನಲ್ಲಿಯೇ ಥಾಶಿ ಮೃತಪಟ್ಟಾನೆ ಎಂದು ಆರ್ಯ ಹೇಳಿದರು.

ಮುಂಡಗೋಡದಿಂದ ಕಾರಿನಲ್ಲಿಯೇ ಶವ ಸಾಗಿಸಿದ ಆರೋಪಿಗಳು, ಹಳಿಯಾಳ ಸೇತುವೆ ಬಳಿಯ ಬೈಪಾಸ್‌ನಲ್ಲಿ ಎಸೆದು, ಕೊಲ್ಲಾಪುರಕ್ಕೆ ತೆರಳಿದ್ದು, ಸುಮಾರು 30ಕ್ಕೂ ಅಧಿಕ ಸಿಸಿ ಕ್ಯಾಮೆರಾ ಪರಿಶೀಲಿಸಿ, ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಗಿದೆ ಎಂದರು. ಆರೋಪಿಗಳ ಪತ್ತೆಯಲ್ಲಿ ಸಿಎನ್‌ಜಿ ಕಾರಿನ ಪಾತ್ರ ಪ್ರಮುಖ. ಕಾರು ಸಿಕ್ಕರೂ ಆರೋಪಿಗಳು ಪತ್ತೆಯಾಗಿರಲಿಲ್ಲ, ಆದರೆ, ಕಲಘಟಗಿ ಬಳಿಯಲ್ಲಿ ಸಿಎನ್‌ಜಿ ಹಾಕಿಸಿಕೊಳ್ಳಲು ಎಲ್ಲರೂ ಕಾರಿನಿಂದ ಇಳಿದಾಗ ಸಿಸಿ ಟಿವಿಯಲ್ಲಿ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಿದೆ ಎಂದರು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಕಡಲೆಕಾಳು	1889	5789
ಉದ್ದಿನಕಾಳು	4170	5511
ಹೆಸರು ಕಾಳು	1430	5089
ಜೋಳ	3329	3329
ಅಲಸಂಧಿ	3329	5004
ಮೆಕ್ಕೆಜೋಳ	1811	1912
ಈರುಳ್ಳಿ	500	1900
ಆಲೂಗಡ್ಡೆ	1200	1800
ಸೋಯಾಬಿನ್	6110	6370
ತೊಗರಿ	4150	4259
ಗೋಧಿ	1655	2695
ನೆಲಗಡಲೆ (ಶೇಂಗಾ)	4020	7126
ಒಣ ಮೆಣಸಿನಕಾಯಿ	4066	28669

ನೂತನ ಕಾರ್ಯಾಲಯ ಉದ್ಘಾಟನೆ | ಮಂಗೇಶ ಭೇಂಡೆ ಅಭಿಮತ

ರಾಷ್ಟ್ರ ನಿರ್ಮಾಣ ಸಂಘದ ಧ್ಯೇಯ

• **ಧಾರವಾಡ:** ಭಾರತ ಪರಮ ವೈಭವಕ್ಕೆ ಕೊಂಡೊಯ್ಯುವುದು ಸಂಘದ ಧ್ಯೇಯ. ಸರ್ವರು ರಾಷ್ಟ್ರದ ಹಿತಕ್ಕೆ ಕೆಲಸ ಮಾಡಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಅವರು ಕರೆ ನೀಡಿದರು.

ಇಲ್ಲಿನ ಶಿವಕೃಪಾ ಟ್ರಸ್ಟ್ ಸ್ಥಳೀಯ ರಾಮನಗರದ ಆದರ್ಶ ಬಾಲಿಕಾ ಪ್ರೌಢ ಶಾಲೆ ಮೈದಾನದಲ್ಲಿ ಸೋಮವಾರ ಹಮ್ಮಿಕೊಂಡ ಶಿವಕೃಪಾ ನೂತನ ಕಾರ್ಯಾಲಯ ಲೋಕಾರ್ಪಣೆಯ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಂಘದಕಾರ್ಯವೈಖರಿ ಮತ್ತು ರಾಷ್ಟ್ರನಿರ್ಮಾಣದ ಬಗ್ಗೆ ಬೆಳಕು ಚೆಲ್ಲಿದ ಅವರು, ಕಾರ್ಯಾಲಯ ಕೇವಲ ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಿದ ಕಟ್ಟಡವಲ್ಲ, ಅದು ಸಮಾಜದ ಪರಿವರ್ತನೆಗೆ ಪೂರಕವಾದ ವಿಚಾರಗಳ ಮಂಥನ ಮಾಡುವ ಕೇಂದ್ರ ಎಂದರು.

ಪ್ರತಿ ವ್ಯಕ್ತಿಯ ರಾಷ್ಟ್ರ ಭಕ್ತಿ ಮೆರೆಯಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯ ಸೇವೆಗೆ ಸಿದ್ಧನಿರಬೇಕು. ಸಂಘಟನಾ ಶಕ್ತಿ ಹೆಚ್ಚಿಸಬೇಕು. ಸಂಘಟಿತ ಸಮಾಜ ರಾಷ್ಟ್ರದ ಆಸ್ತಿ. ಹೀಗಾಗಿ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕರೆ ನೀಡಿದರು.

ಶಿಸ್ತು, ಸಂಯಮ ಮತ್ತು ರಾಷ್ಟ್ರ ಪ್ರೇಮವುಳ್ಳ ವ್ಯಕ್ತಿಗಳಿಂದ ಮಾತ್ರ ಸದೃಢ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಹೊಸ ಕಾರ್ಯಾಲಯ ಪ್ರೇರಣಾ ಕೇಂದ್ರ. ಈ ಕೇಂದ್ರ ಸಮಾಜದ ವಿವಿಧ ವರ್ಗಗಳನ್ನು ಒಗ್ಗೂಡಿಸಿ, ಶಕ್ತಿ ಕೇಂದ್ರವಾಗಿ ಬೆಳೆಸಲು ಹೇಳಿದರು.

ಸಂಘದ ಕಾರ್ಯವು ಕೇವಲ ಶಾಖೆಗಳಿಗೆ ಸೀಮಿತವಾಗದೆ. ಸಮಾಜದ ಕಟ್ಟಕಡೆ ವ್ಯಕ್ತಿಯ ಬದುಕಿನಲ್ಲಿ ಬೆಳಕು ತರಬೇಕು. ಸೇವಾ ಚಟುವಟಿಕೆಗಳಿಂದ ಎಲ್ಲರನ್ನೂ ರಾಷ್ಟ್ರದ ಮುಖ್ಯ ವಾಹಿನಿಗೆ ತರುವುದು ಸ್ವಯಂಸೇವಕರ ಜವಾಬ್ದಾರಿ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಅಮ್ಮಿನಬಾವಿ ಅಭಿನವ ಶಾಂತಲಿಂಗ ಶಿವಾಚಾರ್ಯ ಶ್ರೀಗಳು, ದೇಶದ ಆಂತರಿಕ ಮತ್ತು ಬಾಹ್ಯ ಶಕ್ತಿ ಸವಾಲು ಎದುರಿಸಲು ಸಂಘಟನೆ ಅಗತ್ಯ. ನಾವೆಲ್ಲ ಬೇಧ-ಭಾವ ಮರೆತು ಭಾರತಮಾತೆ ಸೇವೆಗೆ ಅಣಿಯಾಗಬೇಕು ಎಂದು ಹೇಳಿದರು.


ವೇದಿಕೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಂಘ ಚಾಲಕರಾದ ಬಸವರಾಜ ಡಂಬಳ, ಜಿಲ್ಲಾ ಸಂಘ ಚಾಲಕರಾದ ಡಾ.ವೇದವ್ಯಾಸ ದೇಶಪಾಂಡೆ, ಶಿವಕೃಪಾ ಟ್ರಸ್ಟ್ ಅಧ್ಯಕ್ಷ ಅಮರ ಟಿಕಾರೆ ಇದ್ದರು.



> ಶಿವಕೃಪಾ ಕಾರ್ಯಾಲಯವು ಸಮಾಜದ ಪ್ರತಿಯೊಬ್ಬರಿಗೂ ಮುಕ್ತವಾಗಿರಲಿ. ಇಲ್ಲಿಂದ ಹೊರಹೊಮ್ಮುವ ವಿಚಾರಗಳು ರಾಷ್ಟ್ರದ ಏಳಿಗೆಗೆ ಪೂರಕವಾಗಿಯೂ ಇರಲಿ.
>
> ■ **ಮಂಗೇಶ ಭೇಂಡೆ, ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ, ರಾಷ್ಟ್ರೀಯ ಸ್ವಯಂಸೇವಕ ಸಂಘ**

ಸಚಿವ ಶಿವಾನಂದ ಪಾಟೀಲ ಹೇಳಿಕೆ

ಸರ್ಕಾರದ ಸಾಧನೆಗೆ ಮತದಾರರ ಮನ್ನಣೆ



• **ವಿಜಯಪುರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ವಿಜಯ ಸಾಧಿಸಿದ್ದಾರೆ. ಈ ಗೆಲುವು ರಾಜ್ಯ ಸರ್ಕಾರದ ಸಾಧನೆಗೆ ಮತದಾರರು ನೀಡಿರುವ ಮನ್ನಣೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಪ್ರತಿಕ್ರಿಯೆ ನೀಡಿದ್ದಾರೆ.

ಬಿಜೆಪಿ ಮುಖಂಡರು ಪ್ರಚೋದನಕಾರಿ ಭಾಷಣಗಳ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಎಷ್ಟೇ ಅಪಪ್ರಚಾರ ನಡೆಸಿದರೂ ಮತದಾರರು ಮಾತ್ರ ಅಭಿವೃದ್ಧಿ ಮತ್ತು ಸಮಾಜದಲ್ಲಿ ಶಾಂತಿಯನ್ನು ಬಯಸಿ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ಉಮೇಶ ಮೇಟಿ ಮತ್ತು ಸಮರ್ಥ ಶಾಮನೂರು ಅವರನ್ನು ಆಯ್ಕೆ ಮಾಡಿದ್ದಾರೆ ಎಂದು ಅವರು ವಿಶ್ಲೇಷಣೆ ಮಾಡಿದ್ದಾರೆ.

ಪ್ರಚಾರದ ವೇಳೆ ರಾಜ್ಯ ಸರ್ಕಾರವನ್ನು ಲಘುವಾಗಿ ಟೀಕೆ ಮಾಡಲಾಯಿತು. ಮತ ವಿಭಜನೆಯ ಪ್ರಯತ್ನಗಳೂ ನಡೆದವು. ಆದರೆ, ಮತದಾರರು ಅಪಪ್ರಚಾರಗಳಿಗೆ ಮನ್ನಣೆ ನೀಡಲಿಲ್ಲ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಕೈ ಬಲಪಡಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಮೇಶ ಮೇಟಿ ಮತ್ತು ಸಮರ್ಥ ಶಾಮನೂರು ಅವರಿಗೆ ಅಭಿನಂದನೆ ಸಲ್ಲಿಸಿರುವ ಸಚಿವ ಶಿವಾನಂದ ಪಾಟೀಲ ಅವರು, ನೂತನ ಶಾಸಕರು ಕ್ಷೇತ್ರಗಳನ್ನು ಮಾದರಿಯಾಗಿ ಅಭಿವೃದ್ಧಿಪಡಿಸಲಿ ಎಂದು ಆಶಿಸಿದ್ದಾರೆ.

ವಿಜಯಪುರದ ಶಾಸಕರೊಬ್ಬರು ಬಾಗಲಕೋಟೆಯಲ್ಲಿ ನನ್ನ ಹಾಗೂ ನನ್ನ ಪುತ್ರಿಯ ವಿರುದ್ಧ ಹಗುರ ಪದ ಬಳಸಿ, ಅಪಪ್ರಚಾರ ಮಾಡುವ ಮೂಲಕ ಬಿಜೆಪಿ ಸೋಲಿಸುವ ಗುರಿ ಈಡೇರಿಸಿಕೊಂಡಿದ್ದು, ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಲು ನೆರವಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಬಿಜೆಪಿ ಸೋಲಿಸುವ ಆಂತರಿಕ ಉದ್ದೇಶದಿಂದ ವಿಜಯಪುರದ ಶಾಸಕ ಹಾವೇರಿ ಜಿಲ್ಲೆಯ ಉಪ ಚುನಾವಣೆಗಳಲ್ಲೂ ಪ್ರಚಾರ ಮಾಡಿದ್ದರಿಂದ ಬಿಜೆಪಿ ಸೋತಿದೆ. ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ಸದರಿ ಶಾಸಕ ಪ್ರಚಾರ ಮಾಡಿದ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಸೋತಿದ್ದು, ಕಾಂಗ್ರೆಸ್ ವಿಜಯ ಸಾಧಿಸಿದೆ ಎಂದು ಕುಟುಕಿದ್ದಾರೆ.

ಜನಪರ ಸರ್ಕಾರ ಎನ್ನುವುದಕ್ಕೆ ಫಲಿತಾಂಶವೇ ಸಾಕ್ಷಿ: ಹೆಬ್ಬಾಳ್ಕರ್



• **ಬೆಳಗಾವಿ:** ಕರ್ನಾಟಕದಲ್ಲಿ ನಮ್ಮ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಕೇವಲ ಘೋಷಣೆಗಳಲ್ಲ, ಜನರ ದಿನನಿತ್ಯದ ಬದುಕಿಗೆ ನಿಜವಾದ ಬೆಂಬಲವಾಗಿ ಪರಿಣಮಿಸಿವೆ. ಜನರ ಕಷ್ಟ, ನೋವು, ಅಗತ್ಯಗಳಿಗೆ ಸ್ಪಂದಿಸಿದ ನಮ್ಮ ಸರ್ಕಾರಕ್ಕೆ ಜನರು ಇದೀಗ ಉಪಚುನಾವಣೆ ಫಲಿತಾಂಶಗಳ ಮೂಲಕ ಸ್ಪಷ್ಟವಾದ ಮನ್ನಣೆ ನೀಡಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಈ ಕುರಿತು ಹೇಳಿಕೆ ನೀಡಿರುವ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಜನರು ನಮ್ಮ ಜನಪರ ಆಡಳಿತವನ್ನು ಸ್ವೀಕರಿಸಿರುವುದಕ್ಕೆ ಸ್ಪಷ್ಟ ಉದಾಹರಣೆ. ಇದು ಕೇವಲ ರಾಜಕೀಯ ಗೆಲುವಲ್ಲ, ಜನರ ವಿಶ್ವಾಸದ ಗೆಲುವಾಗಿದೆ ಎಂದರು. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಮನೆಮನೆಗೂ ತಲುಪಿ, ಮಹಿಳೆಯರು, ಯುವಕರು, ಬಡವರು, ರೈತರು ಸೇರಿದಂತೆ ಪ್ರತಿಯೊಂದು ವರ್ಗದ ಜನರಿಗೆ ಸಹಾಯವಾಗಿವೆ. ಇದೇ ಕಾರಣಕ್ಕೆ ಜನರು ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದ್ದಾರೆ. ಬಿಜೆಪಿಯ ವಿರುದ್ಧ ಜನರು ಸ್ಪಷ್ಟ ಸಂದೇಶ ನೀಡಿದ್ದಾರೆ.

ಸುಳ್ಳು ಪ್ರಚಾರ ಮತ್ತು ಜನವಿರೋಧಿ ನೀತಿಗಳಿಗೆ ಕರ್ನಾಟಕದ ಜನರು ತಕ್ಕ ಉತ್ತರ ನೀಡಿದ್ದಾರೆ ಎಂದು ಹೆಬ್ಬಾಳ್ಕರ್ ಹೇಳಿದರು.

ಇದು ನಮ್ಮ ಸರ್ಕಾರದ ಕೆಲಸಕ್ಕೆ ಸಿಕ್ಕಿರುವ ಜನರ ಸರ್ಟಿಫಿಕೇಟ್. ಮುಂದೆಯೂ ಇದೇ ರೀತಿಯಾಗಿ ಜನಪರ ಯೋಜನೆಗಳನ್ನು ಇನ್ನಷ್ಟು ಬಲಪಡಿಸಿ, ಜನರ ವಿಶ್ವಾಸವನ್ನು ಉಳಿಸಿಕೊಂಡು ಸಾಗುವುದು ನಮ್ಮ ಬದ್ಧತೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿದ ಬಿಎಸ್‌ವೈ: ವೈ.ಎಂ.ಸತೀಶ್



• **ಬಳ್ಳಾರಿ:** ರಾಜ್ಯದಲ್ಲಿ ಬಿಜೆಪಿ ಕಟ್ಟಿದ ಧೀರ, ರೈತ ನಾಯಕ, ರೈತರಿಗಾಗಿಯೇ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ರಾಜಕೀಯ ಸಾಧನೆ ಹಿನ್ನೆಲೆ ಮೇ 9ರಂದು ಆಯೋಜಿಸಿದ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಪ್ರತಿಯೊಬ್ಬರೂ ಭಾಗವಹಿಸಿ ನಮ್ಮ ಯಡಿಯೂರಪ್ಪ ಅವರ ಕೈ ಬಲಪಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಮನವಿ ಮಾಡಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯಕ್ಕೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಕೊಡುಗೆ ಸಾಕಷ್ಟಿದೆ. ಇದನ್ನು ಯಾರು ಮರೆಯೋಲ್ಲ, ಅವರ 50 ವರ್ಷಗಳ ಸುದೀರ್ಘ ರಾಜಕೀಯ ಸಾರ್ಥಕ ಜೀವನ ಸಾಧನೆಯ ಅಭಿಮಾನೋತ್ಸವಕ್ಕೆ ಗಣಿ ಜಿಲ್ಲೆ ಬಳ್ಳಾರಿ ಜಿಲ್ಲೆಯಿಂದ 25 ರಿಂದ 30 ಸಾವಿರಕ್ಕೂ ಹೆಚ್ಚು ಜನರು ತೆರಳುತ್ತಿದ್ದಾರೆ. ರಾಜ್ಯ ಸೇರಿದಂತೆ ದೇಶದ ನಾನಾ ಮೂಲೆ ಮೂಲೆಗಳಿಂದ ಲಕ್ಷಾಂತರ ಜನರು ಭಾಗವಹಿಸಲಿದ್ದು, ಜಿಲ್ಲೆ, ರಾಜ್ಯ, ದೇಶ ವಿದೇಶಗಳಲ್ಲೂ ಅವರ ಅಭಿಮಾನಿಗಳಿದ್ದು, ಬೆಂಬಲಿಗರಿದ್ದು, ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಮಾತನಾಡಿ, ಚಿತ್ರದುರ್ಗ ನಗರದ ದಾವಣಗೆರೆ ರಸ್ತೆಯ ಮಾದರ ಚನ್ನಯ್ಯ ಶ್ರೀಮಠದ ಪಕ್ಕದ ಆವರಣದಲ್ಲಿ ಮೇ 9ರಂದು ಅಭಿಮಾನೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಲಿದ್ದು, ಅನೇಕ ಜನರು, ಗಣ್ಯರು ಮೇ 8ರಂದೇ ತೆರಳಲಿದ್ದಾರೆ. ಇನ್ನು ಕೆಲವರು ಮೇ 9ರಂದು ತೆರಳಲಿದ್ದಾರೆ. ಗಣಿನಾಡು ಬಳ್ಳಾರಿ ಜಿಲ್ಲೆಯಿಂದ 250 ಸಾರಿಗೆ ಬಸ್, 100ಕ್ಕೂ ಹೆಚ್ಚು ಕ್ರೂಸರ್ ಸೇರಿದಂತೆ ವಿವಿಧ ವಾಹನಗಳ ಮೂಲಕ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ತೆರಳಲಿದ್ದಾರೆ. ಕೆಲವರು ಸ್ವಂತ ವಾಹನಗಳ ಮೂಲಕ ತೆರಳಲಿದ್ದಾರೆ ಎಂದರು.

ಅಭಿವೃದ್ಧಿ ಹರಿಕಾರ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳು ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿವೆ. ಅವಧಿಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಕೋಟ್ಯಂತರ ರೂ.ಅನುದಾನ ಬಿಡುಗಡೆ ಮಾಡುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಇಂತಹ ನಾಯಕರನ್ನು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ. ಪ್ರತಿಯೊಬ್ಬರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಗುತ್ತಿಗನೂರು ವಿರೂಪಾಕ್ಷಗೌಡ, ಖಾರದಪುಡಿ ಮುದ್ದನ ಗೌಡ, ಗಾಳಿ ಶಂಕ್ರಪ್ಪ, ಅಡವಿಸ್ವಾಮಿ, ಗುಗ್ಗರಹಟ್ಟಿ ರಾಮಾಂಜಿನಿ, ಸುನಿಲ್ ರೆಡ್ಡಿ, ಮುರಹರ ಗೌಡ ಸೇರಿದಂತೆ ಇತರರಿದ್ದರು.

ಸಂಭ್ರಮಾಚರಣೆ ವೇಳೆ ಟ್ರ್ಯಾಕ್ಟರ್ ಹರಿದು ಬಾಲಕಿ ಸಾವು

• **ಅಮೀನಗಡ:** ಬಾಗಲಕೋಟೆ ಉಪಚುನಾವಣೆಯ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಸಂಭ್ರಮಾಚರಣೆಯಲ್ಲಿದ್ದ ಗ್ರಾಮವೊಂದರಲ್ಲಿ ಘೋರ ದುರಂತವೊಂದು ಸಂಭವಿಸಿದೆ.

ವಿಜಯೋತ್ಸವದ ರ್‍ಯಾಲಿಯ ವೇಳೆ ಟ್ರ್ಯಾಕ್ಟರ್ ಹರಿದು ಬಾಲಕಿಯೊಬ್ಬಳು ಸ್ಥಳದಲ್ಲೇ ಮೃತಪಟ್ಟ ಘಟನೆ ಅಮೀನಗಡ ಪೊಲೀಸ್ ಠಾಣಾ ವ್ಯಾಪ್ತಿಯ ಕಡಿವಾಲ-ಕಲ್ಲಾಪುರ ಗ್ರಾಮದಲ್ಲಿ ನಡೆದಿದೆ.

ಬಾಗಲಕೋಟೆ ಉಪಚುನಾವಣೆಯ ಫಲಿತಾಂಶ ಹೊರ ಬೀಳುತ್ತಿದ್ದಂತೆ, ವಿಜೇತ ಅಭ್ಯರ್ಥಿಯ ಬೆಂಬಲಿಗರು ಕಡಿವಾಲ-ಕಲ್ಲಾಪುರ ಗ್ರಾಮದಲ್ಲಿ ಭರ್ಜರಿ ವಿಜಯೋತ್ಸವ ಹಮ್ಮಿಕೊಂಡಿದ್ದರು. ಡಿಜೆ ಶಬ್ದ, ಪಟಾಕಿ ಸಿಡಿತ ಹಾಗೂ ನೃತ್ಯದೊಂದಿಗೆ ಮೆರವಣಿಗೆ ಸಾಗುತ್ತಿತ್ತು. ಈ ವೇಳೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಿಸುತ್ತಿದ್ದ ಟ್ರ್ಯಾಕ್ಟರ್, ಮೆರವಣಿಗೆ ವೀಕ್ಷಿಸುತ್ತಿದ್ದ ಬಾಲಕಿಯ ಮೇಲೆ ಹರಿದಿದೆ.

ಆಕ್ರೋಶಗೊಂಡ ಗ್ರಾಮಸ್ಥರು ಘಟನೆ ಸಂಭವಿಸುತ್ತಿದ್ದಂತೆ ಮೆರವಣಿಗೆಯಲ್ಲಿದ್ದ ಜನರು ಆತಂಕಕ್ಕೊಳಗಾದರು. ಮೃತ ಬಾಲಕಿಯ ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ವಿಜಯೋತ್ಸವದ ಹೆಸರಿನಲ್ಲಿ ನಿಯಮ ಮೀರಿ ವಾಹನ ಚಲಾಯಿಸಿದ್ದೇ ಈ ಅವಘಡಕ್ಕೆ ಕಾರಣ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೊಲೀಸ್ ಭೇಟಿ ವಿಷಯ ತಿಳಿಯುತ್ತಿದ್ದಂತೆ ಅಮೀನಗಡ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಟ್ರ್ಯಾಕ್ಟರ್ ಚಾಲಕನನ್ನು ವಶಕ್ಕೆ ಪಡೆಯಲಾಗಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಕಾಂಗ್ರೆಸ್ ಗೆಲುವಿಗೆ 200 ಕೋಟಿ ರೂ. ಹಂಚಿದೆ: ಸವದಿ



• **ರಬಕವಿ-ಬನಹಟ್ಟಿ:** ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸುಮಾರು 200 ಕೋಟಿಗೂ ಅಧಿಕ ಹಣ ಹಂಚಿಕೆ ಮಾಡಿ ಧರ್ಮದ ಮುಂದೆ ಅಧರ್ಮ ಗೆದ್ದಿದೆಯೆಂದು ತೇರದಾಳ ಶಾಸಕ ಸಿದ್ದು ಸವದಿ ಆರೋಪಿಸಿದರು. ಸೋಮವಾರ ಬನಹಟ್ಟಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವದೇ ಅಭಿವೃದ್ಧಿ ಕೆಲಸಗಳನ್ನು ಮಾಡದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರ ನಡೆಸುವಲ್ಲಿ ಸಂಪೂರ್ಣ ವೈಫಲ್ಯ ಕಂಡಿದೆ. ಇದರಿಂದ ಉಪಚುನಾವಣೆಯಲ್ಲಿ ಸೋಲುವಭೀತಿಯಿಂದ ಹಣದ ಹೊಳೆ ಹರಿಸುವ ಮೂಲಕ ಮತದಾರರನ್ನು ಸೆಳೆಯುವಲ್ಲಿ ಕಾರಣ ರಾಗಿದ್ದಾರೆ. ಇಂತಹ ಅನೀತಿ ಕಾರ್ಯದಲ್ಲಿ ಕಾಂಗ್ರೆಸ್ಸಿಗರು ನಿಸ್ಸೀಮರೆಂದು ಸವದಿ ಕಾಂಗ್ರೆಸ್ ಪಕ್ಷದ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಪಶ್ಚಿಮ ಬಂಗಾಳದಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ಸ್ಥಾನಗಳು ದೊರಕಿದ್ದು, ದೇಶದ ಮುಂದಿನ ಭವಿಷ್ಯದ ದಿಕ್ಸೂಚಿಗೆ ಕಾರಣವಾಗಿದ್ದು, ಮುಂದಿನ ಚುನಾವಣೆಗಳಿಗೆ ಪಶ್ಚಿಮ ಬಂಗಾಳ ಮುನ್ನುಡಿಯಾಗಿದೆಯೆಂದು ಸವದಿ ಹೇಳಿದರು.

ಸಾರ್ವಜನಿಕ ಪ್ರಕಟಣೆ

ನಾನು ಶ್ರೀ ಕೆ.ಪಿ ಹರವಿ, ವಕೀಲರು, ಬನ್ನಿ ಕಾಂಪ್ಲೆಕ್ಸ್, ಪಿ.ಬಿ ರಸ್ತೆ, ಹಾವೇರಿ ಫೋನ್ ನಂ. 7795330206 ಆದ ನಾನು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ,

ನಮ್ಮ ಪಕ್ಷಗಾರರಾದ ಡಾ॥ ಬಸವರಾಜ ತಂದೆ ಮಲ್ಲಿಕಾರ್ಜುನ ಹಿಪ್ಪರಗಿ ಸಾ॥ ಹಾವೇರಿ, ತಾ॥ ಹಾವೇರಿ ಇವರು ಕೊಟ್ಟ ಮಾಹಿತಿ ಏನೆಂದರೆ, ಸದರಿಯವರ ತಂದೆಯಾದ ಡಾ॥ ಮಲ್ಲಿಕಾರ್ಜುನಪ್ಪ ತಂದೆ ಹಳಕಟ್ಟೆಪ್ಪ ಹಿಪ್ಪರಗಿ ಹಾಗೂ ಇತರರು ಹಾವೇರಿಯ ಸಿಟಿಎಸ್ ನಂ. 3336/6 ಹಾಗೂ 3336/7 ಆಸ್ತಿಗಳನ್ನು 1) ರಾಮರಾವ ತಂದೆ ಗುರುರಾವ ಮೊಕ್ತಾಲಿ, 2) ರಂಗರಾವ 3) ನಾರಾಯಣರಾವ, 4) ಪ್ರಹ್ಲಾದ ತಂದೆ ರಾಮರಾವ ಮೊಕ್ತಾಲಿ ಇವರಿಂದ ನೋಂದಾಯಿತ ಖರೀದಿ ಪತ್ರದ ಮೂಲಕ ದಿನಾಂಕ: 23-08-1984 ರಂದು ಖರೀದಿ ಹಿಡಿದಿರುತ್ತಾರೆ. ಸದರ ಖರೀದಿ ಪತ್ರವು ಹಾವೇರಿ ಉಪ-ನೋಂದಣಿ ಅಧಿಕಾರಿಗಳು ಇವರಲ್ಲಿ 710/1984-85ರಲ್ಲಿ ನೋಂದಾವಣೆ ಆಗಿರುತ್ತದೆ. ದಿನಾಂಕ 23-08-1984 ರಂದು ನೋಂದಾದ ಮೂಲ ಖರೀದಿ ಪತ್ರವು ಹಾವೇರಿಯ ಎಲ್.ಐ.ಸಿ. ಕಛೇರಿಯ ಹತ್ತಿರ ಝುರಾಕ್ಸ್ ಮಾಡಿಕೊಂಡು ಬರುವಾಗ ದಿನಾಂಕ: 02-05-2026 ರಂದು ಕಳೆದು ಹೋಗಿರುತ್ತದೆ. ನಂತರ ನಮ್ಮ ಪಕ್ಷಗಾರರು ಹುಡುಕಿದರು ಸಿಕ್ಕಿರುವುದಿಲ್ಲ. ಆದ್ದರಿಂದ ನಮ್ಮ ಪಕ್ಷಗಾರರು ದಿನಾಂಕ: 03-05-2026 ರಂದು ಫಿರ್ಯಾದಿ ನೀಡಿರುತ್ತಾರೆ.

ಕಾರಣ, ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಿನಾಂಕ: 23-08-1984 ರಂದು ನೋಂದಾದ ಮೂಲ ಖರೀದಿ ಪತ್ರ ಯಾರಿಗಾದರೂ ಸಿಕ್ಕರೆ 7 ದಿನದೊಳಗಾಗಿ ನನ್ನ ಕಛೇರಿಗೆ ಅಥವಾ ನಮ್ಮ ಪಕ್ಷಗಾರರಿಗೆ ತಲುಪಿಸಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಸ್ಥಳ: ಹಾವೇರಿ
ದಿನಾಂಕ : 04-05-2026

ಸಹಿ/- ಕೆ.ಪಿ. ಹರವಿ
ವಕೀಲರು, ಬನ್ನಿ ಕಾಂಪ್ಲೇಕ್ಸ್, ಪಿ.ಬಿ ರಸ್ತೆ ಹಾವೇರಿ

PUBLIC NOTICE

This is to notify the general public regarding the loss of original sale deed dated 23-09-1996, which has been executed by Krishnarao S/o. Srinivasrao Karkal in fevour of Basavarajswami S/o. Sangayyaswami Hiremath for Rs 4,500/-related to the property bearing Ilkal CTS No. 4492 measuring 202.34 sqmts situated at Ilkal town in Hungund taluka and district Bagalkot Karanataka state. The said property bounded with East: Road, West: Road, North: Property belongs to Maheshwarappa Sajjanar, South: Municipality water tank and the said sale deed was duly registered before sub register office at Hungund on 23-09-1996 in Book No. 1 its volume No. 1050 at page No. 70-72 with document No. 1061 and it was lost by Basavarajswami S/o. Sangayyaswami Hiremath at Ilkal town. All the efforts to trace the said document has proved abortive. Also the property covered under the above said sale deed has not been mortgaged in fevour of any financial institution. If the said document is found kindly contact the nearest Police Station as Basavarajswami S/o. Sangayyaswami Hiremath has registered a petition in this regard before Ilkal police Station on 22-09-2015 with petition No. PO1242150600065 to that effect 76A form has been issued by the SHO Ilkal. Now I have purchased the above said property from deceased Basavarajswami S/o. Sangayyaswami Hiremath his lrs by name's Smt. Jyoti W/o. Basavarajaswami Hiremath, Mahalaxmi D/o. Basavaraj Hiremath, Smt. Pooja Prabhuswami Vibhutimath and Veeresh Basavarajaswami Hiremath, I Dr. Basavaraj S/o Devappagouda Nadagouda want to avail loan from State Bank Of India branch Ilkal with Branch Code SBIN0040312. If any body has claim towards the above said property can approach the said branch and file objections within 7 days from the date of this publication.

Sd/-
DR BASAVARAJ S/O DEVAPPAGOUDA NADAGOUDA
Ward No. 7, ILKAL. PH No. 9986437533

CHANGE OF NAME

I, **RADHIKA HUILGOL** (Old Name) Resident of 383, Jagaruth Circle, Mundargi, Gadag, Karnataka, Pin Code: 582118, have changed my name as **RADHIKA SUDHEENDRA KULKARNI** (New Name) henceforth I will be called and recognized by new name for all future purposes, dated: 04/05/2026.

IN THE COURT OF THE 4th ADDL CIVIL JUDGE AND JMFC AT BELLARI

Crl. M.C. No. 90/2026

BETWEEN :-
1) Lakshmamma W/o Late Shankrappa, aged about 52 years, 2) Mahesha S/o Late Shankrappa, aged about 28 years. 3) Dodda Basappa H S/o Late Shankrappa, aged about 26 years, All are R/o sindhuvata village Bellari Taluk and district ....Petitioners

And

The registrar of birth and death Tahasildar taluk office Ballari taluk Ballari District .....Respondent

NOTICE

WHEREAS, the above named petitioner has filed the above petition under section 13(2) of birth and deaths act 1969 against the respondent for the purpose of seeting date of death of petitioners grandfather by name LATE. SHIVAPPA S/O LATE AYYAPPA 04/10/2003 at Sindhuvala village Bellari Taluk and district in the above mentioned address against the respondent.

Therefore, if any persons are interested you are hereby directed to appear In this court in person or by a pleader duly instructed on 6/6/2026 at about 11:00 am to show cause against the above suit, failing which the suit will be heard and determined ex-party against you.

Given under my hand and seal of the court on this 23rd day of April 2026.

BY ORDER OF THIS COURT
Sd/- Shiresthedar
4th Addl Civil Judge & JMFC Court Ballari
Sd/- M. Veerendra
Advocates for the petitioners Ballari

IN THE COURT OF THE HON'BLE V ADDITIONAL CIVIL JUDGE, CUM J.M.F.C. AT BALLARI

Cri. M.C. NO. 186/2026

Between :
Mahalingappa .....Petitioner

And

The Tahasildar cum Register of Births and Deaths, Taluk Office, Kurugodu .....Respondent

NOTICE

TO WHOM SO EVER IT MAY CONCERNED

To
Respondent:
The Tahasildar cum Register of Births and Deaths, Taluk Office, Kurugodu

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioner grandmother by name BADAKA ERAMMA W/o Late. GOVINDAPPA who died 01-08-1970 at above stated address at Ward No. 4, Harijanakeri, Badanahatti Village, Kurugodu Taluk, Ballari District.

You are here by directed to appear in this court in person or by a pleader duly instructed on 09/06/2026 at about 10.30 am in the V.A.C.J & J.M.F.C before this court to show cause against the above petitions filling wherein the petition will be heard and determined ex-parte.

Given under my hand and seal of the court on this day of 4th day of May-2026.

By order of the court.
Sd/- Chief Ministerial officer
Hon'ble V.A.C.J & J.M.F.C. Court Ballari.
Sd/- Ghanamalli M.
Advocate for the Petitioner

ಮಾನ್ಯ ಛಿನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಪಿ. ಸಂಖ್ಯೆ : 487 /2026

ಅರ್ಜಿದಾರರು : ಎಚ್.ಕೆ. ಮಹಮ್ಮದ್ ರಫಿ ತಂದೆ ಹೊನ್ನೂರಸಾಬ್, ವಯಸ್ಸು: 64 ವರ್ಷ, ವಾಸ: ಹೀರಾಳ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ರಿಂದ 3ರವರ ತಾಯಿಯಾದ ಆಯಿಶಾ ಗಂಡ ಹೊನ್ನೂರಸಾಬ್ ಇವರು ದಿನಾಂಕ : 02/08/1969 ರಂದು ಹೀರಾಳ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 08.06.2006 ಬೆಳಿಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ :04/05/2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಹಿ/- ಹೆಚ್.ಕೆ. ಬಸವರಾಜ್
ಅರ್ಜಿದಾರರ ಪರ ವಕೀಲರು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕ್ರಿ ಮಿ. ನಂ : 51/2026
ಮಾನ್ಯ ದಿವಾಣಿ ನ್ಯಾಯಾಧೀಶರು, ಜೆ.ಎಮ್.ಎಫ್.ಸಿ. ನ್ಯಾಯಾಲಯ ಕಲಘಟಗಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀ ತುಕಾರಾಮ ತಂದೆ ಯಲ್ಲಪ್ಪ ವಡ್ಡರ

ವಿರುದ್ಧ

ಎದುರುಗಾರರು : ಮೇ॥ ತಹಶೀಲ್ದಾರರು, ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ, ಹಾಗೂ ಇನ್ನೊಬ್ಬರು

ನೈಟೀಶನ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರನ ಅಜ್ಜನಾದ ಅಂದರೆ ಅರ್ಜಿದಾರನ ತಂದೆಯ ತಂದೆ-ಯಾದ ಶ್ರೀ ನಾಗಪ್ಪ ತಂದೆ ಗಡೆಪ್ಪ ವಡ್ಡರ, ಇವರು ದಿನಾಂಕ : 07/06/2012 ರಂದು ಕಲಘಟಗಿ ತಾಲೂಕ ಕಲಕುಂಡಿ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ದಾಖಲ ಮಾಡಿದ್ದು ಇರುತ್ತದೆ. ಪೋತಿಯವರಿಗೆ ಯಾರಾದರೂ ಸರಳ ವ ಸಮೀಪದ ವಾರಸುದಾರರು ಹಾಗೂ ಇತರರಿಗೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ : 09/06/2026 ರಂದು ಬೆಳಿಗ್ಗೆ 11-00 ಗಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು ಇಲ್ಲದೇ ಹೋದಲ್ಲಿ ಯಾರದ್ದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ಸ್ಥಳ : ಕಲಘಟಗಿ
ದಿನಾಂಕ : 02/05/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು
(ದಿವಾಣಿ (ಕಿ.ವಿ.) ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/- (ಶ್ರೀ ಆರ್. ವಾಯ್. ರೊಳ್ಳಿ)
ಅರ್ಜಿದಾರರ ಪರ ವಕೀಲರು.

CHANGE OF NAME

I, **SHABREEN TAJ BANGALEWALE** (Old Name) Resident of #50, Chetana Colony Phase 1, Gadag Road, Hubli, District: Dharwad, Karnataka, Pin Code: 580020, have changed my name as **SHABREEN TAJ SAYED NAWAZ MAKANDAR** (New Name) henceforth I will be called and recognized by new name for all future purposes, dated: 04/05/2026.



ಸಾರ್ವಜನಿಕ ಪ್ರಕಟಣೆ
ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ
ಕ್ರಿಮಿ. ನಂ. 4/2026

ಗಣೇಶ ಶೇಟ S/o ನೀಲಪ್ಪ ಶೇಟ ....ಅರ್ಜಿದಾರ

ವಿರುದ್ಧ

1ನೇ ತಹಶೀಲ್ದಾರರು ತಾ: ಸಿದ್ದಾಪುರ (ಉ.ಕ.) ಕೂಡಾ .....ಎದ್ರುದಾರರು

ಸದ್ರಿ ಪ್ರಕರಣದ ಎದ್ರುದಾರರು ಮತ್ತು ಹಿತಾಸಕ್ತಿಯುಳ್ಳ ಸಂಬಂಧಿಕರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ :-

ಈ ಪ್ರಕರಣದ ಅರ್ಜಿದಾರನು ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ನನ್ನ ಅಜ್ಜಿಯ ಸಹೋದರಿ ಸಾವಿತ್ರಿ ಕೊಲ್ಲ ಶೆಟ್ಟಿ ಸಾ: ಹೆಗ್ಗೆಕೊಪ್ಪ ಗ್ರಾಮದ ಹೆಗ್ಗೆಕೊಪ್ಪ ಇವಳು ದಿನಾಂಕ 04-03-1982 ರಂದು ಸಿದ್ದಾಪುರ ತಾಲೂಕು ಹೆಗ್ಗೆಕೊಪ್ಪ ಗ್ರಾಮದ ಹೆಗ್ಗೆಕೊಪ್ಪ ಊರಿನಲ್ಲಿ ಮೃತರಾಗಿರುವುದಾಗಿಯೂ ಮತ್ತು ಮೃತರ ಮರಣ ದಾಖಲೆಯನ್ನು ಅರ್ಜಿದಾರರಿಗೆ ಪೂರೈಸುವಂತೆ 1 ಮತ್ತು 2ನೇ ಎದ್ರುದಾರರಿಗೆ ಆದೇಶವಾಗುವಂತೆ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾನೆ. ಅರ್ಜಿದಾರನ ಕೋರಿಕೆಗೆ ಯಾವುದಾದರೂ ತಕ್ರಾರುಗಳಿದ್ದಲ್ಲಿ ದಿನಾಂಕ 06-06-2026 ರಂದು ಬೆಳಿಗ್ಗೆ 11-00 ಗಂಟೆಗೆ ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರಾಗಿ ಮೇಲೆ ಹೇಳಿದ ಪ್ರಕರಣದಲ್ಲಿ ತಮ್ಮ ತಕ್ರಾರು ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.

ಇಂದು ದಿನಾಂಕ 04/05/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಸಹಿ ಮಾಡಿ ನೀಡಲಾಗಿದೆ.

ಸಿದ್ದಾಪುರ
ದಿನಾಂಕ: 04/05/2026

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಮ್.ಎಫ್.ಸಿ. ಕೋರ್ಟ ಸಿದ್ದಾಪುರ (ಉ.ಕ.)
ಸಹಿ/- ಜಗದೀಶ ಎಂ. ನಾಯ್ಕ
ಅರ್ಜಿದಾರರ ಪರ ವಕೀಲರು

CHANGE OF NAME

I, **SANIYA BANU RANEBENNUR** (Old Name) Resident of APMC 3rd Gate, Near Vaishnavi Temple, Eshwar Nagar, Hubballi Navanagar, Dharwad, Karnataka - 580025, have changed my name as **SANIYA MALLAPPA KODIHALLI BASAVANAGOWDA** (New Name) henceforth I will be called and recognized by new name for all future purposes, dated: 04/05/2026.

CHANGE OF NAME

I, **SMT. ROOPA SHIVANANDA APTAGIRI** At. Ayatti village, Po. Shirur, Tq. Navalagunda, Dt. Dharwad in my name school documents mentioned as **ROOPA KADAKOL D/o. GURUNATH** After my marriage in my Aadhar Card & other documents my name mentioned as **ROOPA SHIVANANDA APTAGIRI** above both names are belongs to me only, vide affidavit dated 24-4-2026 sworn before Advocate & Notary **M.K. Kagadgara** at Gadag.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಹೇಮಾವತಿ ನಾಲಾ ವಿಭಾಗ,
ಕಾ.ನೀ.ನಿ.ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 01/2026-27 ದಿನಾಂಕ: 29.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ., ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ:-36.51 ಲಕ್ಷ ದಿಂದ 379.40 ಲಕ್ಷದವರೆಗಿನ 02 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಇ-ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 06.05.2026 ಸಂಜೆ 4.00 ಗಂಟೆ ವರೆಗೆ. ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 4.05.2026 ರಿಂದ 13.05.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:- 14.05.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:-16.05.2026 ಬೆಳಗ್ಗೆ 11.00 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ).

ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/46/KSMCA/2026-27

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.

ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ ಹೊಸಪೇಟೆ-583 201,
ದೂರವಾಣಿ ಸಂಖ್ಯೆ: 08394-227749
E-mail:hospethuda@gmail.com

ಸಂಖ್ಯೆ:ಹೊನಅಪ್ರಾ:ಎ1:ಮ.ಯೋ:2026-27 ದಿನಾಂಕ 29.04.2026

ಇ-ಪ್ರಕ್ಯೂರ್ಮೆಂಟ್ ಟಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ರ ಪ್ರಕಾರ ಕಾಯ್ದೆ 2000 ನಿಯಮದಂತೆ ಹೊಸಪೇಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಮಹಾಯೋಜನೆ(ಪ-2) ತಯಾರಿಸುವ ಸಂಬಂಧ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆಯುಕ್ತರು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

1.ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **16.05.2026 ಅಪರಾಹ್ನ 04.30 ಗಂಟೆಗೆ** 2.ಪ್ರೀ ಬಿಡ್ ಸಭೆ ದಿನಾಂಕ: **06.05.2026 ಪೂರ್ವಾಹ್ನ 10.30 ಗಂಟೆಗೆ.** 3.ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **18.05.2026 ಪೂರ್ವಾಹ್ನ 05.00 ಗಂಟೆಗೆ.** 4.ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **19.05.2026 ಪೂರ್ವಾಹ್ನ 10.30 ಗಂಟೆಗೆ.** 4.ಟೆಂಡರ್ ತೆರೆಯುವ ಸ್ಥಳ: **ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ**

ಇಂಡೆಂಟ್ ಸಂಖ್ಯೆ: **HUDA/2025-26/SE0009/CALL-2.** ಅಂದಾಜು ಮೊತ್ತ : ರೂ 188.80 ಲಕ್ಷಗಳು (ಜಿ.ಎಸ್.ಟಿ.ಸೇರಿ)

ಸಹಿ/-ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/60

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಉಪ ವಿಭಾಗ, ವಿಜಯಪುರ

ಸಂಖ್ಯೆ:ಸಅಸಂ/ಮುಂದುವರೆದ ಕಾಮಗಾರಿ/ಮರು ಟೆಂಡರ್/ಸಿಆರ್-/2026-27 ದಿನಾಂಕ: 28.04.2026

ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ ವಿಜಯಪುರ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಇಂಡೆಂಟ್ ಸಂಖ್ಯೆ: KFD/2025-26/OW/WORK_INDENT31237, 31238, 31239, 31257, 31274, 31281, 31283, 31284, 31291, 31299, 31304, 31318, 31320, 31321, 31324, 31399, 31401, 31402, 31405, 31406, 31409, 31410, 31414, 31418, 31422, 31448, 33219 & 31463 ರಂತೆ ಮರು ಟೆಂಡರನ್ನು ಕರೆಯಲಾಗಿದೆ. ದಿನಾಂಕ: 05.05.2026 ರ ವರೆಗೆ ಟೆಂಡರ್ ಹಾಕುವ ಮತ್ತು ದಿನಾಂಕ: 07.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಲಾಗುವುದು. ಟೆಂಡರ್‌ದಲ್ಲಿ ಭಾಗವಹಿಸಲಿಚ್ಛಿಸುವವರು kppp.karnataka.gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವಿಜಯಪುರ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/74/ಕೆಎಸ್‌ಎಂಸಿಎ/2026-27

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರಾದ ಶ್ರೀಮತಿ ಸುಮಿತ್ರಾ ಕೋಂ. ಮಾಲಿಂಗಗೌಡ ಪಾಟೀಲ ಸಾ: ಜೀರಗ್ಯಾನ ತೋಟ, ನಂದಗಾಂವ ತಾ: ರಬಕವಿ. ಬನಹಟ್ಟಿ. ಜಿ: ಬಾಗಲಕೋಟ. ಹಾಲವಸ್ತಿ : ಹೆಬಸೂರ, ತಾ: ಹುಬ್ಬಳ್ಳಿ ಜಿ: ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ,

ನಮ್ಮ ಪಕ್ಷಗಾರರ ಸ್ವಂತ ಮಾಲ್ಕಿ-ವ-ವಹಿವಾಟಿಯಲ್ಲಿರುವ ಜಮೀನು-ವ-ತೋಟದ ಮನೆ ಬಾಗಲಕೋಟ ಜಿಲ್ಲಾ ರಬಕವಿ ಬನಹಟ್ಟಿ ತಾಲೂಕಾ ನಂದಗಾಂವ ಗ್ರಾಮದ ರಿ.ಸ.ನಂ.122/4 ಕ್ಷೇತ್ರ 03 ಎಕರೆ 39 ಗುಂಟೆ ಹಾಗೂ ರಿ.ಸ.ನಂ. 222/1/1ಬ ಕ್ಷೇತ್ರ 01 ಎಕರೆ 00 ಗುಂಟೆ ಜಮೀನುಗಳು ಇರುತ್ತವೆ. ನಮ್ಮ ಪಕ್ಷಗಾರರ ಗಂಡ ಮಾಲಿಂಗಪ್ಪನು ದಿನಾಂಕ : 09-07-2025 ರಂದು ಮೋತಿಯಾಗಿರುತ್ತಾರೆ. ಇದು ಅಲ್ಲದೇ ನಮ್ಮ ಪಕ್ಷಗಾರರ ಗಂಡ ಮಾಲಿಂಗಪ್ಪನ ಹೆಸರಿನಲ್ಲಿ ಒಕ್ಕಲುತನದ ಸಾಮಾನು ಟ್ರ್ಯಾಕ್ಟರ, ಎತ್ತುಗಳು, ಎಮ್ಮೆಗಳು ಇದ್ದು, ಹಾಗೂ ಕೆಲವೊಂದು ಬಂಗಾರದ ಸಾಮಾನುಗಳನ್ನು ಬ್ಯಾಂಕಿನಲ್ಲಿ ಅಡವಿಟ್ಟಿದ್ದು ಅವುಗಳನ್ನು ನಮ್ಮ ಪಕ್ಷಗಾರರ ಅತ್ತೆಯಾದ ಶ್ರೀಮತಿ ಶಕುಂತಲಾ ಕೋಂ. ಹನುಮಂತಗೌಡ ಪಾಟೀಲ ಇವರು ಗ್ರಾಮದ ಪ್ರತಿಷ್ಠಿತ ವ್ಯಕ್ತಿ ನಾಗರಾಜ ಚಂದ್ರಪ್ಪ ಬಸ್ತಿ ಇವರ ಜೊತೆ ಮಿಲಾಪಿಯಾಗಿ ಮಾರಾಟ ಮಾಡುವ ತಜವಿಜಿಯಲ್ಲಿ ಇರುತ್ತಾರೆ. ನಮ್ಮ ಪಕ್ಷಗಾರರಿಗೆ **3 ಜನ ಅಲ್ಪವಯಿ ಮಕ್ಕಳಿದ್ದು 1) ಹನಮಂತ 2) ಗಿರೀಶ ಮತ್ತು 3) ಹರೀಶ ಅಂತಾ ಇರುತ್ತಾರೆ.** ಸದರ ವಿಷಯವನ್ನು ಮುಚ್ಚಿಟ್ಟು ಯಾರಾದರೂ ಮೇಲೆ ನಮೂದಿಸಿದ ಆಸ್ತಿಗಳ ಬಗ್ಗೆ ವ್ಯವಹಾರ ಮಾಡಿದರೆ ನೀವೇ ಜವಾಬ್ದಾರರು ಆಗುತ್ತೀರಿ ನಮ್ಮ ಪಕ್ಷಗಾರರು ನ್ಯಾಯಾಲಯಕ್ಕೆ ಮೊರೆ ಹೋಗಬೇಕಾಗುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಟಿ.ಎಮ್. ನೀಲರಡ್ಡಿ, ವಕೀಲರು,
ಸಾ: ಹೆಬಸೂರ ತಾ: ಹುಬ್ಬಳ್ಳಿ ಜಿ: ಧಾರವಾಡ, ಮೊ : 8867220894

ನಂದಗಾಂವ, 04-05-2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ-571313.

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್

ಪ್ರಕಟಣೆ ಸಂಖ್ಯೆ-01/2026-27, ದಿನಾಂಕ :- 30-04-2026 (ದ್ವಿಲಕೋಟೆ ಪದ್ಧತಿ)

★★★★

ಈ ಕಛೇರಿಯಿಂದ ಉಲ್ಲೆಖಿ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ 2026-27ನೇ ಸಾಲಿನಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅನುದಾನ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ :- 04-05-2026 ರಿಂದ ದಿನಾಂಕ :- 22-05-2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿನಾಂಕ 13-05-2026ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ :- 25-05-2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ-ಪ್ರೊಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಗಳಲ್ಲಿ)	ಟೆಂಡರ್‌ಗಿಟ್ಟ ಇ-ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	Improments to the Road of Rechamballi village to Nanjarajapura in Chamarajanagara taluk 0.00 To 1.50 KM	150.00	-	2,00,000,00	2ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ. 08226-223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಮೊಬೈಲ್ ಸಂಖ್ಯೆ :- ಸ.ಇಂ. 8073339806

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಾಮರಾಜನಗರ

ಸಂ : ವಾನಾಸಂಇ : ಚಾನಗರ : 86 : 2026-27

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ.

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ-ಮೇಲ್: commissionerahvs@gmail.com ಫೋನ್: 080-23412767

ನಂ: ಆಪಸಂ/ವಿಎಂಎಸ್/ವಿವ-51/ಕ.ನಿ&ಭ/ಟೆಂಡರ್/2026-27 ದಿನಾಂಕ: 04-05-2026

ಟೆಂಡರ್ ನೋಟಿಫಿಕೇಷನ್

(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2026-27 ನೇ ಸಾಲಿನಲ್ಲಿ ಆಯುಕ್ತಾಲಯ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುಪಾಲನಾ ಭವನದ ಕಟ್ಟಡದ ನಿರ್ವಹಣೆ, ತೋಟಗಾರಿಕೆ ಸೇವೆ, ಭದ್ರತಾ ಸೇವೆ, ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಸೇವೆಗಳು Work Contract ಆಧಾರದ ಮೇಲೆ ಪಡೆಯುವ ಸಲುವಾಗಿ ಕೆಪಿಪಿ ಪೋರ್ಟಲ್ ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿ ಪಡಿಸಿದ ಮೊತ್ತ ರೂ. 45.00 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಗಳನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 04.05.2026 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 04.05.2026 ರಿಂದ 19.05.2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಡಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/493/NR/2026-27

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಬೆಳಗಾವಿ ವಿಭಾಗ, ಬೆಳಗಾವಿ. ಹಳೇ ಪಿ.ಬಿ. ರಸ್ತೆ, ಬೆಳಗಾವಿ-590016.
E-mail : acfbelagavi@gmail.com

ಸಂಖ್ಯೆ: ಸಅಸಂ/ಬೆಉವಿ/ವಿವಿಧ ಯೋಜನೆ/ಮರು ಟೆಂಡರ್/2026-27
ದಿನಾಂಕ: 02-05-2026

ಟೆಂಡರ್ ಪ್ರಕಟಣೆ

ಸನ್ 2026-27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಮುಂದುವರೆದ ಕಾಮಗಾ-ರಿಗಳಿಗಾಗಿ ಟೆಂಡರ್ ಆಹ್ವಾನಿಸುವ ಕುರಿತು ಮರು ಟೆಂಡರ್ (CALL-2)ಕರೆಯುವ ಬಗ್ಗೆ. ಟಂಡರ್‌ದಾರರು ಹಾಗೂ ಬಿಡ್‌ರ್‌ಗಳ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಸನ್ ಬೆಳಗಾವಿ (ಪ್ರಾದೇಶಿಕ) ವಿಭಾಗದ, ಬೆಳಗಾವಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ಕಾಕತಿ, ನೇಸರಗಿ, ಹುಕ್ಕೇರಿ ಹಾಗೂ ಗುಜನಾಳ ವಲಯಗಳಲ್ಲಿ ಸನ್ 2026-27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಕೈಗೊಳ್ಳುವ ಕಾಮಗಾರಿಗಳಿಗೆ-

Indent No. KFD/2025-26/OW/WORK_INDENT37189, 37252, 37253, 37254, 37255, 37256, 37257, 37258, 37259, 37261, 37262, 37263, 37264, 37265, 37267, 37284, 37285, 37286, 37287, 37288, 37289, 37290, 37291, 37292, 37293, 37294, 37295, 37296, 37297, 37298, 37299, 37300, 37301, 37302, 37303, 37304, 37305, 37306, 37307, 37308, 37309, 37310, 37311, 37312, 37313 & 37314, ಗಳಿಗೆ ದಿನಾಂಕ: 15-05-2026 ರಂದು ಮರು ಟೆಂಡರ್‌ನ್ನು (CALL-2) ಕರೆಯಲಾಗಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳ ಸಹಿದಾರರ ಕಚೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಬಹುದಾಗಿದೆ.

ಸಹಿ/-
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವಿಭಾಗ, ಬೆಳಗಾವಿರವರ
ತಾಂತ್ರಿಕ ಸಹಾಯಕರು.

ಡಿಐಪಿಆರ್/ಬೆಳಗಾವಿ/188/ಮಣಿಪಾಲ್/2026-27

ಕರ್ನಾಟಕ ಸರಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ:GIMS/KLB/Tender/Inj/CR/10/2026-27/218 ದಿನಾಂಕ:-27/04/2026

:: ಟೆಂಡರ ಪ್ರಕಟಣೆ ::

2026-27 ನೇ ಸಾಲಿಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಹಾಗೂ ಟ್ರಾಮಾಕೇರ್ ಹಾಗೂ ಸುಪರ್ ಸ್ಪೇಷಾಲಿಟಿ ಆಸ್ಪತ್ರೆಗಳಲ್ಲಿ ಉಪಯೋಗಿಸಲು ಬೇಕಾಗಿರುವ Injection ಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No.GIMS/KLB/TENDER/Inj/CR/10/2026-27 Date:27.04.2026. IND. No: DME/2026-27/IND2273, 2) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್‌ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **26-05-2026 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **08-05-2026 ಸಾಯಂಕಾಲ 5.00 ಗಂಟೆಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **12-05-2026 ಮಧ್ಯಾಹ್ನ 12:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **27-05-2026 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **29-05-2026 11:30ಕ್ಕೆ,** 7) ಟೆಂಡರನ ಮೊತ್ತ: ರೂ. **7,04,29,850/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. **2,00,000/-,** 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252 Office Email: directorgimsgulbarga@gmail.com, Cell:+91 9482093568, Tender Section Email: gimstenderklb22@gmail.com, Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/94/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರಕಾರ
ರೇಷ್ಮೆ ಇಲಾಖೆ

ರೇಷ್ಮೆ ಸಹಾಯಕ ನಿರ್ದೇಶಕರ ಕಾರ್ಯಾಲಯ ಕಲಬುರಗಿ ವಿಭಾಗ ಕಲಬುರಗಿ

ಸಂಖ್ಯೆ:ರೇಸನಿ/ಕವಿಕ/ವಾಹನ/ಹೊಗು/2026-27/11 ದಿನಾಂಕ:02-05-2026

:: ಪ್ರಕಟಣೆ ::

ವಿಷಯ:- 2026-27ನೇ ಸಾಲಿಗಾಗಿ ರೇಷ್ಮೆ ಸಹಾಯಕ ನಿರ್ದೇಶಕರು ಕಲಬುರಗಿ ವಿಭಾಗ ಕಲಬುರಗಿ ಕಛೇರಿಗೆ ಖಾಸಗಿ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯುವ ಬಗ್ಗೆ.

ರೇಷ್ಮೆ ಸಹಾಯಕ ನಿರ್ದೇಶಕರು ಕಲಬುರಗಿ ವಿಭಾಗ ಕಲಬುರಗಿ ಕಛೇರಿಯ ಉಪಯೋಗಕ್ಕಾಗಿ 2026-27ನೇ ಸಾಲಿಗೆ Non A/c ಕಾರ್ ವಾಹನಗಳಾದ Swift Dzire, Swift Tour S, Zest, Sedan car, Bolero etc) ಮಾಸಿಕ ಬಾಡಿಗೆ ಆಧಾರದ ಮೇಲೆ ಇಲಾಖೆಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮತ್ತು ಸರಕಾರಿ ಕಾರ್ಯಕ್ರಮಕ್ಕಾಗಿ ಬಳಸಿಕೊಳ್ಳಲು ಮತ್ತು ಹೊರಗುತ್ತಿಗೆ ಮೇರೆಗೆ ವಾಹನವನ್ನು ಪೂರೈಸಲು ಅರ್ಹ ಸಂಸ್ಥೆಯವರಿಂದ ದರಪಟ್ಟಿಯನ್ನು ಈ ಕೆಳಗಿನ ಷರತ್ತುಗೊಳಪಟ್ಟು ಆಹ್ವಾನಿಸಲಾಗಿದೆ.

: **ಷರತ್ತುಗಳು :** 1. ಬಾಡಿಗೆ ರೂಪದಲ್ಲಿ ನೀಡುವ ವಾಹನವು 2022 ರ ನಂತರದ ಮಾದರಿಯದು ಆಗಿರಬೇಕು ಹಾಗೂ ವಾಹನವು ಸುಸ್ಥಿತಿಯಲ್ಲಿ ಇರುವ ಬಗ್ಗೆ ಆರ್.ಟಿ.ಓ ಕಛೇರಿಯಿಂದ ದೃಢೀಕೃತ ಪ್ರಮಾಣ ಪತ್ರ ನೀಡತಕ್ಕದ್ದು. 2. ವಾಹನವು 2026-27ನೇ ಸಾಲಿನಲ್ಲಿ ಮೇ-2026 ರಿಂದ ಮಾರ್ಚ್-2027ರ ವರೆಗೆ ಒಟ್ಟು 11 ತಿಂಗಳ ಅವಧಿಗೆ ಟೆಂಡರ್ ಆಹ್ವಾನಿಸಲಾಗಿದೆ. 3. ದರಪಟ್ಟಿಗಳನ್ನು ದಿನಾಂಕ:13-05-2026ರ 4.00 ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸುವುದು ಅವುಗಳನ್ನು, ಅದೇ ದಿನ 5.00 ಗಂಟೆಗೆ ಹಾಜರಿರುವ ಬಿಡ್ಡುದಾರರ ಸಮ್ಮುಖದಲ್ಲಿ ಅಥವಾ ಯಾರೂ ಹಾಜರಾಗದಿದ್ದರೆ ನಿಯಮಾನುಸಾರ ತೆರೆಯಲಾಗುವುದು. 4.ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳ ಎರಡು ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.

ಮೇಲಿನ ಷರತ್ತುಗಳಿಗೊಳಪಟ್ಟು ವಾಹನವನ್ನು ಪೂರೈಸಲು ಸಿದ್ಧರಿದ್ದಲ್ಲಿ ನಿಮ್ಮ ಕನಿಷ್ಠ ದರಗಳನ್ನು ನಮೂದಿಸಿ ದರ ಪಟ್ಟಿಯನ್ನು ಸೀಲ್ ಮಾಡಿದ ಲಕೋಟೆಯ ಮೇಲೆ " ವಾಹನ ಬಾಡಿಗೆ ದರಪಟ್ಟಿ " ತಾಂತ್ರಿಕ/ಆರ್ಥಿಕ ಎಂದು ನಮೂದಿಸಿ ಸಾದಾ ಅಂಚೆ ಮೂಲಕ ಅಥವಾ ಮುದ್ದಾಂ ಆಗಿ ಸಲ್ಲಿಸುವುದು. (ಹೆಚ್ಚಿನ ಮಾಹಿತಿಗಾಗಿ ರೇಷ್ಮೆ ಸಹಾಯಕ ನಿರ್ದೇಶಕರು ಕಲಬುರಗಿ ವಿಭಾಗ ಕಲಬುರಗಿ ರವರಿಗೆ ಸಂಪರ್ಕಿಸಲು ಕೋರಿದೆ).

ಸಹಿ/- ರೇಷ್ಮೆ ಸಹಾಯಕ ನಿರ್ದೇಶಕರು
ಕಲಬುರಗಿ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/93/ಕೆ.ಎಸ್.ಎಂ.ಸಿ.&ಎ/2026-27

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail :- ka.chikkaballapur.dudc@gmail.com, Ph: 08156-277005

ಸಂ:ಜಿನಕೋ/ಚಿಪಿ(1)/ತಾಶಾ/ಅ.ನ-4/107/2025-26 ದಿನಾಂಕ:28.04.2026

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ಈ ಕೆಳಕಂಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ/ಏಜನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ:** (1) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ಟೈಲರಿಂಗ್ ಮಿಷನ್ ಖರೀದಿಸುವುದು. (DMA/2025-26/IND6228), **ಟೆಂಡರ್‌ಗಿಟ್ಟ ಮೊತ್ತ:** ರೂ. 1.85 ಲಕ್ಷ, **ಇ.ಎಮ್.ಡಿ ಮೊತ್ತ:** ರೂ.4650.00 (2) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಚಿಕ್ಕಬಳ್ಳಾಪುರ ನಗರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5651/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 79.90, **ಇ.ಎಮ್.ಡಿ ಮೊತ್ತ:** 159816.00 (3) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5652/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 13.49, **ಇ.ಎಮ್.ಡಿ ಮೊತ್ತ:** 33728.00 (4) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗೌರಿಬಿದನೂರು ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5653/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 19.72, **ಇ.ಎಮ್.ಡಿ ಮೊತ್ತ:** 49300.00, (5) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಶಿಡ್ಲಘಟ್ಟ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5654/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 24.90, **ಇ.ಎಮ್.ಡಿ ಮೊತ್ತ:** 49813.00, (6) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಚಿಂತಾಮಣಿ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5655/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 26.98, **ಇ.ಎಮ್.ಡಿ ಮೊತ್ತ:** 53965.00, (7) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗುಡಿಬಂಡೆ ಪಟ್ಟಣ ಪಂಚಾಯತಿಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5656/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 12.45, **ಇ.ಎಮ್.ಡಿ ಮೊತ್ತ:** 31134.00. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು/ ಏಜನ್ಸಿಯವರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು/ಏಜನ್ಸಿಯವರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12.05.2026ರ ಸಂಜೆ 05.30 ಗಂಟೆಗೆ** (2) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.05.2026ರ ಪೂರ್ವಾಹ್ನ 11.00 ಗಂಟೆಗೆ.** (3) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 02.06.2026ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:46/ಕೆಎಸ್‌ಎಂಸಿಎ/2026-27

ಹೊಸ ದಿಗಂತ
ಮಂಗಳವಾರ, 5 ಮೇ 2026
ಹುಬ್ಬಳ್ಳಿ



ಪಂಚರಾಜ್ಯ ಫಲಿತಾಂಶ

ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಪುದುಚೇರಿ

ಶತಕ ಬಾರಿಸಿದ ಎನ್‌ಡಿಎ | ಡಬಲ್ ಇಂಜಿನ್ ಸರ್ಕಾರದತ್ತ ಜನರ ಭರವಸೆ

ಅಸ್ಸಾಂನಲ್ಲಿ ಬಿಜೆಪಿಗೆ ಹ್ಯಾಟ್ರಿಕ್

ಚಹಾ ತೋಟದ ನಾಡಲ್ಲಿ ಮತ್ತೊಮ್ಮೆ ಕಮಲ ಅರಳಿದ್ದು, ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗದ್ದುಗೆ ಏರಿದೆ. ಏ.9 ರಂದು 126 ವಿಧಾನಸಭಾ ಕ್ಷೇತ್ರಗಳಿಗಾಗಿ ಒಂದೇ ಹಂತದಲ್ಲಿ ನಡೆದಿದ್ದ ಚುನಾವಣೆಯಲ್ಲಿ ಎನ್‌ಡಿಎ ಸರಳ ಮತ್ತು ಸ್ಪಷ್ಟ ಬಹುಮತ(64) ಸಾಧಿಸಿದೆ.

ಎನ್‌ಡಿಎ ಮತ್ತು ಕಾಂಗ್ರೆಸ್ ನಡುವಿನ ಸಮರದಲ್ಲಿ ಎನ್‌ಡಿಎ 102 ಕ್ಷೇತ್ರಗಳಲ್ಲಿ ಗೆದ್ದುಕೊಂಡರೆ, ಕಾಂಗ್ರೆಸ್ 19 ಕ್ಷೇತ್ರದಲ್ಲಿ ಮಾತ್ರ ಗೆದ್ದಿದೆ. ಗಮನಿಸಬೇಕಾದ ವಿಷಯದಲ್ಲಿ 5 ಕಡೆ ಇತರೆ ಪಕ್ಷದ ಅಭ್ಯರ್ಥಿ ಗಳು ಗೆದ್ದಿದ್ದಾರೆ. ಮುಖ್ಯಮಂತ್ರಿ ಹಿಮಂತಬಿಸ್ವಾಶರ್ಮ ಅವರ ನೇತೃತ್ವದಲ್ಲಿ ಸ್ಥಳೀಯ ಸಮಸ್ಯೆ, ನಸುಳುಕೋರರಿಂದ ರಕ್ಷಣೆ, ಉದ್ಯೋಗ ಸೃಷ್ಟಿಯ ವಿಚಾರಗಳನ್ನಿಟ್ಟುಕೊಂಡು ಎನ್‌ಡಿಎ ಅಖಾಡಕ್ಕಿಳಿದಿತ್ತು. ಇತ್ತ ಗೌರವ್ ಗೊಗೊಯ್ ನೇತೃತ್ವದಲ್ಲಿ ಕಾಂಗ್ರೆಸ್ ನೌಕರಿ, ಅಭಿವೃದ್ಧಿ ಜತೆಗೆ ವಿವಿಧ ಪ್ರಣಾಳಿಕೆಗಳೊಂದಿಗೆ ಕಣಕ್ಕಿಳಿದಿತ್ತು. ಚುನಾವಣೆಯಲ್ಲಿ 722 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಜನಾದೇಶ ಸತತ ಮೂರನೇ ಬಾರಿ ಬಿಜೆಪಿಯತ್ತ ಒಲವು ತೋರಿಸಿದ್ದು ಉತ್ತರ-ಪೂರ್ವ ಭಾರತದಲ್ಲಿ ಬಿಜೆಪಿ ತನ್ನ ಹಿಡಿತ ಇನ್ನಷ್ಟು ಗಟ್ಟಿಗೊಳಿಸಿದೆ. ವೈಯಕ್ತಿಕ ಪ್ರಮುಖ ಫಲಿತಾಂಶಗಳಲ್ಲಿ ಹಿಮಂತ್ ಬಿಸ್ವಾ ಶರ್ಮ ಜಾಲುಕ್‌ಬಾರಿಯಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ನಾಯಕ ಗೌರವ್ ಗೊಗೊಯ್ ಜೋರ್ಹಾತ್‌ನಲ್ಲಿ ಸೋತರೆ, ಉರಿಂಜ್ಯೋತಿ ಗೊಗೊಯ್ ಖೋವಾಂಗ್‌ನಲ್ಲಿ ಸೋತಿದ್ದಾರೆ.

ಉತ್ತರ-ಪೂರ್ವ ಭಾರತದಲ್ಲಿ ಮುಂದುವರಿದ ಬಿಜೆಪಿ ಪಾರುಪತ್ಯ

ಬಿಜೆಪಿ ಜಯಭೇರಿ: ಪಕ್ಷ ಲೆಕ್ಕಾಚಾರದಲ್ಲೂ ಬಿಜೆಪಿಗೆ ಸ್ಪಷ್ಟ ಬಹುಮತ ದೊರೆತಿದೆ. ಅಸೋಮ್ ಗಣಾ ಪರಿಷದ್(ಎಜಿಪಿ) ಮತ್ತು ಬೋಡೊ ಪೀಪಲ್ಸ್ ಫ್ರಂಟ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ 90 ಸ್ವಂತ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಎಜಿಪಿ 26 ಮತ್ತು ಬಿಪಿಎಫ್ 10 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು. ಬಿಜೆಪಿ 82 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಗೊಗೊಯ್‌ಗೆ ಭಾರೀ ಸೋಲು: ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್ ಭಾರೀ ಸೋಲನುಭವಿಸಿದ್ದಾರೆ. ವಿಧಾನ ಸಭೆಗೆ ಇದೇ ಮೊದಲ ಬಾರಿ ಸ್ಪರ್ಧಿಸಿದ್ದ ಗೌರವ್ ಗೊಗೊಯ್ ವಿರುದ್ಧ ಬಿಜೆಪಿ ಅಭ್ಯರ್ಥಿ ಹಿತೇಂದ್ರನಾಥ್ ಗೋಸ್ವಾಮಿ ಗೆಲುವು ದಾಖಲಿಸಿದರು. ಬಿಜೆಪಿಯ ಗೋಸ್ವಾಮಿ 69,439 ಮತಗಳನ್ನು ಪಡೆದರೆ, ಗೊಗೊಯ್ 46,257 ಮತ ಗಳಿಸಿದರು. ಆಮ್ ಆದ್ಮಿ ಪಕ್ಷದ ಪ್ರಿಯಾಂಕುಶ್ ದತ್ತ 701 ಮತ ಪಡೆದರು. ಗೋಸ್ವಾಮಿ 23,182 ಮತಗಳ ಅಂತರದಿಂದ ದೊಡ್ಡ ಗೆಲುವು ಸಾಧಿಸಿದ್ದಾರೆ.



ಎನ್‌ಡಿಎ ಶತಕ, ಐತಿಹಾಸಿಕ ಫಲಿತಾಂಶ!

ಅಸ್ಸಾಂ ಇತಿಹಾಸದಲ್ಲಿ ಮೊದಲ ಬಾರಿಗೆ ಮೈತ್ರಿಕೂಟ ಶತಕ ಬಾರಿಸಿದೆ. ಇದಕ್ಕೂ ಮೊದಲು ಅಸ್ಸಾಂ ವಿಧಾನಸಭಾ ಇತಿಹಾಸದಲ್ಲಿ ಯಾವುದೇ ಪಕ್ಷ, ಮೈತ್ರಿ ಕೂಟವೂ 100ರ ಗಡಿ ದಾಟಿರಲೇ ಇಲ್ಲ. 2006 ರಲ್ಲಿ, ಕಾಂಗ್ರೆಸ್ ನೇತೃತ್ವದ ಬಣ 56 ಸ್ಥಾನಗಳನ್ನು ಹೊಂದಿತ್ತು. ಬಿಜೆಪಿ ಅಲ್ಲಿ 34 ಸ್ಥಾನಗಳನ್ನು ಗೆದ್ದಿತ್ತು. 2011ರಲ್ಲಿ, ಕಾಂಗ್ರೆಸ್ 78 ಸ್ಥಾನಗಳನ್ನು ಗಳಿಸಿತು, ಅಲ್ಲಿ ಬಿಜೆಪಿ + 27 ಕ್ಕೆ ಇಳಿಯಿತು. 2016 ರಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟವು 86 ಸ್ಥಾನಗಳಿಗೆ ವಿಸ್ತರಿಸಿತು. 2021ರಲ್ಲಿ ಬಿಜೆಪಿ+ 79 ಮತ್ತು ಕಾಂಗ್ರೆಸ್ 30 ಕ್ಷೇತ್ರದಲ್ಲಿ ಗೆದ್ದಿತ್ತು. ಈಗ ಬಿಜೆಪಿ + 102 ಸ್ಥಾನಗಳಲ್ಲಿ, ಕಾಂಗ್ರೆಸ್ 19 ಸ್ಥಾನಗಳಲ್ಲಿ ಗೆದ್ದಿದೆ.

ಬಿಜೆಪಿ ಗೆಲುವಿನ ಗುಟ್ಟೇನು? ಹಿಮಂತ ವಿಶ್ವಾಸ ಶರ್ಮ

ಹಿಮಂತ ಬಿಸ್ವಾ ಶರ್ಮ ಅವರ ಆಡಳಿತ ಶೈಲಿ, ತ್ವರಿತ ನಿರ್ಧಾರ ಮತ್ತು ಅಭಿವೃದ್ಧಿ ತಂತ್ರ ಜನರ ವಿಶ್ವಾಸ ಸತತ ಮೂರನೇ ಬಾರಿ ಗಳಿಸಿದೆ. ಮದರಸಾ ವಿಚಾರಕ್ಕೆ ಸಂಬಂಧಿಸಿ ದಂತೆ ಸಿಎಂ ಹಿಮಂತ್ ಕಾರ್ಯತಂತ್ರ ದೇಶಾದ್ಯಂತ ಖ್ಯಾತಿ ಪಡೆದಿತ್ತು. ಅಸ್ಸಾಂನಲ್ಲೂ ಈ ಬಗ್ಗೆ ಪರ-ವಿರೋಧಗಳು ವ್ಯಕ್ತವಾಗಿದ್ದವು. ಅಷ್ಟೇ ಅಲ್ಲದೆ, ನಸುಳುಕೋರರನ್ನು ಬಗ್ಗುಬಡಿವಲ್ಲಿ ಜೆಸಿಬಿ ಕಾರ್ಯತಂತ್ರದ ಬಗ್ಗೆಯೂ ಚರ್ಚೆಗಳು ಹೊರ ಬಂದಿದ್ದವು. ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಸಿಎಂ ಹಿಮಂತ್ ಸ್ಥಳೀಯ ಮತ್ತು ತ್ವರಿತ ಪರಿಹಾರಗಳ ಮೇಲೆ ಗಮನ ಹರಿಸಿದ್ದರು. ಈ ಎಲ್ಲಾ ಕಾರ್ಯತಂತ್ರಗಳು ಹಿಮಂತ್ ಅವರನ್ನು ಮತ್ತೊಮ್ಮೆ ಗೆಲ್ಲಿಸಿವೆ.

ಅಭಿವೃದ್ಧಿ: ಸಾರಿಗೆ ಮತ್ತು ಮೂಲಸೌಕರ್ಯಗಳಲ್ಲಿ ಹಿಮಂತ ಬಿಸ್ವಾ ಶರ್ಮ ತಂದ ಬದಲಾವಣೆಗಳು ಗ್ರಾಮೀಣ ಮತದಾರರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿವೆ.



ಬಿಜೆಪಿ	ಐಎನ್‌ಸಿ	ಬಿಪಿಎಫ್	ಎಜಿಪಿ
82	19	10	10

ಎಐಯುಡಿಎಫ್	ಆರ್‌ಜೆಆರ್‌ಡಿ	ಎಐಟಿಸಿ
02	02	01



ಪ್ರಮುಖ ನಾಯಕರು ಮತ್ತು ಫಲಿತಾಂಶ

ಹಿಮಂತ್ ಬಿಸ್ವಾ ಶರ್ಮ(ಎನ್‌ಡಿಎ)	ಜಾಲುಕ್‌ಬಾರಿ	ಬಿದಿಶಾ ನಿಯೋಗ್	ಗೆಲುವು
ಗೌರವ್ ಗೊಗೊಯ್(ಕಾಂಗ್ರೆಸ್)	ಜೋರ್ಹತ್	ಹಿತೇಂದ್ರನಾಥ್ ಗೋಸ್ವಾಮಿ	ಸೋಲು
ಅಖಿಲ್ ಗೊಗೊಯ್(ಕಾಂಗ್ರೆಸ್)	ಸಿಬ್ಸಾಗರ್	ಕುಶಾಲ್ ದೊವಾರಿ	ಗೆಲುವು
ರಿಪುನ್ ಬೋರಾ(ಕಾಂಗ್ರೆಸ್)	ಬರ್ಚಲ್ಲಾ	ರಿತು ಬಾರನ್	ಸೋಲು
ಪ್ರದ್ಯುತ್ ಬೊರ್ದೊಲೊಯ್(ಬಿಜೆಪಿ)	ದಿಸ್‌ಪುರ	ಮೀರಾ ಗೋಸ್ವಾಮಿ	ಗೆಲುವು

ಮತ್ತೆ ಮುಖ್ಯಮಂತ್ರಿಯಾಗಿ ರಂಗಸ್ವಾಮಿ ಅಧಿಕಾರಕ್ಕೆ?

ಪುದುಚೇರಿಯಲ್ಲಿ ಮತ್ತೆ ಎನ್‌ಡಿಎ ಜಯಭೇರಿ

ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣಾ ಫಲಿತಾಂಶ ಘೋಷಣೆಯಾಗಿದ್ದು, ಈ ಬಾರಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಗೆಲುವು ಸಾಧಿಸಿದೆ. 30 ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ 16 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಮತ್ತೊಮ್ಮೆ ಅಧಿಕಾರಕ್ಕೇರಲು ಸಜ್ಜಾಗಿದೆ. ಸಣ್ಣ ಗಾತ್ರದ ಹೊರತಾಗಿಯೂ, ಪುದುಚೇರಿ ವಿಧಾನಸಭಾ ಸ್ಪರ್ಧೆಯು ರಾಜಕೀಯವಾಗಿ ಮಹತ್ವದ್ದಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ತನ್ನ ಹಿಡಿತವನ್ನು ಬಲಪಡಿಸುವ ಗುರಿ ಹೊಂದಿದ್ದರೆ, ಇನ್ನೊಂದೆಡೆ ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟವು ಕಳೆದುಹೋದ ಪ್ರದೇಶವನ್ನು ಮರಳಿ ಪಡೆಯಲು ಪ್ರಯತ್ನಿಸುತ್ತಿತ್ತು. ಈ ಮಧ್ಯೆ ಈ ಬಾರಿ ಮತದಾನದ ಭಾಗವಹಿಸುವಿಕೆ ಕೂಡ ದಾಖಲೆ ಮಟ್ಟದಲ್ಲಿ ನಡೆದಿದ್ದು, ಸುಮಾರು ಶೇ.90ದಷ್ಟು ಮತದಾನವು ಯಶಸ್ವಿಯಾಗಿ ನಡೆದಿದೆ. ಈ ಕೇಂದ್ರಾಡಳಿತ ಪ್ರದೇಶವು ಮೂವರು ನಾಮನಿರ್ದೇಶಿತ ಸದಸ್ಯರನ್ನು ಹೊಂದಿದ್ದು, ಮೈತ್ರಿಕೂಟಕ್ಕೆ ಬಹುಮತವನ್ನು ಪಡೆಯಲು 17 ಸ್ಥಾನಗಳ ಅಗತ್ಯವಿತ್ತು. ಎನ್‌ಡಿಎ ನೇತೃತ್ವದ ಆಲ್ ಇಂಡಿಯಾ ಎನ್.ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ಈ ಬಾರಿ ಮತ್ತೆ ಅಧಿಕಾರಕ್ಕೆ ಏರಲು ಸಜ್ಜಾಗಿದೆ. ಕರ್ನಾಟಕದ ಬಿಜೆಪಿ ಮುಖಂಡ ನಿರ್ಮಲ್ ಕುಮಾರ್ ಸುರಾಣಾ ಅವರು ಪುದುಚೇರಿಯ ಚುನಾವಣಾ ಉಸ್ತುವಾರಿಯಾಗಿದ್ದರು.

ಎಐಎನ್‌ಆರ್‌ಸಿ	ಬಿಜೆಪಿ	ಕಾಂಗ್ರೆಸ್	ಟಿವಿಕೆ
12	04	01	02

ಡಿಎಂಕೆ	ಎಲ್‌ಜೆಕೆ	ಇತರೆ
05	01	05



ನಿರ್ಮಲ್ ಕುಮಾರ್ ಸುರಾಣ ಪರಿಶ್ರಮ



ಬಿಜೆಪಿ ರಾಷ್ಟ್ರೀಯ ನಾಯಕತ್ವವು ನಿರ್ಮಲ್ ಕುಮಾರ್ ಸುರಾಣ ಅವರನ್ನು ಪುದುಚೇರಿಯ ಪಕ್ಷದ ಚುನಾವಣಾ ಉಸ್ತುವಾರಿಯಾಗಿ ನಿಯೋಜನೆ ಮಾಡಿತ್ತು. ಬಿಜೆಪಿ ಪುದುಚೇರಿಯ ಪಕ್ಷದ ಉಸ್ತುವಾರಿಯಾಗಿ ನಿರ್ಮಲ್ ಕುಮಾರ್ ಸುರಾಣ ಅವರು ಬಿರುಸಿನಿಂದ ಸಂಚರಿಸಿ ಚುನಾವಣಾ ಕಾರ್ಯತಂತ್ರ ರೂಪಿಸಿದ್ದರು. ಅವರ ಪರಿಶ್ರಮದ ಪರಿಣಾಮವಾಗಿಯೇ 2026ರಲ್ಲಿ ಮತ್ತೊಮ್ಮೆ ಅಲ್ಲಿ ಎನ್‌ಡಿಎ ಅಧಿಕಾರದ ಗದ್ದುಗೆ ಏರುವಲ್ಲಿ ಯಶಸ್ವಿಯಾಗಿದ್ದು, ಇವರ ಅವಿರತ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ.

ರಂಗಸ್ವಾಮಿಗೆ ಭರ್ಜರಿ ಗೆಲುವು

ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು 4,441 ಮತಗಳ ಅಂತರದಿಂದ ತತ್ತನಚವಾಡಿ ಕ್ಷೇತ್ರವನ್ನು ಗೆದ್ದು ಪ್ರಮುಖ ವಿಜೇತರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಅವರು 10,024 ಮತಗಳನ್ನು ಪಡೆದು, 5,583 ಮತಗಳನ್ನು ಗಳಿಸಿದ ಇ. ವಿನಯಗಂ ಅವರನ್ನು ಸೋಲಿಸಿದ್ದಾರೆ. ಪಕ್ಷೇತರ ಅಭ್ಯರ್ಥಿ ಕೆ. ಸೇತು ಮೂರನೇ ಸ್ಥಾನದಲ್ಲಿದ್ದರೆ, ಹಿರಿಯ ಕಾಂಗ್ರೆಸ್ ನಾಯಕ ವಿ. ವೈತಿಲಿಂಗಂ ಹಿನ್ನಡೆ ಅನುಭವಿಸಿದ್ದಾರೆ. ಈ ಮೂಲಕ ರಂಗಸ್ವಾಮಿಯವರ ನಾಯಕತ್ವವು ಮೈತ್ರಿಕೂಟದ ಕಾರ್ಯಕ್ಷಮತೆಯನ್ನು ಮುಂದುವರಿಸುವುದರೊಂದಿಗೆ, ಎನ್‌ಡಿಎ ಬೆಂಬಲವನ್ನು ಸದುಪಯೋಗಪಡಿಸಿಕೊಂಡಿದೆ. 2021ರಲ್ಲಿ ಎಐಎನ್ ಆರ್‌ಸಿ ನೇತೃತ್ವದ ಮೈತ್ರಿಕೂಟವು 16 ಸ್ಥಾನಗಳನ್ನು ಗೆದ್ದು ಪುದುಚೇರಿಯಲ್ಲಿ ಸರ್ಕಾರ ರಚಿಸಿತು.

ಪುದುಚೇರಿಗೆ ಧನ್ಯವಾದಗಳು!

ನಮ್ಮ ಉತ್ತಮ ಆಡಳಿತದ ದಾಖಲೆ ಮತ್ತು ಎನ್. ರಂಗಸ್ವಾಮಿ ನೇತೃತ್ವದ ಸರ್ಕಾರದ ಕಾರ್ಯಗಳ ಆಧಾರದ ಮೇಲೆ, ಪುದುಚೇರಿಯ ಜನರು ಎನ್‌ಡಿಎಗೆ ಮತ್ತೊಂದು ಅವಧಿಯ ಆಶೀರ್ವಾದ ನೀಡಿದ್ದಾರೆ. ಈ ಆಶೀರ್ವಾದಗಳು ಉತ್ತಮ ಆಡಳಿತ ಉತ್ತೇಜಿಸುವ ನಮ್ಮ ಪ್ರಯತ್ನಗಳಿಗೆ ವೇಗ ನೀಡುತ್ತವೆ.
■ ನರೇಂದ್ರ ಮೋದಿ, ಪ್ರಧಾನಿ

ದೇಶದ ಕೊನೆಯ ರಾಜ್ಯವೂ ಕಮ್ಯುನಿಸ್ಟ್ ಮುಕ್ತ | ಬಿಜೆಪಿಗೆ 3 ಸ್ಥಾನ

ಯುಡಿಎಫ್ ಕೈ ಹಿಡಿದ ಕೇರಳ

ಕೇರಳದ 140 ಸದಸ್ಯಬಲದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ -ಮುಸ್ಲಿಂ ಲೀಗ್ ಒಳಗೊಂಡ 9ಪಕ್ಷಗಳ ಕೂಟವಾದ ಯುಡಿಎಫ್, ಆಳುವ ಸಿಪಿಎಂ ನೇತೃತ್ವದ ಎಲ್‌ಡಿಎಫ್‌ನ್ನು ಸೋಲಿಸಿ ಜಯಭೇರಿ ಬಾರಿಸಿದೆ. ಯುಡಿಎಫ್ 102 ಸ್ಥಾನಗಳೊಂದಿಗೆ ಭರ್ಜರಿ ಜಯ ಸಾಧಿಸಿದರೆ, ಆಳುವ ಎಲ್‌ಡಿಎಫ್ 35 ಸ್ಥಾನಗಳಿಗೆ ಕುಸಿತ ಕಂಡು ಹೀನಾಯ ಸೋಲುಂಡಿದೆ. ಕೇರಳ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 3 ಸ್ಥಾನಗಳನ್ನು ಪಡೆದು ವಿಧಾನಸಭೆಗೆ ಪ್ರವೇಶ ಪಡೆಯುವ ಜೊತೆಗೆ ಹಲವು ಕ್ಷೇತ್ರಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ಕೂಟಗಳಿಗೆ ಪ್ರಬಲ ಸ್ಪರ್ಧೆಯೊಡ್ಡಿದೆ. ಕೇರಳದಲ್ಲಿ ಅಧಿಕಾರ ಕಳೆದುಕೊಳ್ಳುವುದರೊಂದಿಗೆ ದೇಶದ ಕೊನೆಯ ರಾಜ್ಯವನ್ನೂ ಕಮ್ಯುನಿಸ್ಟರು ಕಳೆದುಕೊಂಡಿದ್ದಾರೆ.

1977ರಲ್ಲಿ ತುರ್ತು ಪರಿಸ್ಥಿತಿಯ ಬಳಿಕ ನಡೆದ ಚುನಾವಣೆಯಲ್ಲಿ 111 ಸ್ಥಾನಗಳನ್ನು ಗೆದ್ದುಕೊಂಡಿದ್ದ ಯುಡಿಎಫ್ ಇದೀಗ 2ನೇ ಅತಿದೊಡ್ಡ ಗೆಲುವು ದಾಖಲಿಸಿದೆ. 2021ರ ವಿಧಾನಸಭಾ ಚುನಾವಣೆಯಲ್ಲಿ 99 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದ್ದ ಎಲ್‌ಡಿಎಫ್ 35 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಂಡಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸಂಪುಟದ 13ಕ್ಕೂ ಅಧಿಕ ಸಚಿವರು ಸೋಲು ಕಂಡಿದ್ದಾರೆ. ಕೊಟ್ಟಾಯಂ, ಇಡುಕ್ಕಿ, ಎರ್ನಾಕುಳಂ, ಮಲಪ್ಪುರಂಗಳಲ್ಲಿ ಎಲ್‌ಡಿಎಫ್‌ಗೆ ಒಂದೂ ಸ್ಥಾನ ಸಿಗಲಿಲ್ಲ. ತ್ರಿಶೂರು, ಕಣ್ಣೂರಿನಂತಹ ಜಿಲ್ಲೆಗಳನ್ನು ಹೊರತುಪಡಿಸಿದರೆ ಯುಡಿಎಫ್ ಅಲೆಗೆ ಎಲ್‌ಡಿಎಫ್ ಕೊಚ್ಚಿಹೋಗಿದೆ. ಇದೇ ಮೊದಲ ಬಾರಿಗೆ ಕಮ್ಯುನಿಸ್ಟರಿಗೆ ಕೇರಳದಲ್ಲಿ ಇಂತಹ ಶೋಚನೀಯ ಸೋಲುಂಟಾಗಿದೆ. ಯುಡಿಎಫ್ ಕೂಟದಲ್ಲಿ ಕಾಂಗ್ರೆಸ್ 63 ಸ್ಥಾನಗಳನ್ನು ಗೆದ್ದರೆ, ಮುಸ್ಲಿಂ ಲೀಗ್ 22 ಸ್ಥಾನಗಳಲ್ಲಿ ಗೆದ್ದಿದೆ.

ಎಲ್‌ಡಿಎಫ್ ಎಂತಹ ಆಡಳಿತ ವಿರೋಧಿ ಅಲೆಗೆ ಸಿಲುಕಿತ್ತೆಂದರೆ ಸ್ವತಃ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಮ್ಮ ಭದ್ರಕೋಟೆ ಧರ್ಮಾಡಂನಲ್ಲಿ 6 ಸುತ್ತುಗಳಲ್ಲಿ ಹಿನ್ನಡೆ ಕಂಡಿದ್ದು, 7ನೇ ಸುತ್ತಿನ ಬಳಿಕವೇ ಅವರು ಮೇಲುಗೈ ಸಾಧಿಸುವಂತಾಗಿತ್ತು.

ಕಾಂಗ್ರೆಸ್	ಸಿಪಿಐ(ಎಂ)	ಮುಸ್ಲಿಂ ಲೀಗ್	ಸಿಪಿಐ	ಬಿಜೆಪಿ	ಇತರ
63	26	22	08	03	18

ಒಟ್ಟು ಕ್ಷೇತ್ರಗಳು 140, ಬಹುಮತ 71



ಮೊದಲ ಬಾರಿ ಬಿಜೆಪಿ 3 ಸ್ಥಾನಗಳಲ್ಲಿ ಗೆಲುವು

ಬಿಜೆಪಿ ನೇತೃತ್ವದ ಎನ್‌ಡಿಎ ಈ ಬಾರಿ 6 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡಿದ್ದು, ಅಂತಿಮವಾಗಿ ನೇಮಮ್, ಕಳಕೂಟ್ಟಮ್ ಮತ್ತು ಚಾತನ್ನೂರ್‌ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದರು. ನೇಮಮ್‌ನಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್, ಚಾತನ್ನೂರ್‌ನಲ್ಲಿ ಬಿ.ಬಿ.ಗೋಪಕುಮಾರ್, ಕಳಕೂಟ್ಟಮ್‌ನಲ್ಲಿ ವಿ.ಮುರಳೀಧರನ್ ಅವರು ಗೆಲುವು ಸಾಧಿಸಿದ್ದಾರೆ. ನೇಮಮ್‌ನಲ್ಲಿ ರಾಜೀವ್ ಚಂದ್ರಶೇಖರ್ ಅವರು ಸಚಿವ ವಿ.ಶಿವನ್‌ಕುಟ್ಟಿ ಅವರನ್ನು ಸೋಲಿಸಿದರೆ, ಮುರಳೀಧರನ್ ಅವರು ಮಾಜಿ ಎಲ್‌ಡಿಎಫ್ ಸಚಿವ ಕಡಕಂಪಳ್ಳಿ ಸುರೇಂದ್ರನ್‌ರನ್ನು ಸೋಲಿಸಿ ಆಯ್ಕೆಯಾದರು. ಗೋಪಕುಮಾರ್ ಅವರು ಎಲ್‌ಡಿಎಫ್ ನಾಯಕ ಆರ್.ರಾಜೇಂದ್ರನ್ ಅವರನ್ನು ಸೋಲಿಸಿ ಆಯ್ಕೆಯಾದರು.

ಮಂಜೇಶ್ವರದಲ್ಲಿ ಗೆದ್ದ ಅಶ್ರಫ್

ಮಂಜೇಶ್ವರದಲ್ಲೂ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ (67,696) ಆರಂಭಿಕ ಹಂತದಲ್ಲಿ ಮುನ್ನಡೆ ಸಾಧಿಸಿದರೂ ಅನಂತರ ಹಿಂದೆ ಬಿದ್ದರು. ಎಡರಂಗದ ಅಭ್ಯರ್ಥಿ ಡಮ್ಮಿ ಕ್ಯಾಂಡೇಟ್ ಎಂಬ ಮಾತು ಕೇಳಿಬಂದಿದ್ದ ಮಂಜೇಶ್ವರದಲ್ಲಿ ಎಡರಂಗ ಅಭ್ಯರ್ಥಿ ಕೆ.ಆರ್.ಜಯಾನಂದ (21,212) ಅವರು ನಿರೀಕ್ಷೆಗಿಂತ ತೀರಾ ಕಡಿಮೆ ಮತಗಳನ್ನು ಪಡೆಯುವ ಮೂಲಕ ಯುಡಿಎಫ್ ಅಭ್ಯರ್ಥಿ ಮುಸ್ಲಿಂ ಲೀಗಿನ ಎ.ಕೆ.ಎಂ.ಅಶ್ರಫ್ (96,948) ದೊಡ್ಡ ಅಂತರದ ಜಯ ಸಾಧಿಸುವಂತೆ ಮಾಡಿತು. ಕಾಸರಗೋಡಿನಲ್ಲಿ ಭಾರೀ ನಿರೀಕ್ಷೆ ಹುಟ್ಟಿಸಿದ್ದ ಬಿಜೆಪಿ ಅಭ್ಯರ್ಥಿ ಅಶ್ವಿನಿ ಎಂ.ಎಲ್ (53,698), ಮುಸ್ಲಿಂ ಲೀಗ್ ಪ್ರತಿಸ್ಪರ್ಧಿ ಕಲ್ಲಟ್ರ ಮಾಹಿನ್ ಹಾಜಿ (76,396) ವಿರುದ್ಧ ಸೋತಿದ್ದಾರೆ.

ಎನ್‌ಡಿಎ ಗೆಲುವಿನ ಹೆಜ್ಜೆಗೆ ಮುನ್ನುಡಿ

ಕೇರಳದಲ್ಲಿ ಬಹುಕಾಲದಿಂದ ನೆಲೆಗಟ್ಟಲು ಹೋರಾಟ ನಡೆಸುತ್ತಿದ್ದ ಬಿಜೆಪಿ, ಈ ಬಾರಿಯ ವಿಧಾನ ಸಭಾ ಚುನಾವಣೆಯಲ್ಲಿ ಸಣ್ಣದಾ ದರೂ ಗಮನಾರ್ಹ ಸಾಧನೆ ಮಾಡಿದ್ದು, ಇದರ ಹಿಂದೆ ರಾಜ್ಯ ಘಟಕದ ಅಧ್ಯಕ್ಷರಾದ ರಾಜೀವ್ ಚಂದ್ರ ಶೇಖರ್ ನೇತೃತ್ವ ಪ್ರಮುಖ ಕಾರಣವಾಗಿದೆ.

ಉದ್ಯಮಿ ಮತ್ತು ತಂತ್ರಜ್ಞನಾಗಿ ಆರಂಭಗೊಂಡ ಅವರ ರಾಜಕೀಯ ಪಯಣ, ಸಂಸದ ಸ್ಥಾನದಿಂದ ಕೇಂದ್ರ ಸಚಿವರ ಹುದ್ದೆಯವರೆಗೆ ಸಾಗಿದ್ದು, ಇದೀಗ ಕೇರಳ ಬಿಜೆಪಿ ಅಧ್ಯಕ್ಷರಾಗಿ ಹೊಸ ರಾಜಕೀಯ ಸವಾಲುಗಳನ್ನು ಎದುರಿಸುವ ಹಂತಕ್ಕೆ ತಲುಪಿದೆ. ಒಂದು ವರ್ಷ ಹಿಂದೆ ಪಕ್ಷದ ರಾಷ್ಟ್ರೀಯ ನಾಯಕತ್ವವು ಅವರಿಗೆ ಕೇರಳದಲ್ಲಿ ಬಿಜೆಪಿಯನ್ನು ಪ್ರಸ್ತುತಗೊಳಿಸುವ ಕಠಿಣ ಜವಾಬ್ದಾರಿ ನೀಡಿತ್ತು. ಆದರ ನಂತರ ರಾಜ್ಯದಲ್ಲಿ ಪಕ್ಷದ ಸ್ಥಿತಿಯಲ್ಲಿ ನಿಧಾನವಾಗಿ ಬದಲಾವಣೆ ಕಂಡುಬಂದಿದೆ. ನಾಲ್ಕು

» ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಬಿಜೆಪಿ ಸಣ್ಣ ಯಶಸ್ಸು

ದಶಕಗಳ ಕಾಲ ಸಿಪಿಐ(ಎಂ) ಹಿಡಿತದಲ್ಲಿದ್ದ ತಿರುವನಂತಪುರಂ ಕಾರ್ಪೊರೇಷನ್ ಅನ್ನು ಬಿಜೆಪಿ ತನ್ನದಾಗಿಸಿಕೊಂಡದ್ದು ಮೊದಲ ಸೂಚನೆ ಯಾಗಿ ಕಾಣಿಸಿಕೊಂಡಿತು. ಈ ಬಾರಿ ಬಿಜೆಪಿ 3 ಸ್ಥಾನಗಳನ್ನು ಗೆದ್ದು, ಹಲವು ಕ್ಷೇತ್ರಗಳಲ್ಲಿ ತನ್ನ ವೋಟ್ ಶೇರ್ ಹೆಚ್ಚಿಸಿ ಕೊಳ್ಳುವಲ್ಲಿ ಯಶಸ್ವಿಯಾಯಿತು. ಹಿಂದಿನ ವಿಧಾನಸಭೆಯಲ್ಲಿ ಪ್ರತಿನಿಧಿತ್ವವಿಲ್ಲದ ಪಕ್ಷಕ್ಕೆ ಇದು ಮಹತ್ವದ ಹೆಜ್ಜೆಯಾಗಿದೆ. ಈ ಮೂರರಲ್ಲಿ ಚಂದ್ರಶೇಖರ್ ಸ್ವತಃ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ. ಸಂಘಟನಾ ಬಲವರ್ಧನೆ ಮತ್ತು ಅಭಿವೃದ್ಧಿ ಆಧಾರಿತ ರಾಜಕೀಯವನ್ನು ಒಟ್ಟುಗೂಡಿಸಿದ ಚಂದ್ರಶೇಖರ್ ಧೋರಣೆ ಫಲ ನೀಡಲು ಆರಂಭಿಸಿದೆ. ಆದರೆ, ಪಕ್ಷದ ಮುಂದಿನ ಪಯಣ ಇನ್ನೂ ಸವಾಲಿನದ್ದೇ ಆಗಿದೆ.

ಯಾರಾಗಲಿದ್ದಾರೆ ಸಿಎಂ?

ಯುಡಿಎಫ್ ಕೇರಳದಲ್ಲಿ ಭಾರೀ ಗೆಲುವು ಸಾಧಿಸಿದ್ದು, ಇದೀಗ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಪ್ರಶ್ನೆ ಯುಡಿಎಫ್‌ನಲ್ಲಿ ತೀವ್ರ ಚರ್ಚೆಗೆ ಕಾರಣವಾಗುವ ಸಾಧ್ಯತೆ ಇದೆ. ರಮೇಶ್ ಚೆನ್ನಿತ್ತಲ, ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ಚಾಂಡಿ ಉಮ್ಮನ್ ಮುಂತಾದ ನಾಯಕರು ಈ ಹುದ್ದೆಯ ಮೇಲೆ ಕಣ್ಣಿಟ್ಟಿರುವುದರಿಂದ ಯಾರಿಗೆ ಹೈಕಮಾಂಡ್ ಕೃಪೆಯಾಗಲಿದೆ ಎಂಬುದೀಗ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಬಿರುಕಿನಿಂದ ಎಡರಂಗಕ್ಕೆ ಹಿನ್ನಡೆ

ಆಳುವ ಎಡರಂಗದಲ್ಲಿ ಈ ಬಾರಿ ಉನ್ನತ ನಾಯಕರಲ್ಲೇ ಒಡಕು ಮೂಡಿದ್ದು, ಕಣ್ಣೂರಿನ ಪ್ರಮುಖ ನಾಯಕ ಜಿ. ಸುಧಾಕರನ್ ಎಡರಂಗದೊಂದಿಗಿನ 63 ವರ್ಷಗಳ ನಂಟನ್ನು ತೊರೆದು ಯುಡಿಎಫ್ ಪಾಳಯ ಸೇರಿ ಎಡರಂಗದ ಕೋಟೆಯಾಗಿದ್ದ ಅಂಬಲಪ್ಪುಳದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ದೊಡ್ಡ ಅಂತರದಲ್ಲಿ ಗೆಲುವು ಸಾಧಿಸಿದರು.

ಪತನವಾದ ದಶಕಗಳ ದ್ರಾವಿಡ ಪಾರುಪತ್ಯ | ಸೈಲೆಂಟಾದ ಸ್ಟಾಲಿನ್ ಪಡೆ

ತ.ನಾಡಲ್ಲಿ ದಳಪತಿ ಸರ್ಕಾರ್!

ಗೆಲುವಿನ ಇನ್ನೊಂದು ಹೆಸರೇ ವಿಜಯ್. ಆತನ ಪಕ್ಷದ ಹೆಸರಿಗೂ ತಮಿಳುನಾಡಿನ ಗೆಲುವಿನ ಕೂಟ ಎಂಬ ಅರ್ಥ ಬರುತ್ತದೆ. ಸಿನಿಮಾ ಕೂತ್ತಾಡಿ(ನೃತ್ಯಗಾರ) ಏನು ಮಾಡಬಲ್ಲ? ಎಂದು ಎಂಜಿಆರ್‌ಗೆ ಅವಮಾನಿಸಿದಂತೆ, ಈತನೂ ಸಿನಿಮಾ ನಟ, ಏನೋ ಎರಡು ಡೈಲಾಗ್ ಹೊಡೆದು ಸೋತ ನಂತರ ರಾಜಕೀಯ ಬಿಡುತ್ತಾನೆ ಅಂದುಕೊಂಡ ಡಿಎಂಕೆಗೆ ಸೋಮವಾರ ಆಘಾತ ಅನುಭವಿಸಿದೆ. ಚೊಚ್ಚಲ ಚುನಾವಣೆಯಲ್ಲೇ ಬ್ಲಾಕ್ ಬಸ್ಟರ್ ವಿಜಯವನ್ನು ದಳಪತಿ ಕಂಡಿದ್ದಾರೆ.

ಎರಡೂ ಜಗಜಟ್ಟಿ ದ್ರಾವಿಡ ಪಕ್ಷಗಳ ಹಲವು ದಶಕಗಳ ಪಾರುಪತ್ಯವನ್ನು ವಿಜಯ್ ಕೊನೆಗೊಳಿಸಿದ್ದಾರೆ. 1962ರಲ್ಲಿ ಕಾಂಗ್ರೆಸ್‌ನಿಂದ ಕೆ.ಕಾಮರಾಜ್ ಗೆಲುವು ಸಾಧಿಸಿದ್ದು ಬಿಟ್ಟರೆ, ಡಿಎಂಕೆ-ಎಐಎಡಿಎಂಕೆ ಪಕ್ಷಗಳೇ ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೊಂಡು ಬಂದಿದ್ದವು. ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯೊಂದೇ ಟಿವಿಕೆ 109 ಸ್ಥಾನಗಳನ್ನು ಗೆಲ್ಲುತ್ತದೆ ಎಂಬ ಫಲಿತಾಂಶ ನೀಡಿತ್ತು. ಸಾಮಾಜಿಕ ನ್ಯಾಯ ಮತ್ತು ಪಾರದರ್ಶಕ ಆಡಳಿತದ ಮೂಲಕ ಭ್ರಷ್ಟಾಚಾರ ಮತ್ತು ಮಾದಕದ್ರವ್ಯ ಮುಕ್ತ ತಮಿಳುನಾಡು ನಿರ್ಮಾಣ ಮಾಡುವುದಾಗಿ ಜನರಿಗೆ ವಿಜಯ್ ಆಶ್ವಾಸನೆ ನೀಡಿದ್ದಾರೆ. ಅದೇ ರೀತಿ ಸ್ಟಾಲಿನ್ ಆಡಳಿತದ ವಿರೋಧಿ ಮತಗಳು ಮತ್ತು ಯುವ ಜನತೆಯ ಮತವೂ ವಿಜಯ್ ಪಾಲಾಗಿವೆ. ಕೊನೆಯದಾಗಿ ಸಿನಿಮಾ ನಟರೊಬ್ಬರು ನೇರ ರಾಜಕೀಯ ಕಣಕ್ಕೆ ಇಳಿದಿದ್ದು, ಎಂ.ಜಿ.ರಾಮಚಂದ್ರನ್ 1977ರಲ್ಲಿ, ತಮಿಳುನಾಡಿಗೆ ಡಿಎಂಕೆ-ಎಐಎಡಿಎಂಕೆ ಬದಲಿಗೆ ಆಯ್ಕೆಯೊಂದು ಬೇಕಾಗಿದ್ದು, ವಿಜಯ್ ಆ ಆಯ್ಕೆಯನ್ನು ನೀಡಿದ್ದರು. 2009ರಿಂದಲೇ ವಿಜಯ್ ಮಕ್ಕಳ್ ಇಯಕ್ಕಂ ಮೂಲಕ ವಿಜಯ್ ಪೂರ್ವಸಿದ್ಧತೆ ನಡೆಸಿದ್ದರು. ಸನಾತನ ಧರ್ಮ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ವಿರೋಧಿ. ಡೆಂಗ್ಯೂ ಮತ್ತು ಮಲೇರಿಯಾ ಇದ್ದಂತೆ, ನಿರ್ಮೂಲನೆ ಮಾಡಬೇಕು ಎಂದು ಉದಯನಿಧಿ ಹಿಂದು ವಿರೋಧಿ ಹೇಳಿಕೆ ನೀಡಿದ್ದರು. ಡಿಎಂಕೆ ಆಡಳಿತದಲ್ಲಿ ಹಿಂದು ದೇಗುಲಗಳ ನಾಶ, ಅರ್ಚಕರ ಹತ್ಯೆ ಹೆಚ್ಚಾಗಿತ್ತು. ಸನಾತನ ಧರ್ಮವನ್ನು ತಮಿಳುನಾಡಿನಿಂದ ಕಿತ್ತೊಗೆಯುತ್ತೇವೆ ಎಂದಿದ್ದ ಕರುಣಾನಿಧಿ ಕುಟುಂಬ ಆಡಳಿತವನ್ನು ಕಿತ್ತೊಗೆಯಲು ಜೋಸೆಫ್ ಬರಬೇಕಾಯಿತು.

ತಮಿಳುನಾಡು ವಿಧಾನಸಭೆ	ಟಿವಿಕೆ	ಡಿಎಂಕೆ	ಎಐಎಡಿಎಂಕೆ	ಕಾಂಗ್ರೆಸ್	ಇತರೆ
	108	60	47	05	14

ಒಟ್ಟು ಕ್ಷೇತ್ರಗಳು 234, ಸರ್ಕಾರ ರಚನೆಗೆ ಅಗತ್ಯ ಸ್ಥಾನಗಳು 118



ಸನಾತನ ಅಳಿಸಿ ಹಾಕಲು ಹೊರಟವರ ಆಡಳಿತ ವೈಟ್ ವಾಶ್

ಜಗಜಟ್ಟಿಗಳ ಮಣಿಸಿದ ಆಟೋ ಚಾಲಕ!

1991ರಿಂದಲೂ ಎಐಎಡಿಎಂಕೆ ಕೋಟೆಯಾದ ರೋಯಪುರಂನಲ್ಲಿ ಟಿವಿಕೆ ಅಭ್ಯರ್ಥಿ ಆಟೋ ಚಾಲಕ ವಿಜಯ್ ದಾಮು ಗೆಲುವು ಸಾಧಿಸಿದ್ದಾರೆ. ಐದು ಬಾರಿಯ ಎಐಎಡಿಎಂಕೆ ಶಾಸಕ ಡಿ.ಜಯಕುಮಾರ್ ಮತ್ತು ಡಿಎಂಕೆಯ ಸುಬೈರ್ ಖಾನ್ ರನ್ನು ಸೋಲಿಸಿದ್ದಾರೆ.

ಸ್ಟಾಲಿನ್‌ಗೆ ಮುಖಭಂಗ, 8,284 ಮತಗಳ ಸೋಲು

2011ರಿಂದ ಎಂ.ಕೆ.ಸ್ಟಾಲಿನ್ (68,512) ಪ್ರತಿನಿಧಿಸುತ್ತಿರುವ ತಮ್ಮ ನೆಚ್ಚಿನ ಕೊಳತ್ತೂರ್ ಕ್ಷೇತ್ರದಲ್ಲೇ ಒಂದು ಕಾಲದಲ್ಲಿ ಸ್ಟಾಲಿನ್‌ಗೆ ಆಪ್ತನಾಗಿದ್ದ ಟಿವಿಕೆ ಅಭ್ಯರ್ಥಿ ವಿ.ಎಸ್. ಬಾಬು (76,796) ವಿರುದ್ಧ 8,284 ಮತಗಳಿಂದ ಸೋತು ಮುಖಭಂಗ ಅನುಭವಿಸಿದ್ದಾರೆ.

ವಿಜಯ್ ಕಾರು ಚಾಲಕನ ಪುತ್ರನಿಗೆ ಜಯ

ವಿಜಯ್ ತಮ್ಮ ಕಾರು ಚಾಲಕನ ಪುತ್ರ ಆರ್.ಶಬರೀನಾಥನ್‌ಗೆ ಟಿಕೆಟ್ ನೀಡಿದ್ದು, ವಿರುಗಂಪಾಕ್ಕಮ್ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಪ್ರಭಾಕರ ರಾಜಾ ಎದುರು 17,427 ಮತಗಳ ಭಾರೀ ಮುನ್ನಡೆಯೊಂದಿಗೆ ಜಯ ಸಾಧಿಸಿದ್ದಾರೆ.



ಎನ್‌ಡಿಎ ಬೆಂಬಲಿಸಿದ ಮತದಾರರೆಲ್ಲರಿಗೂ ಕೃತಜ್ಞತೆಗಳು. ಪ್ರಭಾವಶಾಲಿ ಪ್ರದರ್ಶನ ನೀಡಿದ ಟಿವಿಕೆಗೆ ಅಭಿನಂದನೆಗಳು. ತಮಿಳುನಾಡಿನ ಪ್ರಗತಿ, ಜನರ ಯೋಗಕ್ಷೇಮಕ್ಕೆ ಕೊಡುಗೆ ನೀಡುವಲ್ಲಿ ಯಾವುದೇ ಅವಕಾಶವನ್ನು ನಾವು ಬಿಟ್ಟುಕೊಡುವುದಿಲ್ಲ.
■ ನರೇಂದ್ರ ಮೋದಿ, ಪ್ರಧಾನಿ



ಎಐಎಡಿಎಂಕೆ, ಸಣ್ಣ ಪಕ್ಷಗಳ ಜತೆ ಮೈತ್ರಿ?

ಸರ್ಕಾರ ರಚಿಸಲು 118 ಸ್ಥಾನಗಳ ಅಗತ್ಯವಿದ್ದು, ಟಿವಿಕೆ ಯಾರೊಂದಿಗೆ ಮೈತ್ರಿ ಮಾಡಲಿದೆ ಎಂಬ ಪ್ರಶ್ನೆ ಎದ್ದಿದೆ. ಬಿಜೆಪಿಯನ್ನು ಬದಿಗಿಟ್ಟು ಎಐಎಡಿಎಂಕೆ ಜತೆ ಮೈತ್ರಿ ಮಾಡಬಹುದು. ಕಾಂಗ್ರೆಸ್ ಅಥವಾ ಇತರ ಸಣ್ಣ ಪಕ್ಷಗಳನ್ನು ಜತೆಗೂಡಿಸಿ ಸರ್ಕಾರ ರಚಿಸುವ ಸಾಧ್ಯತೆಯಿದೆ.

ಭವಿಷ್ಯ ನುಡಿದಿದ್ದ ಕಿಶೋರ್

ರಾಜಕೀಯ ತಂತ್ರಗಾರಿಕೆ ತಜ್ಞ ಪ್ರಶಾಂತ್ ಕಿಶೋರ್, ವಿಜಯ್ ಯಾವುದೇ ಮೈತ್ರಿ ಮಾಡಿಕೊಳ್ಳದೇ ಒಬ್ಬರೇ ಸ್ಪರ್ಧಿಸಿದರೆ ತಮಿಳುನಾಡನ್ನೇ ಗೆಲ್ಲುತ್ತಾರೆ ಎಂದು ಕಳೆದ ವರ್ಷ ಹೇಳಿದ್ದ ವಿಡಿಯೋ ವೈರಲ್ ಆಗಿದೆ. ಇದಲ್ಲದೆ, ವಿಜಯ್ ಗೆಲುವಿನ ಬಳಿಕ ರಾಜ್ಯದಲ್ಲಿ ಧೋನಿಗಿಂತ ಪ್ರಸಿದ್ಧ ಬಿಹಾರಿ ಆಗುತ್ತೇನೆ ಎಂದಿದ್ದರು.

ಕುಟುಂಬ ಆಡಳಿತ ಮತ್ತು ಮತ ಖರೀದಿಯನ್ನು ಜನ ವಿರೋಧಿಸಿದ್ದಾರೆ. ಹೊಸ ತಲೆಮಾರಿನ ನಾಯಕತ್ವಕ್ಕೆ ಜನ ಜೈಕಾರ ಹಾಕಿದ್ದಾರೆ. ಅದ್ಭುತ ಪದಾರ್ಪಣೆಗೈದ ವಿಜಯ್ ಮತ್ತು ಟಿವಿಕೆಗೆ ಅಭಿನಂದನೆಗಳು. ಭಗವಂತ ಸದಾ ನಿಮ್ಮ ಜತೆಗಿರಲಿ.
■ ಕೆ.ಅಣ್ಣಾಮಲೈ, ಬಿಜೆಪಿ ನಾಯಕ

ತಮಿಳುನಾಡು ವಿಧಾನ ಸಭೆ ಚುನಾವಣೆಯಲ್ಲಿ ವಿಜಯಶಾಲಿಯಾದ ಟಿವಿಕೆ ಅಧ್ಯಕ್ಷ ವಿಜಯ್‌ರಿಗೆ ನನ್ನ ಅಭಿನಂದನೆಗಳು.
■ ರಜನಿಕಾಂತ್, ಹಿರಿಯ ನಟ

ಆತನಲ್ಲಿ ಮುಖ್ಯಮಂತ್ರಿ ಆಗುತ್ತೇನೆಂಬ ನಂಬಿಕೆಯಿತ್ತು. ನಾಯಕನಾಗಿ ಅಲ್ಲದೆ, ಜನರು ಮನೆ ಮಗನಾಗಿ, ಯುವಕರು ಅಣ್ಣನಂತೆ ಕಾಣುತ್ತಾರೆ. ಜನರೊಂದಿಗಿನ ಸಂಬಂಧವೇ ವಿಜಯ್ ಗೆಲುವಿಗೆ ಕಾರಣ.
■ ಎಸ್.ಎ. ಚಂದ್ರಶೇಖರ್, ವಿಜಯ್ ತಂದೆ

ಕಿರುಸುದ್ದಿ

ಗಮನಾರ್ಹ ಫಲಿತಾಂಶ



• **ಗದಗ:** ಸೋಮವಾರ ಪ್ರಕಟವಾದ ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ, ತಮಿಳುನಾಡು, ಪುದುಚೇರಿ ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳು ದೇಶದ ರಾಜಕೀಯ ದಿಕ್ಕನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಿವೆ. ಈ ಬಾರಿ ವಿಶೇಷವಾಗಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸಿಕೊಂಡು ಬಂದಿದ್ದ ಇಂಡಿ ಒಕ್ಕೂಟ ಬೆಂಬಲಿಸುವ ರಾಜಕೀಯ ಪಕ್ಷಗಳಿಗೆ ಮತದಾರರು ತಿರಸ್ಕರಿಸುವ ಮೂಲಕ ತಕ್ಕ ಪಾಠ ಕಲಿಸಿದ್ದಾರೆ ಎಂದು ಬಿಜೆಪಿ ಯುವ ಮುಖಂಡ ವಸಂತ ಪಡಗದ ಹೇಳಿದ್ದಾರೆ. ಪಂಚ ರಾಜ್ಯ ಚುನಾವಣಾ ಫಲಿತಾಂಶಗ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು,ಈ ಬಾರಿ ಫಲಿತಾಂಶಗಳು ಎಲ್ಲಾ ಎಕ್ಸಿಟ್ ಪೋಲ್‌ಗಳ ಬಹುತೇಕ ಅಂದಾಜುಗಳನ್ನು ಮೀರಿರುವುದು ಈ ಪಂಚ ರಾಜ್ಯ ಚುನಾವಣಾ ಫಲಿತಾಂಶದಲ್ಲಿ ಗಮನಾರ್ಹವಾಗಿದೆ ಎಂದರು.

ಮಾಸಿಕ ಸಭೆ ಇಂದು

• **ಗದಗ:** ಹುಬ್ಬಳ್ಳಿ ರಸ್ತೆಯ ಹುಂಡೈ ಕಾರು ಶೋರೂಮ್ ಎದುರುಗಡೆ ಇರುವ ನೂತನ ಸಮುದಾಯ ಭವನದಲ್ಲಿ ಮೇ 5 ರಂದು ಬೆಳಗ್ಗೆ 11ಕ್ಕೆ ಕ.ವಿ.ಮಂ. ನಿವೃತ್ತ ನೌಕರರ ಮಾಸಿಕ ಸಭೆ ಹಮ್ಮಿಕೊಂಡಿದೆ. ಜಿ.ಎಂ.ಯಾನಮಶೆಟ್ಟಿ ಅಧ್ಯಕ್ಷತೆ ವಹಿಸುವರು. ಎಸ್.ಎಸ್.ಮುಗದ ಬಸವಜಯಂತಿಯ ಪ್ರಯುಕ್ತ ಬಸವಣ್ಣನವರ ಬಗ್ಗೆ ಉಪನ್ಯಾಸ ನೀಡುವರು ಎಂದು ಕಾರ್ಯದರ್ಶಿ ಬಿ.ಎನ್.ಫಾಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಕ್ಷೇಪಣೆಗೆ ಅವಕಾಶ

• **ಮುಂಡರಗಿ:** ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ (ವಿಮಾ) ಯೋಜನೆ ಅಡಿ 2024-25ನೇ ಸಾಲಿನ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆ ವಿಮೆ ಪ್ರಸ್ತಾವನೆಗಳು ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದೆ ಇರುವ ಮುಂಡರಗಿ ತಾಲೂಕಿನ ಮುಂಗಾರು ಹಂಗಾಮಿನ 408, ಹಿಂಗಾರು ಹಂಗಾಮಿನ 181 ಹಾಗೂ ಬೇಸಿಗೆ ಹಂಗಾಮಿನ 4 ಒಟ್ಟಾರೆ 593 ಬೆಳೆ ವಿಮೆ ಪ್ರಸ್ತಾವನೆಗಳನ್ನು ಅಂತಿಮವಾಗಿ ವಿಮಾ ಸಂಸ್ಥೆಯವರು ತಿರಸ್ಕರಿಸಿದ್ದಾರೆ. ಮಾಹಿತಿಯನ್ನು ಆಯಾ ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರಗಳ/ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದ್ದು, ರೈತರು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಾಖಲೆಗಳೊಂದಿಗೆ ಮೇ 15ರೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. 2024-25ರ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ನಮೂದಾದ ಬೆಳೆಯ ಉತಾರ ಅಥವಾ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಬೆಳೆ ಮಾರಾಟ ಮಾಡಿದ್ದರೆ ಅದರ ರಸೀದಿ ಅಥವಾ ಎಪಿಎಂಸಿಯಲ್ಲಿ ಈ ಬೆಳೆ ಮಾರಾಟ ಮಾಡಿದ್ದರ ರಸೀದಿ ಕೃಷಿ ಬೆಳೆಯಾಗಿದ್ದರೆ (ಮೆಕ್ಕೆಜೋಳ, ಕಡಲೆ, ಭತ್ತ) ರೈತ ಸಂಪರ್ಕ ಕೇಂದ್ರ, ಮುಂಡರಗಿ ಹಾಗೂ ಡಂಬಳ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮುಂಡರಗಿ ಹಾಗೂ ತೋಟಗಾರಿಕೆ ಬೆಳೆ ಯಾಗಿದ್ದಲ್ಲಿ (ಕೆಂಪು ಮೆಣಸಿನಕಾಯಿ) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ಮುಂಡರಗಿಗೆ ಆಕ್ಷೇಪಣಾ ಅರ್ಜಿ ಸಲ್ಲಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ತಿಳಿಸಿದ್ದಾರೆ.

ಪ್ರವೇಶಾತಿ ಆರಂಭ

• **ನರಗುಂದ:** ಪಟ್ಟಣದ ಶ್ರೀ ಸಿದ್ದೇಶ್ವರ ಪಂಚಗ್ರಹ ಗುಡ್ಡದ ಹಿರೇಮಠದ ವೇದ ಸಂಸ್ಕೃತ ಜ್ಯೋತಿಷ್ಯ ಪಾಠಶಾಲೆಯ ಪ್ರವೇಶಾತಿ ಪ್ರಾರಂಭವಾಗಿದೆ. ಆಸಕ್ತರು ಶ್ರೀಮಠಕ್ಕೆ ಬಂದು ಪ್ರವೇಶಾತಿ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಶ್ರೀಮಠದ ವೇ.ಮೂ.ಶಂಕ್ರಯ್ಯ ಶಾಸ್ತ್ರಿಗಳು ಹಿರೇಮಠ ಅಥವಾ ದೂ:6362409802ನ್ನು ಸಂಪರ್ಕಿಸಬಹುದಾಗಿದೆ.

ದೀರ್ಘ ಅವಧಿಗೆ ಖಂಡನೆ

• **ಗದಗ:** ತೋಂಟದಾರ್ಯ ಮಠದ ಜಾತ್ರೆ ಆಚರಿಸಲು ದೀರ್ಘ ಅವಧಿಗೆ ಅನುಮತಿ ನೀಡಬಾರದು ಎಂದು ಜಿಲ್ಲಾಡಳಿತಕ್ಕೆ ಹಲವು ಬಾರಿ ಮನವಿ ಮಾಡಲಾಗಿತ್ತು. ಆದರೆ ಅವರು ನಮ್ಮ ಮನವಿಗೆ ಸ್ಪಂದಿಸದ ಕಾರಣ ಭಾನುವಾರ ದೊಡ್ಡ ಅವಘಡ ನಡೆಯಿತು. ಈಗ ಇದರ ಹೊಣೆ ಯಾರು ಹೊರುತ್ತಾರೆ ಎಂದು ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ ರಾಜ್ಯ ಸಂಚಾಲಕ ರಾಜು ಖಾನಪ್ಪನವರ ಪ್ರಶ್ನಿಸಿದರು. ನಗರದ ತೋಂಟದಾರ್ಯ ಮಠದ ಆವರಣದಲ್ಲಿ ನಡೆದಿರುವ ಜಾತ್ರೆಯಲ್ಲಿ ಭಾನುವಾರ ಸಂಭವಿಸಿದ ಅವಘಡ ಖಂಡಿಸಿ ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ ಕಾರ್ಯಕರ್ತರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮಾತನಾಡಿದರು. ತೋಂಟದಾರ್ಯ ಮಠದ ಜಾತ್ರೆಗೆ ಜಿಲ್ಲಾಡಳಿತ ಎರಡು ತಿಂಗಳು ಅವಕಾಶ ನೀಡುತ್ತಿದೆ. ಈ ವರ್ಷ ಒಂದು ತಿಂಗಳು ಜಾತ್ರೆ ನಡೆಸಲು ಅನುಮತಿ ನೀಡಿದ್ದು, ಇದರಿಂದ ಸ್ಥಳೀಯ ವ್ಯಾಪಾರಿಗಳಿಗೆ ತೊಂದರೆ ಆಗುತ್ತಿದೆ. ಸ್ಥಳೀಯ ವ್ಯಾಪಾರಿಗಳು ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳುವಂತಾಗಿದೆ ಎಂಬ ವಿಷಯವನ್ನು ಜಿಲ್ಲಾಧಿಕಾರಿ ಗಮನಕ್ಕೆ ತರಲಾಗಿತ್ತು. ಆದರೆ ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ, ಇದರ ಪರಿಣಾಮವಾಗಿ ಭಾನುವಾರ ನಡೆದ ದುರ್ಘಟನೆಯಲ್ಲಿ 18 ಮಂದಿ ಗಾಯಗೊಂಡಿದ್ದಾರೆ. ಜಾತ್ರೆಯಲ್ಲಿನ ಅಂಗಡಿಗಳನ್ನು ಕೂಡಲೇ ತೆರವುಗೊಳಿಸಬೇಕು, ಮುಂದಿನ ವರ್ಷ ನಡೆಯುವ ಜಾತ್ರೆಗೆ ಒಂದು ವಾರವಷ್ಟೇ ಅವಕಾಶ ನೀಡಬೇಕು ಎಂದರು.



ಲಕ್ಷ್ಮೇಶ್ವರ: ಗದಗಿನ ಲಯನ್ಸ್ ಭವನದಲ್ಲಿ ನಡೆದ ಅಖಿಲ ಕರ್ನಾಟಕ ಸಮ್ಮೇಳನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚೇತನ್ ಫೌಂಡೇಶನ್ ಧಾರವಾಡ ಹಾಗೂ ಗಂಧದ ಗುಡಿ ಕನ್ನಡ ಸಂಘ ಕೊಡಮಾಡುವ ಬಾಲಪ್ರತಿಭಾ ಪ್ರಶಸ್ತಿ ಡಾ. ಪಂಡಿತ್ ಪುಟ್ಟರಾಜ ಸೇವಾ ಸ್ಫೂರ್ತಿ ರಾಜ್ಯ ಪ್ರಶಸ್ತಿ ಪಟ್ಟಣದ ಯೋಗೇಶ ಅಣ್ಣಿಗೇರಿಗೆ ದೊರಕಿದೆ. ಲೇಖಕಿ ರತ್ನಾ ಬದಿ, ಚೇತನ ಫೌಂಡೇಶನ್ ಧಾರವಾಡ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ, ಶರಣಪ್ಪ ಹೊಸಂಗಡಿ ಪ್ರಕಾಶ ಸುಣಗಾರ ಶಿವಲಿಂಗಪ್ಪ ಅಣ್ಣಿಗೇರಿ ಇದ್ದರು.

ಖಗೋಳಶಾಸ್ತ್ರದಿಂದ ಚಿಂತನೆಗೆ ಹೊಸ ದಿಕ್ಕು

• **ಗದಗ:** ವಿಜ್ಞಾನವೆಂದರೆ ಪುಸ್ತಕಗಳಲ್ಲಿ ಮಾತ್ರ ಸೀಮಿತವಾಗಿರದೆ ಪ್ರತಿ ಸಾಮಾನ್ಯ ಜನರ ಬದುಕಿನ ಭಾಗವಾಗಬೇಕು. ಖಗೋಳಶಾಸ್ತ್ರವು ಆಕಾಶದ ರಹಸ್ಯಗಳನ್ನು ಮಾತ್ರವಲ್ಲ, ನಮ್ಮ ಚಿಂತನೆಗೆ ಹೊಸ ದಿಕ್ಕನ್ನು ನೀಡುತ್ತದೆ ಎಂದು ಡಾ.ಸಂಜೀವ ಜೋಷಿ ಹೇಳಿದರು.

ಬೆಟಗೇರಿಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ತಾರಾಲಯ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಹಾಗೂ ಗದಗ ಐಎಂಎ ಶತಮಾನೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಖಗೋಳ ವಿಸ್ಮಯ ಉಚಿತ ಬೇಸಿಗೆ ಶಿಬಿರ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಇಂದಿನ ಮಕ್ಕಳಲ್ಲಿ ಹೆಚ್ಚುತ್ತಿರುವ ಮೊಬೈಲ್ ಬಳಕೆ ಭವಿಷ್ಯಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ತಂತ್ರಜ್ಞಾನವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿರುವುದು ನಿಜ. ಆದರೆ ಇದರ ಅತಿಯಾದ ಬಳಕೆ ವಿಶೇಷವಾಗಿ ಮಕ್ಕಳಲ್ಲಿ ಗಂಭೀರ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ದಿನನಿತ್ಯ ಮಕ್ಕಳು ಗಂಟೆಗಟ್ಟಲೆ ಮೊಬೈಲ್‌ಗಳಲ್ಲಿ ಸಮಯ ಕಳೆಯುತ್ತಿದ್ದು, ಅವರ ಅಧ್ಯಯನ, ಆರೋಗ್ಯ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮೊಬೈಲ್ ಬಳಕೆಯ ಹೆಚ್ಚಳದಿಂದ ಮಕ್ಕಳಲ್ಲಿ ಓದಿನ ಮೇಲೆ ಆಸಕ್ತಿ ಕಡಿಮೆಯಾಗುತ್ತಿದೆ. ಇದರಿಂದಾಗಿ ಅವರ ಬೌದ್ಧಿಕ ಹಾಗೂ ಶಾರೀರಿಕ ಬೆಳವಣಿಗೆ ಕುಂಠಿತಗೊಳ್ಳುವ ಸಾಧ್ಯತೆಯಿದೆ ಎಂದರು.

ಎಂ.ಎಚ್.ಸವದತ್ತಿ ಎಂ.ಎ.ಯರಗುಡಿ, ಶಾಮ ಲಾಂಡೆ, ವಿಜಯಕುಮಾರ್ ಕಪ್ಪಲಿ, ಪಾಣಿಶೆಟ್ಟರ್, ಚಂದ್ರಶೇಖರ್ ಜೋಗಿನ್, ಜಗದೀಶ್ ದಿನ್ನಿ, ಗದ್ದಿಗೌಡ್ರು, ಸವಿತಾ ಯಾಳಗಿ, ಮಂಜುಳಾ ಹುಲಕೋಟಿ, ವಿಜಯಕುಮಾರ್ ಇದ್ದರು.



ಗದಗ: ಬೆಟಗೇರಿಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ತಾರಾಲಯ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಹಾಗೂ ಗದಗ ಐಎಂಎ ಶತಮಾನೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಖಗೋಳ ವಿಸ್ಮಯ ಉಚಿತ ಬೇಸಿಗೆ ಶಿಬಿರ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ತಿಮ್ಮಾಪುರ ಕೆರೆ ಸಂಪೂರ್ಣ ಖಾಲಿ ಖಾಲಿ | ಗ್ರಾಮಸ್ಥರ ಆತಂಕ

ಕುಡಿಯುವ ನೀರಿಗೆ ಹಾಹಾಕಾರ!



ಯೋಜನೆ ವೈಫಲ್ಯ: ವಾರಕ್ಕೊಮ್ಮೆ ನೀರು

ತಿಮ್ಮಾಪುರ ಗ್ರಾಮ ಈವರೆಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಾದ ಜೆಜೆಎಂ ಮೂಲಕ ತುಂಗಭದ್ರಾ ನದಿ ನೀರು ಪೂರೈಸಲಾಗುತ್ತಿದ್ದು, ಈ ಭಾಗದ ಸಾರ್ವಜನಿಕರಿಗೆ ವರದಾನವಾಗಿತ್ತು.ಅಲ್ಲದೇ ಗ್ರಾಮದಲ್ಲಿರುವ ಕೆರೆ ಆಸರೆಯಾಗಿತ್ತು. ಆದರೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ವೈಫಲ್ಯದಿಂದ ವಾರಕ್ಕೊಮ್ಮೆ ನೀರು ಪೂರೈಸಲಾಗುತ್ತಿದೆ ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ.

▸ ರುದ್ರಗೌಡ ಪಾಟೀಲ

• **ಗದಗ:** ದಿನದಿಂದ ದಿನಕ್ಕೆ ತಾಪಮಾನ ಹೆಚ್ಚುತ್ತಿರುವಬೆನ್ನಲ್ಲೇಜಿಲ್ಲೆಯಕೆಲಗ್ರಾಮಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಶುರುವಾಗಿದೆ. ತಾಲೂಕಿನಸಮೀಪದ ತಿಮ್ಮಾಪುರ ಗ್ರಾಮದಲ್ಲಿ ಕುಡಿಯುವ ನೀರಿಗೆ ಆಸರೆಯಾಗಿದ್ದ ಕೆರೆ ನೀರಿಲ್ಲದೆ ಸಂಪೂರ್ಣ ಬತ್ತಿ ಹೋಗಿದ್ದರಿಂದ ಸಾರ್ವಜನಿಕರು ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ.

ತಿಮ್ಮಾಪುರ ಗ್ರಾಮ ಸಿಎಂ ಸಿದ್ದರಾಮಯ್ಯ ಅವರು 4-5 ಬಾರಿ ಭೇಟಿ ನೀಡಿದ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿ ಅನಾವರಣಗೊಳಿಸಿದ ಖ್ಯಾತಿ ಹೊಂದಿದೆ.

ಅದರಲ್ಲೂ ಸಿದ್ದರಾಮಯ್ಯ ಅವರ ನೆಚ್ಚಿನ ಗ್ರಾಮವಾಗಿರುವ ತಿಮ್ಮಾಪುರ ಗ್ರಾಮದಲ್ಲಿ ಅಧಿಕಾರಿಗಳ, ಗ್ರಾಮ ಪಂಚಾಯತಿ ನಿರ್ಲಕ್ಷ್ಯದಿಂದ ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಿದೆ ಎಂದು ಜನರು ದೂರುತ್ತಿದ್ದಾರೆ.

ದಿಗಂತ ವಿಶೇಷ

> ಸರ್ಕಾರ ಕುಡಿಯುವ ನೀರಿಗೆ ಕೋಟ್ಯಂತರ ಹಣ ಮೀಸಲಿಟ್ಟು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳಬೇಕು.
> ■ ಯಲ್ಲಪ್ಪ ಎಚ್. ಬಾಬರಿ, ರೈತ ಸಂಘದ ಜಿಲ್ಲಾಧ್ಯಕ್ಷ, ಗದಗ

> ಲಕ್ಕುಂಡಿ-ಹರ್ಲಾಪೂರ ಮಾರ್ಗದಲ್ಲಿ ಕುಡಿಯುವ ನೀರು ಪೂರೈಕೆಗಾಗಿ 25 ಲಕ್ಷ ರೂ. ವೆಚ್ಚದಲ್ಲಿ ಪೈಪ್ ಲೈನ್ ಕಾಮಗಾರಿ ನಡೆದಿದ್ದು, ಕಾಮಗಾರಿ ಪೂರ್ಣಗೊಂಡರೆ ಕುಡಿಯುವ ನೀರು ಸಮಸ್ಯೆ ಬಗೆಹರಿಯಲಿದೆ.
> ■ ಶಿವಲೀಲಾ ಗೂಳಪ್ಪನವರ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ

- ▸▸ ಬೇಸಿಗೆಯಲ್ಲಿ ಸಾಲದ ನೀರು
- ▸▸ ತಿಮ್ಮಾಪುರದಲ್ಲಿ ಮೂರು ವಾರ್ಡ್‌ಗಳಿದ್ದು ವಾರಕ್ಕೊಮ್ಮೆ ಕೇವಲ 3-4 ಕೊಡ ನೀರು
- ▸▸ ಕುಡಿಯಲು, ದನ ಕರುಗಳಿಗೆ ಬಳಕೆಗೆ ನೀರು ಒದಗಿಸಲು ಜನರ ಆಗ್ರಹ



ಟ್ಯಾಂಕರ್‌ಗೆ ಮೊರೆ

ಗ್ರಾಮದಲ್ಲಿ ಕುಡಿಯುವ ನೀರಿನ ಯಾವುದೇ ಮೂಲ ಸೌಲಭ್ಯ ಇಲ್ಲದ ಕಾರಣ ಜನರು ಟ್ಯಾಂಕರ್ ನೀರಿನ ಮೊರೆ ಹೋಗಿದ್ದಾರೆ. ಆದರೆ ಕುಡಿಯುವ ನೀರಿನ ಟ್ಯಾಂಕರ್ ಮಾಲೀಕರು ಒಂದು ಟ್ಯಾಂಕರ್‌ಗೆ 1,500 ರೂಪಾಯಿ ನಿಗದಿ ಮಾಡಿದ್ದರಿಂದ ಸಾರ್ವಜನಿಕರ ಗೋಳು ಕೇಳುವವರಿಲ್ಲದಂತಾಗಿದೆ. ಇಂದಿನ ದುಬಾರಿ ದಿನದಲ್ಲಿ ಬಡವರು, ಸಾಮಾನ್ಯ ವರ್ಗದವರು ಹಣ ಕೊಟ್ಟು ನೀರು ಹಾಕಿಸಿಕೊಳ್ಳುವುದು ಹೇಗೆ ಸಾಧ್ಯ ಎಂದು ಸಾರ್ವಜನಿಕರು ಗ್ರಾಪಂ ಆಡಳಿತ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಸರ್ವಧರ್ಮ ಸಾಮೂಹಿಕ ವಿವಾಹಗಳು ಹೆಚ್ಚಲಿ



• **ರೋಣ:** ಸರ್ವಧರ್ಮ ಸಾಮೂಹಿಕ ವಿವಾಹಗಳು ನಡೆಯುವುದರಿಂದ ಬಡವರ ಮತ್ತು ಮಧ್ಯಮ ವರ್ಗದ ಜನರ ಆರ್ಥಿಕ ಸುಧಾರಣೆ ಸಾಧ್ಯ ಎಂದು ನರಗುಂದ ಪತ್ರಿವನ ಮಠದ ಸಿದ್ದವೀರ ಶಿವಾಚಾರ್ಯರು ಹೇಳಿದರು.

ಅವರು ಕೊತಬಾಳ ಗ್ರಾಮದ ಅಡವಿ ಸಿದ್ದೇಶ್ವರ ಶ್ರೀಮಠದಲ್ಲಿ ಜರುಗಿದ ಸಿದ್ದೇಶ್ವರ 71ನೇ ಪುಣ್ಯಸ್ಮರಣೆ, ರಾಜಶೇಖರ ಶಿವಯೋಗಿಗಳ 25ನೇ ಪುಣ್ಯಸ್ಮರಣೆ ಹಾಗೂ ರಥೋತ್ಸವದ ನಿಮಿತ್ತ ಜರುಗಿದ 31 ಸರ್ವಧರ್ಮ ಸಾಮೂಹಿಕ ವಿವಾಹಗಳ ಕಾರ್ಯಕ್ರಮವನ್ನು ಉಧ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಬಡವರು ಹಾಗೂ ಮಧ್ಯಮ ವರ್ಗದವರು ಕೂಡ ಸಾಲ ಸೋಲ ಮಾಡಿ ಮದುವೆಗಳನ್ನು ಮಾಡುವ ಬದಲು ಸಾಮೂಹಿಕ ವಿವಾಹಗಳಲ್ಲಿ ತಮ್ಮ ಮಕ್ಕಳ ಮದುವೆಗಳನ್ನು ಮಾಡಿಸಿದರೆ ಖರ್ಚು ಉಳಿಯಲಿದೆ. ನೂತನವಾಗಿ ಮದುವೆಯಾಗಿರುವ ದಂಪತಿ ಅತ್ತೆ ಮಾವನನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಬೇಕು. ಸಂಸಾರ ಎಂದ ಮೇಲೆ ಸಮಸ್ಯೆಗಳು ಉದ್ಭವಿಸುವುದು ಸಹಜ. ಹಾಗಂತ ನಿಮ್ಮ ಸಮಸ್ಯೆ ಮನೆಯ ಬಾಗಿಲು ದಾಟಬಾರದು. ಮಕ್ಕಳ ಮುಂದೆ ಜಗಳವಾಡದೆ ಪ್ರೀತಿಯಿಂದ ಇರಬೇಕು. ಪತ್ನಿಯೂ ತನ್ನ ಬಳಗವನ್ನು ಬಿಟ್ಟು ಪತ್ನಿಯು ನನ್ನ ಪತಿ ಸರ್ವಸ್ವ ಎಂದು ನಂಬಿ ಮನೆಗೆ ಬಂದಿರುತ್ತಾಳೆ ಎನ್ನುವುದು ಪತಿಯಾದವನು ಮರೆಯಬಾರದು. ಇನ್ನು ಜನಿಸುವ ಮಕ್ಕಳಿಗೆ ಒಳ್ಳೆಯ ಸಂಸ್ಕೃತಿಯನ್ನು ನೀಡಿ ಮತ್ತು ಗುಣಮಟ್ಟದ ಅಕ್ಷರ ಜ್ಞಾನಕ್ಕೆ ಹೆಚ್ಚಿನ ಒತ್ತು ಕಲ್ಪಿಸಿ ಎಂದರು.

ನೇತೃತ್ವವನ್ನು ಗಂಗಾಧರ ಶ್ರೀಗಳು ವಹಿಸಿದ್ದರು. ಸಾಮೂಹಿಕ ವಿವಾಹಕ್ಕೂ ಮೊದಲು ಗ್ರಾಮದಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು. ವಿವಿದ ವಾದ್ಯ ಮೇಳಗಳೊಂದಿಗೆ ಆರಂಭಗೊಂಡ ಅಡ್ಡಪಲ್ಲಕ್ಕಿ ಉತ್ಸವದಲ್ಲಿ 201 ಮಹಿಳೆಯರಿಂದ ಕುಂಭಮೇಳ ನಡೆಯಿತು. ನಂತರಶ್ರೀಮಠದಆವರಣದಲ್ಲಿದಾಸೋಹ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಡಾ. ಕೊಟ್ಟೂರೇಶ್ವರ ಶ್ರೀಗಳು, ಚನ್ನಬಸವ ಶ್ರೀಗಳು, ಶಿವಪೂಜಾ ಶಿವಾಚಾರ್ಯ ಶ್ರೀಗಳು, ಕೈಲಾಸಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ಶಿವಪ್ಪ ಪಲ್ಲೇದ, ವೀರಣ್ಣ ಯಾಳಗಿ, ಶಂಕ್ರಣ್ಣ ಸಂಕಣ್ಣವರ ಸೇರಿದಂತೆ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಶ್ರೀಗಳ ಜೀವನ ಅನುಕರಣೀಯ: ಅಂದಾನಪ್ಪ ವಿಭೂತಿ

• **ಮುಂಡರಗಿ:** ಕರ್ನಾಟಕದ ಮಠಮಾನ್ಯಗಳಲ್ಲಿಯೇ ಆಚಾರ-ವಿಚಾರ ಶುದ್ಧವಾಗಿದ್ದು, ತ್ರಿಕಾಲಪೂಜಾನಿಷ್ಠರಾಗಿ, ಸಾಹಿತಿಗಳಾಗಿ, ಉತ್ತಮ ಆಡಳಿತಗಾರರಾಗಿ, ತಮ್ಮ ಮಠದ ಇತಿಹಾಸವನ್ನು ಅರಿತವರಾಗಿ ಭಕ್ತರ ಮನದಲ್ಲಿ ಉಳಿದುಕೊಂಡವರು ಮುಂಡರಗಿ ಶ್ರೀಮಠದ ದಶಮಪೀಠಾಧಿಪತಿ ನಾಡೋಜ ಡಾ.ಅನ್ನದಾನೀಶ್ವರರು. ಶ್ರೀಗಳ ಜೀವನ ಅನುಕರಣೀಯ ಎಂದು ಹಿರಿಯ ಪತ್ರಕರ್ತ ಅಂದಾನಪ್ಪ ವಿಭೂತಿ ಹೇಳಿದರು.

ಅವರು ಇಲ್ಲಿಯ ಅನ್ನದಾನೀಶ್ವರ ಸಂಸ್ಥಾನಮಠದ ಶಿಲಾ ಮಂಟಪದಲ್ಲಿ ಜರುಗಿದ 893ನೇ ಬಸವ ಜಯಂತಿ, ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ 86ನೇ ಜನ್ಮದಿನೋತ್ಸವದ ಸಂಭ್ರಮಾಚರಣೆ ಹಾಗೂ 1946ನೇ ಶಿವಾನುಭವ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಗುರುವಂದನೆ ಕಾರ್ಯಕ್ರಮದಲ್ಲಿ ಪೂಜ್ಯರ ಜೀವನ ಹಾಗೂ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು. ಮುಂಡರಗಿ ಪೂಜ್ಯರು 170 ಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಶ್ರೀಗಳ ಕೃತಿಗಳ ಮೇಲೆ 4 ಜನರು ಪಿಎಚ್‌ಡಿ ಮತ್ತು 4 ಜನರು ಎಂಫಿಲ್ ಪದವಿ ಮಾಡಿದ್ದಾರೆ ಎಂದರು.

ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲಿಸಲಾಯಿತು. ಸಂಸ್ಥೆಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಮಾತನಾಡಿ, ಬಸವೇಶ್ವರರು ಭಾರತದ 12ನೇ ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ ,ಸಾಮಾಜಿಕ ಸುಧಾರಕ ಮತ್ತು ಶಿವ ಕೇಂದ್ರೀಕೃತ ಭಕ್ತ ಚಳುವಳಿಯಲ್ಲಿ ಕನ್ನಡ ಕವಿಯಾಗಿದ್ದರು ಎಂದರು. ನೇತೃತ್ವವನ್ನು ಹೂವಿನಶಿಗ್ಲಿಯ ಚೆನ್ನವೀರ ಸ್ವಾಮೀಜಿ, ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಡಾ.ಚನ್ನಮಲ್ಲ ಸ್ವಾಮೀಜಿ, ಇಮ್ಮಡಿ ನಿಜಗುಣ ಸ್ವಾಮೀಜಿ, ಅಭಿನವ ಚೆನ್ನಬಸವ ಸ್ವಾಮೀಜಿ, ಡಾ.ಮಹಾದೇವ ಸ್ವಾಮೀಜಿ, ಶಾಂತಲಿಂಗೇಶ್ವರ ಸ್ವಾಮೀಜಿ, ಹೊಳಲಿನ ಚೆನ್ನಬಸವ ದೇವರು ವಹಿಸಿದ್ದರು. ಬಿಇಒ ಗಂಗಾಧರ ಅಣ್ಣಿಗೇರಿ, ಮುಖ್ಯಮಂತ್ರಿ ಪದಕ ಪುರಸ್ಕೃತರಾದ ಜಾಫರ ಬಚ್ಚೇರಿ, ಮನೋಹರ, ಹನುಮರಡ್ಡಿ ಇಟಗಿ ಅವರಿಗೆ ಗುರುರಕ್ಷೆ ಜರಗಿತು. ಗಂಗಾಧರ ಅಣ್ಣಿಗೇರಿ ಅವರು ಮಾತನಾಡಿದರು. ಪೂಜ್ಯರ 86ನೇ ಹುಟ್ಟುಹಬ್ಬದ ನಿಮಿತ್ತ ರೋಗಿಗಳಿಗೆ ಹಣ್ಣು-ಹಂಪಲ ವಿತರಣೆ, ಗದಗ ಬಸವೇಶ್ವರ ರಕ್ತ ಬಂಡಾರದ ಸಹಯೋಗದಲ್ಲಿ ರಕ್ತದಾನ ಶಿಬಿರ, ಶ್ರೀ ಜ.ಅ.ಅಕ್ಕನಬಳಗದ ತಾಯಂದಿರಿಂದ ಗರ್ಭಿಣಿಯರಿಗೆ ಉಡಿತುಂಬುವ ಮತ್ತು ಸಸಿ ನೆಡುವ ಕಾರ್ಯಕ್ರಮಗಳು ಜರುಗಿತು. ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಸ್ವಾಮೀಜಿಗಳು ಪೂಜ್ಯರಿಗೆ ಗುರುವಂದನೆ ಸಲ್ಲಿಸಿದರು. ಸಂಗೀತ ಸೇವೆಯನ್ನು ಬಸವರಾಜ ಸಿದ್ದಣ್ಣವರ ಮತ್ತು ಶ್ರೀ.ಜ.ಅ.ಅಕ್ಕನ ಬಳಗದವರಿಂದ ಜರುಗಿತು. ಖುಷಿ ಮುರಡಿ ಭರತನಾಟ್ಯ ಪ್ರದರ್ಶಿಸಿದರು. ಭಕ್ತಿಸೇವೆಯನ್ನು ಗದಗಯ್ಯ ಗುರುಸ್ವಾಮಿಮಠ ವಹಿಸಿಕೊಂಡಿದ್ದರು. ಎಸ್.ಆರ್.ರಿತ್ತಿ ಮತ್ತು ಎಸ್.ಎಸ್.ಮಠದ ನಿರೂಪಿಸಿದರು.



ಜನಪರ ಆಡಳಿತದ ಮೇಲೆ ದೇಶದ ಜನತೆ ಮತ್ತೊಮ್ಮೆ ವಿಶ್ವಾಸ: ಮಲ್ಲಾಪೂರ

• **ಗಜೇಂದ್ರಗಡ:** ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಾದ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಸಾಧಿಸಿದ ಐತಿಹಾಸಿಕ ಹಾಗೂ ಭರ್ಜರಿ ವಿಜಯಕ್ಕಾಗಿ ಬಿಜೆಪಿ ರೋಣ ಮಂಡಳದ ವತಿಯಿಂದ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ರೋಣ ಮಂಡಳದ ಅಧ್ಯಕ್ಷ ಉಮೇಶ ಮಲ್ಲಾಪೂರ ಮಾತನಾಡಿ, ಕೇಂದ್ರ ಸರ್ಕಾರದ ಅಭಿವೃದ್ಧಿಪರ ದೃಷ್ಟಿಕೋನ ಮತ್ತು ಪ್ರಧಾನಮಂತ್ರಿ ಅವರ ದಿಟ್ಟ ನಾಯಕತ್ವ, ಜನಪರ ಆಡಳಿತದ ಮೇಲೆ ದೇಶದ ಜನತೆ ಮತ್ತೊಮ್ಮೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಪ್ರಮುಖವಾಗಿ ಪಶ್ಚಿಮ ಬಂಗಾಳದ ಜನರು ಬಿಜೆಪಿ ಬೆಂಬಲಿಸುವ ಮೂಲಕ ದುರಾಡಳಿತಕ್ಕೆ ತಕ್ಕ ಉತ್ತರ ನೀಡಿ, ಬದಲಾವಣೆಯ ಪರ್ವ ಸೃಷ್ಟಿಸಿದ್ದಾರೆ. ದೇಶದ ಭದ್ರತೆಗೆ ಪ್ರಧಾನಿ ನರೇಂದ್ರ ಮೋದಿಯೇ ಸೂಕ್ತ ಎಂದು ಜನರು ತೀರ್ಮಾನಿಸಿದ್ದಾರೆ. ಭಾರತೀಯ ಜನಸಂಘದ ಸ್ಥಾಪಕ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರ ರಾಷ್ಟ್ರಭಕ್ತಿಯ ತತ್ವಗಳು ಹಾಗೂ ಏಕತಾ ಸಂದೇಶ ಇಂದು ಬಿಜೆಪಿಯ ಈ ವಿಜಯಗಳಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತಿವೆ ಎಂದರು. ನಗರ ಘಟಕದ ಅಧ್ಯಕ್ಷ ರಾಜೇಂದ್ರ ಘೋರ್ಪಡೆ, ಹಿರಿಯ ಮುಖಂಡ ಅಶೋಕ ವನ್ನಾಲ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಬಾಳಾಜಿರಾವ ಬೋಸ್ಲೆ, ರವಿ ಶಿಂಗ್ರಿ, ಯಮನೂರಪ್ಪ ತಿರಕೋಜಿ ,ಡಿ.ಜಿ.ಕಟ್ಟಿಮನಿ, ಶ್ರೀನಿವಾಸ ಸವದಿ, ಜೀನಪ್ಪ ಗೋಗಿ, ವಿನಾಯಕ ಜರತಾರಿ, ಮಹಾಂತೇಶ ಪೂಜಾರ, ಮುತ್ತಣ್ಣ ಕಾಜಗಾರ, ಲಕ್ಷ್ಮಣ ಬಂಕದ, ಯು.ಆರ್.ಚನ್ನಮ್ಮನವರ, ಅಂದಪ್ಪ ಅಂಗಡಿ, ಶಂಕರ ಇಂಜನಿ ಸೇರಿದಂತೆ ಅನೇಕರು ಇದ್ದರು.



ಪ್ರಧಾನಿ ನರೇಂದ್ರ ಮೋದಿ ಆಡಳಿತ ವೈಖರಿ ಮೆಚ್ಚಿದ ಜನ: ಪಾಟೀಲ

• **ನರಗುಂದ:** ದೇಶದ 22 ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದಲ್ಲಿ ಆಡಳಿತ ನಡೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ವೈಖರಿ ಪಂಚರಾಜ್ಯಗಳ ಚುನಾವಣೆಯಲ್ಲಿ ಜಯ ಸಾಧಿಸುವಂತೆ ಮಾಡಿದೆ. ಪಶ್ಚಿಮ ಬಂಗಾಳ ಗೆಲುವು ದೇಶದ ಹಿಂದೂಗಳಿಗೆ ಖುಷಿ ತಂದಿದೆ ಎಂದು ಬಿಜೆಪಿ ಮುಖಂಡ ಉಮೇಶಗೌಡ ಪಾಟೀಲ ಹೇಳಿದರು.

ಸೋಮವಾರ ಪಟ್ಟಣದ ಶಿವಾಜಿ ವೃತ್ತದಲ್ಲಿ ಪಂಚ ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದ್ದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಮಾತನಾಡಿ, ಕಮ್ಯೂನಿಸ್ಟ್ ಆಡಳಿತಕ್ಕೆ ಸಿಲುಕಿದ ಪಶ್ಚಿಮ ಬಂಗಾಳ ರಾಜ್ಯವು ಬಾಂಗ್ಲಾ ವಲಸಿಗರಿಂದ ಉಸಿರುಗಟ್ಟಿದ ವಾತಾವರಣದಲ್ಲಿ ಸಿಲುಕಿತ್ತು. ಕೊಲೆಸುಲಿಗೆ ಹಿಂಸಾತ್ಮಕ ಘಟನೆಗಳಲ್ಲಿಯೇ ಜೀವನ ಕಳೆಯುತ್ತಿದ್ದ ಅಲ್ಲಿನ ಹಿಂದೂ ನಿವಾಸಿಗಳು ಬಿಜೆಪಿ ಗೆಲುವಿನಿಂದ ಆನಂದ ಪಡುತ್ತಿದ್ದಾರೆ. ರಾಷ್ಟ್ರ ಭಕ್ತರ ವಿಜಯ ಪತಾಕೆ ಅಲ್ಲಿ ಹಾರಾಡುತ್ತಿದೆ ಎಂದರು.

ವಸಂತ ಜೋಗಣ್ಣವರ ಮಾತನಾಡಿ, ಬಂಗಾಲ ರಾಜ್ಯದ ಜನರನ್ನು ವಲಸಿಗರಿಂದ ರಕ್ಷಣೆ ಮಾಡುತ್ತೇವೆ ಎಂಬ ಭರವಸೆಯನ್ನು ಮೋದಿ ಹಾಗೂ ಅಮಿತ್ ಶಾ ನೀಡಿದ್ದರಿಂದ ಅಲ್ಲಿನ ಜನತೆ ರಾಜ್ಯವನ್ನು ಅವರ ಮಡಿಲಿಗೆ ಹಾಕಿದ್ದಾರೆ. ಮೋದಿ ಅವರ ನೇತೃತ್ವಕ್ಕೆ ಒಪ್ಪಿಸಿದ್ದಾರೆ. ಅಂದರೆ ಬಂಗಾಲ ಜನತೆ ಎಷ್ಟೊಂದು ಸಂಕಷ್ಟದಲ್ಲಿ ಸಿಲುಕಿದ್ದರು ಎಂಬುದು ಗೊತ್ತಾಗುತ್ತದೆ ಎಂದರು. ಪುರಸಭೆ ಮಾಜಿ ಅಧ್ಯಕ್ಷ ಶಿವಾನಂದ ಮುತ್ತವಾಡ, ಮಲ್ಲಪ್ಪ ಮೇಟಿ, ಪ್ರಕಾಶಗೌಡ ತಿರಕನಗೌಡ್ರ, ಮಂಜು ಆನೇಗುಂದಿ, ಎಸ್ ಆರ್ ಪಾಟೀಲ, ಪ್ರವೀಣ ಆಳಗವಾಡಿ, ಸಂಗನಗೌಡ ಪಾಟೀಲ, ನವೀನಗೌಡ ಪಾಟೀಲ, ಮಂಜು ಮೆಣಸಗಿ, ಹಸನ ನವದಿ, ಬಸಪ್ಪ ಮಳಗಿ, ಸಿದ್ದೇಶ ಹೂಗಾರ, ಸಂತೋಷ ಹಂಚಿನಾಳ, ಕಿರಣ ಮುಧೋಳೆ, ಪ್ರವೀಣ ವಡ್ಡರ, ಶಿವು ದಲಭಂಜನ ಇತರರಿದ್ದರು.




ಮುಳಗುಂದದಲ್ಲಿ ₹16.71 ಕೋಟಿಯ ಕೆಇಬಿ ಗ್ರಿಡ್‌ಗೆ ಶಂಕುಸ್ಥಾಪನೆ

• **ಗದಗ:** ತಾಲೂಕಿನ ಮುಳಗುಂದ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಪ್ರಮುಖವಾಗಿ 16.71 ಕೋಟಿ ವೆಚ್ಚದ ಕೆಇಬಿ ಗ್ರಿಡ್ ನಿರ್ಮಾಣ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮುಳಗುಂದದಲ್ಲಿ ಕೆಇಬಿ ಗ್ರಿಡ್ ಸ್ಥಾಪನೆ ಎಂಬುದು ಕಳೆದ ಇಪ್ಪತ್ತು ವರ್ಷಗಳ ಹೋರಾಟದ ಫಲವಾಗಿದೆ. ಇಂದು ಅದು ಸಾಕಾರವಾಗುತ್ತಿರುವುದು ಅತ್ಯಂತ ಸಂತಸದ ಸಂಗತಿ. 16.71 ಕೋಟಿ ಮೊತ್ತದ ಈ ಯೋಜನೆ ಈ ಭಾಗದ ರೈತರು ಹಾಗೂ ಸಾರ್ವಜನಿಕರಿಗೆ ಬಹಳ ಉಪಯುಕ್ತವಾಗಲಿದೆ ಎಂದರು.

ಮುಳಗುಂದದಲ್ಲಿ ನಿರ್ಮಿಸಲಾಗುವ 2X20 ಎಂ.ವಿ.ಎ ಸಾಮರ್ಥ್ಯದ 110/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವು ಈ ಪ್ರದೇಶದ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಮಹತ್ವದ ಬಲ ತುಂಬಲಿದೆ. ವಿಶೇಷವಾಗಿ ರೈತರಿಗೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಲಭ್ಯವಾಗುವ ಮೂಲಕ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ. ಈ ಗ್ರಿಡ್ ಕಾಮಗಾರಿ ಒಂದು ವರ್ಷದೊಳಗೆ ಪೂರ್ಣಗೊಳ್ಳುವ ವಿಶ್ವಾಸವಿದ್ದು, ಮುಂದಿನ ವರ್ಷದ ಮೇ 1ರೊಳಗೆ ಲೋಕಾರ್ಪಣೆ ಮಾಡುವ ಗುರಿ ಹೊಂದಲಾಗಿದೆ ಎಂದು ಸಚಿವರು ತಿಳಿಸಿದರು.



ಮುಳಗುಂದದಲ್ಲಿ ಜೈನ ಬಸದಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಮುಳಗುಂದ ಪಟ್ಟಣದ ಅಂಗನವಾಡಿ ಕೇಂದ್ರ-323 ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. ಅಲ್ಲದೇ ಶ್ರೀಪುರದ ಬಸವೇಶ್ವರ ಸಮುದಾಯ ಭವನ ನಿರ್ಮಾಣಕ್ಕೂ ಶಂಕುಸ್ಥಾಪನೆ ನೆರವೇರಿಸಲಾಯಿತು. ಈ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳು ಮತ್ತಷ್ಟು ಸುಧಾರಿಸಲಿವೆ ಎಂದರು.

ಹು.ವಿ.ಸ.ಕಂ.ನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಎಸ್. ಖಾದ್ರಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಸಿದ್ದು ಪಾಟೀಲ ಇದ್ದರು.

ಆಭರಣ ಕಳ್ಳತನ: ಆರೋಪಿ ಬಂಧನ

• **ಲಕ್ಷ್ಮೇಶ್ವರ:** ಏಪ್ರಿಲ್ 10ರಂದು ಪಟ್ಟಣದ ಬಸ್ ನಿಲ್ದಾಣದಲ್ಲಿ ಬಂಗಾರದ ಆಭರಣ ಕಳ್ಳತನ ಹಾಗೂ ಏಪ್ರಿಲ್ 25ರಂದು ಬಸ್ ನಿಲ್ದಾಣದಲ್ಲಿ ಹಣ ಕದ್ದ ಆರೋಪದಡಿಯಲ್ಲಿ ಮಹಾರಾಷ್ಟ್ರದ ಪಾಂಗರಮಲ್ ಗ್ರಾಮದ ರಾಜವೀರ ರೈಮು ಕಾಳೆ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಕಡೆಯಿಂದ ಒಟ್ಟು 16 ಗ್ರಾಂ ಬಂಗಾರದ ಆಭರಣ, 2.20.000 ಲಕ್ಷ ಮೌಲ್ಯದ ಆಭರಣಗಳು ಹಾಗೂ 6,100 ರೂಪಾಯಿ ವಶಪಡಿಸಿಕೊಂಡಿದ್ದು, ಕೃತ್ಯಕ್ಕೆ ಬಳಸಿದ ಒಂದು ಮೋಟಾರ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಡಿಎಸ್‌ಪಿ ಉಪ ವಿಭಾಗ ಗದಗ ಇವರ ಮಾರ್ಗದರ್ಶನದಲ್ಲಿ ಶಿರಹಟ್ಟಿ ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್‌ಐ ನಾಗರಾಜ ಗಡದ, ಅಪರಾದ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಇವರನ್ನೊಳಗೊಂಡ ತಂಡ ರಚಿಸಿ ಪತ್ತೆ ಕಾರ್ಯ ಕೈಗೊಳ್ಳಲಾಗಿತ್ತು.



ಆದರ್ಶ ಗುರುಗಳಿಗೆ ವಿದ್ಯಾರ್ಥಿಗಳೇ ಆಸ್ತಿ: ಎ.ಎ.ಭಾವಿಕಟ್ಟಿ

• **ನರೇಗಲ್ಲ:** ಗುರು-ಶಿಷ್ಯರ ನಡುವಿನ ಸಂಬಂಧಕ್ಕೆ ಐತಿಹಾಸಿಕ ಹಿನ್ನಲೆಯಿದೆ. ಇವರೀರ್ವರ ನಡುವಿನ ಬಾಂಧವ್ಯ ಸದಾ ಸ್ಮರಣೀಯ ವಾಗಿರುವದು. ಒಬ್ಬ ಆದರ್ಶ ಗುರುವಿಗೆ ಶಿಷ್ಯರೇ ನಿಜವಾದ ಆಸ್ತಿಯಾಗಿದೆ ಎಂದು ನಿವೃತ್ತ ಮುಖ್ಯ ಶಿಕ್ಷಕಿ ಎ.ಎ. ಬಾವಿಕಟ್ಟಿ ಹೇಳಿದರು.

ಅವರು ಪಟ್ಟಣದ ಶ್ರೀ ಅನ್ನದಾನೇಶ್ವರ ಶಿವಾನುಭವ ಮಂಟಪದಲ್ಲಿ ಶ್ರೀ ಅನ್ನದಾನ ವಿಜಯ ಬಾಲಕಿಯರ ಪ್ರೌಢಶಾಲೆಯ 2003 ಮತ್ತು 2004ನೇ ಸಾಲಿನ ಹಳೆಯ ವಿದ್ಯಾರ್ಥಿನಿಯರು ''ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ'' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಎಸ್‌ಎವಿವಿಪಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ್ ದೊಡ್ಡಮೇಟಿ ಕಾರ್ಯಕ್ರಮ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿ ಮಾತನಾಡಿದದರು. ಎಸ್ ಎವಿವಿಪಿ ಸಮಿತಿ ಆಡಳಿತ ಅಧಿಕಾರಿ ಡಾ ಜಿ.ಕೆ.ಕಾಳೆ ಮಾತನಾಡಿದರು. ಹಳೆಯ ವಿದ್ಯಾರ್ಥಿನಿಯರಾದ ರೇಖಾ ಪಾಯಪ್ಪಗೌಡರ, ಮಹಾದೇವಿ ಬೆಳವಡಿ, ಶಿಲ್ಪಾ ಮಠ, ರೇಣುಕಾ ಬಿಷ್ಟಕ್ಕನವರ ಗುರುಗಳು ತಮ್ಮನ್ನು ತಿದ್ದಿ ತೀಡಿ ಬೆಳೆಸಿದ ಬಗೆಯನ್ನು ಸ್ಮರಿಸಿದರು. ಶಾಲೆಯ ಮುಖ್ಯೋಪಾಧ್ಯಾಯ ಎಸ್.ಎನ್. ಹೂಲಗೇರಿ ಅಧ್ಯಕ್ಷತೆ ವಹಿಸಿದ್ದರು. ಶ್ವೇತಾ ಕೊಟಗಿ, ಸುನಿತಾ ಹಂಜಿ ನಿರೂಪಿಸಿದರು. ಸ್ವಾಗತವನ್ನು ಬಕುಳಾ ಕಾಳೆ, ವಸುಂಧರಾ ನೀಲಗುಂದ . ಪ್ರಾರ್ಥನೆಯನ್ನು ಯಾಸ್ಮಿನ್ ಬಳಬಟ್ಟಿ, ಉಮಾ ಹುಯಿಲಗೋಳಮಠ ಸಂಗಡಿಗರು, ಪ್ರಾಸ್ತಾವಿಕವಾಗಿ ಶೈಲಾ ಮಡಿವಾಳರ ನಿರ್ವಹಿಸಿದರು. ಗುರುಗಳಿಗೆ ಇಂದಿನ ಶಿಕ್ಷಣ ಹಿಂದಿನ ಶಿಕ್ಷಣದ ಕುರಿತಾಗಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ವಿನೂತನ ಕಾರ್ಯಕ್ರಮವನ್ನು ಸಾವಿತ್ರಿ ಗುಬ್ಬಿ ನಡೆಸಿಕೊಟ್ಟರು ಶಿಕ್ಷಕರಾದ ಎ.ಟಿ. ಮಳ್ಳಳ್ಳಿ, ಬಿ.ಡಿ. ಯರಗೊಪ್ಪ, ಎಂ.ಎಸ್. ಅತ್ತಾರ್, ಎಸ್. ಶಿವಮೂರ್ತಿ, ಎಸ್. ಎಫ್. ಧರ್ಮಾಯತ, ರಮೇಶ್ ಶಿಲ್ಪಿನ್ ಪಾಲ್ಗೊಂಡಿದ್ದರು. ಶಾಲಾ ಸಿಬ್ಬಂದಿ ಬಸಮ್ಮ ಅಸುಂಡಿ , ಸಂಗಮೇಶ ಕುರಡಗಿ ಹಾಗೂ ಹಳೆಯ ವಿದ್ಯಾರ್ಥಿನಿಯರಾದ ರಶ್ಮಿ ಸಂಗನಾಳಮಠ, ವೇದಾವತಿ ಪಲ್ಲೇದ, ಸುಜಾತಾ ಹಿರೇಮಠ ಹಾಗೂ ಬಸವಣ್ಣಿ ಹುಬ್ಬಳ್ಳಿ ಉಪಸ್ಥಿತರಿದ್ದರು. ಸಾವಿತ್ರಿ ಹಿರೇವಡೆಯರ ವಂದಿಸಿದರು.

22,332 ಮತಗಳ ಅಂತರದ ಜಯಭೇರಿ | ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಮತ

ಉಮೇಶ ಮೇಟಿಗೆ ಭರ್ಜರಿ ಗೆಲುವು



ಬಾಗಲಕೋಟೆ: ವಿಧಾನಸಭೆಯ ಉಪಚುನಾವಣೆಯಲ್ಲಿ ದಿ.ಶಾಸಕ ಎಚ್.ವೈ.ಮೇಟಿಯವರ ಪುತ್ರ ಉಮೇಶ ಮೇಟಿಯವರು ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದಾರೆ.

ಬಾಗಲಕೋಟೆಯ ವಿಧಾನಸಭೆಯ ಉಪಚುನಾವಣೆಯು ತೀವ್ರ ಕುತೂಹಲ ಹಾಗೂ ಸರ್ಕಾರಕ್ಕೆ ದೊಡ್ಡಮಟ್ಟದ ಪ್ರತಿಷ್ಠೆಯಾಗಿತ್ತು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಖುದ್ದು ಐದು ದಿನ ಬಾಗಲಕೋಟೆಯಲ್ಲಿ ಠಿಕಾಣಿ ಹೂಡಿ ಪ್ರಚಾರ ನಡೆಸಿರುವುದು ಹಾಗೂ ಕ್ಷೇತ್ರದ ಉಸ್ತುವಾರಿಯನ್ನು ಹೊತ್ತಿದ್ದ ಸಚಿವ ಸತೀಶ ಜಾರಕಿಹೊಳಿ ಸುಮಾರು ಎರಡು ತಿಂಗಳಿಂದ ಕ್ಷೇತ್ರದಲ್ಲಿ ಗೆಲುವಿಗೆ ತಂತ್ರ ರೂಪಿಸಿದ್ದು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಆದಿಯಾಗಿ ಕ್ಷೇತ್ರದ ಹಿರಿಯ ನಾಯಕರು, ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಉಮೇಶ ಮೇಟಿಯವರ ಪರ ಪ್ರಚಾರ ನಡೆಸಿದ್ದು ಫಲಿತಾಂಶದಲ್ಲಿ ಫಲ ನೀಡಿದೆ.

ಸೋಮವಾರ ನವನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕೊಠಡಿಯಲ್ಲಿ 14 ಟೇಬಲ್‌ಗಳಲ್ಲಿ 23 ಸುತ್ತಿನ ಮತ ಎಣಿಕೆ ನಡೆಯಿತು. ಮೊದಲಿಗೆ ಗ್ರಾಮೀಣ ಪ್ರದೇಶದ ಮತ ಎಣಿಕೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚು ಮತಗಳಿಂದ ಲೀಡ್ ಕಾಯ್ದುಕೊಂಡರು ನಂತರ ನಗರಮಟ್ಟದಲ್ಲಿಯೂ 5 ಸಾವಿರ ಮತ ಲೀಡ ಕಡಿಮೆಯಾದರೂ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರಿಗಿಂತ ಉಮೇಶ ಮೇಟಿ 10ರಿಂದ 11 ಸಾವಿರ ಮತಗಳ ಅಂತರದಿಂದ ಲೀಡ್ ಪಡೆದುಕೊಂಡರು ಮತ್ತೆ 17ನೇ ಸುತ್ತು ಆರಂಭವಾಗುತ್ತಿದ್ದಂತೆ ಗ್ರಾಮೀಣ ಪ್ರದೇಶದಲ್ಲಿ ನಡೆದ ಮತ ಎಣಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೆಚ್ಚು ಮತಗಳಿಸುತ್ತಾ ದಾಪುಗಾಲು ಹಾಕಿದರು.

ವಿವಿಧ ಪಕ್ಷಗಳಿಗೆ ಎಷ್ಟು ಮತ

ಉತ್ತಮ ಪ್ರಜಾಕೀಯ ಪಾರ್ಟಿಯ ಸಂತೋಷ ಸವ್ವಾಸೆ 512 ಮತ, ಬ್ಲೂ ಇಂಡಿಯಾ ಪಾರ್ಟಿಯ ತಳವಾರ ಶಿವಕುಮಾರ 112, ಜನತಾ ಚಳವಳಿ ಭಾರತ ಪಕ್ಷದ ತೋಟೋರಾಮಶೆಟ್ಟಿ ದೇವಾಂಗ 62, ಕರ್ನಾಟಕ ರಕ್ಷಾ ಸಮಿತಿಯ ನಾಗರಾಜ ಕಲಕುಟಗರ 154, ಅಲ್ ಇಂಡಿಯಾ ಜನರಕ್ಷಾ ಪಾರ್ಟಿಯ ಸಿದ್ದಪ್ಪ ಗೋಡಿ 131, ಪಕ್ಷೇತರ ಅಭ್ಯರ್ಥಿಗಳಾದ ಆನಂದ ಜಕಾತಿ 198, ರವಿ ಶಿವಪ್ಪ ಪಡಸಲಗಿ 389 ಮತಗಳನ್ನು ಪಡೆದುಕೊಂಡಿದ್ದಾರೆ.

ಪ್ರತಿ ಸುತ್ತಿನಲ್ಲೂ ಲೀಡ್

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಪ್ರತಿ ಸುತ್ತಿನ ಮತ ಎಣಿಕೆಯಲ್ಲಿ ಹೆಚ್ಚು ಲೀಡ್ ಪಡೆದುಕೊಳ್ಳುತ್ತಾ ಸಾಗಿದರು. ಮೊದಲ ಸುತ್ತಿನಲ್ಲಿ ಕಾಂಗ್ರೆಸ್ 3207, ಎರಡನೇ ಸುತ್ತಿನಲ್ಲಿ 5116, ಮೂರನೇ ಸುತ್ತಿನಲ್ಲಿ, 8623, ನಾಲ್ಕನೇ ಸುತ್ತಿನಲ್ಲಿ 10867, 5ನೇ ಸುತ್ತಿನಲ್ಲಿ 13,391, ಆರನೇ ಸುತ್ತಿನಲ್ಲಿ 15,457 ಮತ, 7ನೇ ಸುತ್ತಿನಲ್ಲಿ 12,710, 8ನೇ ಸುತ್ತಿನಲ್ಲಿ 10881, 9ನೇ ಸುತ್ತಿನಲ್ಲಿ 11809, 10 ನೇ ಸುತ್ತಿನಲ್ಲಿ 11,384, 11ನೇ ಸುತ್ತಿನಲ್ಲಿ 9969, 12ನೇ ಸುತ್ತು 10,534, 13ನೇ ಸುತ್ತ 10321, 14ನೇ ಸುತ್ತಿನಲ್ಲಿ 9952, 15ನೇ ಸುತ್ತಿನಲ್ಲಿ 9555 ಮತ ಲೀಡ್ ಪಡೆದುಕೊಂಡರೆ 16ನೇ ಸುತ್ತಿನಲ್ಲಿ 10122, 17ನೇ ಸುತ್ತಿನಲ್ಲಿ 10766, 18ನೇ ಸುತ್ತು 13025, 19ನೇ ಸುತ್ತು 14,875, 20 ಸುತ್ತು 16,471, 21ನೇ ಸುತ್ತು 17205, 22ನೇ ಸುತ್ತ 19944 ಮತ್ತು ಕೊನೆಯ 23ನೇ ಸುತ್ತಿನಲ್ಲಿ 22332 ಮತ ಲೀಡ್ ಪಡೆದುಕೊಂಡರು. ನಗರದಲ್ಲಿ ಮಾತ್ರ ಬಿಜೆಪಿ ಐದಾರು ಸಾವಿರ ಲೀಡ್ ಬಿಟ್ಟರೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಮತಗಳನ್ನು ಕಾಂಗ್ರೆಸ್ ಅಭ್ಯರ್ಥಿ ಲೀಡ್ ಪಡೆದುಕೊಂಡು ಗೆಲುವಿನ ನಗೆ ಬೀರಿದರು.

ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ 98,919 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ 76,587 ಮತಗಳನ್ನು ಪಡೆದು ಪರಾಜಯ ಹೊಂದಿರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ, ಅವರ ಪ್ರತಿ ಸ್ಪರ್ಧಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗಿಂತ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಗೆಲುವು ಸಾಧಿಸಿದ ಕಾಂಗ್ರೆಸ್‌ನ ಉಮೇಶ ಮೇಟಿ ಅವರಿಗೆ ಚುನಾವಣಾಧಿಕಾರಿ ಸಂತೋಷ ಜಗಲಾಸರ ಪ್ರಮಾಣ ಪತ್ರ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಉಪ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಸೇರಿದಂತೆ ಜಿಲ್ಲೆಯ ವಿವಿಧ ಶಾಸಕರು ಉಪಸ್ಥಿತರಿದ್ದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಜಿಲ್ಲೆಯಿಂದ 10 ಸಾವಿರ ಜನತೆ



ಕಲಬುರಗಿ: ಕೋಟೆನಾಡು ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಮಾಜಿ ಮುಖ್ಯಮಂತ್ರಿ, ರೈತ ನಾಯಕ ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಹತ್ತು ಸಾವಿರ ಜನ ಭಾಗಿಯಾಗಲಿದ್ದಾರೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ, ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬಿಜೆಪಿ ನಾಯಕರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದ ರೈತರ ಹಕ್ಕುಗಳಿಗಾಗಿ ಹಾಗೂ ಎಲ್ಲಾ ವರ್ಗಗಳ ಸಮುದಾಯದಕ್ಕಾಗಿ ನಿರಂತರವಾಗಿ 50 ವರ್ಷಗಳ ಕಾಲ ಸೇವೆ ಸಲ್ಲಿಸಿದ ರೈತ ನಾಯಕ ಬಿಎಸ್‌ವೈ, 4 ಬಾರಿ ಸಿಎಂ ಆಗಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಕೇಳಿದಾಗ ಅನುದಾನ ನೀಡಿದ್ದಾರೆ. ಹೈದ್ರಾಬಾದ್ ಕರ್ನಾಟಕಕ್ಕೆ ಕಲ್ಯಾಣ ಕರ್ನಾಟಕ ಎಂಬ ನಾಮಕರಣ ಮಾಡಿದ್ದೆ ಬಿ.ಎಸ್.ಯಡಿಯೂರಪ್ಪನವರು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಮಾತನಾಡಿ, ಪಕ್ಷಾತೀತವಾಗಿ ನಡೆಯುವ ಕಾರ್ಯಕ್ರಮ. ಸಹಜವಾಗಿ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ 1 ಸಾವಿರ ಜನ ಆಗಮಿಸಲಿದ್ದು, ಈಗಾಗಲೇ ವಾಹನಗಳ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಕೃಷಿ ಬಜೆಟ್, ರೈತರ ಸಾಲ ಮನ್ನಾ, ಭಾಗ್ಯಲಕ್ಷ್ಮೀ ಯೋಜನೆ, ಉಚಿತ ಸೈಕಲ್ ವಿತರಣೆ, ಸುವರ್ಣ ಗ್ರಾಮ ಯೋಜನೆ ಸೇರಿದಂತೆ ಹಲವು ಯೋಜನೆ ರಾಜ್ಯದ ಜನರಿಗೆ ನೀಡಿದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗಕ್ಕೆ ಮರುನಾಮಕರಣ ಮಾಡಿದ್ದು ಯಡಿಯೂರಪ್ಪ. ನಂಜುಂಡಪ್ಪ ವರದಿ ಜಾರಿಗೆತರುವಲ್ಲಿ ಯಡಿಯೂರಪ್ಪನವರ ಶ್ರಮ ಅವಿರತವಾಗಿದೆ. ಯಾದಗಿರಿ ಹೊಸ ಜಿಲ್ಲೆಯನ್ನಾಗಿ ಮಾಡಿದ್ದು ಯಡಿಯೂರಪ್ಪ. ಮುಖ್ಯಮಂತ್ರಿಗಳಾಗಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಸುಮಾರು 40 ಬಾರಿ ಆಗಮಿಸಿದ್ದು, ಕಲಬುರಗಿಗೂ ಯಡಿಯೂರಪ್ಪನವರಿಗೂ ಅವಿನಾಭಾವ ಸಂಬಂಧ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಅವಿನಾಶ್ ಜಾಧವ್, ಮಾಜಿ ಎಂಎಲ್ಸಿ ಅಮರನಾಥ್ ಪಾಟೀಲ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ವಿಭಾಗ ಪ್ರಭಾರಿ ಶರಣಪ್ಪ ತಳವಾರ ಮಾತನಾಡಿದರು.

ಒಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ, ಜಿಲ್ಲಾ ಪ್ರ. ಕಾರ್ಯದರ್ಶಿ ಲಿಂಗರಾಜ ಬಿರಾದಾರ, ನಗರ ಪ್ರಧಾನ ಕಾರ್ಯದರ್ಶಿ ಉಮೇಶ್ ಪಾಟೀಲ್, ಮಹಾದೇವ ಬೆಳಮಗಿ, ಶಿವಯೋಗಿ ನಾಗೇನಹಳ್ಳಿ, ಹರ್ಷಾನಂದ ಗುತ್ತೇದಾರ್, ಚಂದ್ರಶೇಖರ ಪಸರರೆಡ್ಡಿ, ಗಿರಿರಾಜ್ ಯಳಮೇಲಿ, ಬಾಬುರಾವ್ ಹಾಗರಗುಂಡಗಿ ಇದ್ದರು.

ಸೈಕಲ್ ಮೂಲಕ ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿ ನಾಡಿನ ರೈತರಿಗೆ ನ್ಯಾಯ ನೀಡಿದ ಧೀಮಂತ ನಾಯಕ. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಪಕ್ಷವನ್ನು ಗೆಲ್ಲಿಸಿರುವ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲಬೇಕು. ಐತಿಹಾಸಿಕ ಅಭಿಮಾನೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿಸೋಣ.

■ **ಡಾ.ಉಮೇಶ್ ಜಾಧವ್,** ಮಾಜಿ ಸಂಸದ

ಬಿಎಸ್‌ವೈ ಅವಧಿಯಲ್ಲಿ ನಾನು ಪಕ್ಷದ ಅಧ್ಯಕ್ಷನಾಗಿದ್ದೆ. ಕಲಬುರಗಿ ಬೀಗರು ಸಹ ಅವರು. ಕಲಬುರಗಿಯಲ್ಲಿ ಮೂರು ಬಾರಿ ಸಚಿವ ಸಂಪುಟ ನಡೆಸಿ ಈ ಭಾಗದ ಅಭಿವೃದ್ಧಿಗೆ ಶ್ರಮಿಸಿರುವ ಧೀಮಂತ ನಾಯಕನಿಗೆ ಗೌರವ ಸಲ್ಲಿಸಲು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಂಡಿದ್ದು, ಕಲಬುರಗಿಯಿಂದ ಹತ್ತು ಸಾವಿರ ಜನ ಭಾಗವಹಿಸಲಿದ್ದಾರೆ. ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ.

■ **ಬಿ.ಜಿ.ಪಾಟೀಲ್,** ವಿಧಾನ ಪರಿಷತ್ ಸದಸ್ಯ

ಕಿರುಸುದ್ದಿ

ಜಾತ್ರೆ ಬಂದ್: ಏಳು ಮಂದಿ ವಿರುದ್ಧ ಪ್ರಕರಣ ದಾಖಲು

ಗದಗ: ನಗರದ ತೋಂಟದಾರ್ಯ ಮಠದ ಜಾತ್ರೆಯಲ್ಲಿ ಭಾನುವಾರ ನಡೆದ ಅವಘಡಕ್ಕೆ ಸಂಬಂಧಿಸಿದಂತೆ ಗದಗ ಶಹರ ಪೊಲೀಸ್ ಠಾಣೆಯಲ್ಲಿ ಏಳು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಭಾನುವಾರದ ಘಟನೆಗೆ ಸಂಬಂಧಿಸಿದಂತೆ ದಾಸರ ಓಣಿಯ ಜಹೀರ್ ಅಹ್ಮದ ಖಾಜಿ ನೀಡಿದ ದೂರಿನಂತೆ ತೋಂಟದಾರ್ಯ ಮಠದ ಜಾತ್ರೆಯಲ್ಲಿ ಡಾನ್ಸಿಂಗ್ ಫ್ಲೈ ಆಟದ ಯಂತ್ರದ ಉಸ್ತುವಾರಿ ಪರುಶುರಾಮ ಸಮಗಾರ, ಭಾಗಿದಾರರಾದ ವಿಶ್ವನಾಥ ದೊಡ್ಡಮನಿ, ನೂರಅಹ್ಮದ ಧಾರವಾಡ, ನಾರಾಯಣ ದೊಡ್ಡಮನಿ, ಮಲ್ಲು ಬಾದನ ಹಾಗೂ ಜಾತ್ರಾ ಕಮಿಟಿ ಅಧ್ಯಕ್ಷ ವಿನಾಯಕ ಮಾನ್ವಿ, ವ್ಯವಸ್ಥಾಪಕ ಎಂ.ಎಸ್. ಅಂಗಡಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾದ ನಂತರ ಪೊಲೀಸರು ಸೋಮವಾರ ಬೆಳಗ್ಗೆ ಜಾತ್ರಾ ಸ್ಥಳದಲ್ಲಿದ್ದ ಅಂಗಡಿಗಳನ್ನು ಬಂದ್ ಮಾಡಿಸಿದರು.

ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಅಭೂತಪೂರ್ವವಾಗಿಸೋಣ: ರೂಪಾಲಿ ನಾಯ್ಕ



ಕಾರವಾರ: ಭಾರತೀಯ ಜನತಾ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ತರುವಲ್ಲಿ ಅಮೂಲ್ಯ ಕೊಡುಗೆ ನೀಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ವನ್ನು ಅಭೂತಪೂರ್ವವಾಗಿಸೋಣ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತಿಳಿಸಿದರು.

ಮಾಜಿಮುಖ್ಯಮಂತ್ರಿ, ರೈತಬಂಧು ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಯಡಿಯೂರಪ್ಪ ಅಭಿಮಾನೋತ್ಸವದ ಕುರಿತು ಹಳಿಯಾಳ, ಮುಂಡಗೋಡ ಹಾಗೂ ಯಲ್ಲಾಪುರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಬಿ.ಎಸ್.ಯಡಿಯೂರಪ್ಪ ಈ ನಾಡಿನ ಒಂದು ಶಕ್ತಿ. ಪಕ್ಷಕ್ಕಾಗಿ ಅವಿರತವಾಗಿ ಅರ್ಧ ಶತಮಾನದಷ್ಟು ಕಾಲ ದುಡಿದ ಮಹಾನ್ ನಾಯಕರು. ರೈತರು, ಬಡವರು, ಮೀನುಗಾರರು, ಮಹಿಳೆಯರು, ದೀನ ದಲಿತರು ಹೀಗೆ ಎಲ್ಲ ವರ್ಗದವರ ಅಭಿವೃದ್ಧಿಗಾಗಿ ಜನಪರ ಯೋಜನೆಗಳನ್ನು ಕಾರ್ಯಕ್ರಮವನ್ನು ಜಾರಿಗೊಳಿಸಿದ್ದಾರೆ. ಅವರು ನಾಡಿಗಾಗಿ, ಪಕ್ಷಕ್ಕಾಗಿ ನೀಡಿದ ಕೊಡುಗೆ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ಯಡಿಯೂರಪ್ಪ ಅಭಿಮಾನೋತ್ಸವವನ್ನು ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮವನ್ನು ಐತಿಹಾಸಿಕವಾಗಿಸೋಣ. ನಮ್ಮ ಜಿಲ್ಲೆಯ ಪ್ರತಿಯೊಂದು ತಾಲೂಕಿನಿಂದಲೂ ಕಾರ್ಯಕರ್ತರು, ಅತಿ ಹೆಚ್ಚು ಜನರು ಸ್ವಇಚ್ಛೆಯಿಂದ ಪಾಲ್ಗೊಳ್ಳುವ ಮೂಲಕ ಸಮಾರಂಭಕ್ಕೆ ಮೆರುಗು ತರೋಣ ಎಂದು ಅವರು ಮನವಿ ಮಾಡಿದರು.

ಮಾಜಿ ಶಾಸಕ ಸುನೀಲ ಹೆಗಡೆ, ರಾಜ್ಯ ವಕ್ತಾರರಾದ ಹರಿಪ್ರಕಾಶ್ ಕೋಣೆಮನೆ, ಶ್ರೀಕಾಂತ ಘೋಟ್ನೇಕರ, ಮಂಗೇಶ ದೇಶಪಾಂಡೆ, ಶಿವಾಜಿ ನರ್ಸಾನಿ, ಎಲ್.ಟಿ. ಪಾಟೀಲ್, ಅಶೋಕ ಛಲವಾದಿ, ಮಂಜುನಾಥ ಪಾಟೀಲ ಮೊದಲಾದವರು ಪಾಲ್ಗೊಂಡಿದ್ದರು.

ವಿಜಯೋತ್ಸವ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ, ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಗೆಲುವು ದಾಖಲಿಸಿದ ಹಿನ್ನೆಲೆಯಲ್ಲಿ ಹಳಿಯಾಳದಲ್ಲಿ ರೂಪಾಲಿ ನಾಯ್ಕ ನೇತೃತ್ವದಲ್ಲಿ ವಿಜಯೋತ್ಸವ ನಡೆಯಿತು. ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಜಾತ್ರಾ, ಮಹೋತ್ಸವ | ಅದ್ದೂರಿ ಮೆರವಣಿಗೆ

ಗ್ರಾಮ ದೇವಿಯರಿಗೆ ಸಂಭ್ರಮದ ಸ್ವಾಗತ



ಸವದತ್ತಿ: ಸುಮಾರು 45 ವರ್ಷಗಳ ನಂತರ ಅತಿ ಸಡಗರ ಸಂಭ್ರಮದಿಂದ ನಡೆದ ಗ್ರಾಮದೇವಿಯ ಜಾತ್ರಾ ಮಹೋತ್ಸವ ಸೋಮವಾರ ಬೆಳಗ್ಗೆ 5ಗಂಟೆಗೆ ಸಮೀಪದ ಸಂಗಮೇಶ್ವರ ದೇವಸ್ಥಾನದಿಂದ ಗ್ರಾಮದೇವಿಯರ ಮೂರ್ತಿಗಳನ್ನು ಪರಮಪೂಜ್ಯರ ಮಾರ್ಗದರ್ಶನದಂತೆ ಸಂಗಮೇಶ್ವರ ಕೊಳ್ಳದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿ ಅಲ್ಲಿಂದ ಮೆರವಣಿಗೆಯ ಮೂಲಕ ಎಪಿಎಂಸಿಗೆ ಕರೆ ತರಲಾಯಿತು.

ಎಪಿಎಂಸಿ ಚನ್ನಮ್ಮ ವೃತ್ತದಲ್ಲಿ ಗ್ರಾಮ ದೇವಿಯರ ಮೆರವಣಿಗೆಯಲ್ಲಿ ಗ್ರಾಮದೇವಿ ಜಾತ್ರಾ ಉತ್ಸವ ಸಂಘ ಸವದತ್ತಿ ಪದಾಧಿಕಾರಿಗಳು ಹಾಗೂ ಗ್ರಾಮದೇವಿ ಜಾತ್ರಾ ಮಹೋತ್ಸವದ ಪದಾಧಿಕಾರಿಗಳು 16 ಜನ ರೈತರು ಮತ್ತು ಉತ್ಸವ ಸಮಿತಿಯ ಅಧ್ಯಕ್ಷ ವಿರೂಪಾಕ್ಷಪ್ಪ ಮಾಮನಿ ಹಾಗೂ ಉಪಾಧ್ಯಕ್ಷರಾದ ಶಾಸಕ ವಿಶ್ವಾಸ ವೈದ್ಯ ರವರು ಸೇರಿದಂತೆ ನಗರದ ಎಲ್ಲಾ ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಎಪಿಎಂಸಿ ಚನ್ನಮ್ಮ ವೃತ್ತದಿಂದ ಪ್ರಾರಂಭವಾದ ಮೆರವಣಿಗೆಯು ಹೊಸಪೇಟೆ ಓಣಿ ಕಡಕೋಳ ಬ್ಯಾಂಕ್ ವೃತ್ತ ಆನೆ ಅಗಸಿ ನಂತರ ದೇವಿಯ ತವರು ಮನೆಯಾದ ಮುಖಾಸಿ ಓಣಿ ಹಾಗೂ ಬಂಡಿ ಓಣಿಗೆ ತಲುಪಿ ಅಲ್ಲಿ ಪೂಜಾ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಆನೆ ಅಗಸಿಗೆ ಆಗಮಿಸಿತು. ನಂತರ ಪಟ್ಟಣದ ಮಧ್ಯಭಾಗದಲ್ಲಿರುವ ಲಿಂಗರಾಜರ ಕೋಟೆಗೆ ಭೇಟಿ ನೀಡಿ ಅಲ್ಲಿನ ಕಾಡಸಿದ್ದೇಶ್ವರಕೆದ್ದು ದೇವಸ್ಥಾನಕ್ಕೆ ಭೇಟಿ ನೀಡಿ ಪದ್ಧತಿಯಂತೆ ಅಲ್ಲಿ ದೇವಿಯರಿಗೆ ಮಾಂಗಲ್ಯ ಧಾರಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ನಂತರ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕಟ್ಟಿ ಓಣಿಯ ಜಾತ್ರಾ ಮಹೋತ್ಸವದ ಕಟ್ಟಿಗೆ ಬಂದು ಅಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ಮೆರವಣಿಗೆ ಕಾರ್ಯಕ್ರಮದಲ್ಲಿ ಸ್ಥಳೀಯ ಗಣ್ಯರಾದ ಅಶ್ವಥ್ ವೈದ್ಯ, ಸಂಜೀವ್ ಕುಮಾರ್ ನವಲಗುಂದ, ಶ್ರೇಯಸ್.ವಿ.ಮಾಮನಿ, ಚಿನ್ಮಯ್ ಆನಂದ ಮಾಮನಿ, ಅಡಿವೆಪ್ಪ ಗಂಗಪ್ಪ ಬೀಳಗಿ, ಬಿ.ಎನ್.ಪ್ರಭು, ಪ್ರವೀಣ ರಾಮಪ್ಪನವರ, ಭರ್ಮಪ್ಪ ಅಣ್ಣಿಗೇರಿ, ಅಲ್ಲಮಪ್ರಭು ಪ್ರಭುನವರ, ಕೆ. ಆರ್. ಕುಲಕರ್ಣಿ, ಗಿರೀಶ್ ಮುನವಳ್ಳಿ, ಡಾ.ಹೇಮಂತ್ ಭಸ್ಮೆ, ದೀಪಕ್ ಪಿ ಕಾಡನ್ನವರ್ ಸೇರಿದಂತೆ ಎಲ್ಲ ಸಮಾಜದ ಮುಖಂಡರು ಹಾಗೂ ಗ್ರಾಮದೇವಿ ಜಾತ್ರಾ ಮಹೋತ್ಸವದ ಎಲ್ಲ ಪದಾಧಿಕಾರಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪ್ರಧಾನಿ ಜನಪರ ಕಾರ್ಯ ಎತ್ತಿ ಹಿಡಿದ ಮತದಾರರು: ಶಾಸಕ ಜಾರಕಿಹೊಳಿ

ಬೆಳಗಾವಿ: ಪಂಚ ರಾಜ್ಯಗಳ ಚುನಾವಣೆ ಪೈಕಿ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಜನಪರ ಕೆಲಸಗಳನ್ನು ಮತದಾರರು ಎತ್ತಿ ಹಿಡಿದಿದ್ದಾರೆ ಎಂದು ಬೆಮುಲ್ ಅಧ್ಯಕ್ಷ ಹಾಗೂ ಅರಬಾಂವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.



ಈ ಕುರಿತು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ ಅವರು, ಚಾಣಕ್ಯ ಅಮಿತ್ ಷಾ ಅವರ ರಣತಂತ್ರ ಪಶ್ಚಿಮ ಬಂಗಾಳದಲ್ಲಿಕ್ಕೆ ಹಿಡಿದಿದೆ. ದೇಶದ ಮೂಲೆ-ಮೂಲೆಗಳಲ್ಲಿ ಕಮಲ ಅರಳಿದೆ. ಪಕ್ಷದ ಸಮಸ್ತ ಕಾರ್ಯಕರ್ತರು ಮತ್ತು ಚುನಾವಣೆಯಲ್ಲಿ ಜಯ ಸಾಧಿಸಿರುವ ನಮ್ಮ ಪಕ್ಷದ ಎಲ್ಲ ಅಭ್ಯರ್ಥಿಗಳಿಗೆ ಅಭಿನಂದನೆಗಳು. ಮುಂದಿನ 2028ರಲ್ಲಿ ಕರ್ನಾಟಕದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಸಂಪೂರ್ಣ ಬಹುಮತದಿಂದ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಗೆಲುವು: ಕಾಗೇರಿ ಹರ್ಷ

ಶಿರಸಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವು ಭಾರತೀಯ ಜನತಾ ಪಾರ್ಟಿ ಮತ್ತು ಎನ್‌ಡಿಎ ಮೈತ್ರಿಕೂಟದ ಅಭೂತಪೂರ್ವ ಗೆಲುವನ್ನು ಸಾರುತ್ತಿದೆ. ಇದು 'ವಿಕಸಿತ ಭಾರತ'ದ ಕನಸನ್ನು ನನಸು ಮಾಡಲು ದೇಶದ ಜನತೆ ನಮ್ಮ ಸಮರ್ಥ ನಾಯಕತ್ವದ ಮೇಲೆ ಇಟ್ಟಿರುವ ಅಚಲ ವಿಶ್ವಾಸಕ್ಕೆ ಸಂದ ಜಯವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ರಾಷ್ಟ್ರದ ಐಕ್ಯತೆ, ಅಖಂಡತೆ ಮತ್ತು ರಾಷ್ಟ್ರೀಯತೆಯ ಪರವಾಗಿ ಜನಸಾಮಾನ್ಯರು ಸ್ಪಷ್ಟ ಸಂದೇಶ ನೀಡಿದ್ದಾರೆ. ನಮ್ಮ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದರ್ಶಿತ್ವ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮರ್ಥ ಮಾರ್ಗದರ್ಶನದಲ್ಲಿ ಭಾರತವು ಇಂದು ಸದೃಢವಾಗಿ ಮುನ್ನಡೆಯುತ್ತಿರುವುದಕ್ಕೆ ಈ ಫಲಿತಾಂಶವೇ ಸಾಕ್ಷಿ.

ಈ ಐತಿಹಾಸಿಕ ಗೆಲುವಿಗಾಗಿ ನಿರಂತರವಾಗಿ ಶ್ರಮಿಸಿದ ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತರಿಗೂ ಹಾಗೂ ಅಭಿವೃದ್ಧಿಯ ಮಂತ್ರವನ್ನು ಬೆಂಬಲಿಸಿದ ಸಮಸ್ತ ಮತದಾರ ಪ್ರಭುಗಳಿಗೂ ನಾನು ಈ ಮೂಲಕ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ಮುಂಡಗೋಡ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ತಾಲೂಕಾ ಬಿಜೆಪಿಯವರು ಪಟ್ಟಣದ ಶಿವಾಜಿ ಸರ್ಕಲ್ ನಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ರಾಜ್ಯ ಮಾಧ್ಯಮ ವಕ್ತಾರ ಹರಿಪ್ರಕಾಶ್ ಕೋಣೆಮನೆ, ಮಂಡಲ ಅಧ್ಯಕ್ಷರ ಮಂಜುನಾಥ್ ಪಾಟೀಲ, ಮಾಜಿ ಜಿಲ್ಲಾ ಉಪಾಧ್ಯಕ್ಷರ ಎಲ್.ಟಿ .ಪಾಟೀಲ, ಅಶೋಕ್ ಚ ಚಲವಾದಿ ಸೇರಿದಂತೆ ಕಾರ್ಯಕರ್ತರು ಇದ್ದರು.

ಕ್ರಿಕೆಟ್: ಮಹಾಸತಿ ಕುಮಟಾ ತಂಡ ಚಾಂಪಿಯನ್

◆**ಕುಮಟಾ:** ಶ್ರೀ ಮಹಾಗಣಪತಿ ಕ್ರಿಕೆಟರ್ಸ್, ಊರಕೇರಿ ಇವರು ಊರಕೇರಿ ಕಡವು ಶಾಲೆ ಸಮಿಪದ ಮೈದಾನದಲ್ಲಿ ನಡೆಸಿದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಕುಮಟಾದ ಮಹಾಸತಿ ತಂಡ ಗೆದ್ದು ಚಾಂಪಿಯನ್ ಟ್ರೋಪಿಯನ್ನು ತನ್ನದಾಗಿಸಿಕೊಂಡಿತು.

5 ಓವರ್‌ಗಳ ಈ ಪಂದ್ಯಕ್ಕಾಗಿ 16 ತಂಡಗಳು ಭಾಗವಹಿಸಿದ್ದವು. ಅಂತಿಮ ಪಂದ್ಯ ಮಹಾಸತಿ ತಂಡ, ಕುಮಟಾ ಹಾಗೂ ಊರಕೇರಿಯ ಎಸ್.ಎಂ.ಜಿ ತಂಡದ ಮಧ್ಯ ನಡೆದು ಮಹಾಸತಿ ತಂದ ಊರಕೇರಿ ತಂಡವನ್ನು ಸೋಲಿಸಿ ಈ ಪಂದ್ಯಾವಳಿಯ ಚಾಂಪಿಯನ್ ಆಯಿತು.ಸದಾಶಿವ ಹೆಗಡೆ ಅವರು ಪ್ರಾಯೋಜಿಸಿದ್ದ ಚಾಂಪಿಯನ್ ಟ್ರೋಪಿಯ ಜೊತೆ, ಈ ಪಂದ್ಯಾವಳಿಯ ಸಂಘಟಕರು ಘೋಷಿಸಿದ್ದ ಇಟ್ಟಿದ್ದ 9 ಸಾವಿರ ನಗದು ಬಹುಮಾನವನ್ನು ಕಾರ್ತಿಕ ಸದಾಶಿವ ಹೆಗಡೆ ಅವರು ಮಹಾಸತಿ ತಂಡಕ್ಕೆ ನೀಡಿದರು.

ಉರಕೇರಿ ತಂಡ ರನರ್ ಅಪ್ ಟ್ರೋಪಿ ಹಾಗೂ 6 ಸಾವಿರ ನಗದು ಬಹುಮಾನವನ್ನು ಪಡೆದುಕೊಂಡಿತು, ಬಹುಮಾನ ವಿತರಣೆ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮಹಾಗಣಪತಿ ಕ್ರಿಕೆಟರ್ಸ್‌ನ ಸದಸ್ಯ ಮಾರುತಿ ನಾಯ್ಕ ವಹಿಸಿದ್ದರು, ಶ್ರೀ ಮಹಾಗಣಪತಿ ಕ್ರಿಕೆಟರ್ಸ್‌ನ ಅಧ್ಯಕ್ಷ ಗಣೇಶ ಮುಕ್ರಿ, ಸದಸ್ಯ ಶ್ರೀಕಾಂತ ನಾಯ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಮಹಾಗಣಪತಿ ಕ್ರಿಕೆಟರ್ಸ್‌ನ ಸದಸ್ಯರಾದ ನಾರಾಯಣ ಹೆಗಡೆ, ವಿಜೇತ ನಾಯ್ಕ, ಭೂಷಣ ನಾಯ್ಕ, ಸುನೀಲ್ ಮಡಿವಾಳ ಹಾಗೂ ಇನ್ನಿತರರು ಸಹಕರಿಸಿದ್ದರು.



ಕುಮಟಾ: ಶ್ರೀ ಮಹಾಗಣಪತಿ ಕ್ರಿಕೆಟರ್ಸ್, ಊರಕೇರಿ ಇವರು ಊರಕೇರಿ ಕಡವು ಶಾಲೆ ಸಮಿಪದ ಮೈದಾನದಲ್ಲಿ ನಡೆಸಿದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಕುಮಟಾದ ಮಹಾಸತಿ ತಂಡ ಗೆದ್ದು ಚಾಂಪಿಯನ್ ಟ್ರೋಪಿಯನ್ನು ತನ್ನದಾಗಿಸಿಕೊಂಡಿತು.

ಕಿರುಸುದ್ದಿ

ಇಂದು ಅರಣ್ಯ ಅತಿಕ್ರಮಣದಾರರ ಸಭೆ

◆**ಕುಮಟಾ:** ತಾಲೂಕಿನ ಅರಣ್ಯ ಅತಿಕ್ರಮಣದಾರರ ಸಭೆಯನ್ನು ಮೇ 5ರಂದು ಸ್ಥಳೀಯ ಮಾಸ್ತಿಕಟ್ಟೆ ದೇವಸ್ಥಾನದ ಸಭಾಂಗಣದಲ್ಲಿ ಸಭೆ ಕರೆಯಲಾಗಿದೆ ಎಂದು ಹೋರಾಟಗಾರರ ವೇದಿಕೆಯ ತಾಲೂಕಾಧ್ಯಕ್ಷ ಮಂಜುನಾಥ ಮರಾಠಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ರಾಜ್ಯ ಸರ್ಕಾರದ ನೀತಿಗೆ ವಿರುದ್ಧವಾಗಿ ಅರಣ್ಯ ಅತಿಕ್ರಮಣದಾರರ ಮಹಜರ್ ಜರುಗುತ್ತಿರುವುದು ಮತ್ತು ಅರಣ್ಯವಾಸಿಗಳು ಅತಿಕ್ರಮಿಸಿರುವ ಮೂರು ಎಕರೆ ಸಾಗುವಳಿಗೆ ಆತಂಕ ಮಾಡಬಾರದೆಂಬ ರಾಜ್ಯ ಸರ್ಕಾರದ ಆದೇಶ ರದ್ದಿಗೆ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿರುವ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಅಧ್ಯಕ್ಷತೆಯಲ್ಲಿ ಜರುಗುವ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅರಣ್ಯವಾಸಿಗಳು ಆಗಮಿಸಬೇಕೆಂದು ಅಧ್ಯಕ್ಷ ರವಿಂದ್ರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿದ್ಯುತ್ ವ್ಯತ್ಯಯ ನಾಳೆ

◆**ಕುಮಟಾ:** ಉಪವಿಭಾಗದ ಗೋಕರ್ಣ ಶಾಖೆಯ ಮಾದನಗೇರಿ 11ಕೆ.ವಿ ಕೇಬಲ್ ಬಿಚ್ಚಿ ಅಳವಡಿಸುವ ಕಾಮಗಾರಿಯು ಬಳಲೆ ಗ್ರಾಮದಲ್ಲಿ ಇರುವುದರಿಂದ ಅಂಕೋಲಾ ಉಪ-ವಿಭಾಗ ವ್ಯಾಪ್ತಿಯ ಬಳಲೆ, ದೇವಿಗದ್ದೆ, ಉಳವರೆ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ಮೇ. 6ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆಯೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ), ಹೆಸ್ಕಾಂ, ಕುಮಟಾ ಇವರು ಪ್ರಕಟಣೆ ನೀಡಿರುತ್ತಾರೆ. ಈ ಭಾಗದ ಗ್ರಾಹಕರು ಸಹಕರಿಸಲು ಕೋರಿರುತ್ತಾರೆ.

ಮೇ 8ಕ್ಕೆ ವಿದ್ಯುತ್ ವ್ಯತ್ಯಯ

◆**ಮುಂಡಗೋಡ:** ಪಟ್ಟಣದ 110/11 ಕೆ.ವಿ. ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಮೇ 8ರಂದು ಬೆಳಗ್ಗೆ 9ಘಂಟೆಯಿಂದ ಸಂಜೆ 6ಘಂಟೆವರೆಗೆ ಮುಂಡಗೋಡ ಪಟ್ಟಣ, ಟಿಬೆಟಿಯನ್ ಕಾಲನಿ, ಬಾಚಣಕಿ, ನಂದಿಕಟ್ಟಾ, ಇಂದೂರ, ಹುನಗುಂದ, ಮೈನಳ್ಳಿ, ಚವಡಳ್ಳಿ, ಗುಂಜಾವತಿ, ಚಿಗಳ್ಳಿ, ನಾಗನೂರ, ಸಾಲಗಾಂವ, ಕಾತೂರ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಎಲ್ಲಾ ಗ್ರಾಮಗಳು ಹಾಗೂ ಸನವಳ್ಳಿ ಕುಡಿಯುವ ನೀರಿನ ಘಟಕಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಶಿವಯ್ಯಾ ತೋಟಯ್ಯನವರ ನಿಧನ

◆**ಮುಂಡಗೋಡ:** ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದ ತಾಲೂಕಿನ ಹುನಗುಂದ ಗ್ರಾಮದ ವೇ.ಮೂ. ಶಿವಯ್ಯಾ ತೋಟಯ್ಯನವರ(55) ಸೋಮವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗ ಇದ್ದಾರೆ. ತಾಲೂಕು ವೀರಶೈವ ಮಹಾಘಟಕ ಹಾಗೂ ಶಾಸಕ ಶಿವರಾಮ ಹೆಬ್ಬಾರ ಸೇರಿದಂತೆ ಅನೇಕ ಗಣ್ಯರು ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.



ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	65399	67300
ಬಿಳಿಗೋಟು	25189	37900
ಕೆಂಪುಗೋಟು	26219	36500
ಬೆಟ್ಟೆ	41899	52099
ರಾಶಿ	50001	54100
ಚಾಲಿ	44599	48999
ಬಿ.ಕಾಳುಮೆಣಸು	90000	90000

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58821	60555
ರಾಶಿ	48619	57621
ಬೆಟ್ಟೆ	36666	50469
ಕೆಂಪುಗೋಟು	17909	37969
ಬಿಳಿಗೋಟು	18299	39800
ಚಾಲಿ	38019	48699
ಕೋಕಾ	16909	34899
ಕಾಳುಮೆಣಸು	58555	69509

ಸಾರ್ವಜನಿಕರಿಂದ ಗ್ರಾಮ ಪಂಚಾಯಿತಿ ಕಚೇರಿಗೆ ಮುತ್ತಿಗೆ

ನೀರು ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

◆**ಕುಮಟಾ:** ಕುಡಿಯುವ ನೀರು ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯ ಹಾಗೂ ನೀರು ಪೂರೈಕೆ ಸಂದರ್ಭದಲ್ಲಿ ಉಂಟಾಗಿರುವ ಹಿತಕರ ಘಟನೆಗೆ ಕಾರಣರಾದವರ ಮೇಲೆ ಕ್ರಮ ಕೈಗೊಂಡು, ಜನತೆಗೆ ಈ ಹಿಂದಿನಂತೆ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ತಾಲೂಕಿನ ಕಾಗಲ್ ಗ್ರಾಪಂ ವ್ಯಾಪ್ತಿಯ ವಿವಿಧ ಮಜರೆಯ 300ಕ್ಕೂ ಹೆಚ್ಚು ಕುಟುಂಬದ ನೂರಾರು ಸಾರ್ವಜನಿಕರು ಸೋಮವಾರ ಗ್ರಾಪಂ ಕಚೇರಿಗೆ ಮುತ್ತಿಗೆ ಹಾಕಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಅಘನಾಶಿನಿ ಮಾಸ್ತಿಕಟ್ಟೆ ಬಳಿ ಇರುವ ಎರಡು ಕೊಳವೆ ಬಾವಿಗಳಿಂದ ಸದಾಕಾಲ ಕಾಗಲ್ ಗ್ರಾ.ಪಂ ವ್ಯಾಪ್ತಿಯ ಅಘನಾಶಿನಿ, ತಾರಿಗೋಳಿ, ಬಳಿಹೊಯ್ಗಿ ಭಾಗದ ಸುಮಾರು 300ಕ್ಕೂ ಹೆಚ್ಚು ಕುಟುಂಬಗಳಿಗೆ ನೀರು ಪೂರೈಸಲಾಗುತ್ತಿತ್ತು. ಆದರೆ ಕೆಲ ದಿನಗಳಿಂದ ಕೆಸರು ನೀರು ಬರುತ್ತಿರುವುದರಿಂದ ಜನರು ದೂರಿದ್ದರು. ಹೀಗಾಗಿ ಗ್ರಾ.ಪಂ ಪಿಡಿಒ ಅವರು ಏ.24 ರಂದು ಬಾವಿ ದುರಸ್ತಿ ಮಾಡಲು ಕ್ರಮ ಕೈಗೊಂಡಿದ್ದು, ಈ ವೇಳೆ ಕೊಳವೆಬಾವಿ ದುರಸ್ತಿ ಮಾಡುತ್ತಿರುವವರ ಮೇಲೆ ಕೆಲ ವ್ಯಕ್ತಿಗಳು ಹಲ್ಲೆಗೆ ಮುಂದಾಗಿದ್ದರು. ಅಲ್ಲದೆ ಕೊಳವೆ ಬಾವಿಗೆ ಕಲ್ಲು ಜಡಿದು, 35 ಪೈಪ್‌ಗಳನ್ನು ಒಡೆದು ಹಾನಿಪಡಿಸಿದ್ದರು. ಕೃತ್ಯ ಎಸಗಿದ ಎಂಟು ಜನರ ವಿರುದ್ಧ ಕಾಗಲ ಗ್ರಾ.ಪಂ ಪಿಡಿಒ ಅವರು ಕುಮಟಾ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಮಧ್ಯೆ ಸಾರ್ವಜನಿಕರು ನೀರು ಪೂರೈಕೆಯಾಗುತ್ತಿಲ್ಲ ಎಂದು ಏ.29 ರಂದು ಗ್ರಾ.ಪಂ ಪಿಡಿಒ ಅವರಿಗೆ ಮನವಿ ಸಲ್ಲಿಸಿದ್ದರು. ಮನವಿ ನೀಡಿ ಕೆಲ ದಿನಗಳಾದರೂ ಸಮಸ್ಯೆ ಬಗೆಹರಿಸಿಲ್ಲ ಎಂದು ಸೋಮವಾರ ನೂರಾರು ಸಾರ್ವಜನಿಕರು ಗ್ರಾ.ಪಂ ಕಚೇರಿಗೆ ಮುತ್ತಿಗೆ ಹಾಕಿ ನೀರು ಪೂರೈಸುವಂತೆ ಆಗ್ರಹಿಸಿದರು.



ಕೊಳವೆ ಬಾವಿಗೆ ಕಲ್ಲು ಜಡಿದು ಕೃತ್ಯ ಎಸಗಿದ ಘಟನೆಯನ್ನು ಸಾರ್ವಜನಿಕರ ಬಳಿ ಪಿಡಿಒ ನವೀನ ನಾಯ್ಕ ತೆರೆದಿಟ್ಟರು. ಈ ವೇಳೆ ಸಾರ್ವಜನಿಕರು ಮೇಲಾಧಿಕಾರಿಗಳು ಸ್ಥಳಕ್ಕಾಗಮಿಸಿ ಸಮಸ್ಯೆ ಬಗೆಹರಿಸುವ ವರೆಗೂ ಗ್ರಾ.ಪಂ ಕಚೇರಿ ಬಿಟ್ಟು ಕದಲುವುದಿಲ್ಲ ಎಂದು ಪಟ್ಟುಹಿಡಿದರು. ಕೆಲ ಗಂಟೆಗಳ ನಂತರ ತಹಶೀಲ್ದಾರ್ ಶ್ರೀಕೃಷ್ಣ ಕಾಮಕರ್, ತಾ.ಪಂ ಇಒ ಆರ್.ಎಲ್.ಭಟ್ಟ, ಪಿಐ ಯೋಗೀಶ ಅವರು ಸ್ಥಳಕ್ಕಾಗಮಿಸಿ ಮಂಗಳವಾರವೇ ಪೊಲೀಸ್ ಭದ್ರತೆಯಲ್ಲಿ ಕೊಳವೆ ಬಾವಿ ದುರಸ್ತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ, ಪರಿಸ್ಥಿತಿ ತಿಳಿಗೊಳಿಸಿದರು. ಟ್ಯಾಂಕರ್ ಮೂಲಕ ನೀರು ವಿತರಿಸಿದರೂ ಅನೇಕ ಕುಟುಂಬಗಳಿಗೆ ರಸ್ತೆ ಸಂಪರ್ಕ ಇಲ್ಲದ ಕಾರಣ ಟ್ಯಾಂಕರ್ ನೀರು ಪಡೆಯಲಾಗುತ್ತಿಲ್ಲ. ಹೀಗಾಗಿ ಶೀಘ್ರದಲ್ಲಿ ಮೊದಲಿನಂತೆ ಕುಡಿಯುವ ನೀರು ಒದಗಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದರು.

ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದ್ದರೂ, ರಸ್ತೆ ಸಂಪರ್ಕದ ಕೊರತೆಯಿಂದ ಅನೇಕ ಮನೆಗಳಿಗೆ ಅದು ತಲುಪುತ್ತಿಲ್ಲ. ಹೀಗಾಗಿ, ಶಾಶ್ವತ ಪರಿಹಾರವೇ ಅಗತ್ಯವೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಇನ್ನು ಕೊಳವೆ ಬಾವಿಯನ್ನು ಪರಿಶೀಲಿಸಿದ ಅಧಿಕಾರಿಗಳು ದುಷ್ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ''ಬೇಸಿಗೆಯ ಸಂಕಷ್ಟದ ಸಮಯದಲ್ಲಿ ಇಂತಹ ಅಮಾನವೀಯ ಕೃತ್ಯಗಳನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ'' ಎಂದು ಪೊಲೀಸ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಈ ವೇಳೆ ಸ್ಥಳೀಯರಾದ ಶಶಿಕುಮಾರ ನಾಯ್ಕ, ಕೇಶವ ನಾಯ್ಕ, ವಿಷ್ಣು ನಾಯ್ಕ, ಪುರುಷೋತ್ತಮ ನಾಯ್ಕ, ಲೋಲಾಕ್ಷಿ ನಾಯ್ಕ, ವಿನಯ ನಾಯ್ಕ ಜನಾರ್ಧ ನಾಯ್ಕ, ಸಂಜೀವ ನಾಯ್ಕ, ಬಾಬು ನಾಯ್ಕ, ಲಂಬೋದರ ನಾಯ್ಕ, ಜನಾರ್ಧನ ನಾಯ್ಕ, ಸೇರಿದಂತೆ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

ಧ್ಯಾನ ಎಲ್ಲ ರೋಗಗಳಿಗೆ ಶ್ರೇಷ್ಠ ಚಿಕಿತ್ಸೆ

◆**ಅಂಕೋಲಾ:** ಧ್ಯಾನ ಎಲ್ಲ ರೋಗಗಳಿಗೂ ಶ್ರೇಷ್ಠ ಚಿಕಿತ್ಸೆಯಾಗಬಲ್ಲದು. ಒತ್ತಡದ ಇಂದಿನ ಬದುಕಿನ ನಡುವೆ ದಿನದಲ್ಲಿ ಒಂದು ಗಂಟೆಯಾದರೂ ಪ್ರತಿಯೊಬ್ಬರೂ ಧ್ಯಾನ ಮಾಡಬೇಕು ಎಂದು ತಾಲೂಕು ವೈದ್ಯಾಧಿಕಾರಿಗಳಾದ ಡಾ. ಜಗದೀಶ ನಾಯ್ಕ ಸಲಹೆ ನೀಡಿದರು.

ಕಲಾಭಾರತಿ ಟ್ರಸ್ಟ್ (ರಿ) ಅಂಕೋಲಾ ಆಶ್ರಯದಲ್ಲಿ ಹಮ್ಮಿಕೊಂಡ 21 ದಿನಗಳ ಧ್ಯಾನ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾತನಾಡಿದ ಅವರು, ಮೆಡಿಕೇಶನ್ ಬದಲು ಮೆಡಿಟೇಶನ್ ಮಾಡಿ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೊಸದಿಗಂತ ಪತ್ರಿಕೆಯ ಹುಬ್ಬಳ್ಳಿ ವಿಭಾಗದ ಮುಖ್ಯಸ್ಥರಾದ ವಿಠ್ಠಲದಾಸ್ ಕಾಮತ್‌ರವರು ಮಾತನಾಡಿ, ಧ್ಯಾನ ಪ್ರತಿನಿತ್ಯ ನನಗೆ ಸಹಕಾರಿಯಾಗಿದೆ. ಇದರ ಸದುಪಯೋಗ ಎಲ್ಲರೂ ಮಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ ನಿವೃತ್ತ ಶಿಕ್ಷಕರಾದ ಎಂ.ಎಂ. ಕರ್ಕಿಕರ್ ಕಲಾಭಾರತಿ ಟ್ರಸ್ಟ್ ಇವರು ಮಾಡುತ್ತಿರುವ ಕಾರ್ಯ ಶ್ಲಾಘನೀಯ ಹಾಗೂ ಅವರ ಕಾರ್ಯಕ್ಕೆ ನನ್ನ ಸಹಕಾರ ಸದಾ ಇರುತ್ತದೆ ಎಂದರು.

ವರ್ಷಿಣಿ ಶೆಟ್ಟಿ ಇವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಆಗಮಿಸಿದ ಸರ್ವರನ್ನೂ ಟ್ರಸ್ಟ್‌ನ ಅಧ್ಯಕ್ಷರಾದ ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಧ್ಯಾನ ಸಾಧಕಿ ಸುಧಾ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ನಿತೀನ್ ನಾಯ್ಕ ಅಂಕೋಲಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ನಂತರದಲ್ಲಿ ಅಂಕೋಲಾದ ಪಿರಮಿಡ್ ಮಾಸ್ಟರ್ ಸುಧಾ ಶೆಟ್ಟಿ ಧ್ಯಾನ ತರಬೇತಿಯನ್ನು ನೀಡಿದರು. ಪತಂಜಲಿ ಯೋಗ ಸಮಿತಿಯ ತಾಲೂಕು ಪ್ರಭಾರಿ ವಿನಾಯಕ ಗುಡಿಗಾರ್, ಕೆ.ಎಲ್ .ಈ ಸಂಸ್ಥೆಯ ಕೌಟುಂಬಿಕ ಸಲಹಾ ಕೇಂದ್ರದ ಸಲಗೆಗಾರರಾದ ತಿಮ್ಮಣ್ಣ ಭಟ್, ಸಂಗಮ ಸೇವಾ ಸಂಸ್ಥೆಯ ರವೀಂದ್ರ ಶೆಟ್ಟಿ, ಯೋಗ ಸಾಧಕಿ ಜೊತ್ಸ್ನಾ ನಾರ್ವೇಕರ್, ಹಿರಿಯರಾದ ಅಭಯ್ ಮರಬಳ್ಳಿ ಮುಂತಾದವರು ಉಪಸ್ಥಿತರಿದ್ದರು.



ಭಟ್ಕಳದಲ್ಲಿ ಬಿಜೆಪಿ ಸಂಭ್ರಮಾಚರಣೆ

◆**ಭಟ್ಕಳ:** ಬಿಜೆಪಿ ಭಟ್ಕಳ ಮಂಡಲದ ನೇತೃತ್ವದಲ್ಲಿ ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವಿಗಾಗಿ ಸಂಭ್ರಮಾಚರಣೆ ನಡೆಯಿತು.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಅಭೂತ ಪೂರ್ವ ಗೆಲುವು ಸಾಧಿಸಿದ್ದು ಕೇರಳದಲ್ಲಿ 3 ಸೀಟ್ ಗೆದ್ದಿದ್ದು, ತಮಿಳುನಾಡು ಕೂಡ ಗಮನಾರ್ಹ ಸಾಧನೆ ಮಾಡಿರುವ ಖುಷಿಯ ಸಂದರ್ಭದಲ್ಲಿ ಭಟ್ಕಳದ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶಿವಾನಿ ಭಟ್ಕಳ ಮಾತನಾಡಿ, ಹಿಂದುಗಳು ಒಗ್ಗಟ್ಟಾದರೆ ಹೇಗೆ ಅಭೂತಪೂರ್ವ ಗೆಲುವು ದಾಖಲಿಸಬಹುದು ಎನ್ನುವ ಸಂದೇಶ ದೊರೆತಿದೆ. ಮಹಿಳೆಯರ ಮೇಲೆ ನಡೆದ ನಿರಂತರ ಅತ್ಯಾಚಾರ ಅನಾಚಾರಕ್ಕೆ ಮಹಿಳೆಯರು ಪಶ್ಚಿಮ ಬಂಗಾಲದಲ್ಲಿ ದಿಟ್ಟ ಉತ್ತರ ನೀಡಿದ್ದಾರೆ ಎಂದರು.

- ಪಂಚ ರಾಜ್ಯ ಚುನಾವಣೆ
- ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ

ಬಿಜೆಪಿ ಮಂಡಲ ಅಧ್ಯಕ್ಷರಾದ ಲಕ್ಷ್ಮೀ ನಾರಾಯಣ ನಾಯ್ಕ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ನಾಯ್ಕ, ಜಿಲ್ಲಾ ಕಾರ್ಯದರ್ಶಿ ಸುಬ್ರಾಯ ದೇವಾಡಿಗ ಮತ್ತು ಶ್ರೀಕಾಂತ್ ನಾಯ್ಕ್, ಭಾಸ್ಕರ ದೈಮನೆ, ಜಿಲ್ಲಾ ಪ್ರಮುಖರಾದ ರಾಜೇಶ್ ನಾಯ್ಕ, ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತರಾಮ ಭಟ್ಕಳ, ಮೋಹನ್ ನಾಯ್ಕ್, ಒಬಿಸಿ ಮೋರ್ಚಾ ಅಧ್ಯಕ್ಷರಾದ ಉಮೇಶ್ ನಾಯ್ಕ, ಮುಖಂಡರಾದ ಶ್ರೀನಿವಾಸ ನಾಯ್ಕ, ಉದಯ ನಾಯ್ಕ್, ದಿನೇಶ ನಾಯ್ಕ, ವೆಂಕಟೇಶ ನಾಯ್ಕ, ಕೇಶವ ನಾಯ್ಕ, ಮಂಜುನಾಥ ನಾಯ್ಕ ಚಿತ್ರಾಪುರ ಹಾಗೂ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ರಾಷ್ಟ್ರೀಯತೆ, ಅಭಿವೃದ್ಧಿಗೆ ಸಂದ ಜಯ

◆**ಕಾರವಾರ:** ಸೋಮವಾರ ಪ್ರಕಟವಾದ ಐದು ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವ ಭಾರತೀಯ ಜನತಾ ಪಕ್ಷ ಹಾಗೂ ಎನ್‌ಡಿಎ ಮೈತ್ರಿಕೂಟದ ಅಭಿವೃದ್ಧಿಪರ ಆಡಳಿತಕ್ಕೆ ದೊರೆತ ಜಯವಾಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ಎಸ್.ನಾಯ್ಕ ಅಭಿಪ್ರಾಯ

ರಾಷ್ಟ್ರೀಯತೆ, ಅಭಿವೃದ್ಧಿ, ಏಕತೆಗೆ ಮತದಾರ ಒಲವು ವ್ಯಕ್ತಪಡಿಸಿರುವುದು ಈ ಫಲಿತಾಂಶವೇ ಸಾಕ್ಷಿಯಾಗಿದೆ. ದೇಶಾದ್ಯಂತ ಎನ್‌ಡಿಎ ಸರ್ಕಾರದ ದೂರದೃಷ್ಟಿಯ ಆಡಳಿತಕ್ಕೆ ಗೆಲುವು ದೊರೆತಂತಾಗಿದೆ. ದೇಶಕ್ಕಾಗಿ ಪಕ್ಷಕ್ಕಾಗಿ ಹಗಲಿರುಳು ದುಡಿಯುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಎಲ್ಲ ನಾಯಕರಿಗೆ ಅಭಿನಂದನೆಗಳು. ಈ ಜಯಕ್ಕಾಗಿ ಹಗಲಿರುಳು ದುಡಿದ ಪಕ್ಷದ ಎಲ್ಲ ನಾಯಕರು, ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಎನ್‌ಡಿಎ ಮೈತ್ರಿಕೂಟಕ್ಕೆ ಮತನೀಡಿ ಆಶೀರ್ವದಿಸಿದ ಎಲ್ಲ ಮತದಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ರೂಪಾಲಿ ಎಸ್.ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರುಪಮಾಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ



◆**ದಾಂಡೇಲಿ:** ಬೆಂಗಳೂರಿನ ಕರ್ನಾಟಕ ರಾಜ್ಯ ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ತಿನ ರಾಜ್ಯ ಮಟ್ಟದ ಕಾಯಕಯೋಗಿ ಪ್ರಶಸ್ತಿಗೆ ಆಯ್ಕೆಯಾಗಿದ್ದ ದಾಂಡೇಲಿಯ ಜನತಾ ಸಂಯುಕ್ತ ಪದವಿ ಪೂರ್ವ ವಿದ್ಯಾಲಯದ ಉಪನ್ಯಾಸಕಿ ನಿರುಪಮಾ ನಾಯಕ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕರ್ನಾಟಕ ರಾಜ್ಯ ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ ರಾಜ್ಯದ ವಿಶೇಷ ಸೇವಾ ಸಾಧಕರನ್ನು ಗುರುತಿಸಿ ಕೊಡಮಾಡುವ ಈ ಪ್ರಶಸ್ತಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಸೂಲಿಬೆಲೆಯಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ನಿರುಪಮಾ ನಾಯಕ ಅವರಿಗೆ ಪ್ರದಾನ ಮಾಡಲಾಯಿತು. ರಾಜ್ಯಮಟ್ಟದ ಪ್ರಶಸ್ತಿಯನ್ನು ಸ್ವೀಕರಿಸಿದ ನಿರುಪಮಾ ನಾಯಕ ಅವರಿಗೆ ನಗರದ ಗಣ್ಯರನೇಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರಿಂದ ಸಂಭ್ರಮ

◆**ಯಲ್ಲಾಪುರ:** ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಿಜೆಪಿ ಮಂಡಲದಿಂದ ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ವಿಧಾನಸಭಾ ಕ್ಷೇತ್ರಗಳ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟಾಕ್ಷಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ರಾಜ್ಯ ವಕ್ತಾರ ಹರಿಪ್ರಕಾಶ್ ಕೋಣೆಮನೆ, ಮಂಡಲದ ಅಧ್ಯಕ್ಷ ಪ್ರಸಾದ ಹೆಗಡೆ, ಪಕ್ಷದ ಪ್ರಮುಖರಾದ ಪ್ರಮೋದ ಹೆಗಡೆ, ಉಮೇಶ ಭಾಗ್ವತ, ಕೆ.ಟಿ. ಹೆಗಡೆ, ರಾಘವೇಂದ್ರ ಭಟ್, ವೆಂಕಟರಮಣ ಬೆಳ್ಳಿ, ಶೃತಿ ಹೆಗಡೆ, ಚಂದ್ರಕಲಾ ಭಟ್, ನಿರ್ಮಲಾ ನಾಯ್ಕ, ರಾಮು ನಾಯ್ಕ, ರಜತ್ ಬದ್ದಿ, ಸೋಮು ನಾಯ್ಕ, ಗಿರೀಶ ಭಾಗ್ವತ, ವಿನೋದ ತಳೆಕರ್, ಗಣೇಶ ಪಾರಣಕರ, ಪ್ರದೀಪ ಯಲ್ಲಾಪುರಕರ ಇತರರು ಇದ್ದರು.



ಅಂಕೋಲಾದಲ್ಲಿ ಬಿಜೆಪಿ ಸಂಭ್ರಮಾಚರಣೆ

◆**ಅಂಕೋಲಾ:** ಪಂಚರಾಜ್ಯಗಳಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೂರು, ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದನ್ನು ಬಿಜೆಪಿ ಅಂಕೋಲಾ ಮಂಡಲದ ವತಿಯಿಂದ ಸಂಭ್ರಮಾಚರಣೆ ನಡೆಸಲಾಯಿತು.

ಪಟ್ಟಣದ ಜೈಹಿಂದ್ ವೃತ್ತದ ಬಳಿ ಸೇರಿದ ಬಿಜೆಪಿ ಕಾರ್ಯಕರ್ತರು ಭಾರತ ಮಾತೆಗೆ, ನರೇಂದ್ರ ಮೋದಿಯವರಿಗೆ ಜಯಕಾರ ಕೂಗಿದರು.

ಬಿಜೆಪಿಯ ಪ್ರಭಾರಿ ಮಂಡಲ ಅಧ್ಯಕ್ಷ ಸಂಜಯ ನಾಯ್ಕ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಗಳಲ್ಲಿ ಮತದಾರರು ಬಿಜೆಪಿಗೆ ಗೆಲುವು ನೀಡಿದ್ದು ಪ್ರಧಾನಿ ಮೋದಿಯವರ ಸಮರ್ಥ ಆಡಳಿತಕ್ಕೆ ದೊರಕಿದ ಜನತೆಯ ಆಶೀರ್ವಾದವಾಗಿದೆ ಎಂದರು.

ಬಿಜೆಪಿ ಆಡಳಿತದಲ್ಲಿ ಜನರು ಸುರಕ್ಷಿತ ಎನ್ನುವುದನ್ನು ಮತದಾರ ಮನಗಂಡಿದ್ದು ಬಿಜೆಪಿಯ ಪರ ಮತ ಚಲಾಯಿಸಲು ಕಾರಣವಾಗಿದೆ ಎಂದ ಅವರುದೇಶದ ಅಭಿವೃದ್ಧಿ ಮತ್ತು ರಕ್ಷಣೆಯ ವಿಷಯದಲ್ಲಿ ನರೇಂದ್ರ ಮೋದಿ ಸರ್ಕಾರದ ಧೋರಣೆಗಳು,ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ದೇಶವನ್ನು ಸದೃಢವಾಗಿ ಮುನ್ನಡೆಸಿರುವುದು ಮತದಾರರ ವಿಶ್ವಾಸ ಹೆಚ್ಚಿಸಿದೆ ಎಂದರು.

ಯುವ ಮೋರ್ಚಾದ ಪ್ರವೀಣ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಮಂಡಲ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ನಾಯ್ಕ, ಶ್ರೀಧರ ನಾಯ್ಕ, ಪ್ರಮುಖರುಗಳಾದ ತಾರಾ ನಾಯ್ಕ, ಹುವಾ ಖಂಡೇಕರ್, ಸಂದೀಪ ಗಾಂವಕರ, ಮಂಕಾಳ ಗೌಡ, ದಾಮೋದರ ರಾಯ್ಕರ್, ವಿನಾಯಕ ನಾಯ್ಕ, ಗಣರಾಜ ಗಾಂವಕರ ಇದ್ದರು.



ಕಾಂಗ್ರೆಸ್ ಗೆಲುವು: ಸಂಭ್ರಮಾಚರಣೆ



◆**ಯಲ್ಲಾಪುರ:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪಚುನಾವಣೆಗಳ ಜೊತೆಗೆ ಕೇರಳ ರಾಜ್ಯದ ಚುನಾವಣಾ ಫಲಿತಾಂಶಗಳಲ್ಲಿ ಕಾಂಗ್ರೆಸ್ ಪಕ್ಷವು ಅಭೂತಪೂರ್ವ ಜಯ ಸಾಧಿಸಿದ ಹಿನ್ನೆಲೆಯಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ವಿವೇಕ್ ಹೆಬ್ಬಾರ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಬಳಿಕ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿಕೊಂಡು ಸಂಭ್ರಮ ವ್ಯಕ್ತಪಡಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಎಸ್. ಭಟ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ವಿಜಯ ಮಿರಾಶಿ, ಎನ್.ಕೆ. ಭಟ್, ಡಾ.ರವಿ ಭಟ್ ಬರಗದ್ದೆ, ಸತೀಶ ನಾಯ್ಕ, ಪ್ರೇಮಾನಂದ ನಾಯ್ಕ, ಉಲ್ಲಾಸ್ ಶಾನಭಾಗ, ಪೂಜಾ ನೇತ್ರಕರ್, ಮುಷರತ್ ಶೇಖ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಿಎಂ ಕಚೇರಿಗೆ ಪತ್ರ ಬರೆಯಲು ಗ್ರಾಮಸ್ಥರ ನಿರ್ಧಾರ

◆**ಹಳಿಯಾಳ:** ತಾಲೂಕಿನ ಬಿ ಕೆ ಹಳ್ಳಿ ಗ್ರಾಮದಲ್ಲಿ ಹಾಗೂ ತಾಲೂಕಿನಾದ್ಯಂತ ನಡೆದ ಜೆಜೆಎಂ ಕಳಪೆ ಕಾಮಗಾರಿ ಕುರಿತು ಮೇ 3 ರಂದು ಪತ್ರಿಕೆಯು ವಿಶೇಷ ವರದಿಯ ಮೂಲಕ ಬೆಳಕು ಚೆಲ್ಲಿದ ಹಿನ್ನೆಲೆ ಬಿ ಕೆ ಹಳ್ಳಿ ಗ್ರಾಮಸ್ಥರು ಪ್ರಧಾನಿ ಕಚೇರಿಗೆ ಪತ್ರ ಬರೆಯಲು ಮುಂದಾದ್ದಾರೆ.

ದಿಗಂತ ವಿಶೇಷ

ಪತ್ರಿಕೆಯ ಅಂದಿನ ಪ್ರತಿಗಳನ್ನು ಹಂಚಲಾಗದಂತೆ ಪೇಪರ್ ಬಂಡಲ್ ಗಳನ್ನು ಎಗರಿಸಿಯಾಗಿತ್ತು. ಕಾರಣ ಹಿಂದಿನ ದಿನ ಗ್ರಾಮದಾದ್ಯಂತ ತಿರುಗಾಡಿ ಮಾಹಿತಿ ಕಲೆಹಾಕಿ ವಿಡಿಯೋ ಮತ್ತು ಫೋಟೋಗಳನ್ನು ತೆಗೆದುಕೊಂಡ ಬಗ್ಗೆ ಮಾಹಿತಿ ಪಡೆದಿದ್ದ ಕಳಪೆ ಕಾಮಗಾರಿಯ ಕಾರಣೀಕರ್ತರು ಮರುದಿನ ಪತ್ರಿಕೆ ಪ್ರಸಾರವಾಗದಂತೆ ತಡೆಯಲು ಇನ್ನಿಲ್ಲದ ಪ್ರಯತ್ನ ಪಟ್ಟಿದ್ದರು. ಆದರೆ ಸ್ಥಳೀಯ ವರದಿಗಾರ ಪ್ರಕಟಿತ ಸುದ್ದಿಯ ತುಣುಕನ್ನು ಸಾಮಾಜಿಕ ಜಾಲತಾಣದ ಮೂಲಕ ಹಂಚಿ ವೈರಲ್ ಮಾಡಿದ್ದು ಗ್ರಾಮಸ್ಥರು ಆ ಸುದ್ದಿಯನ್ನು ಎಲ್ಲೆಡೆ ಹಂಚಿಕೊಂಡಿದ್ದರ ಪರಿಣಾಮವಾಗಿ ಎಲ್ಲೆಡೆ ಜಾಗೃತಿ ಏರ್ಪಟ್ಟಿದೆ.

ಹಲವಾರು ಸಂಘಟನೆಗಳು ಕಳಪೆ ಕಾಮಗಾರಿಯನ್ನು ಪ್ರಶ್ನಿಸಲು ಮುಂದೆ ಬಂದಿವೆ. ಕಬ್ಬು ಬೆಳೆಗಾರರ ಹಿತಸಂರಕ್ಷಣಾ ಸಮಿತಿಯ ಅಧ್ಯಕ್ಷ ನಾಗೇಂದ್ರ ಜಿವೋಜಿಯವರು ಪತ್ರಿಕಾ ಪ್ರಕಟಣೆಯನ್ನು ಹೊರಡಿಸುವ ಮೂಲಕ ಅಧಿಕಾರಿಗಳನ್ನು, ಗುತ್ತಿಗೆದಾರರನ್ನು ಹಾಗೂ ಸ್ಥಳೀಯ ಶಾಸಕರ ಮೇಲೆ ಗುರುತರ ಆರೋಪ ಮಾಡಿದ್ದಾರೆ. ಕೇವಲ ರೈತ ಮುಖಂಡರುಗಳಿಂದ


ಹೊಸದಿಗಂತ 03/05/2026
ಜೆಜೆಎಂ ಕಾಮಗಾರಿ ಕಳಪೆ : ಆರೋಪ
ಮೇಲಾಧಿಕಾರಿಗಳಿಗೂ ಮಾಹಿತಿ

ಆಪಾದನೆ ಮಾತ್ರ ಅಂತಾನೇ ಅಪಪ್ರಚಾರ ಮಾಡುತ್ತಿದ್ದ ಆಡಳಿತ ಪಕ್ಷದ ಕೆಲವರಿಂದ ಕುತಂತ್ರ ನಡೆಸುತ್ತಿರುವುದು ಬಹಿರಂಗ ಆದಂತಾಗಿದೆ.

ಈ ಕೂಡಲೇ ಬಿಕೆ ಹಳ್ಳಿ ಗ್ರಾಪಂ ವ್ಯಾಪ್ತಿಯ ಜೊತೆಗೆ ಇಡೀ ತಾಲೂಕಿನ ಜೆಜೆಎಮ್ ಕಾಮಗಾರಿಗಾಗಿ ಸಲ್ಲಿಸಿರುವ ಡಿಪಿಆರ್ ವರದಿ, ಕಾಮಗಾರಿ ಇದುವರೆಗೂ ಆಗಿರುವ ಕಾಮಗಾರಿಯ ಗುಣಮಟ್ಟದ ವರದಿ, ಜೆಜೆಎಮ್ ಯೋಜನೆ ಕಾಮಗಾರಿ ಗೆ ಸಂಬಂಧಿಸಿದ ಗೈಡ್‌ಲೈನ್ ಮತ್ತು ಕಾಮಗಾರಿಗೆ ಸಂಬಂಧಿಸಿದ ಅಪ್ರೂವ್ಡ್ ಬ್ಲೂ ಪ್ರಿಂಟ್ ಈ ಕೂಡಲೇ ಜಾರಿ ಗೊಳಿಸಬೇಕು. ಹಾಗೂ ನಿಜವಾಗಿಯೂ ಹಳಿಯಾಳ ಕ್ಷೇತ್ರದ ಋಣವೇನಾದರೂ ಇದೆ ಎನ್ನುವ ಕನಿಷ್ಠ ಪ್ರಾಮಾಣಿಕತೆಯಿದ್ದರೆ ಶಾಸಕರು ಉನ್ನತ ಮಟ್ಟದ ತನಿಖೆಗೆ ಈ ಕೂಡಲೇ ಆದೇಶಿಸ ಬೇಕೆಂದು ಒತ್ತಾಯಿಸುತ್ತೇವೆ ಎಂದು ಉತ್ತರ ಕನ್ನಡ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಕುಮಾರ ಬೊಬಾಟಿ ಆಗ್ರಹಿಸಿದ್ದಾರೆ.

ಕಿರುಸುದ್ದಿ

ಮಹಿಳೆ ಮೇಲೆ ಚಿರತೆ ದಾಳಿ

ಜೋಯಿಡಾ: ತಾಲೂಕಿನ ಕಾಳಿ ಹುಲಿ ಯೋಜನೆಯ ಪಣಸೂಲಿ ವಲಯದ ಅವುರ್ಲಿ ದಾಬೆ ಗ್ರಾಮದಲ್ಲಿ ಮಹಿಳೆ ಮೇಲೆ ಚಿರತೆ ದಾಳಿ ಮಾಡಿದೆ. ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡದ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ. ಸೋಮವಾರ ಬೆಳಗ್ಗಿನ ಜಾವ 4 ಗಂಟೆ ಸುಮಾರಿಗೆ ಅವುರ್ಲಿ ದಾಬೆ ಗ್ರಾಮದ ಮಹಿಳೆ ಸುಶಿಲಾ ಶಾಂತಾರಾಮ್ ದೇವಿದಾಸ (70) ಮನೆಯ ಬಾಗಿಲು ತೆಗೆದು ಮೂತ್ರ ವಿಸರ್ಜನೆಗೆ ಹೊರಗೆ ಬಂದಾಗ ಚಿರತೆ ಏಕಾಏಕಿ ಮಹಿಳೆ ಮೇಲೆ ದಾಳಿ ಮಾಡಿ ಮಹಿಳೆಯ ತಲೆ ಹಾಗೂ ಮೈ ಮತ್ತು ಕಾಲಿಗೆ ಕಚ್ಚಿ ಗಂಭೀರ ಗಾಯ ಮಾಡಿದೆ.

ಮಹಿಳೆ ಜೀವನ್ಮರಣದ ನಡುವೆ ಹೋರಾಟ ಮಾಡುತ್ತಿದ್ದಾಗ ಸ್ಥಳಿಯರು ದಾಂಡೇಲಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿದ್ದಾರೆ. ವೈದ್ಯರು ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವ ಬಗ್ಗೆ ಹೇಳಿದ್ದರಿಂದ ಧಾರವಾಡ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ.

ಕಾಳಿ ಹುಲಿ ಯೋಜನೆಯ ಪಣಸೋಲಿ ವನ್ಯ ಜೀವಿ ವಲಯ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಅಸ್ವಸ್ಥ ಮಹಿಳೆಗೆ ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಗಿದೆ. ಅರಣ್ಯ ಇಲಾಖೆ ಮಹಿಳೆಯ ಚಿಕಿತ್ಸೆ ವ್ಯವಸ್ಥೆ ಮಾಡಲಿದೆ. ಚಿರತೆ ಬಗ್ಗೆ ನಿಗಾ ಇಡಲಾಗುತ್ತದೆ. ಸ್ಥಳೀಯರು ಹೆದರುವ ಅಗತ್ಯವಿಲ್ಲ ಎಂದು ಪಣಸೋಲಿ ವಲಯ ಅರಣ್ಯಾಧಿಕಾರಿ ರವಿಕಿರಣ್ ಸಂಪಗಾವಿ ತಿಳಿಸಿದ್ದಾರೆ.

ವಿಷಾಹಾರ ಸೇವಿಸಿ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ

ಗೋಕರ್ಣ: ಚಿನ್ನದಕೇರಿಯ ಪರಶುರಾಮ ದೇವಸ್ಥಾನ ಬಳಿ ವಿಷಾಹಾರ ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ ನೀಡಿದ ಘಟನೆ ಭಾನುವಾರ ಸಂಜೆ ನಡೆದಿದೆ.

ತೀವ್ರವಾಗಿ ಅಸ್ವಸ್ಥಗೊಂಡು ರಸ್ತೆಯಲ್ಲಿ ಬಿದ್ದ ಎತ್ತನ್ನು ಗಮನಿಸಿದ ಸ್ಥಳೀಯರಾದ ರಾಜವರ್ಧನ ಭಟ್ ಅವರು ಕೂಡಲೇ ಪ್ರಾಣಿ ಪ್ರಿಯ ಹಾಗೂ ಮಾಜಿ ಗ್ರಾಪಂ ಸದಸ್ಯ ಸುಜಯ ಶೆಟ್ಟಿಯವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಸುಜಯ ಅವರು ಭಾನುವಾರ ಪಶು ವೈದ್ಯರು ಲಭ್ಯವಿಲ್ಲದ ಕಾರಣ 1962 ಪಶು ಸಹಾಯವಾಣಿಗೆ ಕರೆ ಮಾಡಿ ಕುಮಟಾದಿಂದ ಪಶು ಸಂಚಾರಿ ಎಂಬುಲೆನ್ಸ್ ಅನ್ನು ಸ್ಥಳಕ್ಕೆ ಕರೆಯಿಸಿ ತೀವ್ರವಾಗಿ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ ನೀಡಿ ಮಾನವೀಯತೆ ಮೆರೆದಿದ್ದಾರೆ.ಪಾರಾವೆಟ್ ಸಿಬ್ಬಂದಿಗಳಾದ ಸಚಿನಕುಮಾರ್ ಕವಲಗಿ ಹಾಗೂ ಸಂತೋಷ್ ನಾಯ್ಕ ಅವರು ಎತ್ತಿಗೆ ಚಿಕಿತ್ಸೆ ನೀಡಿದ್ದಾರೆ. ಮೂಕ ಪ್ರಾಣಿಯ ವೇದನೆಗೆ ಸ್ಪಂದಿಸಿ ಮಾನವೀಯತೆ ಮೆರೆದ ಚಿಕಿತ್ಸೆ ಕೊಡಿಸಿದ ತಂಡಕ್ಕೆ ಸಾರ್ವಜನಿಕರು ಪ್ರಶಂಸಿಸಿ ಅಭಿನಂದಿಸಿದ್ದಾರೆ.

ವಿಷ ಸೇವಿಸಿ ಮಹಿಳೆ ಆತ್ಮಹತ್ಯೆ

ಹಾವೇರಿ: ವರ್ಷದ ಹಿಂದೆ ಹಾವು ಕಡಿತಕ್ಕೆ ಒಳಗಾಗಿದ್ದ ಮಹಿಳೆಯೊಬ್ಬರು ವಿಷ ಸೇವಿಸಿ ಅಸ್ವಸ್ಥಗೊಂಡಿದ್ದರಿಂದ ಉಪಚಾರಕ್ಕೆ ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಾಟೇನಹಳ್ಳಿ ಗ್ರಾಮದ ನಮಾಜಬಿ ಕೋಂ.ಶರೀಫಸಾಬ ನದಾಫ್ (60) ಮೃತ ಮಹಿಳೆಯಾಗಿದ್ದಾರೆ. ಇವರಿಗೆ ಒಂದು ವರ್ಷದ ಹಿಂದೆ ಹಾವು ಕಚ್ಚಿದ್ದರಿಂದ ಕಾಲಿನಲ್ಲಿ ಗಡ್ಡೆಯಾಗಿತ್ತು. ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಚಿಂತೆಗೀಡಾಗಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದಾಳೆ. ಕೂಡಲೇ ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಮೃತರ ಮಗಳು ಸಲ್ಮಾಬಾನು ನದಾಫ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಮರಳು ಸಾಗಾಟ: ದೂರು ದಾಖಲು

ಹಾವೇರಿ: ವರದಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸಿ ಸಾಗಾಟ ಮಾಡುತ್ತಿದ್ದ ಟ್ರ್ಯಾಕ್ಟರ್‌ನ್ನು ಪೊಲೀಸರು ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಬಸಾಪುರ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಬಸಾಪುರ ಗ್ರಾಮದ ಚಾಲಕ ನಾಗರಾಜ ಮರಿಯಪ್ಪ ಚಾವಡಿ ಹಾಗೂ ಟ್ರ್ಯಾಕ್ಟರ್‌ನ ಮಾಲೀಕನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿ ಮರೋಳ ಗ್ರಾಮದ ವರದಾ ನದಿ ಪಾತ್ರದಲ್ಲಿ ಅಕ್ರಮವಾಗಿ ಸುಮಾರು ರೂ.2000 ಮೌಲ್ಯದ ಮರಳನ್ನು ಟ್ರ್ಯಾಕ್ಟರ್‌ನಲ್ಲಿ ಲೋಡ್ ಮಾಡಿಕೊಂಡು ಸಾಗಾಟ ಮಾಡುತ್ತಿರುವಾಗ ಸಿಕ್ಕಿಬಿದ್ದಿದ್ದಾರೆ ಎಂದು ಪೊಲೀಸರು ಸ್ವಯಂ ದೂರು ದಾಖಲಿಸಿಕೊಂಡಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೊನ್ನಾವರ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವ ಹಿನ್ನಲೆ ಪಟ್ಟಣದ ಶರಾವತಿ ಸರ್ಕಲ್ ಬಳಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಮಾಜಿ ಸಚಿವ ಶಿವಾನಂದ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ. ಯೋಗೇಶ ಮೇಸ್ತ. ಶ್ರೀಕಲಾ ಶಾಸ್ತ್ರಿ, ಶಿವಾನಂದ ಹೆಗಡೆ ಕಡತೋಕಾ, ಸುರೇಶ ಹೊನ್ನಾವರ, ಮಂಜುನಾಥ ನಾಯ್ಕ.ಮೇಧಾ ನಾಯ್ಕ, ಗಣಪತಿ ಗೌಡ ಚೆತ್ತಾರ, ಎಂ.ಎಸ್. ಹೆಗಡೆ ಇತರರು ಇದ್ದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು: ಸಂಭ್ರಮ

ಕುಮಟಾ: ಪಂಚರಾಜ್ಯ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷ ಭರ್ಜರಿ ಸಾಧನೆ ಮಾಡಿದೆ. ಪಶ್ಚಿಮ ಬಂಗಾಳ ಸೇರಿದಂತೆ ಅಸ್ಸಾಂ ಮತ್ತು ಪುದುಚೇರಿ ಹೊಸ ರಾಜ್ಯಗಳಲ್ಲಿಯೂ ಬಿಜೆಪಿ ಹೆಚ್ಚಿನ ಗೆಲುವು ಸಾಧಿಸಿರುವುದು ಸಂತೋಷದ ವಿಚಾರ ಎಂದು ಕುಮಟಾ-ಹೊನ್ನಾವರ ವಿಧಾನಸಭಾ ಕ್ಷೇತ್ರದ ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಕುಮಟಾದಲ್ಲಿ ನಡೆದ ಬಿಜೆಪಿ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ವಾತಂತ್ರ್ಯ ಬಂದ ನಂತರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಇದುವರೆಗೆ ಗೆಲುವು ಸಾಧಿಸಿರುವ ಇತಿಹಾಸ ಇರಲಿಲ್ಲ. ಆದರೆ ಈ ಬಾರಿ ಅಮಿತ್ ಶಾ ಹಾಗೂ ನಿತಿನ್ ನಬಿನ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರ ಸಮನ್ವಯದಲ್ಲಿ ನಡೆದ ಚುನಾವಣೆಯಲ್ಲಿ ಭಾರೀ ಬಹುಮತದೊಂದಿಗೆ ಜಯ ಸಾಧಿಸಿರುವುದು ಗಮನಾರ್ಹ ಎಂದು ಹೇಳಿದರು.ಈ ವಿಜಯದ ಹಿನ್ನೆಲೆಯಲ್ಲಿ ಬಿಜೆಪಿ ಮಂಡಲದ ವತಿಯಿಂದ ಸಂಭ್ರಮಾಚರಣೆ ಹಮ್ಮಿಕೊಳ್ಳಲಾಗಿದೆ. ಈ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರು ಹಾಗೂ ಪಕ್ಷಕ್ಕೆ ಬೆಂಬಲ ನೀಡಿದ ಮತದಾರರಿಗೆ ದಿನಕರ ಶೆಟ್ಟಿ ಅವರು ಧನ್ಯವಾದಗಳನ್ನು ಸಲ್ಲಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಎನ್.ಎಸ್. ಹೆಗಡೆ, ಕುಮಟಾ ಮಂಡಲ ಅಧ್ಯಕ್ಷ ಜಿ. ಐ ಹೆಗಡೆ, ಗೋಕರ್ಣ ಮಂಡಲ ಅಧ್ಯಕ್ಷ ಗಣೇಶ ಪಂಡಿತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ ನಾಯ್ಕ ಹಾಗೂ ಬಿಜೆಪಿ ರಾಜ್ಯ ಶಿಕ್ಷಣ ಪ್ರಕೋಷ್ಠದ ಎಂ.ಜಿ. ಭಟ್ಟ, ಪ್ರಮುಖರಾದ ಮನೋಜ ಭಟ್ಟ, ಮಹೇಶ ಶೆಟ್ಟಿ, ಜಯಾ ಶೇಟ್, ಹೇಮಂತ ಗಾವ್ಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕುಮಟಾ: ಪಂಚರಾಜ್ಯ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷ ಭರ್ಜರಿ ಗೆಲುವಿನ ಹಿನ್ನೆಲೆಯಲ್ಲಿ ಕುಮಟಾದಲ್ಲಿ ಬಿಜೆಪಿ ಕಾರ್ಯಕರ್ತರಿಂದ ವಿಜಯೋತ್ಸವ ಆಚರಿಸಲಾಯಿತುಪಿಮಟಾ-ಹೊನ್ನಾವರ ವಿಧಾನಸಭಾ ಕ್ಷೇತ್ರದ ಶಾಸಕ ದಿನಕರ ಶೆಟ್ಟಿ ,ಜಿಲ್ಲಾ ಅಧ್ಯಕ್ಷ ಎನ್.ಎಸ್. ಹೆಗಡೆ, ಕುಮಟಾ ಮಂಡಲ ಅಧ್ಯಕ್ಷ ಜಿ. ಐ ಹೆಗಡೆ, ಗೋಕರ್ಣ ಮಂಡಲ ಅಧ್ಯಕ್ಷ ಗಣೇಶ ಪಂಡಿತ ಇತರರು ಇದ್ದರು.

ಮುಖಂಡರು, ಕಾರ್ಯಕರ್ತರಿಂದ ವಿಜಯೋತ್ಸವ

ಜನರ ಬೆಂಬಲದಿಂದ ಬಿಜೆಪಿಗೆ ಗೆಲುವು

ಹಾವೇರಿ: ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಸೋಮವಾರ ನಗರದ ಎಂ.ಜಿ. ವೃತ್ತದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಭಾರತೀಯ ಜನತಾ ಪಾರ್ಟಿ ಇಂದು ದಾಖಲೆ ನಿರ್ಮಿಸಿದೆ, ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರ ಕಾರ್ಯವೈಖರಿಗೆ ಜನ ಬೆಂಬಲ ಸೂಚಿಸಿ ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಿದ್ದಾರೆ. ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿದೆ. ಮಮತಾ ಬ್ಯಾನರ್ಜಿ ಹಲವು ವರ್ಷಗಳಿಂದ ಮುಖ್ಯಮಂತ್ರಿಯಾಗಿ ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಸಹಾಯ, ಸಹಕಾರ ನೀಡುವ ಮೂಲಕ ಪಶ್ಚಿಮ ಬಂಗಾಳದಲ್ಲಿ ವಾಸಿಸಲು ಅವಕಾಶ ನೀಡಿ ದೇಶದ ಭದ್ರತೆಗೆ ಆತಂಕ ಸೃಷ್ಟಿಸಿದ್ದರು. 2026ರ ಚುನಾವಣೆಯಲ್ಲಿ ಮತದಾರರು ದೇಶದ ಪರವಾಗಿ ಮತ ಚಲಾಯಿಸುವ ಮೂಲಕ ಮಮತಾ ಬ್ಯಾನರ್ಜಿಗೆ ತಕ್ಕ ಉತ್ತರ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಬಿಜೆಪಿ ಪಕ್ಷ ದೇಶದ ಜನರಿಗೆ ಇನ್ನೂ ಅಧಿಕ ಸೇವೆ ಸಲ್ಲಿಸುವ ಮೂಲಕ ಇನ್ನೂ ಹಲವು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದರು.

ಮಾಜಿ ಶಾಸಕ ಶಿವರಾಜ ಸಜ್ಜನರ ಮಾತನಾಡಿ, ಭಾರತೀಯ ಜನತಾ ಪಾರ್ಟಿ ಇಂದು ವಿಶ್ವದ ಬಲಿಷ್ಠ ಪಕ್ಷವಾಗಿ ಬೆಳೆದಿದೆ. ಪಶ್ಚಿಮ ಬಂಗಾಳದ



▸▸ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಗೆಲುವು

▸▸ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಾಚರಣೆ

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರತೀಯ ಜನತಾ ಪಾರ್ಟಿ ಬಹುಮತ ಪಡೆಯುವ ಮೂಲಕ ಇತಿಹಾಸ ನಿರ್ಮಿಸಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ದುರಾಡಳಿತಕ್ಕೆ ಬೇಸತ್ತ ಜನರು ರಾಷ್ಟ್ರ ಸುರಕ್ಷತೆಯ ದೃಷ್ಟಿಯಿಂದ ಬಿಜೆಪಿಗೆ ಮತ ನೀಡಿದ್ದಾರೆ. ಅಲ್ಲದೇ ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಬಹುಮತ ಪಡೆದಿದೆ. ಕೇರಳ ಹಾಗೂ ತಮಿಳುನಾಡಿನಲ್ಲಿ ಕಳೆದ ಚುನಾವಣೆಗಿಂತ ಈ ಬಾರಿ ಹೆಚ್ಚು ಮತಗಳನ್ನು ಗಳಿಸಲು ಸಫಲವಾಗಿದೆ ಎಂದರು.

ಹಾವೇರಿ ನಗರ ಮಂಡಲ ಅಧ್ಯಕ್ಷ ಕಿರಣ ಕೊಳ್ಳಿ ಮಾತನಾಡಿ, ಬಿಜೆಪಿ ಇಂದು ಬಡವರ ಹಾಗೂ ಜನಸಾಮಾನ್ಯರ ಪಕ್ಷವಾಗಿ ಜನರ ವಿಶ್ವಾಸ ಗಳಿಸುವಲ್ಲಿ ಸಫಲವಾಗಿದೆ. ಮುಂಬರುವ ದಿನಗಳಲ್ಲಿ ದೇಶದಲ್ಲಿರುವ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನಕಾರ್ಯದರ್ಶಿ ಡಾ.ಸಂತೋಷ ಆಲದಕಟ್ಟಿ, ಮಾಧ್ಯಮ ಪ್ರಮುಖ ವಿಜಯಕುಮಾರ ಚಿನ್ನಿಕಟ್ಟಿ, ಲತಾ ಬಡ್ನಿಮಠ, ಮಂಜುನಾಥ ಮಡಿವಾಳರ, ಗುಡ್ಡಪ್ಪ ಭರಡಿ, ನಾಗರಾಜ ಹರಿಗೋಲ, ಮಧುಕೇಶ ಹಂದ್ರಾಳ, ಕುಮಾರ ಹತ್ತಿ, ಶಂಭುಲಿಂಗ ಹತ್ತಿ, ರೋಹಿಣಿ ಪಾಟೀಲ, ರಾಮಕ್ಕ ವಡ್ಡರ, ರೇಣುಕಾ ಗೌಳಿ, ನಿಖಿಲ್ ಡೊಗ್ಗಳ್ಳಿ, ಮಂಜು ಮಲಗೋಡ, ಶ್ರೀಕಾಂತ ವಡ್ಡರ, ಭಾಗ್ಯಶ್ರೀ ಮೋರೆ, ಫಕ್ಕಿರೇಶ ಯಾದವ, ವಿ.ಬಿ.ಕುಲುಮಿ, ಸುನೀಲ ರಾಯ್ಕರ, ಸದಾನಂದ ಸುರಳಿಹಳ್ಳಿ, ಎಂ.ಎಸ್. ಪಾಟೀಲ, ಉಜನೇಶ ಮೇಟಿ, ಚಂದ್ರಶೇಖರ ಅಗಡಿ, ಪವನ ಎರೆಸೀಮಿ, ಕುಶಾಲ್ ಕನವಳ್ಳಿ, ವಿಶ್ವನಾಥ ಕಿತ್ತೂರಮಠ, ಆನಂದ ಕಲಾಲ, ಕಿರಣ ಖಂಡೆಲವಾಲ, ಮುತ್ತಣ್ಣ ಮುಷ್ಠಿ, ಯಲ್ಲಪ್ಪ ಮಡಿವಾಳರ, ಅಕ್ಕಮ ಹರ್ತಿ, ಶ್ರೀದೇವಿ ಹಿರೇಮಠ ಸೇರಿದಂತೆ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಅಂಬೇಡ್ಕರ್‌ರ ತತ್ವಾದರ್ಶ ಅಳವಡಿಸಿಕೊಳ್ಳಿ

ಸಿದ್ದಾಪುರ: ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಚಕೋರ ಸಾಹಿತ್ಯ ವಿಚಾರ ವೇದಿಕೆ ವತಿಯಿಂದ ನಡೆದ 'ಅಂಬೇಡ್ಕರರ ಸಮಾಜೋದ್ಧಾರಕ ಶೈಕ್ಷಣಿಕ ಚಿಂತನೆಗಳು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಗಿಡಕ್ಕೆ ನೀರೆರೆಯುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಪ್ರೊ.ನಾರಾಯಣ ಗೌಡ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಒಬ್ಬ ವ್ಯಕ್ತಿಯಲ್ಲ ಅವರು ಒಂದು ಶಕ್ತಿ. ತಮಗೆ ಎಷ್ಟೇ ಶೋಷಣೆ ಮಾಡಿದರೂ ಅದನ್ನೆಲ್ಲ ಮೆಟ್ಟಿ ನಿಂತು ಹೆಸರಿಗೆ ತಕ್ಕ ಹಾಗೆ ಭೀಮ ಬಲವನ್ನು ಬೆಳೆಸಿಕೊಂಡು ಸರ್ವರಿಗೂ ಸಮಪಾಲನ್ನು ನೀಡುವ ಮೂಲಕ ಸಂವಿಧಾನವನ್ನು ರಚಿಸಿ ನಮ್ಮ ದೇಶಕ್ಕೆ ನೀಡಿದರು. ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಮಾರ್ಗ. ಶಿಕ್ಷಣದಿಂದ ಮಾತ್ರ ನಮ್ಮಲ್ಲಿರುವ ಸಮಸ್ಯೆಗಳು ಬಗೆಹರಿಯಲು ಸಾಧ್ಯ. ಅಂಬೇಡ್ಕರ್ ಅವರನ್ನು ಸ್ಫೂರ್ತಿಯಾಗಿ ಇಟ್ಟುಕೊಂಡು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಸತೀಶ ಎನ್. ನಾಯ್ಕ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರ ಧಾರೆಗಳು ಎಂದೆಂದಿಗೂ ಪ್ರಸ್ತುತ. ಅವರು ಸಮಾಜದ ಕೆಳ ವರ್ಗದಿಂದ ಬಂದು ದೇಶಕ್ಕೆ ಉನ್ನತ ಸಂವಿಧಾನವನ್ನು ನೀಡಿ ಸಮಾನತೆಯ ಹರಿಕಾರ ಎಂದೆನಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಾದ ನೀವು ಅವರ ತತ್ವಗಳನ್ನು ಅನುಸರಿಸಿ ಸಾರ್ಥಕ ಮತ್ತು ಸಂಸ್ಕಾರಯುತ ಜೀವನವನ್ನು ನಡೆಸಿ ಎಂದು ಹಾರೈಸಿ ಉಪನ್ಯಾಸಕಾರರಿಗೆ ಸ್ಮರಣಿಕೆ ನೀಡಿ ಗೌರವಿಸಿದರು.

ಡಾ. ರಶ್ಮಿ ಕರ್ಕಿ, ಡಾ.ಎಂ.ಬಿ.ಗಣಪತಿ ಅಂಬೇಡ್ಕರರ ಆದರ್ಶಗಳನ್ನು ಪಾಲಿಸಲು ಕರೆ ನೀಡಿದರು. ಸಂಚಾಲಕಿ ರೇಖಾ ಬೆಳಗಲಿಯವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕು. ಹರ್ಷಿತಾ ಪ್ರಾರ್ಥನಾ ಗೀತೆ ಹಾಡಿದರು. ಕು.ರಶ್ಮಿ ಸ್ವಾಗತಿಸಿದರು. ಕು. ಮಾಲಿನಿ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ಮಾರುತಿ ಗಾವಡಿ ವಂದಿಸಿದರು.



ಆ.21ರಿಂದ ಸಮಾಧಾನ ಸಮಾರೋಹ್

ಹಾವೇರಿ: ಸುಪ್ರೀಂ ಕೋರ್ಟನಲ್ಲಿ ಬಾಕಿ ಇರುವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲು ದೇಶದಲ್ಲಿ ಆ.21, 22, ಮತ್ತು 23 ರಂದು ಸಮಾದಾನ ಸಮಾರೋಹ್-2026 ಹೆಸರಿನಲ್ಲಿ ವಿಶೇಷ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಶೈಲಜಾ ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಒಟ್ಟು 4,328 ಬಾಕಿ ಇರುವ ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಿದ್ದು, ಅವುಗಳನ್ನು ಪರಿಹರಿಸಿಕೊಳ್ಳಲು ನೊಂದಣಿಗೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ತಾಲೂಕಾ ಕಾನೂನು ಸೇವಾ ಸಮಿತಿ ಹಾಗೂ ಜಿಲ್ಲಾಮಟ್ಟದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವ ಮೂಲಕ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಸಾರ್ವಜನಿಕರು ನೊಂದಣಿ ಮಾಡಿಕೊಳ್ಳಬಹುದಾಗಿದೆ.

ಪ್ರಮುಖವಾಗಿ ಬ್ಯಾಂಕಿಂಗ್ ಮತ್ತು ವಿಮಾ ಸಂಬಂಧಿತ ಪ್ರಕರಣ ಮೋಟಾರು ಅಪಘಾತ ಪರಿಹಾರ ಪ್ರಕರಣ, ಗ್ರಾಹಕ ವ್ಯಾಜ್ಯಗಳು, ಕ್ರಿಮಿನಲ್ ಪ್ರಕರಣ, ಕೌಟುಂಬಿಕ ವಿವಾದಗಳು, ಕಾರ್ಮಿಕ ಮತ್ತು ಕೈಗಾರಿಕಾ ಕಾನೂನು ವ್ಯಾಜ್ಯಗಳನ್ನು ಇತ್ಯರ್ಥಕ್ಕೆ ಗುರುತಿಸಲಾಗಿದೆ.

ಒಟ್ಟು ಗುರುತಿಸಲಾದ ಪ್ರಕರಣಗಳಲ್ಲಿ ಹಾವೇರಿ ಜಿಲ್ಲೆಯಲ್ಲಿ 81 ಪ್ರಕರಣಗಳಿರುತ್ತವೆ. ಅವುಗಳನ್ನು ತಾವು ಹಾವೇರಿ ಜಿಲ್ಲೆಯ ಎಲ್ಲಾ ತಾಲೂಕಿನತಾಲೂಕುಕಾನೂನುಸೇವಾಸಮಿತಿ ಹಾಗೂ ಜಿಲ್ಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವ ಮೂಲಕ ತಮ್ಮ ವ್ಯಾಜ್ಯವನ್ನು ತಾವಿರುವ ಸ್ಥಳದಲ್ಲಿಯೇ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

ಏ.30ರಂದು ದೃಶ್ಯ ಸಂವಾದದ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ಪತ್ರಕರ್ತರಿಗೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೊಟ್ಟಿಗೆ ಹೈಕೋರ್ಟಿನ ಹಿರಿಯ ನ್ಯಾಯಮೂರ್ತಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರೂ ಆದ ಅನು ಶಿವರಾಮನ್ ಹಾಗೂ ಹೈಕೋರ್ಟ ಕಾನೂನು ಸೇವೆಗಳ ಸಮಿತಿ ಅಧ್ಯಕ್ಷರಾದ ನ್ಯಾ.ಆರ್. ದೇವದಾಸ ಅವರು ವಿಶೇಷ ಲೋಕ ಅದಾಲತ್ ಕುರಿತು ಮಾತನಾಡಿದ್ದಾರೆ.

ಸಹಾಯ ಹಾಗೂ ಮಾಹಿತಿಗಾಗಿ ಒನ್ ಸ್ಟಾಪ್ ಸೆಂಟರ್ (ವಾರ್ ರೂಮ್) ಇನ್-ಚಾರ್ಜ್ ಫಾರ್ ಸಮಾಧಾನ್ ಸಮಾರೋಹ್ (ವಿಶೇಷ ಲೋಕ) ಸಂಪರ್ಕ ಸಂಖ್ಯೆ 011-23112428, 011-23112528, ಒನ್ ಸ್ಟಾಪ್ ಸೆಂಟರ್ (ಕೊಠಡಿ ಸಂಖ್ಯೆ 806 ಮತ್ತು 808, ಬಿ ಬ್ಲಾಕ್, ಹೆಚ್ಚುವರಿ ಕಟ್ಟಡ ಸಂಕೀರ್ಣ, ಭಾರತದ ಸರ್ವೋಚ್ಚ ನ್ಯಾಯಾಲಯ) ಲ್ಯಾಂಡ್ ಲೈನ್ ಸಂಖ್ಯೆ: 011-23116464, 011-23116465, ನಿರ್ದೇಶಕರು, ಸಿ.ಆರ್.ಪಿ.ಯವರ ಸಂಪರ್ಕ ಸಂಖ್ಯೆ 011-23115652 ಅಥವಾ ಇ-ಮೇಲ್ speciallokadalat2026@sci.nic.in

ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆ

ಹಾನಗಲ್: ತಾಲೂಕಿನ ಶೀಗಿಹಳ್ಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಕುಮಾರ ನರೇಗಲ್ ತಮ್ಮ ಬೆಂಬಲಿಗರೊಂದಿಗೆ ಶಾಸಕ ಶ್ರೀನಿವಾಸ ಮಾನೆ ಅವರ ಸಮ್ಮುಖದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಶಾಸಕ ಮಾನೆ ಮಾತನಾಡಿ, ಬೆಲೆ ಏರಿಕೆ ಬಿಸಿಯಿಂದ ಬಸವಳಿದು ಹೋಗಿದ್ದ ಜನಸಾಮಾನ್ಯರ ಸಂಕಷ್ಟಕ್ಕೆ ನೆರವಾಗಲು ಕಾಂಗ್ರೆಸ್ ಪಕ್ಷ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಗ್ಯಾರಂಟಿ ಯೋಜನೆಗಳಿಂದ ಪ್ರತಿ ಕುಟುಂಬ ಮಾಸಿಕ 4 ರಿಂದ 6 ಸಾವಿರ ರೂ. ಆರ್ಥಿಕ ನೆರವು ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ನೇರವಾಗಿ ಖಾತೆಗೆ ವರ್ಗಾಯಿಸುತ್ತಿದೆ ಎಂದು ಹೇಳಿದ ಅವರು ಬಡವರು, ಜನಸಾಮಾನ್ಯರ ಪರ ನಿಲ್ಲುವ ಏಕೈಕ ಪಕ್ಷ ಕಾಂಗ್ರೆಸ್ ಮಾತ್ರ. ಪಕ್ಷದ ಜನಪರ ಕಾರ್ಯ, ಸಿದ್ಧಾಂತಗಳನ್ನು ಮೆಚ್ಚಿ ತಾಲೂಕಿನಲ್ಲಿ ಅನೇಕ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾಗುತ್ತಿದ್ದಾರೆ ಎಂದು ತಿಳಿಸಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಮಲ್ಲಪ್ಪ ಕೋರಿ, ಭರಮಣ್ಣ ಶಿವೂರ, ಅನಿತಾ ಶಿವೂರ, ಈರಣ್ಣ ಬೈಲವಾಳ, ಪ್ರಕಾಶ ನಂದಿಹಳ್ಳಿ, ಪ್ರಕಾಶ ಕೋರಿ, ಶಿವಯೋಗಿ ನರೇಗಲ್, ನಿಂಗಪ್ಪ ನರೇಗಲ್, ಬಸಣ್ಣ ಕಳಸೂರ, ರಾಜೂ ಅಜಗುಂಡಿ, ಬಸವರಾಜ ಬಂಕಾಪೂರ ಸೇರಿದಂತೆ ಇನ್ನೂ ಹಲವರು ಈ ಸಂದರ್ಭದಲ್ಲಿ ಇದ್ದರು.



ಕಾಂಗ್ರೆಸ್ ಗೆಲುವು: ವಿಜಯೋತ್ಸವ



ಅಂಕೋಲಾ: ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯ ಸಾಧಿಸಿರುವುದಕ್ಕೆ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ವಿಜಯೋತ್ಸವ ಆಚರಿಸಿ ಸಂಭ್ರಮಿಸಲಾಯಿತು.

ಪಟ್ಟಣದ ಜೈಹಿಂದ್ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಪ್ರಮುಖರು ಸಿಹಿ ಹಂಚಿ ಕಾಂಗ್ರೆಸ್ ಪಕ್ಷಕ್ಕೆ ಜಯಕಾರ ಕೂಗಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸಮರ್ಥ ನಾಯಕತ್ವದಲ್ಲಿ ಕಾಂಗ್ರೆಸ್ ಆಡಳಿತ ಜನತೆಯ ವಿಶ್ವಾಸವನ್ನು ಉಳಿಸಿಕೊಂಡಿದ್ದು ಜನರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತ ಬಯಸುತ್ತಿದ್ದಾರೆ ಎಂದು ಉಪ ಚುನಾವಣೆಯ ಫಲಿತಾಂಶದಿಂದ ಸಾಬೀತಾಗಿದೆ ಎಂದರು.

ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸುಜಾತಾ ಗಾಂವಕರ ಮಾತನಾಡಿ, ಕಾಂಗ್ರೆಸ್ ಪಕ್ಷ ಬಡ ಜನರ ಪರವಾದ ಪಕ್ಷವಾಗಿದ್ದು ಪಕ್ಷದ ಯೋಜನೆಗಳು ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ಜನತೆ ಮೆಚ್ಚಿದ್ದಾರೆ ಎನ್ನುವುದು ಉಪ ಚುನಾವಣೆಯ ಫಲಿತಾಂಶ ತೋರಿದೆ ಎಂದರು.

ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷದ ಯೋಜನೆಗಳು ಬಡ, ಮಧ್ಯಮ ವರ್ಗದ ಜನರ ಜೀವನಕ್ಕೆ ಆಧಾರವಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜೇಶ್ವರ ನಾಯಕ ಮಾತನಾಡಿದರು. ಕಾಂಗ್ರೆಸ್ ಪ್ರಮುಖರುಗಳಾದ ವಿನೋದ ನಾಯಕ, ಶಾಂತಿ ಆಗೇರ, ಲೀಲಾವತಿ ನಾಯ್ಕ, ಜಯಪ್ರಕಾಶ ನಾಯ್ಕ, ನಾರಾಯಣ ನಾಯಕ, ಮಂಜುನಾಥ ಡಿ ನಾಯ್ಕ, ಬಿ.ಡಿ.ನಾಯ್ಕ, ಸಂಜು ನಾಯ್ಕ, ಸತೀಶ ನಾಯ್ಕ, ಸುರೇಶ ಅಸ್ಲಿಗದ್ದೆ ಮೊದಲಾದವರು ಇದ್ದರು.

ಬಾಗಲಕೋಟೆ, ದಾವಣಗೆರೆಯಲ್ಲಿ ಕಾಂಗ್ರೆಸ್ ಗೆಲುವು: ಸಂಭ್ರಮಾಚರಣೆ

ಹಾವೇರಿ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆ ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಸೋಮವಾರ ಸಂಜೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವವನ್ನು ಆಚರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಡೆದ ಉಪ ಚುನಾವಣೆಯ ಗೆಲುವು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಅವರಿಗೆ ಸಿಕ್ಕ ಜಯವಾಗಿದೆ. ರಾಜ್ಯದ ಮತದಾರರು ಕಾಂಗ್ರೆಸ್ ಪಕ್ಷದ ಪರವಾಗಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ ನಾಯಕತ್ವವನ್ನು ಜನರು ಒಪ್ಪಿಕೊಂಡು ಎರಡೂ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಆಶೀರ್ವದಿಸಿ ಗೆಲುವು ತಂದುಕೊಟ್ಟಿದ್ದಾರೆ. ಮುಂಬರುವ 2028ರ ಚುನಾವಣೆಯಲ್ಲೂ ಕೂಡ ಕಾಂಗ್ರೆಸ್ ಪಕ್ಷ ನೂರಕ್ಕೆ ನೂರರಷ್ಟು ಅಧಿಕಾರಕ್ಕೆ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ರುದ್ರಪ್ಪ ಲಮಾಣಿ ಮಾತನಾಡಿ, ರಾಜ್ಯದ ದಾವಣಗೇರಿ ಹಾಗೂ ಬಾಗಲಕೋಟೆಯಲ್ಲಿ



ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ಸರ್ಕಾರಕ್ಕೆ ಶಕ್ತಿಯನ್ನು ತುಂಬಿದ್ದಾರೆ. ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಪಕ್ಷದ ಅಭ್ಯರ್ಥಿಗಳಿಗೆ ಶ್ರೀರಕ್ಷೆಯಾಗಿ ಗೆಲುವು ತಂದುಕೊಟ್ಟಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ನಾಯಕತ್ವದಲ್ಲಿ ನಮ್ಮ ಸರಕಾರ ಜನಪರ ಆಡಳಿತ ನಡೆಸುತ್ತಿದೆ. ಮುಂಬರುವ ದಿನಗಳಲ್ಲೂ ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಲಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಕೆಸಿಸಿ ಬ್ಯಾಂಕಿನ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್ ಗಾಜಿಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ ಮೆಹರವಾಡೆ, ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪ್ರಸನ್ನ ಹಿರಮಠ, ಉಮರ್ ಇನಾಮದಾರ, ಶಕೀಲ್ ನದಾಫ, ಜಮೀರ್ ಜಿಗರಿ, ಜಗದೀಶ ಬೆಟಗೇರಿ, ಬಸವರಾಜ ಜಾಬಿನ, ಮುತ್ತು ಕೊರವರ, ಕರಬಸಪ್ಪ ಹಲಗಣ್ಣವರ, ಮಹಾಲಿಂಗಯ್ಯ ಪಾಟೀಲ, ಶಿವರಾಜ ಮತ್ತಿಹಳ್ಳಿ, ಬಾಬುಸಾಬ್ ಮೊಮಿನಗಾರ, ಸಿ.ಎಸ್. ಲಕ್ಷ್ಮೇಶ್ವರಮಠ, ಗುಡ್ಡನಗೌಡ ಅಂದಾನಿಗೌಡ್ರ, ಅತಾವುಲ್ಲಾ ಖಾಜಿ, ಮಲ್ಲೇಶಪ್ಪ ಪಟ್ಟಣಶೆಟ್ಟಿ, ರಾಜು ಡೊಳ್ಳಿನ, ಪ್ರೇಮಾ ಪಾಟೀಲ, ಶಾಂತಕ್ಕ ಶಿರೂರ, ಮಮತಾ ಜಾಬೀನ್, ಗೀತಾ ಪ್ರಕಾಶ, ನಂದಾ ಕಳಸದ, ಜಯಶ್ರೀ ಶಿವಪುರ, ವೀಣಾ ಹಲಗಣ್ಣವರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮ

ಹಾನಗಲ್: ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಿಸಿದರು.

ಇಲ್ಲಿನ ಬಸ್ ನಿಲ್ದಾಣದ ಬಳಿಯ ಕನಕ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಖುಷಿ ಪಟ್ಟರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ ಮಾತನಾಡಿ, ಕರ್ನಾಟಕದ ಮತದಾರರು ಜನಪರವಾಗಿರುವ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬಿಜೆಪಿ ಹುಸಿ ಭರವಸೆ ನೀಡುವುದನ್ನು ರೂಢಿ ಮಾಡಿಕೊಂಡಿದ್ದರೆ ಕಾಂಗ್ರೆಸ್ ಪಕ್ಷ ನೀಡಿದ ಅಷ್ಟೂ ಭರವಸೆಗಳನ್ನು ಈಡೇರಿಸಿ ಗ್ಯಾರಂಟಿ ಸರ್ಕಾರ ನೀಡುತ್ತಿದೆ. ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿಯೂ ಸಹ ಕಾಂಗ್ರೆಸ್ ಸೋಲಿಸಲು ಬಿಜೆಪಿ ಶತಪ್ರಯತ್ನ ಮಾಡಿದರೂ ಮತದಾರರು ಮಾತ್ರ ಜಾಣ ನಿರ್ಧಾರ ಕೈಗೊಂಡಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳಿಗೆ ಮತದಾರರು ಜೈ ಎಂದಿದ್ದಾರೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ ಸೇರಿದಂತೆ ಹಲವಾರು ಮುಖಂಡರು, ಕಾರ್ಯಕರ್ತರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.



ವಾರಸುದಾರರಿಗೆ ಮೊಬೈಲ್ ಹಸ್ತಾಂತರ



ಗೋಕರ್ಣ: ಇಲ್ಲಿನ ಮಹಾಗಣಪತಿ ಮಂದಿರದಲ್ಲಿ ಭಕ್ತರು ಬಿಟ್ಟು ಹೋದ ಮೊಬೈಲ್‌ನ ವಾರಸುದಾರರ ಪತ್ತೆ ಮಾಡಿ ಮರಳಿ ನೀಡಿದ ಘಟನೆ ಸೋಮವಾರ ನಡೆದಿದೆ.

ಮಂದಿರದ ಆವಾರದಲ್ಲಿ ಮೊಬೈಲ್‌ದೊರೆತ ಬಗ್ಗೆ ವ್ಯವಸ್ಥಾಪಕ ಗಣಪತಿ ಉಪಾಧ್ಯಾರವರು ಮಹಾಬಲೇಶ್ವರ ಮಂದಿರದಲ್ಲಿರುವ ಪೊಲೀಸ್ ಹೊರಠಾಣೆಗೆ ಮಾಹಿತಿ ನೀಡಿದ್ದರು. ನಂತರ ಪೊಲೀಸ್‌ಸಿಬ್ಬಂದಿ ಮೊಬೈಲ್‌ಬಿಟ್ಟು ಹೋದವರ ಬಗ್ಗೆ ವಿವಿದೆಡೆ ತಿಳಿಸಿ ಅಂತೂ ಪತ್ತೆ ಹಚ್ಚಿ, ಮಂದಿರಕ್ಕೆ ಕರೆಯಿಸಿ ಹಸ್ತಾಂತರಿಸಿದ್ದಾರೆ.

ಈ ವೇಳೆ ಪೊಲೀಸ್ ಹೊರಠಾಣೆ ಹವಾಲ್ದಾರ್ ಜಟ್ಟಪ್ಪ ನಾಯ್ಕ, ವ್ಯವಸ್ಥಾಪಕ ಗಣಪತಿ ಉಪಾಧ್ಯಾ ಉಪಸ್ಥಿತರಿದ್ದರು. ಮೊಬೈಲ್ ಮೈಸೂರಿನ ಜಿ.ಮಹೇಶರವದ್ದಾಗಿತ್ತು. ಬೆಲೆಬಾಳುವ ಮೊಬೈಲ್‌ನ್ ಸುರಕ್ಷಿತವಾಗಿ ವಾಪಸ್ ನೀಡಿದವರಿಗೆ ಕೃತಜ್ಞತೆ ಸಲ್ಲಿಸಿ ತೆರಳಿದ್ದಾರೆ.

ಕಿರುಸುದ್ದಿ

ಇಂದಿನಿಂದ ಗ್ರಾಮದೇವತೆ ಜಾತ್ರೆ



ಯಮಕನಮರಡಿ: ಸಮೀಪದ ದಡ್ಡಿ ಗುಡಗನಹಟ್ಟಿ ಗ್ರಾಮದೇವತೆಯ ಜಾತ್ರೆಯು ಮೇ 5ರಂದು ಪ್ರಾರಂಭವಾಗಿ ಐದು ದಿನಗಳ ಕಾಲ ವಿಜೃಂಭಣೆಯಿಂದ ಜರುಗಲಿದೆ. ಮಂಗಳವಾರ ರಾತ್ರಿ ಶ್ರೀದೇವಿಯ ಆಕರ್ಷಕ ಹೊನ್ನಾಟ, ಬೆಳಿಗ್ಗೆ ಸ್ಥಾಪನೆ ಭಕ್ತರಿಂದ ನೈವೇದ್ಯ ಪ್ರಾರಂಭ ಹಾಗೂ ಗ್ರಾಮದ ಮುಖಂಡರಿಂದ ಉಡಿ ತುಂಬುವ ಕಾರ್ಯಕ್ರಮ ಸೇರಿದಂತೆ ಐದು ದಿನಗಳ ಕಾಲ ವಿವಿಧ ಮನರಂಜನ ಕಾರ್ಯಕ್ರಮಗಳು ಜರುಗಲಿವೆ. ಜೋಡಿ ಎತ್ತಿನ ಗಾಡಿಗಳ ಶರತ್ತು ಹಾಗೂ ಓಡುವ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳು ಜರುಗಲಿವೆ. ಜಾತ್ರಾ ಮಹೋತ್ಸವ ಸಮಾರಂಭಕ್ಕೆ ಸ್ಥಳೀಯ ಶಾಸಕರು ಹಾಗೂ ಲೋಕೋಪಯೋಗಿ ಸಚಿವರು ಸತೀಶ ಜಾರಕಿಹೊಳಿ ಅವರು ಆಗಮಿಸಲಿದ್ದಾರೆ ಎಂದು ಯಾತ್ರಾ ಕಮಿಟಿಯವರು ತಿಳಿಸಿದ್ದಾರೆ.

ತೆರಿಗೆ ರಿಯಾಯಿತಿ: ಮೇ 31ರವರೆಗೆ ವಿಸ್ತರಣೆ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಆಸ್ತಿಗಳ ಮಾಲೀಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ 2026–27 ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ. ತೆರಿಗೆದಾರರು ಅವಧಿ ವಿಸ್ತರಣೆಯ ಸದುಪಯೋಗಪಡಿಸಿಕೊಂಡು ತಮ್ಮ ಆಸ್ತಿಗಳ ಪೂರ್ಣ ಪ್ರಮಾಣದ ತೆರಿಗೆಯನ್ನು ಪಾವತಿಸುವ ಮೂಲಕ ರಿಯಾಯಿತಿಯ ಲಾಭ ಪಡೆದುಕೊಂಡು ಮಹಾನಗರದ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಬೇಕೆಂದು ಮಹಾನಗರ ಪಾಲಿಕೆ ಆಯುಕ್ತರಾದ ಕಾರ್ತಿಕ ಎಂ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 17ಕ್ಕೆ ಸ್ವಚ್ಛ ಬೆಳಗಾವಿ ಅಭಿಯಾನ



ಬೆಳಗಾವಿ : ನಗರದಲ್ಲಿ ಮೇ 17ರಂದು 25 ಸಾವಿರ ಕಾರ್ಯಕರ್ತರೊಂದಿಗೆ ಸ್ವಚ್ಛ ಬೆಳಗಾವಿ ಅಭಿಯಾನವನ್ನು ನಡೆಸಲಾಗುವುದು ಎಂದು ಶಿವಂ ಅಸೋಸಿಯೇಷನ್ ನ ಶಿವಾನಂದ ನೀಲಣ್ಣವರ ಹೇಳಿದರು.

ಸೋಮವಾರ ಬೆಳಗಾವಿ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 17 ರಂದು ಸ್ವಚ್ಛ ಬೆಳಗಾವಿ ಅಭಿಯಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಸ್ವಚ್ಛ ಬೆಳಗಾವಿ ಅಭಿಯಾನದ ಕಾರ್ಯದಲ್ಲಿ ಸುಮಾರು 25 ಸಾವಿರ ಜನರು ಭಾಗಿಯಾಗಿ ಬೆಳಗಾವಿ ಸಂಪೂರ್ಣ ಸ್ವಚ್ಛತೆಗೆ ಶ್ರಮಿಸಲಿದ್ದಾರೆ. ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಸ್ವಚ್ಛತಾ ಅಭಿಯಾನ ನಡೆಯಲಿದೆ. ಮಧ್ಯಾಹ್ನದ ನಂತರ 25 ಸಾವಿರ ಕಾರ್ಯಕರ್ತರಿಗೆ ಭೋಜನದ ವ್ಯವಸ್ಥೆ ಏರ್ಪಡಿಸಲಾಗಿದೆ. ರಾತ್ರಿ ನಗರದ ಸರ್ದಾರ್ ಮೈದಾನದಲ್ಲಿ ಮನೋರಂಜನ ಕಾರ್ಯಾಕ್ರಮದ ಜೊತೆಗೆ ಭೋಜನದ ಕೂಟವನ್ನು ಏರ್ಪಡಿಸಲಾಗಿದೆ. ಬೆಳಗಾವಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ನಗರದ ಸೇರಿದಂತೆ ಜಿಲ್ಲೆಯಿಂದ ಜನತೆಯು ಭಾಗಿ ಯಾಗಲಿದ್ದಾರೆ ಎಂದು ಶಿವಂ ಅಸೋಸಿಯೇಷನ್ ನ ಸಂಸ್ಥಾಪಕ ಶಿವಾನಂದ ನೀಲಣ್ಣವರ ತಿಳಿಸಿದರು. ಈ ವೇಳೆ ಮಂಜುನಾಥ್ ಗಡ್ಡನರ್ವ, ಶಿವಾನಂದ್ ನೀಲಣ್ಣವರ, ಸೇರಿದಂತೆ ಇತರರು ಇದ್ದರು.

ಯುವಕ ಕಾಣೆ



ಬೆಳಗಾವಿ: ತಾಲೂಕಿನ ಶಿವಾಪೂರದ ಗ್ರಾಮದ ಮುಪ್ಪಿನ ಕಾಡಸಿದ್ದೇಶ್ವರ ಮಠದಲ್ಲಿ ತನ್ನ ತಾಯಿ ಜೊತೆ ವಾಸವಾಗಿದ್ದ ಬುದ್ಧಿಮಾಂಧ್ಯ ಅವಿನಾಶ ಅಣ್ಣಾಸಾಹೇಬ ತೊಡಕರ ಎಂಬ 26 ವರ್ಷದ ಯುವಕ ಏ.13ರಂದು ಮಠದಲ್ಲಿ ಯಾರಿಗೂ ಹೇಳದೆ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ.

ಈ ಕುರಿತು ಕಾಕತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯುವಕನ ಚಹರೆ: 5 ಫುಟ ಎತ್ತರ, ಸಾದಾ ಬಿಳಿ ಮೈಬಣ್ಣ, ಮೈಯಿಂದ ಸಡಪಾತಳ, ದುಂಡು ಮುಖ, ಉದ್ದ ಮೂಗು, ಕಪ್ಪು ಕೂದಲು ಇರುತ್ತದೆ ಹಾಗೂ ಕಪ್ಪು ಬಣ್ಣದ ಫುಲ್ ಶರ್ಟ ಮತ್ತು ನೀಲಿ ಬಣ್ಣದ ನೈಟ ಪ್ಯಾಂಟ ಧರಿಸಿರುತ್ತಾನೆ. ಕಾಣೆಯಾದ ವ್ಯಕ್ತಿ ಬಗ್ಗೆ ಮಾಹಿತಿ ದೊರೆತಲ್ಲಿ ಕಾಕತಿ ಪೊಲೀಸ ಠಾಣೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಹಿರೇಬಾಗೇವಾಡಿ: ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಭಾರಿ ಜಯಭೇರಿ ಸಾಧಿಸಿದ ಹಿನ್ನೆಲೆಯಲ್ಲಿ ಹಿರೇಬಾಗೇವಾಡಿಯಲ್ಲಿ ಬಿಜೆಪಿ ಕಾರ್ಯಕರ್ತರು ಸೋಮವಾರ ಸಂಜೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಈರಣ್ಣ ರೊಟ್ಟಿ, ಸಿದ್ದಪ್ಪ ಹುಕ್ಕೇರಿ, ಮಂಜುನಾಥ ಧರೆಣ್ಣವರ, ಕಲ್ಲಪ್ಪ ಸಂಪಗಾವಿ, ನಾಗೇಶ ಇಟಗಿ, ಆನಂದ ನಂದಿ, ಬಸವರಾಜ ಅರಳಿಕಟ್ಟಿ, ರಾಜು ಅರಳಿಕಟ್ಟಿ, ರಾಜು ರೊಟ್ಟಿ, ಮಲ್ಲಿಕಾರ್ಜುನ ಗಟಿಗೆಣ್ಣವರ, ಮಲ್ಲಿಕಾರ್ಜುನ ಕುರುಬರ, ಸಂಜೀವ ತಳವಾರ ಇತರರು ಇದ್ದರು.

ಮಾನವ ಜನ್ಮ ಅಮೂಲ್ಯವಾದದ್ದು

ಚಿಕ್ಕೋಡಿ: ಮಾನವ ಜನ್ಮ ಅಮೂಲ್ಯವಾದದ್ದು, ಇದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಮುಕ್ತಿ ಮಾರ್ಗದ ಕಡೆಗೆ ಸಾಗಬೇಕು. ತನ್ನ ಮನಸ್ಸಿನ ಅರಿವಿನ ಮೇಲೆ ಪೂರ್ಣ ನಂಬಿಕೆ ಇಟ್ಟಾಗಲೇ ಇದು ಸಾಧ್ಯವಾಗುತ್ತದೆ ಎಂದು ರನ್ನಬೆಳಗಲಿಯ ಸಿದ್ಧಾರೂಢ-ಶಂಭುಲಿಂಗ ಆಶ್ರಮದ ಕಾಶಿಬಾಯಿ ಪುರಾಣಿಕ ಹೇಳಿದರು.

ತಾಲೂಕಿನ ಧುಳಗನವಾಡಿ ಗ್ರಾಮದಲ್ಲಿ ಖೋತ ಪರಿವಾರ ಹಾಗೂ ಸದ್ಗುರು ಶರಣ ಕಲಾಸೇವಾ ಮಂಡಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 116ನೇ ಮಾಸಿಕ ಸುವಿಚಾರ ಚಿಂತನಾಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಸತ್ಸಂಗ ಪಾರಮಾರ್ಥ ಚಿಂತನಾಗೋಷ್ಠಿಯಲ್ಲಿ ಬೆರೆತು ಶರಣರ ಶಾಸ್ತ್ರಪ್ರವಚನ ಆಸ್ವಾದಿಸುವ ಮೂಲಕ ಬದುಕಿನ ಚಿಂತೆಗಳು ದೂರವಾಗುತ್ತದೆ. ಸಂಸಾರದ ಜಂಜಾಟದಲ್ಲಿದ್ದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದರು. ಕಾರ್ಯಕ್ರಮ ಸಾನ್ನಿಧ್ಯ ವಹಿಸಿದ್ದ ಕೇರೂರಿನ ಜ್ಯೋತಿರ್ಲಿಂಗಾಶ್ರಮದ ಕೇದಾರಲಿಂಗ ಶರಣರು ಮಾತನಾಡಿ, ಮಾನವ ಜನ್ಮಕ್ಕೆ ಬಂದು ಮೊದಲು ನಾನಾರು ಎಂಬುವುದನ್ನು ತಿಳಿದುಕೊಳ್ಳಬೇಕು. ತನ್ನಲ್ಲಿರುವ ಜ್ಞಾನರತ್ನವನ್ನು ಹುಡುಕಿದಾಗ ನಿಜ ದೇವರು ಕಾಣಿಸುತ್ತಾನೆ ಎಂದು ಹೇಳಿದರು. ಸಾವಿತ್ರಮ್ಮ ವಿಜಯನಗರೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಸವರಾಜ ಪುರಾಣಿಕ, ಧನಪಾಲ ಕಮತೆ, ಕಲ್ಲಪ್ಪ ಜನವಾಡೆ, ಅಪ್ಪಾಸಾಬ ಖೋತ, ದೇವಗೌಡ ಪಾಟೀಲ, ಭರತ ಕಲಾಚಂದ್ರ, ಸುಪ್ರಿಯಾ ಕಲಾಚಂದ್ರ, ಸುಜಾತಾ ಮಗದುಮ್ಮ, ಓಂಕಾರ ಖೋತ ಇತರರು ಇದ್ದರು.



ಚಿಕ್ಕೋಡಿ: ತಾಲೂಕಿನ ಧುಳಗನವಾಡಿ ಗ್ರಾಮದಲ್ಲಿ ಖೋತ ಪರಿವಾರ ಹಾಗೂ ಸದ್ಗುರು ಶರಣ ಕಲಾಸೇವಾ ಮಂಡಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 116ನೇ ಮಾಸಿಕ ಸುವಿಚಾರ ಚಿಂತನಾಗೋಷ್ಠಿ ಉದ್ಘಾಟಿಸಿ ರನ್ನಬೆಳಗಲಿಯ ಸಿದ್ಧಾರೂಢ-ಶಂಭುಲಿಂಗ ಆಶ್ರಮದ ಕಾಶಿಬಾಯಿ ಪುರಾಣಿಕ ಮಾತನಾಡಿದರು.

ಚನ್ನಮ್ಮನ ಕಿತ್ತೂರು ನೂತನ ಬಸ್ ಘಟಕ ಉದ್ಘಾಟನೆ | ಸಚಿವ ರಾಮಲಿಂಗಾರೆಡ್ಡಿ

ಉತ್ತಮ ಸಾರಿಗೆ ಕಲ್ಪಿಸಲು ಕ್ರಮ

ಬೆಳಗಾವಿ : ಸರ್ಕಾರದ ವತಿಯಿಂದ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ರಾಜ್ಯದ ಜನರ ಜೀವನಮಟ್ಟ ಸುಧಾರಿಸುವ ಕಾರ್ಯವಾಗುತ್ತಿದೆ. ಚನ್ನಮ್ಮ ಕಿತ್ತೂರಿನಲ್ಲಿ ಉದ್ಘಾಟನೆಗೊಂಡಂತಹ ಹೊಸ ಬಸ್ ಘಟಕದಿಂದ ಈ ಭಾಗದ ಗ್ರಾಮೀಣ ಜನರಿಗೆ ಉತ್ತಮ ಸಾರಿಗೆ ವ್ಯವಸ್ಥೆಗೆ ಅನುಕೂಲವಾಗಲಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸೋಮವಾರ ಚನ್ನಮ್ಮನ ಕಿತ್ತೂರು ನೂತನ ಬಸ್ ಘಟಕದ ಆವರಣದಲ್ಲಿ ಚನ್ನಮ್ಮನ ಕಿತ್ತೂರು ನೂತನ ಬಸ್ ಘಟಕ ಉದ್ಘಾಟಿಸಿ, ಹೊಸ ಬಸ್ ಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಚನ್ನಮ್ಮನ ಕಿತ್ತೂರಿನಲ್ಲಿ ಅಂದಾಜು ಐದು ಕೋಟಿ ರೂ. ಗಳ ವೆಚ್ಚದಲ್ಲಿ ನಿರ್ಮಾಣವಾದಂತಹ ಸುಸಜ್ಜಿತ ನೂತನ ಬಸ್ ಘಟಕದಲ್ಲಿ ಪೆಟ್ರೋಲ್ ಬಂಕ್ ಸ್ಥಾಪಿಸಲು ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಳೆದ ಬಾರಿ ಸಾರಿಗೆ ಸಚಿವರಾಗಿದ್ದ ಸಮಯದಲ್ಲೂ ಅನೇಕ ಬಸ ನಿಲ್ದಾಣಗಳನ್ನು ನಿರ್ಮಾಣ ಮಾಡಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಅನುಕಂಪದ ಆಧಾರದ ಮೇಲೆ ಹತ್ತು ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ 1,200 ಹೊಸ ಬಸಗಳನ್ನು ನೀಡಲಾಗಿದೆ. ಬೆಳಗಾವಿಯ ಕೇಂದ್ರ ಹಾಗೂ ನಗರ ಬಸ್ ನಿಲ್ದಾಣಗಳನ್ನು ಈಗಾಗಲೇ ಉದ್ಘಾಟಿಸಲಾಗಿದೆ. ಚನ್ನಮ್ಮ ಕಿತ್ತೂರಿನ ಹೊಸ ಬಸ್ ಘಟಕದಲ್ಲಿ ಕಾಂಕ್ರಿಟ್ ಕಾಮಗಾರಿಯನ್ನು ಶೀಘ್ರವೇ ಕೈಗೊಳ್ಳಲಾಗುವುದು ಎಂದರು. ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ, ಚನ್ನಮ್ಮನ ಕಿತ್ತೂರಿನಲ್ಲಿ ನೂತನ ಬಸ್ ಘಟಕ ನಿರ್ಮಾಣದ ಬಹು ದಿನಗಳ ಬೇಡಿಕೆ ಈಡೇರಿದಂತಾಗಿದೆ. ಚನ್ನಮ್ಮನ ಕಿತ್ತೂರು ಐತಿಹಾಸಿಕ ಸ್ಥಳವಾಗಿದ್ದು, ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡುವದು ಹಾಗೂ ಗ್ರಾಮೀಣ ಜನರಿಗೆ ಉತ್ತಮ ಸಾರಿಗೆ ವ್ಯವಸ್ಥೆ ಕಲ್ಪಿಸಿಕೊಡುವ ಉದ್ದೇಶದೊಂದಿಗೆ ಈ ಘಟಕ ಆರಂಭಿಸಲಾಗಿದೆ ಎಂದರು.

ಮುಂಚೆ ಈ ಭಾಗದ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜಿಗೆ ಹೋಗಲು ತುಂಬಾ ಅನಾನುಕೂಲವಾಗುತ್ತಿತ್ತು. ಇಂದು ಚನ್ನಮ್ಮನ ಕಿತ್ತೂರಿನ ಹೊಸ ಬಸ್ ಘಟಕಕ್ಕೆ ಹದಿನೈದು ಹೊಸ ಬಸ್ ಗಳನ್ನು ನೀಡಲಾಗಿದ್ದು, ಇದರಿಂದಾಗಿ ಈ ಭಾಗದ ಗ್ರಾಮೀಣ ಜನರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಸಾರಿಗೆ ವ್ಯವಸ್ಥೆ ನೀಡಲಾಗುವುದು ಎಂದರು.

ವಾಕರಸಾಸಂಸ್ಥೆ ಉಪಾಧ್ಯಕ್ಷ ಸುನೀಲ ಹನುಮಣ್ಣವರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ವಿನಯ ನಾವಲಗಟ್ಟಿ, ವಾಕರಸಾ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ.,ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ.ಬಸರಗಿ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಘಟಕ ವ್ಯವಸ್ಥಾಪಕರು, ಸಾರ್ವಜನಿಕರು ಉಪಸ್ಥಿತರಿದ್ದರು.



ಸಾರಿಗೆ ಸಚಿವರಿಗೆ ಮನವಿ

ಚನ್ನಮ್ಮನ ಕಿತ್ತೂರು ಬಸ್ ನಿಲ್ದಾಣದಲ್ಲಿನ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಅನುದಾನ ಹಾಗೂ ಈ ಭಾಗದಲ್ಲಿ ಸ್ಥಳೀಯವಾಗಿ ಸುಗಮ ಸಂಚಾರಕ್ಕೆ ಹೊಸ ಮಿನಿ ಬಸ್ ಗಳನ್ನು ಪೂರೈಸಲು ಸಾರಿಗೆ ಸಚಿವರಲ್ಲಿ ಶಾಸಕ ಬಾಬಾಸಾಹೇಬ ಪಾಟೀಲ ಅವರು ಮನವಿ ಮಾಡಿದರು.

> **ಹೊಸದಾಗಿ ನಿರ್ಮಾಣವಾದಂತಹ ಚನ್ನಮ್ಮನ ಕಿತ್ತೂರು ಬಸ್ ಘಟಕಕ್ಕೆ ಹದಿನೈದು ಹೊಸ ಬಸ್ ಗಳನ್ನು ನೀಡಲಾಗಿದೆ. ಈ ಬಸ್ ಗಳನ್ನು ಗ್ರಾಮೀಣ ಭಾಗದ ಜನರಿಗೆ ಹಾಗೂ ಮುಖ್ಯವಾಗಿ ಶಾಲಾ ಮಕ್ಕಳಿಗೆ ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿ.**
> **■ ರಾಮಲಿಂಗಾರೆಡ್ಡಿ , ಸಚಿವ**

ಏ.12ರಿಂದ ವಿಶೇಷ ಲೋಕ ಆದಾಲತ್



ರಾಮದುರ್ಗ: ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಉಳಿದಿರುವ ಪ್ರಕರಣಗಳ ಇತ್ಯರ್ಥಕ್ಕೆ ಸರ್ವೋಚ್ಚ ನ್ಯಾಯಾಲಯವು ಆ. 21 ರಿಂದ ಆ.23ರ ವರೆಗೆ ಸಮಾಧಾನ ಸಮಾರೋಹ ಎಂಬ ವಿಶೇಷ ಲೋಕ ಆದಾಲತ್ ಕಾರ್ಯಕ್ರಮ ಆಯೋಜಿಸಿದೆ. ಜನತೆ ಸದುಪಯೋಗ ಪಡೆದುಕೊಳ್ಳಬೇಕೆಂದು ಕಾನೂನು ಸೇವಾ ಸಮಿತಿ ತಾಲೂಕಾ ಅಧ್ಯಕ್ಷೆ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶ ಬಿ.ಟಿ. ಅನ್ನಪೂರ್ಣೇಶ್ವರಿ ಹೇಳಿದರು.

ಲೋಕದಾಲತ್ ಯಶಸ್ವಿಗೆ ನಡೆಸಿದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ವೋಚ್ಚಬಾಕಿ ನ್ಯಾಯಾಲಯದಲ್ಲಿ ಪ್ರಕರಣಗಳ ಇತ್ಯರ್ಥಕ್ಕಾಗಿ ಪಕ್ಷಗಾರರು ದೆಹಲಿಗೆ ಹೋಗುವ ಅಗತ್ಯವಿಲ್ಲ. ವಿಚಾರಣೆಗೆ ಇರುವ ಪ್ರಕರಣಗಳು ಮೂಲತಃ ಯಾವ ವಿಚಾರಣೆಗೊಂಡು ನ್ಯಾಯಾಲಯದಲ್ಲಿ ತೀರ್ಮಾಣಗೊಂಡಿರುತ್ತವೆಯೋ ಅದೇ ನ್ಯಾಯಾಲಯಗಳ ವ್ಯಾಪ್ತಿಯಲ್ಲಿನ ಜಿಲ್ಲಾ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿಯೇ ಎರಡು ಪಕ್ಷಗಳು ಮುಖಾಮುಖಿಯಾಗಿ ಚರ್ಚಿಸಿ ಸಂಧಾನ ಕಾರ್ಯದ ಮೂಲಕ ತಮ್ಮ ವಿವಾದವನ್ನು ಬಗೆಹರಿಸಿಕೊಳ್ಳಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ತಾಲೂಕಾ ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಿವಿಲ್ ನ್ಯಾಯಾಧೀಶ ಮಂಜುನಾಥ ಬಣಕಾರ ಮಾತನಾಡಿದರು. ಈ ಸಂದರ್ಭದಲ್ಲಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎ. ಎ. ಮುದಕವಿ ಕಾರ್ಯದರ್ಶಿ ಎ.ಡಿ.ಲಕ್ಕನ್ನವರ, ಹಿರಿಯ ನ್ಯಾಯವಾದಿಗಳಾದ ಆರ್. ಐ. ಕೆರೂರ, ಸಿ.ಎಂ. ಜಾಮದಾರ, ಎಸ್.ಎ. ಜಾಮದಾರ ಕೆ.ಡಿ. ನಿಜಗುಲಿ, ವಿವಿಧ ಇಲಾಖೆಯ ಅಧಿಕಾರಿಗಳು ಇತರರಿದ್ದರು.

ರಾಜೀ ಮೂಲಕ ಇತ್ಯರ್ಥ

ರಾಜೀ ಸಂಧಾನ ಮಾಡಿಕೊಂಡು ದೂರವಿರಲು ವ್ಯಾಜ್ಯಗಳಿಂದ ಪಕ್ಷಗಾರರು ಸ್ಥಳೀಯ ನ್ಯಾಯಾಲಯದ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅದಕ್ಕೆ ಬೇಕಾದ ಸೂಕ್ತ ವ್ಯವಸ್ಥೆಯನ್ನು ಸ್ಥಳೀಯ ನ್ಯಾಯಾಲಯದ ಆವರಣದಲ್ಲಿಯೇ ಕಲ್ಪಿಸಲಾಗುತ್ತಿದೆ. ಪ್ರಕರಣವು ರಾಜೀ ಮೂಲಕ ಇತ್ಯರ್ಥಗೊಂಡಲ್ಲಿ ಅದನ್ನು ವಿಡಿಯೋ ಸಂವಹನದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಲಾಗುವುದು ಮತ್ತು ಪಕ್ಷಗಾರರು ತಮ್ಮ ವಿವಾದ ಇತ್ಯರ್ಥಕ್ಕಾಗಿ ದೆಹಲಿಗೆ ಹೋಗದೆ ತಮ್ಮ ಸ್ಥಳೀಯ ನ್ಯಾಯಾಲಯದಲ್ಲಿಯೇ ವಿವಾದವನ್ನು ರಾಜೀ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದಾಗಿದೆ ಎಂದು ಕಾನೂನು ಸೇವಾ ಸಮಿತಿ ತಾಲೂಕಾ ಅಧ್ಯಕ್ಷೆ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶ ಬಿ.ಟಿ. ಅನ್ನಪೂರ್ಣೇಶ್ವರಿ ಹೇಳಿದರು.

ಶ್ರೀ ನೀಲಗಂಗಾ ಜ್ಞಾನವಿಕಾಸ ಕೇಂದ್ರ ಉದ್ಘಾಟನೆ

ನೇಸರಗಿ: ಸಮೀಪದ ಸೋಮನಟ್ಟಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಹೊಸಕೇಂದ್ರ ಶ್ರೀ ನೀಲಗಂಗಾ ಜ್ಞಾನವಿಕಾಸ ಕೇಂದ್ರ ಉದ್ಘಾಟನೆ ಕಾರ್ಯಕ್ರಮ ಸೋಮವಾರ ನೆರವೇರಿತು.

ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಭಾರತಿ ತಿಗಡಿ, ರಮೇಶ, ತಾಲೂಕು ಜ್ಞಾನವಿಕಾಸ ಸಮನ್ವಯ ಅಧಿಕಾರಿ ಶೈಲಾ ಜೆ, ವಲಯದ ಮೇಲ್ವಿಚಾರಕರಾದ ಪರಶುರಾಮ ಉಪಸ್ಥಿತರಿದ್ದರು.

ಜ್ಞಾನವಿಕಾಸ ಸಮನ್ವಯಾಧಿಕಾರಿ ಶೈಲಾ ಜೆ ಅವರು ಕಾರ್ಯಕ್ರಮ ಉದ್ದೇಶಿಸಿ ಹೊಸ ಕೇಂದ್ರ ರಚನೆ ಉದ್ದೇಶಗಳ ಕುರಿತು

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ನಡೆದ ಬಂದ ದಾರಿ ಕ್ಷೇತ್ರದಿಂದ ನಡೆಯುವಂತಹ ಅಭಿವೃದ್ಧಿ ಕಾರ್ಯಗಳು ಸ್ವಸಹಾಯ ಸಂಘಗಳ ಮಹತ್ವ ಮಾಸಾಶನ ವಿತರಣೆ ವಾತ್ಸಲ್ಯ ಮನೆ ರಚನೆ, ಜನಮಂಗಳ ಕಾರ್ಯಕ್ರಮ ಸಮುದಾಯ ಅಭಿವೃದ್ಧಿ ವಿಭಾಗದಿಂದ ನೀಡುವ ಅನುದಾನಗಳ ಬಗ್ಗೆ ಬ್ಯಾಂಕ್ ಆಫ್ ಮಹಾರಾಷ್ಟ್ರದಿಂದ ಸ್ವಸಹಾಯ ಸಂಘದವರಿಗೆ ನೀಡುವ ಪ್ರಗತಿ ನಿಧಿ ಬಗ್ಗೆ ಮಾಹಿತಿ ನೀಡಿದರು.

ಉದ್ಘಾಟಕ ರಮೇಶ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆಯ ಜಾರಿಗೆ ತಂದಿರುವ ಕಾರ್ಯಕ್ರಮಗಳ ಉಪಯೋಗ ಎಲ್ಲರೂ ಪಡೆದುಕೊಳ್ಳಬೇಕು. ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದುವದರೊಂದಿಗೆ ಕುಟುಂಬ ನಿರ್ವಹಣೆಯನ್ನು ಜಾಣ್ಮೆಯಿಂದ ನಿರ್ವಹಿಸುವುದು ಅಗತ್ಯವಾಗಿದೆ. ಎಲ್ಲರೂ ಅನಾವಶ್ಯಕ ಖರ್ಚು ಮಾಡದೆ ಸ್ವ ಉದ್ಯೋಗ ರೂಪಿಸಿಕೊಂಡು ಸ್ವಾವಲಂಬಿಯಾಗಿ ಜೀವನ ನಡೆಸಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಇಡೀ ಕರ್ನಾಟಕದಾದ್ಯಂತ ವ್ಯಾಪಿಸಿದ್ದು ಅದೆಷ್ಟೋ ಕುಟುಂಗಳಿಗೆ ದಾರಿದೀಪವಾಗಿದೆ.

ತಮ್ಮ ಅವಶ್ಯಕತೆಗೆ ಪೂರಕವಾಗಿ ಸಾಲ ಸೌಲಭ್ಯಗಳನ್ನು ಪಡೆದು ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು. ಜ್ಞಾನವಿಕಾಸ ಸಮನ್ವಯಧಿಕಾರಿ ಶೈಲಾ , ಸ್ವಾಗತ ವಲದ ಮೇಲ್ವಿಚಾರಕರಾದ ಪರುಶುರಾಮ, ಸೇವಾ ಪ್ರತಿನಿಧಿಗಳು ಭಾಗವಹಿಸಿದ್ದರು.



ಉಮೇಶ್ ಮೇಟಿ, ಸಮರ್ಥ ಶಾಮನೂರು ಗೆಲುವು

ಬೆಳಗಾವಿಯಲ್ಲಿ ಸಂಭ್ರಮಿಸಿದ ಕೈ ಕಾರ್ಯಕರ್ತರು

ಬೆಳಗಾವಿ: ಇಡೀ ರಾಜ್ಯದ ಕುತೂಹಲ ಕೆರಳಿಸಿದ್ದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಹಾಗೂ ದಾವಣಗೇರಿಯಲ್ಲಿ ಸಮರ್ಥ ಶಾಮನೂರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬೆಳಗಾವಿಯ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ವಿಜಯೋತ್ಸವ ಆಚರಿಸಿದರು.

ಬೆಳಗಾವಿಯ ಕಾಂಗ್ರೆಸ್ ಕಚೇರಿ ಎದುರು ಜಮಾಯಿಸಿದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಗುಲಾಲ್ ಎರಚಿ ಸಂಭ್ರಮಿಸಿದರು. ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಪರ ಘೋಷಣೆಗಳನ್ನು ಕೂಗುವ ಮೂಲಕ ಜಯಭೇರಿಯನ್ನು ಆಚರಿಸಿದರು. ಸಾರ್ವಜನಿಕರಿಗೆ ಸಿಹಿ ಹಂಚುವ ಮೂಲಕ ಕಾರ್ಯಕರ್ತರು ತಮ್ಮ ಸಂತೋಷವನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಎಂ.ಜೆ, ರಮೇಶ ಸೊಂಟಕ್ಕಿ, ಮಂಜು ಕಾಂಬಳೆ, ಸಂತೋಷ ಕಾಂಬಳೆ, ಬಸವರಾಜ ಶೇಂಗಾವಿ, ರಾಜಾ ಸಲೀಂ ಸೇರಿದಂತೆ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಇದ್ದರು.



ಶ್ರೀ ಬಾಳು ಮಾಮಾ ಸಹಕಾರಿ ಸಂಘಕ್ಕೆ ಕೃಷ್ಣನಾಥ ಮಹಾರಾಜರು ಭೇಟಿ

ಕುಡಚಿ: ಪಟ್ಟಣದಲ್ಲಿ ಇತ್ತೀಚೆಗೆ ಉದ್ಘಾಟನೆಗೊಂಡ ಶ್ರೀ ಬಾಳು ಮಾಮಾ ಅರ್ಬನ್ ಕೋ ಆಫ್ ಸೋಸೈಟಿಗೆ ವಾಘಾಪೂರ (ಆದಮಾಪೂರ)ದ ಕೃಷ್ಣನಾಥ ದೋಣಿ ಮಹಾರಾಜರು ಭೇಟಿ ನೀಡಿದರು. ಅವರನ್ನು ಸಹಕಾರಿಯ ಅಧ್ಯಕ್ಷ ಶಂಕರ ಘಾಳಿ ಹಾಗೂ ಆಡಳಿತ ಮಂಡಳಿಯವರು ಪುಷ್ಪಾರ್ಚನೆ ಮಾಡುವ ಮೂಲಕ ಸ್ವಾಗತಿಸಿದರು. ನಂತರ ಅವರು ಶ್ರೀ ಬಾಳು ಮಾಮಾ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಶುಭ ಹಾರೈಸಿದರು.



ನಂತರ ಸಹಕಾರಿಯ ಅಧ್ಯಕ್ಷ ಶಂಕರ ಘಾಳಿ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರನ್ನು ಶಾಲು ಹೊದಿಸಿ ಸತ್ಕರಿಸಿದರು.

ಈ ಸಂದರ್ಭದಲ್ಲಿ ಪೂಜೇರಿಗಳಾದ ಲಗಮಣ್ಣ ಬೆಕ್ಕೇರಿ, ಉಪಾಧ್ಯಕ್ಷ ಸುಧೀರ ಘೊಂಗಡಿ, ಆಡಳಿತ ಮಂಡಳಿ ಸದಸ್ಯರಾದ ಆನಂದ ದಳವಾಯಿ, ನಿಂಗಪ್ಪಾ ಭಾವಿ, ಮುತ್ತಪ್ಪ ಘಾಳಿ, ಕಲಗೌಡ ಕೊಥಳಿ, ರಾಹುಲ್ ಪಾಟೀಲ, ಶ್ರೀಕಾಂತ ಖೋತ, ರಾಜು ಸಾರವಾಡೆ, ಮಹೇಶ್ ಸಾರವಾಡೆ, ಸುನೀಲ ಕರಗಾವೆ, ರಾಕೇಶ ಭಾವಿ, ರಾಹುಲ್ ದಳವಾಯಿ, ವೀಣಾ ಸಂಕೇಶ್ವರ, ಸುಜಾತಾ ಘಾಳಿ, ವ್ಯವಸ್ಥಾಪಕ ಲಗಮಣ್ಣ ಸಂಕೇಶ್ವರ, ಹಿರಿಯರಾದ ಅಶೋಕ ಕುಂಬಾರ, ಶಂಕರ ದಳವಾಯಿ, ಭರಮಪ್ಪ ಘಾಳಿ, ಶ್ರೀಮಂತ ಘಾಳಿ ಇತರರು ಉಪಸ್ಥಿತರಿದ್ದರು.

ಬೈಕ್ ಕಳ್ಳರ ಬಂಧನ: 12 ಮೊಬೈಲ್‌ಗಳ ಹಸ್ತಾಂತರ



ಯಮಕನಮರಡಿ : ಯಮಕನಮರಡಿ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಳೆದ ಕೆಲವು ದಿನಗಳಲ್ಲಿ ನಡೆಸಿದ ಕ್ಷಿಪ್ರ ಕಾರ್ಯಾಚರಣೆ ಕಾರ್ಯಾಚರಣೆಗಳ ಫಲವಾಗಿ, ಮೋಟಾರ್ ಸೈಕಲ್ ಕಳ್ಳತನ ಪ್ರಕರಣವನ್ನು ಭೇದಿಸುವುದರ ಜೊತೆಗೆ, ಸಾರ್ವಜನಿಕರ ಕಳೆದುಹೋಗಿದ್ದ 12 ಮೊಬೈಲ್‌ಗಳನ್ನು ಪತ್ತೆ ಹಚ್ಚಿ ವಾರಸುದಾರರಿಗೆ ಮರಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶಂಕರ ಭೀಮಾ ಅಡಿನ್ನವರ, ಪರಶುರಾಮ ಕಲ್ಲಪ್ಪ ಶಿರಣಗಿ, ಪರಶುರಾಮ ಭರಮಪ್ಪಾ ಪಾಂಡಿ ಬಂಧಿತ ಆರೋಪಿಗಳು.ಈ ಪ್ರಕರಣದ ಪತ್ತೆಗಾಗಿ ಪಿ.ಐ ಜಾವೀದ ಮುಶಾಪುರಿ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ವಿಶೇಷ ತಂಡವು ಕಾರ್ಯಾಚರಣೆ ನಡೆಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿದೆ. ಸಂಬಂಧಪಟ್ಟ ವಾರಸುದಾರರನ್ನು ಕರೆಸಿ, ಅಧಿಕೃತವಾಗಿ ಹಸ್ತಾಂತರಿಸಲಾಯಿತು. ಕಳೆದು ಹೋದ ತಮ್ಮ ಬೆಲೆಬಾಳುವ ಮೊಬೈಲ್‌ಗಳನ್ನು ಮರಳಿ ಪಡೆದ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಕೃತಜ್ಞತೆ ಸಲ್ಲಿಸಿದರು. ಈ ಎರಡು ಯಶಸ್ವಿ ಕಾರ್ಯಾಚರಣೆ ಪಿಐ ಜಾವೀದ್ ಮುಷಾಪುರಿ ಅವರ ಮಾರ್ಗದರ್ಶನದಲ್ಲಿ ನಡೆದಿದ್ದು, ತಂಡದಲ್ಲಿ ಪಿಎಸ್ಐ ಬಿ.ಕೆ.ಪಾಟೀಲ ಹಾಗೂ ಸಿಬ್ಬಂದಿ ವೈ.ಡಿ.ಗುಂಜಗಿ, ಜಿ.ಬಿ.ನಾಗನ್ನವರ ಮತ್ತು ಪಿ.ಕೆ. ಕಿಳ್ಳಿಕೇತರ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಸತತ ಅಧ್ಯಯನದಿಂದ ಸಾಧನೆ

ರಾಯಬಾಗ: ವಿದ್ಯಾರ್ಥಿಗಳು ಸತತ ಅಧ್ಯಯನ, ಕಠಿಣ ಪರಿಶ್ರಮ, ಏಕಾಗ್ರತೆ, ಪ್ರಾಮಾಣಿಕ ಪ್ರಯತ್ನದಿಂದ ಉನ್ನತ ಸಾಧನೆ ಮಾಡಲು ಸಾಧ್ಯ ಎಂದು ವಕೀಲ, ಹಾಲಸಿದ್ದೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಾಯಪ್ಪ ಗೊಂಡೆ ಹೇಳಿದರು.

ಭಾನುವಾರ ರಾಯಬಾಗ ಸಮೀಪದ ಖೈರವಾಡಿ ಹಾಲ ಸಿದ್ದೇಶ್ವರ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸಾಧನೆಗೆ ಗುರುಗಳು ಹಾಗೂ ಪಾಲಕರ ಪಾತ್ರ ಬಹಳ ಮುಖ್ಯ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಶಾಲೆ ವಿದ್ಯಾರ್ಥಿಗಳಾದ ಚಿತ್ರಾಂಜಲಿ ಮುರಗೋಡೆ (ಶೇ. 95.02) ಭಕ್ತಿ ಘೋರ್ಪಡೆ (ಶೇ.93.28) ಸಮೀಕ್ಷಾ ಕಠಾರೆ (ಶೇ.91.68) ಸತ್ಕರಿಸಲಾಯಿತು.ಕಾರ್ಯಕ್ರಮದಲ್ಲಿ ಅಮರೇಶ ಬ್ಯಾಕುಡೆ , ಆಡಳಿತ ಮಂಡಳಿ ಸದಸ್ಯರು, ಪಾಲಕರು, ಶಿಕ್ಷಕರು ಹಾಗೂ ಶಾಲೆ ಸಿಬ್ಬಂದಿ ಇದ್ದರು.ರಫಿಕ ಬಾಗೆವಾಡಿ ಸ್ವಾಗತಿಸಿದರು, ಸ್ವೇತಾ ಪಾಟೀಲ ನಿರೂಪಿಸದರು, ಪ್ರೇಮಾ ಗೊಂಡೆ ವಂದಿಸಿದರು.



ಏಳನೇ ದಿನಕ್ಕೆ ಕಾಲಿಟ್ಟ ಬಿ.ಕೆ ಕಂಗ್ರಾಳಿಯ ಲಕ್ಷ್ಮೀ ದೇವಿ ಜಾತ್ರೆ

ಬೆಳಗಾವಿ : ತಾಲೂಕಿನ ಬಿ.ಕೆ. ಕಂಗ್ರಾಳಿಯ ಮಹಾಲಕ್ಷ್ಮೀ ಜಾತ್ರೆ ಈಗ ಕೇವಲ ಭಕ್ತಿಯ ಕೇಂದ್ರವಾಗಿ ಉಳಿದಿಲ್ಲ, ಬದಲಾಗಿ ಅದೊಂದು ಬೃಹತ್ ಸಂಭ್ರಮದ ತಾಣವಾಗಿ ಮಾರ್ಪಟ್ಟಿದೆ. 43 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಬಂದ ಈ ಜಾತ್ರೆಯಲ್ಲಿ ವ್ಯಾಪಾರ ಮತ್ತು ಮನರಂಜನೆಯೂ ಅಬ್ಬರದಿಂದ ಕೂಡಿದೆ.

ಬಿ.ಕೆ. ಕಂಗ್ರಾಳಿ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮೀ ದೇವಿಯ ಜಾತ್ರಾ ಮಹೋತ್ಸವವು ಏಳನೇ ದಿನಕ್ಕೆ ಕಾಲಿಟ್ಟಿದ್ದು, ಜನಸಾಗರ ಈಗ ಮನರಂಜನೆಯ ಲೋಕದಲ್ಲಿ ಮುಳುಗಿದೆ. ಬರೋಬ್ಬರಿ ನಾಲ್ಕು ದಶಕಗಳ ಬಳಿಕ ಬಂದ ಈ ಜಾತ್ರೆಯಲ್ಲಿ ಅದ್ದೂರಿ ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಾಣವಾಗಿದ್ದು, ಆಕಾಶವನ್ನೇ ಮುಟ್ಟುವಂತಿರುವ ಜೈಂಟ್ ವಿಲ್‌ಗಳು ಪ್ರಮುಖ ಆಕರ್ಷಣೆಯಾಗಿವೆ. ವಿವಿಧ ಬಗೆಯ ಆಟಿಕೆಗಳು ಜಾತ್ರೆಯ ಅಂಗಳಕ್ಕೆ ಲಗ್ಗೆ ಇಟ್ಟಿದ್ದು, ಮಕ್ಕಳು ಮತ್ತು ಯುವಕರ ಕಲರವದಿಂದ ಇಡೀ ಪರಿಸರ ಝಗಮಗಿಸುತ್ತಿದೆ.

ಸಾಹಸಮಯ ಆಟಗಳಲ್ಲಿ ಪಾಲ್ಗೊಳ್ಳುತ್ತಿರುವ ಯುವಪಡೆ ಜಾತ್ರೆಯ ಮಜಾವನ್ನು ಇಮ್ಮಡಿಗೊಳಿಸುತ್ತಿದೆ. ಇನ್ನೊಂದೆಡೆ, ಜಾತ್ರೆಯ ಆವರಣವು ಗ್ರಾಹಕರಿಂದ ತುಂಬಿ ತುಳುಕುತ್ತಿದೆ. ನೂರಾರು ವೈವಿಧ್ಯಮಯ ವಸ್ತುಗಳ ಸ್ಟಾಲ್ ಗಳು ಇಲ್ಲಿ ತಲೆ ಎತ್ತಿದ್ದು, ಗೃಹೋಪಯೋಗಿ ವಸ್ತುಗಳಿಂದ ಹಿಡಿದು ಫ್ಯಾಶನ್ ಸಾಮಗ್ರಿಗಳವರೆಗೆ ಎಲ್ಲವೂ ಲಭ್ಯವಿದೆ. ವಿಶೇಷವಾಗಿ ಮಹಿಳೆಯರು ತಮಗೆ ಬೇಕಾದ ಅಲಂಕಾರಿಕ ವಸ್ತುಗಳ ಖರೀದಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರೆ, ಮಕ್ಕಳು ಆಟಿಕೆಗಳ ಮೊರೆ ಹೋಗುತ್ತಿದ್ದಾರೆ. ವ್ಯಾಪಾರಸ್ಥರ ಮೊಗದಲ್ಲಿ ಮಂದಹಾಸ ಮೂಡಿದ್ದು, ನಿರೀಕ್ಷೆಗೂ ಮೀರಿದ ವಹಿವಾಟು ನಡೆಯುತ್ತಿರುವುದು ಈ ಬಾರಿಯ ಜಾತ್ರೆಯ ವಿಶೇಷತೆಯಾಗಿದೆ. ಜಾತ್ರೆಯು ಕೇವಲ ಮನರಂಜನೆಗೆ ಸೀಮಿತವಾಗದೆ, ಭಕ್ತಿಯ ತಳಹದಿಯನ್ನೂ ಗಟ್ಟಿಯಾಗಿರಿಸಿಕೊಂಡಿದೆ.

ಪ್ರತಿದಿನ ಗ್ರಾಮಕ್ಕೆ ಭಕ್ತಸಾಗರವೇ ಹರಿದು ಬರುತ್ತಿದ್ದು, ಲಕ್ಷಾಂತರ ಜನರು ದೇವಿಯ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ. ವಿವಿಧ ಧಾರ್ಮಿಕ ಕೈಂಕರ್ಯಗಳು ಸಾಂಗವಾಗಿ ನೆರವೇರುತ್ತಿದ್ದು, ಒಂದು ಕಡೆ ಭಕ್ತಿಯ ಪರಾಕಾಷ್ಠೆ ಹಾಗೂ ಇನ್ನೊಂದು ಕಡೆ ಸಂಭ್ರಮದ ವ್ಯಾಪಾರ-ಮನರಂಜನೆ ಎರಡೂ ಸೇರಿ ಬಿ.ಕೆ. ಕಂಗ್ರಾಳಿಯನ್ನು ದಕ್ಷಿಣ ಕಾಶಿಯಂತೆ ಕಂಗೊಳಿಸುವಂತೆ ಮಾಡಿದೆ.

ನೀರಿಗಾಗಿ ಸಹಾಯವಾಣಿ ಆರಂಭ

ಬೆಳಗಾವಿ: ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಉಂಟಾಗುವ ಕುಡಿಯುವ ನೀರಿನ ಸಮಸ್ಯೆ ಹಾಗೂ ಅನಾಹುತಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬೆಳಗಾವಿ ತಾಲೂಕಿನಲ್ಲಿಯೂ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಉದ್ದೇಶದಿಂದ ತಾಲೂಕು ಮಟ್ಟದಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಸಾರ್ವಜನಿಕರು ತಮ್ಮ ಪ್ರದೇಶಗಳಲ್ಲಿ ಉಂಟಾಗುವ ಕುಡಿಯುವ ನೀರಿನ ಕೊರತೆ ಸರಬರಾಜಿನ ವ್ಯತ್ಯಯ ಹಾಗೂ ಇತರೇ ಸಂಬಂಧಿತ ತೊಂದರೆಗಳನ್ನು ಸಹಾಯವಾಣಿ ಸಂಖ್ಯೆ 0831-2407286 ಮೂಲಕ ಮಾಹಿತಿ ನೀಡಬಹುದಾಗಿದೆ ಎಂದು ಬೆಳಗಾವಿ ತಹಶೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಅಧಿಕೃತ ನೋಂದಣಿ ಕಡ್ಡಾಯ

ಬೆಳಗಾವಿ : ಪ್ರವಾಸಿಗರ ಸುರಕ್ಷತಾ ಹಿತ ದೃಷ್ಟಿಯಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಂಸ್ಟೇಗಳು ಅಧಿಕೃತ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ನೋಂದಣಿ ಪತ್ರವನ್ನು ಪಡೆಯದೇ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂಸ್ಟೇ ಮಾಲೀಕರು ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಪೋರ್ಟಲ್ (www.karnatakatourism.org/login) ಮೂಲಕ ಅರ್ಜಿ ಸಲ್ಲಿಸಿ, ಅಧಿಕೃತ ನೋಂದಣಿ ಪತ್ರ ಪಡೆದ ನಂತರ ಹೋಂಸ್ಟೇ ಅನ್ನು ಮುಂದುವರೆಸಬೇಕು. ಅಧಿಕೃತವಾಗಿ ನೋಂದಣಿ ಮಾಡಿಸದೇ ಹೋಂಸ್ಟೇಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಅಂತಹ ಹೋಂಸ್ಟೇಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.ಹೆಚ್ಚಿನ ಮಾಹಿತಿಗಾಗಿ ಬೆಳಗಾವಿಯ ಪ್ರವಾಸೋದ್ಯಮ ಇಲಾಖೆ, ಉಪನಿರ್ದೇಶಕರ ಕಚೇರಿ ಸುವರ್ಣಸೌಧ ಬಿಲ್ಡಿಂಗ್, ತಳಮಹಡಿ, ಪೂರ್ವದ್ವಾರ ಪ್ರವೇಶ ಕೊಠಡಿ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : 2026-27ನೇ ಶೈಕ್ಷಣಿಕ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ, ಡಾ: ಎಪಿಜೆ ಅಬ್ದುಲ್ ಕಲಾಂ, ಮೌಲಾನಾ ಆಜಾದ ಆಂಗ್ಲ ಮಾಧ್ಯಮ ಕಾಲೇಜು, ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಕನ್ನಡ, ಭೌತಶಾಸ್ತ್ರ, ವ್ಯವಹಾರ ಅಧ್ಯಯನ, ಇತಿಹಾಸಶಾಸ್ತ್ರ, ಇಂಗ್ಲೀಷ್, ರಸಾಯನಶಾಸ್ತ್ರ, ಲೆಕ್ಕಶಾಸ್ತ್ರ, ರಾಜ್ಯಶಾಸ್ತ್ರ, ಹಿಂದಿ, ಜೀವಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಉರ್ದು, ಗಣಿತ ಶಾಸ್ತ್ರ, ಕಂಪ್ಯೂಟರ್ ವಿಜ್ಞಾನ ವಿಷಯಗಳ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಆಫ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಭರ್ತಿಮಾಡಿ ಸದರಿ ಅರ್ಜಿಯೊಂದಿಗೆ ದೃಢೀಕೃತ ದಾಖಲಾತಿಗಳನ್ನು ಮೇ 12ರ ಸಂಜೆ 5 ಗಂಟೆ ಒಳಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಅಲ್ಪಸಂಖ್ಯಾತರ ಭವನ ಕೆ.ಎಸ್.ಸಿ.ಎ ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ, ರಾಮತೀರ್ಥ ನಗರ, ಬೆಳಗಾವಿ ಇಲ್ಲಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಅಧಿಕಾರಿಗಳು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಬಿ.ಟಿ.ಗಂಗಾಯಿ ಆಯ್ಕೆ

ಬೆಳಗಾವಿ : ಬಾರ್ ಅಸೋಸಿಯೇಷನ್ ನೂತನ ಪದಾಧಿಕಾರಿಗಳಿಗೆ ಪ್ರಮಾಣಪತ್ರ ವಿತರಣಾ ಸಮಾರಂಭವು ಅದ್ದೂರಿಯಾಗಿ ನೆರವೇರಿತು. ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಿ.ಜೆ. ಗಂಗಾಯಿ ಅವರು ಸಂಘದ ಉನ್ನತಿಗಾಗಿ ಹೊಸ ಯೋಜನೆಗಳ ಭರವಸೆ ನೀಡಿದ್ದಾರೆ.ಅಧ್ಯಕ್ಷರಾದ ಬಿ.ಜೆ. ಗಂಗಾಯಿ ಮಹಿಳಾ ಅಧ್ಯಕ್ಷೆ ಜಯಶ್ರೀ ಮಂಡೋಳಿ, ಪ್ರಧಾನ ಕಾರ್ಯದರ್ಶಿ ಸಚೇನ್ ಶಿವಣ್ಣವರ, ಜಂಟಿ ಕಾರ್ಯದರ್ಶಿ ಪ್ರಶಾಂತ್ ಪಾಟೀಲ್ ಹಾಗೂ ಖಜಾಂಚಿ ನಿರ್ಮಲಾ ಪಾಟೀಲ್, ಮ್ಯಾನೇಜ್ಮೆಂಟ್ ಕಮಿಟಿ ಸದಸ್ಯರಾದ ಅಭಿಷೇಕ್ ತಾರಿಹಾಳಕರ, ವಸಂತ ಅಕ್ಕೆನ್ನವರ, ಹೊಳಿ ಮಲ್ಲಪ್ಪ ಮಾನಿಂಗಪ್ಪ ಹಾಗೂ ಜಿ.ಎ. ಹಿರೇಮಠ, ಮ್ಯಾನೇಜ್ಮೆಂಟ್ ಕಮಿಟಿಯ ಮಹಿಳಾ ಸದಸ್ಯರಾದ ದೀಪಾ ಮರಡಿ ಹಾಲನ್ನವರ ಜ್ಯೋತಿ ಪಟ್ಟಣಶೆಟ್ಟಿ ಹಾಗೂ ರಾಜೇಶ್ವರಿ ಪಾಟೀಲ್, ರಿಟರ್ನಿಂಗ್ ಆಫೀಸರ್ ಜೆ.ಡಿ. ತಿಗಡಿ ಹಾಗೂ ಆರ್.ಎನ್. ಮಿಸಾಳೆ ಅವರನ್ನು ಸತ್ಕರಿಸಲಾಯಿತು. ಇದೇ ವೇಳೆ ಚುನಾಯಿತ ಸದಸ್ಯರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಈ ವೇಳೆ ಬೆಳಗಾವಿ ಬಾರ್ ಅಸೋಸಿಯೇಷನ್ ನೂತನ ಸದಸ್ಯರು ಸೇರಿದಂತೆ ಇತರರು ಇದ್ದರು.

ಮಾವು ಪ್ರದರ್ಶನ

ಬೆಳಗಾವಿ : ತೋಟಗಾರಿಕೆ ಇಲಾಖೆಯಿಂದ, ರೈತರಿಂದ ನೇರವಾಗಿ ಗ್ರಾಹಕರಿಗೆ ಗುಣಮಟ್ಟದ ಮಾವಿನ ಹಣ್ಣುಗಳನ್ನು ಯೋಗ್ಯ ದರದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಈ ವರ್ಷ ಮಾವು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಮೇ 8 ರಿಂದ 10 ವರೆಗೆ ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆಯವರೆಗೆ ನಗರದ ಹ್ಯೂಮ್ ಪಾರ್ಕ, ಕ್ಲಬ್ ರೋಡಲ್ಲಿ ಹಮ್ಮಿಕೊಳ್ಳಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ಹಣ್ಣುಗಳನ್ನು ಕಟಾವು ಮಾಡಿ ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳನ್ನು ನೇರವಾಗಿ ರೈತರಿಂದ ಗ್ರಾಹಕರಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಮೇಳವನ್ನು ಸಚಿವ ಸತೀಶ ಜಾರಕಿಹೊಳಿ ಅವರು ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿರುವರು. ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ ಅವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು (ಜಿ.ಪಂ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ಇಲ್ಲಿಯ KLEITನ 4ನೇ ಸೆಮ್ ECE ವಿದ್ಯಾರ್ಥಿ ಸುದೀಪ್ ಹಿಪ್ಪರಗಿ (ತಂಡದ ನಾಯಕ), ಸೋಮಧೇಖರ್, ತುಷಾರ್ ಅವರು ಡಾ.ಶರ್ಣಬಸಪ್ಪ ಸಜ್ಜನ್ ಮತ್ತು ಪ್ರೊ. ಅಶೋಕ್ ಎಸ್.ಲ್. ಅವರ ಮಾರ್ಗದರ್ಶನದಲ್ಲಿ ನಡೆದ KSR-SAC ರಾಜ್ಯ ಮಟ್ಟದ ವಿದ್ಯಾರ್ಥಿ ಆವಿಷ್ಕಾರ ಸ್ಪರ್ಧೆಯಲ್ಲಿ ತೃತೀಯ ಬಹುಮಾನ (25,000) ಪಡೆದರು.

ಪ್ರತ್ಯೇಕ ಪಾಲಿಕೆ ಹೋರಾಟ ಸಭೆ ನಾಳೆ

ಧಾರವಾಡ: ಪ್ರತ್ಯೇಕ ಪಾಲಿಕೆ ರಚನೆ ಕುರಿತು ಪಕ್ಷಾತೀತವಾಗಿ ಚರ್ಚಿಸಿ, ಮುಂದಿನ ಹೋರಾಟದ ರೂಪರೇಷ ಸಿದ್ಧಪಡಿಸುವ ಕುರಿತು ಮೇ 6ರಂದು ಬೆಳಗ್ಗೆ 11ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸಭೆ ಕರೆದಿದ್ದಾಗಿ ಸಂಘಟಕ ಗುರುರಾಜ ಹುಣಸಿಮರದ ಹೇಳಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ,



ಧಾರವಾಡ ಪ್ರತ್ಯೇಕ ಪಾಲಿಕೆ ಬೇಡಿಕೆ ಕುರಿತು ಸಾಮಾನ್ಯ ಸಭೆಯಲ್ಲಿ ಕೈಗೊಂಡ ನಿರ್ಣಯ ಮತ್ತು ಹೋರಾಟದ ಮೂಲಕ ರಾಜ್ಯಪಾಲರಿಗೆ ಒತ್ತಡ ಹಾಕುವ ಬಗ್ಗೆ ಕುಲಂಕುಷವಾಗಿ ಚರ್ಚಿಸುವುದಾಗಿ ತಿಳಿಸಿದರು. ಪ್ರತ್ಯೇಕ ಹಾಗೂ ಬೃಹತ್ ಪಾಲಿಕೆ ಕುರಿತು ಸಾರ್ವಜನಿಕರಲ್ಲಿ ಗೊಂದಲವಿದೆ. ಈ ಕಾರಣಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವ ನಿಟ್ಟಿನಲ್ಲಿ ಧಾರವಾಡಿಗರ ಚಿಂತನ-ಮಂಥನ ನಡೆಯಲಿದೆ. ಸಂಘ-ಸಂಸ್ಥೆಗಳು, ವ್ಯಾಪಾರಸ್ಥರು, ಕನ್ನಡಪರ ಸಂಘಟನೆಗಳು ಪಾಲ್ಗೊಳ್ಳುವಂತೆ ಕೋರಿದರು. ಸಭೆಯಲ್ಲಿ ಧಾರವಾಡ ವಕೀಲರ ಸಂಘ, ಅಂಜುಮನ್ ಸಂಸ್ಥೆ, ಎಲ್ಇಎ ಸಂಸ್ಥೆ, ಮರಾಠಾ ವಿದ್ಯಾಪ್ರಸಾರಕ ಮಂಡಳದ ಅಧ್ಯಕ್ಷರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಚಿಂತಕರು ಪಾಲ್ಗೊಳ್ಳಲಿದ್ದಾರೆ ಎಂದು ಗುಣಸಿಮರದ ಮಾಹಿತಿ ನೀಡಿದರು. ಮುಖಂಡ ಸುಧೀರ ಕ್ಷತ್ರೀಯ ಇದ್ದರು.



ಹುಬ್ಬಳ್ಳಿ: ಸುಕೋ ಬ್ಯಾಂಕ್ ಸಂಸ್ಥಾಪನಾ ದಿನವನ್ನು ಹುಬ್ಬಳ್ಳಿ ಶಾಖೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಚಾಲನೆ ನೀಡಿದರು. ಹುಬ್ಬಳ್ಳಿ ಕ್ಲಸ್ಟರ್ ವ್ಯವಸ್ಥಾಪಕ ವಿಮಲನಾಥ ಪಾಯಪ್ಪನವರ್, ಹುಬ್ಬಳ್ಳಿ ಮುಖ್ಯ ಶಾಖೆಯ ವ್ಯವಸ್ಥಾಪಕಿ ಪ್ರತಿಭಾ ಜಕರಡ್ಡಿ, ಕೇಶ್ವಾಪುರ ಶಾಖೆಯ ವ್ಯವಸ್ಥಾಪಕ ಸಿದ್ದಯ್ಯ ಹಾಗೂ ಧಾರವಾಡ ಶಾಖೆಯ ವ್ಯವಸ್ಥಾಪಕ ಮಂಜುನಾಥ ಉಪಸ್ಥಿತರಿದ್ದರು.

ಬೈಕ್ ರ್ಯಾಲಿ | ಸಿಹಿ ಹಂಚಿ ಸಂಭ್ರಮಿಸಿದ ಬಿಜೆಪಿಗರು

ಬಿಜೆಪಿಯಿಂದ ಸಂಭ್ರಮಾಚರಣೆ

ಬೆಳಗಾವಿ: ಪಶ್ಚಿಮ ಬಂಗಾಳ, ಆಸ್ಸಾಂ, ಪುದುಚೇರಿ ಚುನಾವಣೆಯಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಬೆಳಗಾವಿ ಬಿಜೆಪಿಯ ವತಿಯಿಂದ ನಗರದಲ್ಲಿ ಸಂಭ್ರಮದ ವಿಜಯೋತ್ಸವ ಆಚರಿಸಿ ಸಂಭ್ರಮವನ್ನು ವ್ಯಕ್ತಪಡಿಸಿದರು.



ನಗರದಲ್ಲಿರುವ ಬಿಜೆಪಿ ಕಾರ್ಯಾಲಯದ ಎದುರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದ ಬಳಿಕ ಕಾರ್ಯಕರ್ತರು ನಗರದಾದ್ಯಂತ ಬೃಹತ್ ಬೈಕ್ ರ್ಯಾಲಿ ನಡೆಸಿದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಅನೀಲ್ ಬೆಣಕೆ ಮಾತನಾಡಿ, ಬಿಜೆಪಿಯೂ ಪಶ್ಚಿಮ ಬಂಗಾಳದಲ್ಲಿ ಐತಿಹಾಸಿಕ ಗೆಲುವು ಸಾಧಿಸಿದೆ. ಬಿಜೆಪಿಗೆ ಜನಾದೇಶ ನೀಡಿರುವ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಬಿಜೆಪಿ ನಗರಾಧ್ಯಕ್ಷೆ ಗೀತಾ ಸುತಾರ್ ಮಾತನಾಡಿ, ಪಶ್ಚಿಮ ಬಂಗಾಳದ ಐತಿಹಾಸಿಕ ವಿಜಯಕ್ಕೆ ಇಡೀ ಬಿಜೆಪಿ ಕಾರ್ಯಕರ್ತರಿಗೆ ಸಂತೋಷವಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಪಂಚರಾಜ್ಯ ಚುನಾವಣೆಯಲ್ಲಿ ಮಾಜಿ ಪಿಎಂ ಅಟಲ್ ಬಿಹಾರಿ ವಾಜಪೇಯಿ ಅವರು ಕಂಡ ಕನಸು ನನಸಾಗುತ್ತಿದೆ ಎಂದರು.

ಡಾ. ರವಿ ಪಾಟೀಲ್ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪಾಂಡಿಚೇರಿಯಲ್ಲಿ ಬಿಜೆಪಿ ಗೆಲುವನ್ನು ಸಾಧಿಸಿದ್ದು, ಸಂತಸ ತಂದಿದೆ. ಪಶ್ಚಿಮ ಬಂಗಾಳದಲ್ಲಿನ ಅತ್ಯಾಚಾರವನ್ನು ನಿಲ್ಲಿಸಲು ಪಿಎಂ ಮೋದಿ ಮತ್ತು ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿ ಚುಕ್ಕಾಣಿಯನ್ನು ಹಿಡಿದಿದೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು.

ಬಳಿಕ ಮುರುಘೇಂದ್ರಗೌಡ ಪಾಟೀಲ್ ಮಾತನಾಡಿ, ಪಂಚ ರಾಜ್ಯ ಚುನಾವಣೆಯಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಗೆಲುವನ್ನು ಸಾಧಿಸಿದ್ದು, ಮಾಜಿ ಪಿಎಂ ಅಟಲ್ ಬಿಹಾರಿ ವಾಜಪೇಯಿ ಅವರು ನೀಡಿದ ಸಂದೇಶ ಸತ್ಯವಾಗುತ್ತಿದೆ ಎಂದರು.

ಈ ವೇಳೆ ಚುನಾಯಿತ ಜನಪ್ರತಿನಿಧಿಗಳು, ಪದಾಧಿಕಾರಿಗಳು, ಬಿಜೆಪಿ ಮುಖಂಡರುಗಳು, ಕಾರ್ಯಕರ್ತರು ಸೇರಿದಂತೆ ನೂರಾರು ಜನ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಚಿಕ್ಕೋಡಿ: ಪಶ್ಚಿಮ ಬಂಗಾಳ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದರಿಂದ ಪಟ್ಟಣದಲ್ಲಿ ಚಿಕ್ಕೋಡಿ ಜಿಲ್ಲಾ ಬಿಜೆಪಿ ಘಟಕದಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸುವ ಮೂಲಕ ವಿಜಯೋತ್ಸವ ಆಚರಿಸಲಾಯಿತು. ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ಪ್ರದಾನ ಕಾರ್ಯದರ್ಶಿ ಅಮೃತ ಕುಲಕರ್ಣಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ ಭಾತೆ, ಸಂಜಯ ಪಾಟೀಲ, ವಿಶ್ವನಾಥ ಕಾಮಗೌಡ, ಆಶಾ ಪಾಟೀಲ, ಸುವರ್ಣ ಹಂಪನ್ನವರ, ವಿಜಯ ಕೋಠಿವಾಲೆ, ಸಿದ್ದು ನರುಟೆ, ಶಕುಂತಲಾ ಡೋಣವಾಡೆ, ಶಾಂಭವಿ ಅಶ್ವತ್ಥಪೂರ ಇದ್ದರು.



ಮಕ್ಕಳಿಗೆ ಕಾನೂನು ತಿಳಿವಳಿಕೆ ಅವಶ್ಯ

ಹುಕ್ಕೇರಿ: ಶಾಲಾ ಜೀವನದಲ್ಲಿ ಮಕ್ಕಳಿಗೆ ಕಾನೂನಿನ ತಿಳಿವಳಿಕೆ ಅವಶ್ಯ. ಪ್ರಮುಖವಾಗಿ ಪೋಕ್ಸೊ, ಅಪ್ರಾಪ್ತರಿಂದ ವಾಹನ ಚಲಾವಣೆ ಸೇರಿದಂತೆ ಹತ್ತು ಹಲವು ವಿಷಯಗಳ ಕುರಿತು ವಿದ್ಯಾರ್ಥಿಗಳು ಅರಿತುಕೊಂಡರೆ ಅಪರಾಧ ಪ್ರಮಾಣ ಕಡಿಮೆಯಾಗುತ್ತದೆ ಎಂದು ಸಿವ್ಹಿಲ್ ನ್ಯಾಯಾಧೀಶ ಆದಿತ್ಯ ಆರ್.ಕಲಾಲ ಹೇಳಿದರು.

ಸೋಮವಾರ ಪಟ್ಟಣದ ಮಹಾವೀರ ಶಿಕ್ಷಣ ಸಂಸ್ಥೆಯಲ್ಲಿ ತಾಲೂಕಾ ಕಾನೂನು ಸೇವಾ ಸಮಿತಿ,ಹುಕ್ಕೇರಿ ವಕೀಲರ ಸಂಘ ಹಾಗೂ ತಾಲೂಕಾಡಳಿತದ ಆಶ್ರಯದಲ್ಲಿ ಹಮ್ಮಿಕೊಂಡ ಕಾನೂನು ಅರಿವುನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಕಾನೂನು ಅರಿವು ನೀಡುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನುಆಯೋಜಿಸಲಾಗುತ್ತದೆ ಎಂದರು.

ಲಾವಣ್ಯ ಸಂಸುದ್ದಿ, ಎಸ್.ಬಿ.ದೊಡ್ಡಮನಿ, ಎನ್.ಬಿ.ಪಾಟೀಲ, ಮತ್ತು ಸಹಾಯಕ ಸರಕಾರಿ ಅಭಿಯೋಜಕ ಶೇಖರ ಬಡಗಾಂವಿ, ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ. ಜಿನರಾಳಿ ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸ ನೀಡಿದರು.ವಕೀಲರ ಸಂಘದ ಅಧ್ಯಕ್ಷ ಕಾಡಪ್ಪಾ ಕುರಬೇಟ, ಮಾಜಿ ಅಧ್ಯಕ್ಷ ರಾಜೀವ ಚೌಗಲಾ ಮತ್ತು ಪಿ.ಎಸ್.ಐ ಸತೀಶ ಹಿರೇಕುರಬರ ಮಾತನಾಡಿ ಕಾನೂನಿನ ಮಹಾತಾಯಿ ಸಂವಿಧಾನ ಅದನ್ನು ಪಾಲಿಸಿಕೊಂಡು ಹೋದಲ್ಲಿ ಯಾವ ಅಪರಾಧಗಳು ನಡೆಯುವುದಿಲ್ಲ. ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಇರಬೇಕು. ಆ ನಿಟ್ಟಿನಲ್ಲಿ ಮಕ್ಕಳ ಜತೆಗೆ ಪಾಲಕರು ಕಾನೂನಿನ ಪರಿಧಿಯೊಳಗೆ ಬದುಕಬೇಕು ಎಂದರು.

ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಮತ್ತು ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಉಪಾಧ್ಯಕ್ಷ ಪ್ರಜ್ವಲ ನಿಲಜಗಿ, ವಕೀಲರ ಸಂಘದ ಕಾರ್ಯದರ್ಶಿ ಎಸ್.ಜಿ.ನದಾಫ, ಅಧಿಕಾರಿಗಳಾದ ಆರ್.ಬಿ.ನಾಯ್ಕರ, ಹೊಳೆಪ್ಪಾ ಎಚ್, ಶೈಲಾ ಪಾಟೀಲ ಮತ್ತಿತರರಿದ್ದರು. ದುರದುಂಡಿ ಗುಬ್ಬಿ ಸ್ವಾಗತಿಸಿದರು. ಎಂ.ಬಿ.ಅರಳಿಕಟ್ಟಿ ನಿರೂಪಿಸಿದರು. ವಿಶಾಲ ಮೆಕ್ಕಳಕಿ ವಂದಿಸಿದರು.



ಹಿರೇಮಠ ಪೆನಲ್ ಅಭ್ಯರ್ಥಿಗಳಿಗೆ ಗೆಲುವು

ಅಥಣಿ : ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಅಥಣಿ ತಾಲೂಕು ಘಟಕದ ಕಾರ್ಯಕಾರಣಿ ಸಮಿತಿಯ 23 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ನಿಕಟ ಪೂರ್ವ ಅಧ್ಯಕ್ಷ ಜಿ. ಎಂ. ಹಿರೇಮಠ ಪೆನಲ್ ಅಭ್ಯರ್ಥಿಗಳ ಭರ್ಜರಿ ಗೆಲುವು ಸಾಧಿಸುವ ಮೂಲಕ 5 ನೇ ಬಾರಿಗೆ ಸಂಘದ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದಾರೆ.

ಪಟ್ಟಣದ ಎ.ಕೆ. ಪ್ರೌಢಶಾಲೆಯಲ್ಲಿ ಚುನಾವಣೆಗಳು ಶಾಂತಿಯುತವಾಗಿ ಜರುಗಿದವು. ಅಥಣಿ ತಾಲೂಕಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 1115 ಮತದಾರರಲ್ಲಿ 905 ಜನ ಶಿಕ್ಷಕರು ಮತ ಚಲಾವಣೆ ಮಾಡಿದ್ದು, ಜಿ.ಎಂ ಹಿರೇಮಠ ಅವರ ಪೇನಲ್ ಸದಸ್ಯರು ಗೆಲುವು ಸಾಧಿಸಿದ್ದಾರೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಎಸ್ ಎಚ್ ನಡುಗಡ್ಡೆ ಮತ್ತು ಸಹಾಯಕ ಚುನಾವಣಾ ಅಧಿಕಾರಿ ಎಸ್ ಎಲ್ ಬಾಗಿ ಘೋಷಿಸಿದರು.

ಅಥಣಿ ತಾಲೂಕ ಘಟಕದ ಕಾರ್ಯಕಾರಿಣಿಯ ಸಮಿತಿಯ ಒಟ್ಟು 23 ಸ್ಥಾನಗಳಲ್ಲಿ ಮಹಿಳೆಯರಿಗೆ 7, ಪುರುಷರಿಗೆ 16 ಸ್ಥಾನಗಳ ಎಲ್ಲಾ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ವಿರೋಧಿ ಬಣಕ್ಕೆ ಹೀನಾಯ ಸೋಲು ಉಂಟಾಗಿದ್ದು, ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದ ವಿರೋಧಿ ಬಣದ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಮತದಾನ ಕೇಂದ್ರಕ್ಕೆ ಬಂದು ತಮ್ಮ ಮತದಾನದ ಹಕ್ಕು ಚಲಾಯಿಸಿದೆ ಇರುವುದು ವಿಪರ್ಯಾಸದ ಸಂಗತಿಯಾಗಿದೆ.

ಈ ವೇಳೆ ಜಿ ಎಂ ಹಿರೇಮಠ ಮಾತನಾಡಿದರು.

ಸಂಭ್ರಮಾಚರಣೆ : ಚುನಾವಣೆಯ ಫಲಿತಾಂಶ ಪ್ರಕಟಗೊಂಡ ನಂತರ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಪರಸ್ಪರ ಸಿಹಿ ಹಂಚಿ, ಪಟಾಕಿ ಸಿಡಿಸಿ, ಗುಲಾಲು ಎರಚಿಕೊಂಡು ಗೆಲುವಿನ ನಗೆ ಬೀರಿದರು. ಜಿ ಎಂ ಹಿರೇಮಠ ಪೆನಲ್ ಸದಸ್ಯರು ಸೇರಿದಂತೆ ನೂರಾರು ಶಿಕ್ಷಕರು ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದರು.



ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು: ವಿಜಯೋತ್ಸವ

ಬಾಗಲಕೋಟೆ: ವಿಧಾನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಸಾಧಿಸುತ್ತಿದ್ದಂತೆ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿ ಸಂಭ್ರಮಪಟ್ಟರು.

ತೋಟಗಾರಿಕೆ ವಿವಿಯಲ್ಲಿ ನಡೆದ ಮತದಾನ ಎಣಿಕೆಯಲ್ಲಿ ಮಧ್ಯಾಹ್ನ 12 ಗಂಟೆ ವೇಳೆಗೆ ಪೂರ್ಣ ಪ್ರಮಾಣದ ಫಲಿತಾಂಶ ಬರುತ್ತಿದ್ದಂತೆ ತೋಟಗಾರಿಕೆ ವಿವಿ ಮುಂಭಾಗ ಸೇರಿದ್ದ ಕಾರ್ಯಕರ್ತರು ಒಬ್ಬರಿಗೊಬ್ಬರು ಪರಸ್ಪರ ಗುಲಾಲ ಎರಚುವ ಮೂಲಕ ಸಂಭ್ರಮಪಟ್ಟರು. ಉಮೇಶ ಮೇಟಿಯವರು ಗೆಲುವಿನ ನಂತರ ಪ್ರಮಾಣ ಪತ್ರ ಸ್ವೀಕರಿಸಿ ಕಾರ್ಯಕರ್ತರ ಹತ್ತಿರ ಬರುತ್ತಿದ್ದಂತೆ ಮೇಟಿಯವರ ಪರ ಜೈಘೋಷಣೆಗಳನ್ನು ಹಾಕಿದರು. ಉಮೇಶ ಮೇಟಿಯವರ ಗೆಲುವು ಆಗುತ್ತಿದ್ದಂತೆ ತೋಟಗಾರಿಕೆ ವಿವಿಯಲ್ಲಿ ನಡೆದ ಮತ ಎಣಿಕೆ ಕೇಂದ್ರದತ್ತ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಿಕಾರ್ಜುನ ಚರಂತಿಮಠ,ಹೊಳಬಸು ಶೆಟ್ಟರ, ಲಕ್ಷ್ಮಣ ಮುಚಖಂಡಿ, ಮಹಿಳಾ ಮುಖಂಡರಾದ ವೀಣಾ ಕಾಶಪ್ಪನವರ, ಬಾಯಕ್ಕ ಮೇಟಿ, ಮಹಾದೇವಿ ಮೇಟಿ, ಸೇರಿದಂತೆ ಅನೇಕ ಮುಖಂಡರು ಆಗಮಿಸಿ ಉಮೇಶ ಮೇಟಿವರನ್ನು ಅಭಿನಂದಿಸಿದರು.



ಶ್ರೀಗಳ ಜೀವನ ಅನುಕರಣೀಯ: ವಿಭೂತಿ

ಮುಂಡರಗಿ: ಕರ್ನಾಟಕದ ಮಠಮಾನ್ಯಗಳಲ್ಲಿಯೇ ಆಚಾರ-ವಿಚಾರ ಶುದ್ಧವಾಗಿದ್ದು, ತ್ರಿಕಾಲಪೂಜಾನಿಷ್ಠರಾಗಿ, ಸಾಹಿತಿಗಳಾಗಿ, ಉತ್ತಮ ಆಡಳಿತಗಾರರಾಗಿ, ತಮ್ಮ ಮಠದ ಇತಿಹಾಸವನ್ನು ಅರಿತವರಾಗಿ ಭಕ್ತರ ಮನದಲ್ಲಿ ಉಳಿದುಕೊಂಡವರು ಮುಂಡರಗಿ ಶ್ರೀಮಠದ ದಶಮಪೀಠಾಧಿಪತಿ ನಾಡೋಜ ಡಾ.ಅನ್ನದಾನೀಶ್ವರರು. ಶ್ರೀಗಳ ಜೀವನ ಅನುಕರಣೀಯ ಎಂದು ಹಿರಿಯ ಪತ್ರಕರ್ತ ಅಂದಾನಪ್ಪ ವಿಭೂತಿ ಹೇಳಿದರು.

ಅವರು ಇಲ್ಲಿಯ ಅನ್ನದಾನೀಶ್ವರ ಸಂಸ್ಥಾನಮಠದ ಶಿಲಾ ಮಂಟಪದಲ್ಲಿ ಜರುಗಿದ 893ನೇ ಬಸವ ಜಯಂತಿ, ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ 86ನೇ ಜನ್ಮದಿನೋತ್ಸವದ ಸಂಭ್ರಮಾಚರಣೆ ಹಾಗೂ 1946ನೇ ಶಿವಾನುಭವ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಗುರುವಂದನೆ ಕಾರ್ಯಕ್ರಮದಲ್ಲಿ ಪೂಜ್ಯರ ಜೀವನ ಹಾಗೂ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು. ಮುಂಡರಗಿ ಪೂಜ್ಯರು 170 ಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಶ್ರೀಗಳ ಕೃತಿಗಳ ಮೇಲೆ 4 ಜನರು ಪಿಎಚ್‌ಡಿ ಮತ್ತು 4 ಜನರು ಎಂಪಿಲ್ ಪದವಿ ಮಾಡಿದ್ದಾರೆ ಎಂದರು.



ಸಾನ್ನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲಿಸಲಾಯಿತು. ಸಂಸ್ಥೆಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಮಾತನಾಡಿದರು. ನೇತೃತ್ವವನ್ನು ಹೂವಿನಶಿಗ್ಲಿಯ ಚೆನ್ನವೀರ ಸ್ವಾಮೀಜಿ, ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಡಾ.ಚನ್ನಮಲ್ಲ ಸ್ವಾಮೀಜಿ, ಇಮ್ಮಡಿ ನಿಜಗುಣ ಸ್ವಾಮೀಜಿ, ಅಭಿನವ ಚೆನ್ನಬಸವ ಸ್ವಾಮೀಜಿ, ಡಾ.ಮಹಾದೇವ ಸ್ವಾಮೀಜಿ ಇದ್ದರು.

ಮಾರ್ಗದರ್ಶನ, ಪ್ರೋತ್ಸಾಹದಿಂದ ಸಾಧನೆ ಸಾಧ್ಯ: ಡಿವೈಎಸ್ಪಿ ಪ್ರಶಾಂತ

ಅಥಣಿ : ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ದೊರೆತರೆ ಸಾಧನೆ ಅಸಾಧ್ಯವಲ್ಲ ಎಂಬುದನ್ನು ಕಟಗೇರಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದಿದ ಬಾಲಕಿ ಪ್ರಾರ್ಥನಾ ನಾಗಪ್ಪ ಬಿರಾದಾರ್ ಪಾಟೀಲ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವ ಮೂಲಕ ಅನೇಕ ಗ್ರಾಮೀಣ ಪ್ರತಿಭೆಗಳಿಗೆ ಪ್ರೇರಣೆಯಾಗಿದ್ದಾಳೆ ಎಂದು ಅಥಣಿ ವಲಯದ ಡಿವೈಎಸ್ಪಿ ಪ್ರಶಾಂತ್ ಮುನ್ನೊಳ್ಳಿ ಹೇಳಿದರು.

ಅವರು ಇಲ್ಲಿನ ಎಸ್ ಎಸ್ ಎಮ್ ಎಸ್ ಮಹಾವಿದ್ಯಾಲಯದ ಖೋತ ಸಭಾಂಗಣದಲ್ಲಿ ಚಂಡಕಿ ಜನಕಲ್ಯಾಣ ಶಿಕ್ಷಣ ಸಂಘ ಹಾಗೂ ಮಹೇಶ್ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎಸ್ ಎಸ್ ಎಲ್ ಸಿ ರಾಜ್ಯ ಮಟ್ಟದ ಟಾಪರ್ ಪ್ರಾರ್ಥನಾ ನಾಗಪ್ಪ ಬಿರಾದಾರ ಪಾಟೀಲ ಅಭಿನಂದನಾ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಾಧನೆಗೆ ಬಡತನ, ಅಂಗವಿಕಲತೆ ಅಡ್ಡಿಯಾಗದು, ನಮ್ಮಲ್ಲಿ ಸಾಧಿಸುವ ಛಲ,



ಕಠಿಣ ಪರಿಶ್ರಮ ಮತ್ತು ನಿರಂತರ ಪ್ರಯತ್ನ ಇದ್ದಾಗ ಸಾಧನೆ ಸುಲಭವಾಗುತ್ತದೆ. ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯದ 7 ಜನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದುಕೊಂಡರೆ ಆದರಲ್ಲಿ ಅಥಣಿ ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಿತ ವಿದ್ಯಾರ್ಥಿ ಪ್ರಥಮ ಸ್ಥಾನ ಪಡೆಯುವ ಮೂಲಕ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾಳೆ. ಆ ವಿದ್ಯಾರ್ಥಿನಿಯು ಚಂಡಕಿ ಜನಕಲ್ಯಾಣ ಶಿಕ್ಷಣ ಸಂಘ ಹಾಗೂ ಮಹೇಶ್ ಅಕಾಡೆಮಿಯ ಶಿಕ್ಷಕರ ಹಾಗೂ ತನ್ನ ಶಾಲೆಯ ಶಿಕ್ಷಕರ ಮಾರ್ಗದರ್ಶನ ಪಡೆದು ಈ ಅಮೋಘ ಸಾಧನೆ ಮಾಡಿದ್ದಾಳೆ. ಅವಳ ಸಾಧನೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸ್ಫೂರ್ತಿಯಾಗಲಿ, ಅವಳ ಮುಂದಿನ ಶೈಕ್ಷಣಿಕ ಜೀವನ ಯಶಸ್ವಿಯಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಜಮಖಂಡಿ ಹುನ್ನೂರಿನ ಸರ್ಕಾರಿ ಪ್ರಥಮ ದರ್ಜೆಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ವೈ ವೈ ಕೊಕ್ಕನವರ ಮಾತನಾಡಿ, ಮಕ್ಕಳಿಗೆ ನಾವು ಕೇವಲ ಅಂಕ ಗಳಿಸುವ ಒತ್ತಡದ ಶಿಕ್ಷಣ ಬೇಕಾಗಿಲ್ಲ, ಹಲವು ತಂತ್ರಜ್ಞಾನ ಬೆಳೆದಂತೆ ಶಿಕ್ಷಣ ಈಗ ಸಮೀಪವಾಗಿದೆ, ಆದರ ಮಹತ್ವವು ಕೂಡ ಕಡಿಮೆಯಾಗುತ್ತಿದ್ದು, ಮಕ್ಕಳಿಗೆ ಸಮಾಜದಲ್ಲಿ ಹೇಗೆ ಬದುಕಬೇಕು, ಕಲಿತ ಶಾಲೆಗೆ ಕಲಿಸಿದ ಗುರುಗಳಿಗೆ, ಹೆತ್ತ ತಂದೆ ತಾಯಿಗೆ ಗೌರವ ನೀಡುವುದರ ಜೊತೆಗೆ ಸಮಾಜಕ್ಕೆ ಮತ್ತು ದೇಶಕ್ಕೆ ಒಳ್ಳೆಯ ಕೊಡುಗೆ ನೀಡುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಣ ಇಂದು ಬೇಕಾಗಿದೆ ಎಂದು ಹೇಳಿದರು.

ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಮಟ್ಟದ ಪ್ರಥಮ ಸ್ಥಾನ ಪಡೆದ ಕಟಗೇರಿ ಸರ್ಕಾರಿ ಪ್ರೌಢಶಾಲೆಯ ಬಾಲಕಿ ಪ್ರಾರ್ಥನಾ ನಾ ಬಿರಾದಾರ ಪಾಟೀಲ ಮಾತನಾಡಿದರು.

ತೇರದಾಳ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಶಿವಾನಂದ ಮಗದುಮ್ಮ, ಪ್ರಾಧ್ಯಾಪಕ ಶಂಕರ ಕಮತಗಿ, ಮುಖ್ಯೋಪಾಧ್ಯಾಯ ತುಕಾರಾಮ ಬಾಗೇನ್ನವರ, ಕನ್ನಡಪರ ಹೋರಾಟಗಾರ ಶಬ್ಬೀರ್ ಸಾತಬಚ್ಚೆ, ಕಾನಿಪ ಸಂಘದ ಅಧ್ಯಕ್ಷ ರಾಕೇಶ್ ಮೈಗೂರ, ಶಿಕ್ಷಣ ಪ್ರೇಮಿ ವಿಠ್ಠಲ ಚಂಡಕಿ, ಶಿವಾನಂದ ಪಾಟೀಲ, ನಾಗಪ್ಪ ಬಿರಾದರ ಪಾಟೀಲ, ಅಮಿತ ಪುಕಾಳೆ, ರಮೇಶ್ ಇಂಗಳೆ, ಕೆಂಚಪ್ಪ ಚಂಡಕಿ, ಶಶಿಧರ ಬರಲಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಓದಿನತ್ತ ಆಸಕ್ತಿ ಬೆಳೆಸಿಕೊಳ್ಳಿ: ಪಾಟೀಲ

ಚಿಕ್ಕೋಡಿ: ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಮುಂದೆ ಬರಬೇಕು. ಎಪಿಜೆ ಅಬ್ದುಲ್ ಕಲಾಂ ಅವರಂತ ಸಾಧಕರನ್ನು ಆದರ್ಶವಾಗಿಟ್ಟುಕೊಂಡು ಬೆಳೆಯಬೇಕು. ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಹುದ್ದೆಯನ್ನು ಪಡೆದುಕೊಳ್ಳುವುದೇ ನಿಜವಾದ ಸಾಧನೆ ಎಂದು ಹಿರಿಯ ವಕೀಲ ಎಂ.ಬಿ. ಪಾಟೀಲ ಹೇಳಿದರು.

ತಾಲೂಕಿನ ಖಜಗೌಡನಹಟ್ಟಿ ಗ್ರಾಮದಲ್ಲಿ ಚಿಕ್ಕೋಡಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಎನ್ ಎಸ್ ಎಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ, ನೈತಿಕ ಮೌಲ್ಯ ಇಲ್ಲದ ಶಿಕ್ಷಣ ಎಷ್ಟಿದ್ದರೂ ವ್ಯರ್ಥ, ಹಾಗಾಗಿ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡು ಸಮಾಜಕ್ಕೆ ಆದರ್ಶವಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಿಕ್ಕೋಡಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಂ ಎಸ್ ಮಾಳಗೆ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು, ಸಂಯಮ, ಸಂವೇದನೆಗಳ ಅಗತ್ಯವಿದೆ. ವಿದ್ಯಾರ್ಥಿಗಳು ನಿಶ್ಚಿತವಾದ ಗುರಿಯನ್ನು ಇಟ್ಟುಕೊಳ್ಳಬೇಕು. ದೇಶ ಸೇವೆಯೇ ಈಶ ಸೇವೆ ಎಂದು ತಿಳಿದುಕೊಳ್ಳಬೇಕು. ಇಂತಹ ಶಿಬಿರದಲ್ಲಿ ವಿದ್ಯಾರ್ಥಿಗಳು ತೊಡಗಿಕೊಳ್ಳುವ ಮೂಲಕ ಸಮಾಜದ ಋಣ ತೀರಿಸಬೇಕು ಎಂದು ಹೇಳಿದರು.



ಈ ಸಂದರ್ಭದಲ್ಲಿ ಎನ್ ಎಸ್ ಎಸ್ ಶಿಬಿರದ ಸಂಯೋಜನಾಧಿಕಾರಿ ದೇವೇಂದ್ರ ಮಂಡೇದ, ಯಲ್ಲಪ್ಪ ಖೋತ, ಮಯೂರ ಅಮಾತೆ, ಮಂಜು ದೊಡಬಂಗಿ, ಮಹಾದೇವ ಪಾಟೀಲ, ಎಸ್ಡಿಎಂಸಿ ಅಧ್ಯಕ್ಷ ಭೀಮಪ್ಪ ಜೋಡಕುರಳಿ, ರವಿ ಪೂಜಾರಿ, ಲಕ್ಷ್ಮಣ ಪೂಜಾರಿ, ಅಪ್ಪಾಸಾಹೇಬ ಪಾಟೀಲ, ರೋಹಿಣಿ ಜೆ, ರಾಘವೇಂದ್ರ ಖೋತ, ಕೀರ್ತಿ ಎತ್ತಿನಮಠ, ಜ್ಯೋತಿ ಕೋಳಿ ಇತರರು ಇದ್ದರು.

ಕಿರುಸುದ್ದಿ

ಅವಿರೋಧ ಆಯ್ಕೆ

ಬಾದಾಮಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾ ಘಟಕಕ್ಕೆ ಈ ಕೆಳಗಿನ 17 ಜನ ಕಾರ್ಯಕಾರಿ ಸಮಿತಿಗೆ 2026-31ರ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಸದಸ್ಯರಾಗಿ ಎಚ್.ಎಂ.ಹರದೊಳ್ಳಿ, ವಿ.ಜಿ.ಪರದೇಶಿ, ಎಚ್.ಎಚ್.ಕೋಣಿ, ಉಮೇಶ ಎಲ್.ಜಾಧವ, ಎಂ.ಸಿ.ಜುಮ್ಮನ್ನವರ, ವಿನಾಯಕ ವೈಕುಂಠೆ, ಎಂ.ಎಸ್.ತೋಟಗೇರ, ಚಂದ್ರಶೇಖರ ಅರಸಿಕೇರಿ, ಶಿವಪ್ಪ ಕಳಕಾಪೂರ, ಬಿ.ಎಸ್.ರಂಗನ್ನವರ, ಬಿ.ವೈ.ಗಚ್ಚಿನ್ನವರ, ಮಹಿಳಾ ಸದಸ್ಯೆಯರಾಗಿ ಜೆ.ಎಂ.ಬಾದಾಮಿ, ಅಶ್ವಿನಿ ಅಂಗಡಿ, ಪಿ.ಆರ್.ಚಿಕ್ಕನ್ನವರ, ಭಾರತಿ ವಿ.ಗಣಾಚಾರಿ, ಎಸ್.ಡಿ.ಹೊಸಮನಿ, ಎಂ.ಬಿ.ಹೂಗಾರ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಂಬೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಗಳಲ್ಲಿ ಪತ್ರಿಕೆ ಓದು ಕಡ್ಡಾಯ: ಸ್ವಾಗತ

ಬಾದಾಮಿ: ಶಾಲೆಗಳಲ್ಲಿ ಪತ್ರಿಕೆಗಳ ಪ್ರಮುಖ ಸುದ್ದಿಗಳನ್ನು ಪ್ರತಿನಿತ್ಯ ಓದುವ ಕ್ರಮ ಕಡ್ಡಾಯ ಮಾಡಿರುವ ಸರ್ಕಾರದ ಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ, ಕೆಪಿಸಿಸಿ ರಾಜ್ಯ ವಕ್ತಾರ ಮಹಾಂತೇಶ ಹಟ್ಟಿ ಸ್ವಾಗತಿಸಿದರು. ಈ ಕುರಿತು ಪ್ರಕಟಣೆ ನೀಡಿರುವ ಅವರು ಶಾಲೆಗಳಲ್ಲಿ ಓದುವ ಮತ್ತು ಬೋರ್ಡ್ ಮೇಲೆ ಬರೆಯುವ, ನೋಟೀಸ್ ಬೋರ್ಡ್‌ನಲ್ಲಿ ಹಾಕುವ ಅಭ್ಯಾಸವು ಮಾಸುತ್ತಿದೆ. ಮೊಬೈಲ್ ಯುಗದ ಪ್ರಭಾವದಲ್ಲಿ ಹಿಂದಿನ ಪದ್ಧತಿಗಳು ಮರೆತು ಹೋಗುತ್ತಿರುವ ಈ ಹೊತ್ತಿನಲ್ಲಿ ಸರ್ಕಾರದ ಕ್ರಮ ಅಗತ್ಯವಿತ್ತು. ಪರಿಣಿತರ ಅಭಿಪ್ರಾಯ ಮತ್ತು ಮನವಿಗೆ ರಾಜ್ಯ ಸರ್ಕಾರ ಮನ್ನಣೆ ನೀಡಿ, ಈ ನಿಟ್ಟಿನಲ್ಲಿ ಕೂಡಲೇ ಕ್ರಮ ತೆಗೆದುಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರನ್ನು ಮಹಾಂತೇಶ ಹಟ್ಟಿ ಅಭಿನಂದಿಸಿದ್ದಾರೆ.

ಉಡಿ ತುಂಬುವ ಕಾರ್ಯಕ್ರಮ ಇಂದು

ಲೋಕಾಪುರ: ಸಮೀಪದ ಚಿತ್ರಭಾನುಕೋಟಿ ಗ್ರಾಮದಲ್ಲಿ ದ್ಯಾಮವ್ವದೇವಿ ಮತ್ತು ಕೋಟೆಮ್ಮದೇವಿ ಬಣ್ಣ ಕೊಡಿಸುವುದು ನವಚಂಡಿ ಹೋಮ ಮತ್ತು ಉಡಿ ತುಂಬುವುದು ಕಾರ್ಯಕ್ರಮ ಪ್ರಾರಂಭಗೊಂಡಿತು. ಮೇ 3ರಂದು ಬೆಳಗ್ಗೆ 10 ಗಂಟೆಗೆ ನವಚಂಡಿ ಹೋಮ ಪ್ರಾರಂಭಗೊಂಡಿತು. ರಾತ್ರಿ 10ಕ್ಕೆ ಗಾನಯೋಗಿ ನಾಟ್ಯ ಸಂಘ ಹೆಬ್ಬಾಳ ಇವರಿಂದ ಮೂರು ದಿನದ ಸಂತೆ ಎಂಬ ಸುಂದರ ಸಾಮಾಜಿಕ ನಾಟಕ ಇರುತ್ತದೆ. ಮೇ 5ರಂದು ಬೆಳಗ್ಗೆ 7ರಿಂದ 1 ಗಂಟೆಯವರೆಗೆ ಡೊಳ್ಳು ಹಾಗೂ ವಿವಿಧ ವಾದ್ಯಗಳೊಂದಿಗೆ ಗ್ರಾಮದೇವಿಯ ಭವ್ಯ ಮೆರವಣಿಗೆ ಮಧ್ಯಾಹ್ನ 1 ರಿಂದ ಸಂಜೆ 7 ಗಂಟೆಯವರೆಗೆ ಯುವಕರಿಂದ ಡಿ.ಜೆ ಕಾಯಕ್ರಮ ಇರುತ್ತದೆ. ಸಂಜೆ 7ರಿಂದ 8 ಗಂಟೆಯವರೆಗೆ ಕುದುರೆ ಸೊಗು ಇರುತ್ತದೆ. ರಾತ್ರಿ 8ರಿಂದ 8.30ರ ವರೆಗೆ ಅಮ್ಮನ ಉಡಿ ತುಂಬವ ಕಾರ್ಯಕ್ರಮ ಕೊಟೆಮ್ಮದೇವಿ ನಾಟ್ಯ ಸಂಘದಿಂದ ರಾತ್ರಿ 10 ಗಂಟೆಗೆ ದಿಲ್ಲಿ ಹೊಕ್ಕ ಮುಂಡ ಹುಲಿ ಎಂಬ ಸುಂದರ ಸಾಮಾಜಿಕ ರೌದ್ರಮ್ಯೆಯ ನಾಟಕ ಇರುತ್ತದೆ.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಎನ್‌ಸಿವಿಟಿ ಸಂಯೋಜನೆ ಹೊಂದಿರುವ ಬೀಳಗಿ ಸರ್ಕಾರಿ ತರಬೇತಿ ಸಂಸ್ಥೆಯಲ್ಲಿ ಎರಡು ವರ್ಷಗಳ ವೃತ್ತಿ ತರಬೇತಿಗಳಾದ ಎಲೆಕ್ಟ್ರಿಷಿಯನ್, ಫಿಟ್ಟರ, ಟರ್ನರ್, ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕ್ ಹಾಗೂ ಉದ್ಯೋಗ ಯೋಜನೆಗಳ ವೃತ್ತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಮೇ 8 ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಬೀಳಗಿ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 08425-276458ಗೆ ಸಂಪರ್ಕಿಸಬಹುದಾಗಿದೆ.

ನಿಧನಸುದ್ದಿ

ನೂರಅಹ್ಮದ್ ಹುಬ್ಬಳ್ಳಿ

ಮುಧೋಳ: ನಗರದ ಮುಸ್ಲಿಂ ಸಮಾಜದ ಹಿರಿಯರಾದ ತಂಬಾಕ ಚೌಕ ನಿವಾಸಿ ಹಿರಿಯ ನ್ಯಾಯವಾದಿ ನೂರಅಹ್ಮದ ಬಾಬುಸಾಬ ಹುಬ್ಬಳ್ಳಿ(63) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗ ಇದ್ದಾರೆ. ನಗರದ ಅರ್ಬನ್ ಬ್ಯಾಂಕ್ ಮಾಜಿ ಅಧ್ಯಕ್ಷ ಸೈದು ಹುಬ್ಬಳ್ಳಿ ಮೃತರ ಸಹೋದರರಲ್ಲಿ ಒಬ್ಬರು.



ಸಂತಾಪ : ನ್ಯಾಯವಾದಿ ನೂರ ಅಹ್ಮದ ಹುಬ್ಬಳ್ಳಿ ರವರ ನಿಧನಕ್ಕೆ ಅಬಕಾರಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್ ಬಿ.ತಿಮ್ಮಾಪುರ. ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಮುರಗೇಶ ನಿರಾಣಿ. ನ್ಯಾಯವಾದಿಗಳ ಸಂಘದ ಪದಾಧಿಕಾರಿಗಳು, ಅಂಜುಮನ್ ಸಂಸ್ಥೆಯ ಆಡಳಿತ ಮಂಡಳಿ ಸೇರಿದಂತೆ ನಗರದ ಹಿಂದು ಮುಸ್ಲಿಂ ಬಾಂಧವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಬಾಗಲಕೋಟೆ: ಕೇಂದ್ರ ಸರ್ಕಾರದ ಸಾಮರ್ಥ್ಯ ನಿರ್ಮಾಣ ಆಯೋಗದ ಸದಸ್ಯರಾಗಿದ್ದ ವೈದ್ಯರು, ಲೇಖಕರು, ಸಂಶೋಧಕರು, ಅಭಿವೃದ್ಧಿ ಕಾರ್ಯಕರ್ತ ಡಾ. ಆರ್.ಬಾಲಸುಬ್ರಮಣ್ಯಂ ಕೇಂದ್ರ ಸರ್ಕಾರದ ನೀತಿ ಆಯೋಗದ ಶಾಶ್ವತ ಸದಸ್ಯರಾಗಿ ನೇಮಕವಾಗಿದ ಹಿನ್ನೆಲೆ ಸನ್ಮಾನಿಸಲಾಯಿತು.

ಬಾಲಸುಬ್ರಹ್ಮಣ್ಯಂ ನೇಮಕ: ಚರಂತಿಮಠ ಹರ್ಷ

ಬಾಗಲಕೋಟೆ: ಕೇಂದ್ರ ಸರ್ಕಾರದ ಸಾಮರ್ಥ್ಯ ನಿರ್ಮಾಣ ಆಯೋಗದ ಸದಸ್ಯರಾಗಿದ್ದ ವೈದ್ಯರು, ಲೇಖಕರು, ಸಂಶೋಧಕರು, ಅಭಿವೃದ್ಧಿ ಕಾರ್ಯಕರ್ತ ಡಾ. ಆರ್.ಬಾಲಸುಬ್ರಮಣ್ಯಂ ಕೇಂದ್ರ ಸರ್ಕಾರದ ನೀತಿ ಆಯೋಗದ ಶಾಶ್ವತ ಸದಸ್ಯರಾಗಿ ನೇಮಕವಾಗಿರುವುದಕ್ಕೆ ಬಿವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಹರ್ಷ ವ್ಯಕ್ತಪಡಿಸಿದ್ದಾರೆ. ಡಾ.ಬಾಲಸುಬ್ರಮಣ್ಯಂ ಕರ್ನಾಟಕದವರಾಗಿದ್ದು, ಸ್ವಾಮಿ ವಿವೇಕಾನಂದ ಯೂಥ್ ಮೂವಮೆಂಟ್ ಮತ್ತು ಗ್ರಾಂ ಸಂಸ್ಥೆ ಸ್ಥಾಪಿಸಿ ಅನೇಕ ಅಭಿವೃದ್ಧಿ ಕಾರ್ಯ ಮಾಡಿರುವರು. ಕೇಂದ್ರ ಸರ್ಕಾರದ ಸಾಮರ್ಥ್ಯ ಆಯೋಗದ ಸದಸ್ಯರಾಗಿಯೂ ರಾಷ್ಟ್ರದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂದರು.ಶ್ರೀಯುತರ ಅಪಾರ ಅನುಭವ, ಕಾರ್ಯಕ್ಷಮತೆ, ಬೌದ್ಧಿಕ ಸಾಮರ್ಥ್ಯ ಗುರುತಿಸಿ ಪ್ರಧಾನಿ ನರೇಂದ್ರ ಮೋದಿ ತಾವು ಅಧ್ಯಕ್ಷರಾಗಿರುವ ನೀತಿ ಆಯೋಗದ ಸದಸ್ಯರಾಗಿ ನೇಮಕ ಮಾಡಿರುವರು. ನೀತಿ ಆಯೋಗವು ರಾಷ್ಟ್ರದ ಪ್ರಗತಿ ಕಾರ್ಯಗಳ ದಿಕ್ಸೂಚಿಯಾಗಿದ್ದು ಬಾಲಸುಬ್ರಮಣ್ಯಂ ತಮ್ಮ ಅಮೂಲ್ಯ ಸಲಹೆ ದೇಶದ ಅಭಿವೃದ್ಧಿಗೆ ನೀಡಲಿರುವರು. ಅಪ್ಪಟ ಕನ್ನಡಿಗರೊಬ್ಬರು ಈ ಉನ್ನತ ಸ್ಥಾನ ಅಲಂಕರಿಸಿರುವುದು ಕನ್ನಡಿಗರಿಗೆ ಹೆಮ್ಮೆ ಎಂದರು. ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಡಾ.ಬಾಲಸುಬ್ರಮಣ್ಯಂ 2025ರಲ್ಲಿ ಬಿವಿವಿ ಸಂಘದ ಫಿಜಿಯೋಥೆರಪಿ ಮತ್ತು ವಾಕ್-ಶ್ರವಣ ಕಾಲೇಜುಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿ ಇಲ್ಲಿನ ಶೈಕ್ಷಣಿಕ ಚಟುವಟಿಕೆ ಮೆಚ್ಚಿ ಜ್ಞಾನ ದೀಪ ಬೆಳಗುವ ಬಿವಿವಿ ಸಂಘ ಎಂದು ಶ್ಲಾಘಿಸಿದ್ದನ್ನು ಸ್ಮರಿಸಿಕೊಂಡರು. ಕನ್ನಡಿಗರೆಲ್ಲ ಸಂಭ್ರಮಿಸಬೇಕಾದ ಮಹಾ ಸುದಿನ ಎಂದು ತಿಳಿಸಿದ್ದಾರೆ.



ಕಲಾದಗಿ: ಇತ್ತೀಚೆಗೆ ನಡೆದ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 80ಕ್ಕಿಂತ ಹೆಚ್ಚು ಪ್ರತಿಶತ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಾಯಿಬಾಬಾ ಸೇವಾ ಸಮಿತಿ ವತಿಯಿಂದ ಸನ್ಮಾಯಿಸಲಾಯಿತು. ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು: ವಿಜಯೋತ್ಸವ

ಕಾರ್ಯಕರ್ತರಿಂದ ಸಂಭ್ರಮಾಚರಣೆ



ಬಾಗಲಕೋಟೆ: ವಿಧಾನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಸಾಧಿಸುತ್ತಿದ್ದಂತೆ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿ ಸಂಭ್ರಮಪಟ್ಟರು.

ತೋಟಗಾರಿಕೆ ವಿವಿಯಲ್ಲಿ ನಡೆದ ಮತದಾನ ಎಣಿಕೆಯಲ್ಲಿ ಮಧ್ಯಾಹ್ನ 12 ಗಂಟೆ ವೇಳೆಗೆ ಪೂರ್ಣ ಪ್ರಮಾಣದ ಫಲಿತಾಂಶ ಬರುತ್ತಿದ್ದಂತೆ ತೋಟಗಾರಿಕೆ ವಿವಿ ಮುಂಭಾಗ ಸೇರಿದ್ದ ಕಾರ್ಯಕರ್ತರು ಒಬ್ಬರಿಗೊಬ್ಬರು ಪರಸ್ಪರ ಗುಲಾಲ ಎರಚುವ ಮೂಲಕ ಸಂಭ್ರಮಪಟ್ಟರು. ಉಮೇಶ ಮೇಟಿಯವರು ಗೆಲುವಿನ ನಂತರ ಪ್ರಮಾಣ ಪತ್ರ ಸ್ವೀಕರಿಸಿ ಕಾರ್ಯಕರ್ತರ ಹತ್ತಿರ ಬರುತ್ತಿದ್ದಂತೆ ಮೇಟಿಯವರಪರಜೈಘೋಷಣೆಗಳನ್ನು ಹಾಕಿದರು. ಉಮೇಶ ಮೇಟಿಯವರ ಗೆಲುವು ಆಗುತ್ತಿದ್ದಂತೆ ತೋಟಗಾರಿಕೆ ವಿವಿಯಲ್ಲಿ ನಡೆದ ಮತ ಎಣಿಕೆ ಕೇಂದ್ರದತ್ತ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಿಕಾರ್ಜುನ ಚರಂತಿಮಠ,ಹೊಳಬಸು ಶೆಟ್ಟರ, ಲಕ್ಷ್ಮಣ ಮುಚಖಂಡಿ, ಮಹಿಳಾ ಮುಖಂಡರಾದ ವೀಣಾ ಕಾಶಪ್ಪನವರ, ಬಾಯಕ್ಕ ಮೇಟಿ, ಮಹಾದೇವಿ ಮೇಟಿ, ಸೇರಿದಂತೆ ಅನೇಕ ಮುಖಂಡರು ಆಗಮಿಸಿ ಉಮೇಶ ಮೇಟಿವರನ್ನು ಅಭಿನಂದಿಸಿದರು.

ತಂದೆಯ ಕನಸು ನನಸು ಮಾಡುವೆ: ಮೇಟಿ

ಬಾಗಲಕೋಟೆ: ನನ್ನ ತಂದೆಯಾದ ಹುಲ್ಲಪ್ಪ ಮೇಟಿಯವರ ಕನಸನ್ನು ಕ್ಷೇತ್ರದಲ್ಲಿ ನನಸು ಮಾಡುವೆ, ನಮ್ಮ ತಂದೆಯವರು ಮಾಡಿ ಅರ್ಧಕ್ಕೆ ನಿಂತಿರುವ ಎಲ್ಲ ಕೆಲಸಗಳನ್ನು ಪೂರ್ಣಗೊಳಿಸುವೆ. ಎರಡು ವರ್ಷದಲ್ಲಿ ಮೆಡಿಕಲ್ ಕಾಲೇಜ್ ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡುವೆ ಎಂದು ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯ ವಿಜೇತ ಅಭ್ಯರ್ಥಿ ಉಮೇಶ ಮೇಟಿ ತಿಳಿಸಿದರು.

ಗೆಲುವಿನ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನನ್ನ ಗೆಲುವನ್ನು ಮತಕ್ಷೇತ್ರದ ಕಾರ್ಯಕರ್ತರಿಗೆ, ನಾಯಕರಿಗೆ ಅರ್ಪಿಸುತ್ತೇನೆ. ಮುಖ್ಯಮಂತ್ರಿಯವರ ಆಶೀರ್ವಾದ, ಸಲಹೆ ಸೂಚನೆ ಮೂಲಕ ಹಾಗೂ ಜಿಲ್ಲಾ ಉಸ್ತುವಾರಿ ಆರ್.ಬಿ.ತಿಮ್ಮಾಪೂರ ಅವರ ಮಾರ್ಗದರ್ಶನದಲ್ಲಿ ಹಾಗೂ ಪಕ್ಷದ ನಾಯಕರ ಸಲಹೆ ಮೂಲಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತೇನೆ, ಬಾಗಲಕೋಟೆ ವ್ಯಾಪಾರ ಕೇಂದ್ರ ಬೆಳೆಯಲು ಸಹ ಒತ್ತು ನೀಡುವೆ ಎಂದರು. ಬಾಯಕ್ಕ ಮೇಟಿ ಮಾತನಾಡಿ, ಕಾರ್ಯಕರ್ತರು ಎಂದರೆ ನಮ್ಮ ತಂದೆಯವರಿಗೆ ಪಂಚ ಪ್ರಾಣ. ಹೀಗಾಗಿ ಕಾರ್ಯಕರ್ತರು ನಮ್ಮ ಉಮೇಶ ಮೇಟಿಯವರನ್ನು ಗೆಲ್ಲಿಸಿದ್ದಾರೆ. ಒಗ್ಗಟ್ಟಿನಿಂದ ಚುನಾವಣೆಯನ್ನು ಎದುರಿಸಿದ್ದೇವೆ. ಮನೆಯಲ್ಲಿ ಕೂಡ ಯಾವುದೇ ಸಮಸ್ಯೆ ಇಲ್ಲ. ಮತದಾರರ ಕನಸು ನನಸು ಮಾಡುವ ಶಕ್ತಿ ಉಮೇಶ ಮೇಟಿಗೆ ಇದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದ ಮುಖಂಡ ಹೊಳಬಸು ಶೆಟ್ಟರ ಮಾತನಾಡಿ, ಕ್ಷೇತ್ರದಲ್ಲಿ ನಡೆದ ಚುನಾವಣೆ ಹಣಬಲದಿಂದ ನಡೆದಿಲ್ಲ, ಮೇಟಿಯವರು ಕೆಲಸವನ್ನು ಮೆಚ್ಚಿ ಉಮೇಶಗೆ ಬೆಂಬಲಿಸಿದ್ದಾರೆ. ಎಚ್.ವೈ. ಮೇಟಿಯವರು ಅರ್ಧಕ್ಕೆ ನಿಲ್ಲಿಸಿರುವ ಎಲ್ಲ ಕೆಲಸಗಳನ್ನು ಉಮೇಶ ಪೂರ್ಣಗೊಳಿಸುತ್ತಾರೆ. ಬಾಗಲಕೋಟೆಯಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಶೀಘ್ರ ಅಡಿಗಲ್ಲು ಕೂ ನಡೆಯಲಿದೆ. ಉಮೇಶ ಮೇಟಿಯವರ ಗೆಲುವು ಆಗಿದ್ದು ಮತದಾರರಿಗೆ ಅಭಿನಂದನಾ ಸಮಾರಂಭ ಮೇ.15ರೊಳಗೆ ನಡೆಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಅನೇಕ ನಾಯಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಗೆಲುವು: ಸಂಭ್ರಮಾಚರಣೆ

ಅಮೀನಗಡ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರು ತಮ್ಮ ಪ್ರತಿಸ್ಪರ್ಧಿಯ ವಿರುದ್ಧ 21,866 ಮತಗಳ ಬೃಹತ್ ಅಂತರದಿಂದ ಜಯಭೇರಿ ಬಾರಿಸಿದ್ದಾರೆ. ಈ ಗೆಲುವಿನ ಹಿನ್ನೆಲೆಯಲ್ಲಿ ಅಮೀನಗಡ ಪಟ್ಟಣ, ಹೀರೆಮಾಗಿ, ಮಾದಾಪುರ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಫಲಿತಾಂಶ ಹೊರಬೀಳುತ್ತಿದ್ದಂತೆ ಅಮೀನಗಡ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿ ಸಂಭ್ರಮಾಚರಣೆ ನಡೆಸಿದರು. ಪರಸ್ಪರ ಗುಲಾಲು ಹಚ್ಚಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ನೂರಾರು ಯುವಕರು ತಮ್ಮ ದ್ವಿಚಕ್ರ ವಾಹನಗಳಲ್ಲಿ ಕಾಂಗ್ರೆಸ್ ಬಾವುಟ ಹಿಡಿದು ಪಟ್ಟಣದಾದ್ಯಂತ ಬೃಹತ್ ರ್ಯಾಲಿ ನಡೆಸಿ ಜಯಘೋಷ ಹಾಕಿದರು.

ಮಹಿಳೆಯರ ಭಾಗವಹಿಸುವಿಕೆ: ಗೆಲುವಿನ ಸಂಭ್ರಮದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹಾಡು-ಕುಣಿತದ ಮೂಲಕ ವಿಜಯೋತ್ಸವಕ್ಕೆ ಮೆರುಗು ನೀಡಿದರು.

ನೂತನ ಶಾಸಕ ಉಮೇಶ ಮೇಟಿ ಅವರ ಸಹೋದರಿಗ್ರಾಮಹೀರೆಮಾಗಿಯಲ್ಲಿಯೂ ವಿಜಯೋತ್ಸವದ ಕಳೆಕಟ್ಟಿತ್ತು. ಉಮೇಶ ಮೇಟಿಯವರ ಸಹೋದರಿ ಹಾಗೂ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷೆ ಬಾಯಕ್ಕ ಮೇಟಿ ಅವರ ನೇತೃತ್ವದಲ್ಲಿ ಅದ್ದೂರಿ ಆಚರಣೆ ನಡೆಯಿತು. ಗ್ರಾಮದ ಪ್ರಮುಖ ವೃತ್ತಗಳಲ್ಲಿ ಪಟಾಕಿ ಸಿಡಿಸಿ, ಮತದಾರರಿಗೆ ಕೃತಜ್ಞತೆ ಸಲ್ಲಿಸಲಾಯಿತು.ಈ ಗೆಲುವು ಕಾರ್ಯಕರ್ತರ ಶ್ರಮ ಮತ್ತು ಕ್ಷೇತ್ರದ ಜನರ ನಂಬಿಕೆಗೆ ಸಂದ ಜಯವಾಗಿದೆ. ಅಭಿವೃದ್ಧಿ ಕೆಲಸಗಳೇ ನಮ್ಮ ಮುಂದಿನ ಗುರಿ ಎಂದು ಬಾಯಕ್ಕ ಮೇಟಿ ಈ ಸಂದರ್ಭದಲ್ಲಿ ಹರ್ಷ ವ್ಯಕ್ತಪಡಿಸಿದರು.

ಕ್ಷೇತ್ರದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರ ವಿಜಯೋತ್ಸವ ಮುಂದುವರಿದಿದ್ದು, ಪೊಲೀಸ್ ಇಲಾಖೆಯು ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಕೈಗೊಂಡಿದೆ.




ವೇತನ ಬಿಡುಗಡೆಗೆ ಭರವಸೆ: ಎಸಿ

ತೇರದಾಳ: ಕಳೆದ 9 ತಿಂಗಳುಗಳಿಂದ ವೇತನವಿಲ್ಲದೆ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದ ಪುರಸಭೆಯ ನೀರು ಸರಬರಾಜು ವಿಭಾಗದ ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 19 ಸಿಬ್ಬಂದಿಗೆ ತೇರದಾಳ ಪುರಸಭೆಯ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಸುಮಾರು ನಾಲ್ಕು ತಿಂಗಳುಗಳ ವೇತನ ಬಿಡುಗಡೆ ಮಾಡಲು ಹಾಗೂ ಮೇ 15ರಂದು ಎರಡು ತಿಂಗಳು ನಂತರ ಮೇ 31ರಂದು ಉಳಿದ ಎರಡು ತಿಂಗಳ ಹೀಗೆ ಒಟ್ಟು ಅವರಿಗೆ ಕೊಡಬೇಕಾಗಿದ್ದ ಎಂಟು ತಿಂಗಳ ವೇತನ ನೀಡುವುದಾಗಿ ಭರವಸೆ ನೀಡಿದರು.

ಪಟ್ಟಣದ ಪುರಸಭೆಯ ನೀರು ಸರಬರಾಜು ವಿಭಾಗದ ಕಾರ್ಮಿಕರು ಹಲವಾರು ತಿಂಗಳುಗಳಿಂದ ವೇತನ ನೀಡದ ಕಾರಣ ಕೆಲಸ ಸ್ಥಗಿತಗೊಳಿಸಿ ಹೋರಾಟ ಮಾಡುವ ಚಿಂತನೆಯಲ್ಲಿದ್ದರು. ಈ ಸುದ್ದಿ ತಿಳಿದ ಕೂಡಲೇ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕಾಗಿ ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬಿಡಿಕರ ತೇರದಾಳ ಪುರಸಭೆಗೆ ಬಂದು ಎಲ್ಲಾ ಅಧಿಕಾರಿಗಳ ಸಭೆ ಕರೆದು ಚರ್ಚಿಸಿದರು. ನೀರು ಸರಬರಾಜು ಕಾರ್ಮಿಕರನ್ನು ಕರೆದು ಖುದ್ದಾಗಿ ಅವರ ಸಮಸ್ಯೆ ಆಲಿಸಿದ ಅವರು ನಿಮ್ಮ ನೋವು ನನಗೆ ಅರ್ಥವಾಗುತ್ತದೆ ಅದಕ್ಕಾಗಿಯೇ ಬಂದಿದ್ದೇನೆ. ಪ್ರಸ್ತುತ ಪುರಸಭೆಯ ಆರ್ಥಿಕ ಸ್ಥಿತಿ ಸರಿಯಾಗಿಲ್ಲ, ಆದರೂ ಕೂಡಾ ನಾನು ಇಂದೇ ನಿಮಗೆ ನಾಲ್ಕು ತಿಂಗಳ ಬಿಲ್ ಪಾವತಿಸಲು ಕ್ರಮಕೈಕೊಳ್ಳುವೆ ನಂತರ ಉಳಿದ ನಾಲ್ಕುತಿಂಗಳ ವೇತನದಲ್ಲಿ ಎರಡು ತಿಂಗಳ ಹೀಗೆ ವೇತನ ಪಾವತಿಸಲಾಗುವುದು ಎಂದು ಭರವಸೆ ನೀಡಿದರು. ಅವರ ಮಾತಿಗೆ ಗೌರವ ನೀಡಿ ಕಾರ್ಮಿಕರು ಮರಳಿ ಕೆಲಸ ನಿರ್ವಹಿಸುವುದಾಗಿ ಒಪ್ಪಿಕೊಂಡರು. ಪಟ್ಟಣದ ಅಭಿವೃದ್ಧಿಯಲ್ಲಿ ಸಾರ್ವಜನಿಕರ ಪಾತ್ರ ಪ್ರಮುಖವಾಗಿದೆ. ಕಾರಣ ತಾವು ಕೂಡಾ ಸರಿಯಾದ ಸಮಯದಲ್ಲಿ ಮನೆ ಹಾಗೂ ನಳದ ಬಾಕಿಯನ್ನು ಕಟ್ಟಿ ಪುರಸಭೆಯ ಅಭಿವೃದ್ಧಿಗೆ ಸಹಕರಿಸಬೇಕು. ಇಲ್ಲಿ ದುಡಿಯುವ ಹಲವಾರು ಕಾರ್ಮಿಕರು ನಿಮ್ಮ ಮೇಲೆಯೇ ಅವಲಂಬಣೆಯಾಗಿದ್ದಾರೆ. ನೀವು ಸರಿಯಾಗಿ ಪಾವತಿ ಮಾಡಿದರೆ ಮಾತ್ರ ಅವರಿಗೆ ವೇತನ ಮಾಡಲು ಸಾಧ್ಯವಾಗುವುದು. ನಿಮ್ಮ ಗ್ರಾಮದ ಅಭಿವೃದ್ಧಿ ರೂವಾರಿಗಳು ನೀವೇ ಆಗಿದ್ದೀರಿ. ನಿಮ್ಮ ಸಹಕಾರವೇ ನಮ್ಮ ಬಲವಾಗಿದೆ. ಇದು ನಿಮ್ಮ ಪುರಸಭೆ ಇದಕ್ಕೆ ನೀವೇ ಶಕ್ತಿತುಂಬಬೇಕೆಂದರು.

ಪುರಸಭೆ ಮುಖ್ಯಾಧಿಕಾರಿ ಎಫ್.ಬಿ.ಗಿಡ್ಡಿ, ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ, ಅಭಿಯಂತಿರೆ ಭಾಗ್ಯಶ್ರೀ, ಐ.ಬಿ.ಝಾರೆ, ಸುರೇಶ ಹರಿಜನ ಸೇರಿದಂತೆ ಎಲ್ಲಾ ಸಿಬ್ಬಂದಿ ಇದ್ದರು.



ಉಪಚುನಾವಣೆ: ಐತಿಹಾಸಿಕ ಗೆಲುವಿನ ರೂವಾರಿ ಸಚಿವ ತಿಮ್ಮಾಪುರ

ಮುಧೋಳ: ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ಜಯ ಸಾಧಿಸಿದ ಅಭೂತಪೂರ್ವ ಹಾಗೂ ಐತಿಹಾಸಿಕ ಗೆಲುವಿನಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ಪಾತ್ರ ಅತ್ಯಂತನಿರ್ಣಾಯಕವಾಗಿತ್ತು ಎಂದು ವಿಶ್ಲೇಷಿಸಲಾಗುತ್ತಿದೆ.



ಚುನಾವಣೆ ಘೋಷಣೆಯಾದ ದಿನದಿಂದ ಹಿಡಿದು ಮತದಾನ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೂ ಸಚಿವರು ಕ್ಷೇತ್ರ ಬಿಟ್ಟು ಕದಲಲಿಲ್ಲ, ಕ್ಷೇತ್ರದಲ್ಲಿಯೇ ಮೊಕ್ಕಾಂ ಹೂಡಿ, ಕಾರ್ಯತಂತ್ರ ರೂಪಿಸುವ ಮೂಲಕ ಮತದಾರರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿ ಯಶಸ್ವಿಯಾಗಿದ್ದಾರೆ.

ಸಚಿವರಿಗೆ ಸಾಥ್ ನೀಡಲು ಮುಧೋಳ ತಾಲೂಕಿನಿಂದ ಆಗಮಿಸಿದ್ದ ಅವರ ಅಪಾರ ಅಭಿಮಾನಿ ಬಳಗ, ಹಗಲಿರುಳು ಎನ್ನದೆ ಶ್ರಮಿಸಿತು. ತಮ್ಮದೇ ಸ್ವಂತ ಚುನಾವಣೆ ಎಂಬಂತೆ ಭಾವಿಸಿ ಕೆಲಸ ಮಾಡಿದ ಕಾರ್ಯಕರ್ತರು, ಸಚಿವರ ಪ್ರತಿಯೊಂದು ಸೂಚನೆಗಳನ್ನು ಚಾಚೂತಪ್ಪದೆ ಪಾಲಿಸಿದರು. ಬಾಗಲಕೋಟೆ ಕ್ಷೇತ್ರದ ಪ್ರತಿಯೊಂದು ಮನೆ-ಮನಗಳನ್ನು ತಲುಪಿ ಪ್ರಚಾರ ನಡೆಸುವ ಮೂಲಕ ಈ ಬೃಹತ್ ಗೆಲುವಿಗೆ ಭದ್ರ ಬುನಾದಿ ಹಾಕಿದರು.

ಸಚಿವ ತಿಮ್ಮಾಪುರ ಅವರು ಮೇಟಿ ಅವರ ಕುಟುಂಬದ ಬಗ್ಗೆ ಅಪಾರ ಗೌರವ ಹಾಗೂ ವಿಶೇಷ ಕಾಳಜಿ ಹೊಂದಿದ್ದಾರೆ. ಚುನಾವಣಾ ಬಿರುಸಿನ ಪ್ರಚಾರದ ನಡುವೆ ತಮ್ಮ ಆರೋಗ್ಯ ಕೊಂಚ ಏರುಪೇರಾದರೂ ಅದನ್ನು ಲೆಕ್ಕಿಸದೆ, ಛಲ ಬಿಡದೆ ಪ್ರಚಾರ ಕಣದಲ್ಲಿ ಸಕ್ರಿಯರಾಗಿದ್ದರು. ಅವರ ಈ ರಾಜಕೀಯ ಬದ್ಧತೆ ಮತ್ತು ಹಠವೇ ಕ್ಷೇತ್ರದ ಫಲಿತಾಂಶದ ಮೇಲೆ ಮಹತ್ವದ ಪ್ರಭಾವ ಬೀರಿತು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಮತ ಎಣಿಕೆ ಮುಗಿದು ಫಲಿತಾಂಶ ಅಧಿಕೃತವಾಗುತ್ತಿದ್ದಂತೆ, ಗೆಲುವಿನ ರೂವಾರಿ ಸಚಿವ ಆರ್.ಬಿ. ತಿಮ್ಮಾಪೂರ ಅವರು ತಾವೇ ಖುದ್ದಾಗಿ ಮುಂದೆ ನಿಂತು ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಬೆರೆತು ವಿಜಯೋತ್ಸವವನ್ನು ಸಂಭ್ರಮಿಸಿದರು. ಅವರ ಈ ಕಾರ್ಯವೈಖರಿ ಕ್ಷೇತ್ರದಲ್ಲಿ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ.

ಸರ್ಕಾರದ ಗ್ಯಾರಂಟಿಗೆ ಜನ ಬೆಂಬಲ: ಚರಂತಿಮಠ

ಬಾಗಲಕೋಟೆ: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳನ್ನು ಮೆಚ್ಚಿ ಬಾಗಲಕೋಟೆ ಮತಕ್ಷೇತ್ರದ ಜನರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿಯವರನ್ನು ಗೆಲ್ಲಿಸಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ತಿಳಿಸಿದ್ದಾರೆ. ವಿಧಾನಸಭಾ ಉಪಚುನಾವಣೆಯಲ್ಲಿ ವಿಜೇತರಾದ ಉಮೇಶ ಮೇಟಿಯವರ ಪರ ಮತದಾನ ಮಾಡಿರುವ ಮತದಾರರಿಗೆ ಅಭಿನಂದನೆ. ಸರ್ಕಾರದ ಗ್ಯಾರಂಟಿ ಯೋಜನೆಗೆ ಮತದಾರರ ಬೆಂಬಲ ವ್ಯಕ್ತವಾಯಿತು. ಕಳೆದ 2023ರ ಚುನಾವಣೆಯಲ್ಲಿ ನಾನು ಪಕ್ಷೇತರರಾಗಿ ಸ್ಪರ್ಧಿಸಿದಾಗ 10000 ಮತಗಳು ತೆಗೆದುಕೊಂಡಿದೆ ಆ ಮತದಾರರು ಕೂಡ ನಮ್ಮ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಿದ್ದು ಇನ್ನೂ ಸಾಕಷ್ಟು ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದ ಕಾಂಗ್ರೆಸ್ ಗೆಲುವು ಆಗಿದೆ ಎಂದು ಹೇಳಿದ್ದಾರೆ.



ಐತಿಹಾಸಿಕ ಗೆಲುವು: ರಕ್ಷಿತಾ ಈಟಿ

ಬಾಗಲಕೋಟೆ: ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿರುವುದು ಅಭೂತಪೂರ್ವ ಗೆಲುವು ಆಗಿದ್ದು ಮತದಾರರ ಐತಿಹಾಸಿಕ ತೀರ್ಪು ಇದಾಗಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿಗೆ ಮತದಾರ ಪ್ರಭು ಕೈ ಹಿಡಿದಿದ್ದಾರೆ ಎಂದು ಕೆಪಿಸಿಸಿ ಮಹಿಳಾ ಘಟಕದ ಸದಸ್ಯ ರಕ್ಷಿತಾ ಭರತಕುಮಾರ ಈಟಿ ತಿಳಿಸಿದ್ದಾರೆ. ಚುನಾವಣೆ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಹಾಗೂ ಆರ್.ಬಿ.ತಿಮ್ಮಾಪುರ ತಂಡದ ಚುನಾವಣೆ ತಂತ್ರಗಾರಿಕೆ ಹೊಸ ಪರ್ವ ಸೃಷ್ಟಿಸಿತು. ಪಕ್ಷದ ಮುಖಂಡರು, ಕಾರ್ಯಕರ್ತರು, ಸಚಿವರ ಶ್ರಮ ಮರೆಯಲಾಗದು. ಮಹಿಳಾ ಮತದಾರರು ತಮ್ಮ ಶಕ್ತಿ ವ್ಯಕ್ತಪಡಿಸಿದುವುದು ಸಂತೋಷದಾಯಕ ಸಂಗತಿ. ದಿ.ಎಚ್.ವೈ.ಮೇಟಿ ಅವರ ನೆನಪು ಸದಾ ಸ್ಮರಣೀಯ. ಉಪಚುನಾವಣೆ ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ತುಂಬಿದೆ. ಸುಳ್ಳಿನ ಫ್ಯಾಕ್ಟರಿ ಮಾಡಿಕೊಂಡಿರುವ ಬಿಜೆಪಿ ಮತದಾರ ಪ್ರಭುಗಳು ತಕ್ಕ ಉತ್ತರ ನೀಡಿದ್ದಾರೆ ಎಂದು ತಿಳಿಸಿದ್ದಾರೆ.



ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ: ಬಹುಮಾನ



ಕಲಾದಗಿ: ಖಜ್ಜಿಡೋಣಿ ಗ್ರಾಮದಲ್ಲಿನ ಮಹಾಸಾಧ್ವಿ ಹೇಮರಡ್ಡಿ ಮಲ್ಲಮಾಂಬೆಯ ಜಾತ್ರಾಮಹೋತ್ಸವದ ಅಂಗವಾಗಿ ಹೇಮ ವೇಮ ಯುವಕ ಮಂಡಳಿಯ ಸಂಯುಕ್ತಾಶ್ರಯದಲ್ಲಿ 55 ಎಚ್.ಪಿ ಟ್ಯಾಕ್ಟರ ಜಗ್ಗುವ ಸ್ಪರ್ಧೆ ಜರುಗಿತು.ಸ್ಪರ್ಧೆಯನ್ನು ಬಾಗಲಕೋಟೆ ಬಿಜೆಪಿ ಯುವ ಮುಖಂಡ ಎಚ್.ಪಿ.ಪೂಜಾರ ರಿಬ್ಬನ್ ಕಟ್ ಮಾಡುವುದರ ಮೂಲಕ ಉದ್ಘಾಟಿಸಿದರು. ಪ್ರಥಮ ಬಹುಮಾನವಾಗಿ ಹೋಂಡಾ ಸೈಕಲ್ ಮೋಟಾರನ್ನು ದೊಡ್ಡಪ್ಪ ಗೌಡರ ಪಡೆದುಕೊಂಡಿತು, ದ್ವಿತೀಯ ಬಹುಮಾನವಾಗಿ ಸ್ಕೂಟಿ ದಾರವಾಡ ಕುಬೋಟಾ ಪಡೆದುಕೊಂಡಿತು. ತೃತೀಯ ಬಹುಮಾನ 20,000 ನಗದು ಹಿಪ್ಪರಗಿ ಹುಲಿ, ಚತುರ್ಥ ಬಹುಮಾನ 10,000 ನಗದು ಕೊಣ್ಣೂರ ಕುಬೋಟಾ, ಪಂಚಮ ಬಹುಮಾನ 5,000 ರೂ ನಗದು ಗೌಡರ ಗೂಳಿ ಪಡೆದುಕೊಂಡಿತು. ತಿಮ್ಮಣ್ಣ ಬಟಕುರ್ಕಿ, ಶ್ರೀಕಾಂತ ಪೂತರೆಡ್ಡಿ, ಸುಭಾಸ್ ಬಟಕುರ್ಕಿ, ಸಿದ್ದು ತಿರಕನ್ನವರ್, ಸಿದ್ದು ಹುಣಸಿಕಟ್ಟಿ, ಬಸವರಾಜ ಮಾಚಕನೂರು, ಬೈಲರಡ್ಡಿ ವಾಸನದ, ರಂಗಪ್ಪ ಆನಂದಿ, ಪವನ ಹರನಟ್ಟಿ, ಪ್ರವೀಣ ಮಾರಂಗಪ್ಪನವರ, ರಮೇಶ ಮಂಟೂರ, ರಾಜು ತಿರಕನ್ನವರ್, ಸದಾಶಿವ ಮಾರಂಗಪ್ಪನವರ, ಪ್ರಫುಲ್ ಸಂಶಿ, ಮಂಜು ವಾಸನದ, ಗಿರೀಶ ರೂಗಿ ಇನ್ನಿತರರು ಇದ್ದರು.

ಮೇ 24ರಂದು ವಿದ್ಯಾರ್ಥಿಗಳಿಗೆ ಸನ್ಮಾನ

ವಿಜಯಪುರ: ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಸಾಧನೆ ತೋರಿದ ಐದನೂರು ವಿದ್ಯಾರ್ಥಿಗಳನ್ನು ಸನ್ಮಾನಿಸುವ ಅಭೂತಪೂರ್ವ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ ವಿಜಯಪುರದ ಕಿತ್ತೂರ ರಾಣಿ ಚನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಮೇ 24ರಂದು ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ಮುಖಂಡ ಡಾ.ಸುರೇಶ ಬಿರಾದಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾಮಟ್ಟದಲ್ಲಿ ಈ ರೀತಿ ಸಮಾಜದ ವಿದ್ಯಾರ್ಥಿಗಳಿಗೆ ನೂರಾರು ಸಂಖ್ಯೆಯಲ್ಲೊ ಒಂದೇ ವೇದಿಕೆಯಲ್ಲಿ ಸನ್ಮಾನಿಸುವ ಕಾರ್ಯಕ್ರಮ ಇದಾಗಲಿದೆ ಎಂದರು. ಪಂಚಮಸಾಲಿ ಸಮಾಜ ಕೃಷಿ ಆದಾರಿತ ಸಮಾಜ, ನಮ್ಮ ಸಮಾಜದಲ್ಲಿ ಬಹಳಷ್ಟು ಬಡವರೇ ಇದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ತೋರಲು ಅನುಕೂಲವಾಗಲು ಹಾಗೂ ಉಳಿದ ವಿದ್ಯಾರ್ಥಿಗಳಿಗೂ ಸ್ಫೂರ್ತಿ ತುಂಬುವ ನಿಟ್ಟಿನಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವ ಸಮಿತಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ, ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಮೂಲಕ ಸಮಾಜದ ವಿದ್ಯಾರ್ಥಿಗಳು ಇನ್ನಷ್ಟು ಸಾಧನೆ ತೋರಲು ಸಹಾಯಕವಾಗಲಿದೆ, ಈ ತೆರನಾಗಿ ಅನೇಕ ಸಮಾಜ ಮುಖಿ ಕಾರ್ಯಚಟುವಟಿಕೆಗಳನ್ನು ಸಮಿತಿ ವತಿಯಿಂದ ಸಂಘಟಿಸಲಾಗುವುದು ಎಂದರು. ಪಂಚಮಸಾಲಿ ಸಮಾಜದ ಮುಖಂಡರಾದ ಹಣಮಂತ ಸಾರವಾಡ, ಬಿ.ಎಲ್.ಬಿರಾದಾರ, ಅಶೋಕ ಬಿರಾದಾರ, ಬಸವರಾಜ ಕಳಸಗೊಂಡ, ಮುತ್ತು ಜಂಗಮಶೆಟ್ಟಿ ಮೊದಲಾದವರು ಪಾಲ್ಗೊಂಡಿದ್ದರು.



ತಂಪು ಪಾನೀಯಗಳಿಗೆ ಹೆಚ್ಚಿದ ಬೇಡಿಕೆ

ವಿನೋದ ಬಾರಿಗಿಡದ



ಇಳಕಲ್: ದಿನದಿಂದ ದಿನಕ್ಕೆ ಏರುತ್ತಲಿರುವ ತಾಪಮಾನವು ದಾಖಲೆ ಮಟ್ಟ ತಲುಪುತ್ತಿದ್ದು, ನಗರದಜನತೆಬಿಸಿಲಿನಬೇಗೆಯಿಂದ ಬಸವಳಿದು ಹೋಗಿದ್ದಾರೆ. ಹೆಚ್ಚಿದ ತಾಪಮಾನಕ್ಕೆ ಸಾರ್ವಜನಿಕರು ತಂಪು ಪಾನೀಯಗಳಿಗೆ ಮರೆ ಹೋಗುತ್ತಿದ್ದಾರೆ. ಈ ಪಾನೀಯಗಳಿಗೆಬೇಡಿಕೆಹೆಚ್ಚಾಗಿದ್ದು ನಾವು ಕಾಣಬಹುದು.

ಬೆಳಗ್ಗೆ 10 ಗಂಟೆಯಾಗುತ್ತಿದ್ದಂತೆ ಆರಂಭವಾಗುವ ಬಿಸಿಲಿನ ತಾಪ, ಮಧ್ಯಾಹ್ನದ ವೇಳೆಗೆ 38ರಿಂದ 40 ಡಿಗ್ರಿ ಸೆ.ಯಾಗಿ ರಸ್ತೆಗಳನ್ನು ಜನರಿಲ್ಲದೆ ಬಿಕೋ ಎನ್ನುವಂತೆ ಮಾಡುತ್ತಿದೆ.

ಈ ಸುಡುವ ಬಿಸಿಲಿನಿಂದ ಪಾರಾಗಲು ನಗರದ ಜನತೆ ಈಗ ನೈಸರ್ಗಿಕ ತಂಪು ಪಾನೀಯ ಹಾಗೂ ಜ್ಯೂಸ್‌ಗಳ ಮೊರೆ ಹೋಗಿದ್ದಾರೆ. ಬೇಸಿಗೆಯ ಬಾಯಾರಿಕೆನೀಗಿಸಲು ರಸ್ತೆ ಬದಿಯ ಕಬ್ಬಿನ ಹಾಲಿನ ಗಾಡಿಗಳ ಮುಂದೆ ಜನ ಸಾಲುಗಟ್ಟಿ ನಿಲ್ಲುತ್ತಿರುವುದು ಸಾಮಾನ್ಯವಾಗಿದೆ.

ಕರ್ಬೂಜ, ಕಲ್ಲಂಗಡಿ ಮತ್ತು ಮೂಸಂಬಿ ಜ್ಯೂಸ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಮಧ್ಯಾಹ್ನದ ಹೊತ್ತಿನಲ್ಲಿ ಬಿಸಿಲಿನ ತಾಪ ಅತೀಯಾಗಿರುವುದರಿಂದ ಸಾರ್ವಜನಿಕರು ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ಸ್ವಲ್ಪ ಮಟ್ಟಿಗೆ ಕುಂಠಿತಗೊಂಡಿದೆ. ಬಹುತೇಕ ಜನರು ಸಂಜೆಯ ತಂಪಾದ ವಾತಾವರಣದಲ್ಲಿಯೇ ಹೊರಬಂದು ತಮ್ಮ ಕಾರ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಬಿಸಿಲು ಎಷ್ಟೇ ಇದ್ದರೂ, ತಂಪು ಪಾನೀಯಗಳನ್ನು ಸವಿಯುತ್ತಾ ಈ ಬೇಸಿಗೆ ಕಳೆಯಲು ಜನ ಸಜ್ಜಾಗಿದ್ದಾರೆ.

ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

ಬಾದಾಮಿ: ಆರ್ಥಿಕ ಸಂಕಷ್ಟದಲ್ಲಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಧಾರವಾಡ ವಿದ್ಯಾಪೋಷಕ ಸಂಸ್ಥೆ ಆರ್ಥಿಕ ಸಹಾಯ ನೀಡಲು ಅರ್ಜಿ ಆಹ್ವಾನಿಸಿದೆ. ಪ್ರಥಮ ಪ್ರಯತ್ನದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.80 ರಷ್ಟು ಅಂಕ ಪಡೆದು ಪ್ರಥಮ ಪಿಯುಸಿ ವಾಣಿಜ್ಯ, ಡಿಪ್ಲೊಮಾ ಪ್ರವೇಶ ಪಡೆಯಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕುಟುಂಬದ ಮಾಸಿಕ ವರಮಾನ ರೂ.10 ಸಾವಿರಕ್ಕಿಂತ ಕಡಿಮೆ ಇರುವ ಬಾಗಲಕೋಟೆ ಜಿಲ್ಲೆ ಅರ್ಹ ವಿದ್ಯಾರ್ಥಿಗಳು ಮೇ 30 ರೊಳಗೆ www.vidyaposhak.ngoನಲ್ಲಿ ಆನ್‌ಲೈನ್ ಮೂಲಕ ಅರ್ಹ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ನ್ಯಾಯವಾದಿ ಎಂ.ಎಸ್.ಹಿರೇಮಠ 9740332482 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಿರುಸುದ್ದಿ

ಗಗನಕ್ಕೇರಿದ ಅಡುಗೆ ಎಣ್ಣೆ ಬೆಲೆ: ಕ್ರಮಕ್ಕೆ ಒತ್ತಾಯ

ದೇವರ ಹಿಪ್ಪರಗಿ: ದಿನೇ ದಿನೇ ಏರಿಕೆಯಾಗುತ್ತಿರುವ ಅಡುಗೆ ಎಣ್ಣೆಯ ಬೆಲೆಯನ್ನು ತಗ್ಗಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಹುಣಶ್ಯಾಳ ಗ್ರಾಪಂ ಮಾಜಿ ಅಧ್ಯಕ್ಷೆ ಬಂಗಾರೇಮ್ಮ ಮಾನಪ್ಪ ದೊಡಮನಿ ಒತ್ತಾಯಿಸಿದ್ದಾರೆ. ಅಡುಗೆ ಎಣ್ಣೆಗಳ ಬೆಲೆ ಲೀಟರ್ಗೆ ?170 ದಾಟಿದ್ದು, ಕೇವಲ ಎರಡು ತಿಂಗಳ ಅವಧಿಯಲ್ಲಿ ಭಾರಿ ಹೆಚ್ಚಳವಾಗಿದೆ. ಇದರಿಂದ ಸಾಮಾನ್ಯ ಜನರ ಬದುಕು ದುಸ್ತರವಾಗುತ್ತಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳೆರಡೂ ಕೇವಲ ಭರವಸೆ ನೀಡದೆ, ವಾಸ್ತವದಲ್ಲಿ ಬೆಲೆ ಇಳಿಕೆಗೆ ಮುಂದಾಗಬೇಕು ಎಂದು ಕೆಆರ್ಎಸ್ ಮಹೆಬೂಬ್ ತಾಂಬೋಳಿ ಆಗ್ರಹಿಸಿದರು. ಗ್ರಾಮೀಣ ಭಾಗದ ಕೂಲಿ ಕಾರ್ಮಿಕರು ದಿನನಿತ್ಯದ ಪದಾರ್ಥಗಳಿಗೂ ಪರದಾಡುವಂತಾಗಿದೆ. ಅಡುಗೆ ಎಣ್ಣೆ ಬೆಲೆ ಇಳಿಕೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ ಗ್ರಾಪಂ ಸದಸ್ಯ ಕೊಂಡಗೊಳಿ ಸಲೀಂ ವಠಾರ ಎಂದರು.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಇಂಡಿ: ನಗರದ ಹಡಪದ ಅಪ್ಪಣ್ಣ ವಿವಿಧ ಉದ್ದೇಶಗಳ ಸಹಕಾರಿ ಸಂಘ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಅವಿರೋಧವಾಗಿ ನಡೆಯಿತು.





ಅಧ್ಯಕ್ಷರಾಗಿ ಸಿದ್ದು ನಾವಿ ಮತ್ತು ಉಪಾಧ್ಯಕ್ಷರಾಗಿ ಶಿವಾನಂದ ನಾವಿ ಆಯ್ಕೆಯಾದರು ಎಂದು ಚುನಾವಣೆ ಅಧಿಕಾರಿ ಸಂತೋಷ ಸದಲಗಿ ಘೋಷಣೆ ಮಾಡಿದರು. ನಿರ್ದೇಶಕರಾದ ಸಂತೋಷ ಗವಳಿ, ನಟರಾಜ ಗವಳಿ, ಅಶೋಕ ಹಡಪದ, ಬಸವರಾಜ ನಾವಿ, ಧೂಳಪ್ಪ ನಾವಿ, ನಾನು ರಾಠೋಡ, ಶಕುಂತಲಾ ನಾವಿ ಉಪಸ್ಥಿತರಿದ್ದರು.

ಮತದಾರ ಮನ ಗೆದ್ದ ಗ್ಯಾರಂಟಿಗಳು: ದೊಡ್ಡಮನಿ

ದೇವರಹಿಪ್ಪರಗಿ: ಮೂರು ವರ್ಷದ ಕಾಂಗ್ರೆಸ್ ಸಾಧನೆ ಹಾಗೂ ಗ್ಯಾರಂಟಿ ಯೋಜನೆಗಳು ಮತದಾರರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದು, ಉಪಚುನಾವಣೆಯಲ್ಲಿ ಭರ್ಜರಿ ಗೆಲವು ಸಾಧಿಸಲು ಸಹಕಾರಿಯಾಗಿದೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನಕಾರ್ಯದರ್ಶಿ ಆನಂದಗೌಡ ದೊಡ್ಡಮನಿ ಹರ್ಷ ವ್ಯಕ್ತ ಪಡಿಸಿದ್ದಾರೆ. ಸೋಮವಾರ ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ ನಿಮಿತ್ಯ ಪ್ರಕಟಣೆ ನೀಡಿರುವ ಅವರು, ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಮತದಾರ ಕಾಂಗ್ರೆಸ್ ಕೈ ಹಿಡಿದಿದ್ದು ನಮ್ಮ ಸಾಧನೆಗೆ ಸಾಕ್ಷಿಯಾಗಿದೆ ಎಂದರು.



ಗೆಲುವಿನನಿಂದ ಪಕ್ಷಕ್ಕೆ ಇನ್ನಷ್ಟು ಬಲ: ಲಿಂಗದಳ್ಳಿ

ದೇವರಹಿಪ್ಪರಗಿ: ಗ್ಯಾರಂಟಿ ಯೋಜನೆಗಳು ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದು, ಉಪಚುನಾವಣೆಯಲ್ಲಿ ಇದರ ಪ್ರತಿಫಲ ಸಿಕ್ಕಿದೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನಕಾರ್ಯದರ್ಶಿ, ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ.ಪ್ರಭುಗೌಡ ಲಿಂಗದಳ್ಳಿ ಹೇಳಿದರು. ದಾವಣಗೆರೆ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ನಿಮಿತ್ತ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಪಾರದರ್ಶಕತೆ ಜೊತೆಗೆ ಪ್ರತಿಯೊಂದು ಸಮುದಾಯದ ಕುರಿತು ಇರುವ ಕಳಕಳಿ ಹೆಮ್ಮೆ ಪಡುವಂತಾಗಿದೆ. ಉಪಚುನಾವಣೆ ಗೆಲುವಿನನಿಂದ ಪಕ್ಷಕ್ಕೆ ಇನ್ನಷ್ಟು ಬಲ ಬಂದಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಬಲಿಷ್ಠವಾಗಲಿದೆ ಎಂದರು.



ವನಜಾಕ್ಷಿ ಗುಗ್ಗರಿಗೆ ಪಿಎಚ್‌ಡಿ

ಆಲಮೇಲ: ವಿಜಯಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಅಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಆಲಮೇಲ ತಾಲೂಕಿನ ದೇವರನಾವದಗಿ ಗ್ರಾಮದ ವನಜಾಕ್ಷಿ ಮಹೇಂದ್ರ ಗುಗ್ಗರಿ ಅವರು ಮಂಡಿಸಿದ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ: ವಿಭಿನ್ನ ಆಯಾಮಗಳು' ಎಂಬ ವಿಷಯದ ಮೇಲಿನ ಅವರ ಪಿಎಚ್‌ಡಿ ಮಹಾಪ್ರಬಂಧಕ್ಕೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಮಹಿಳಾ ವಿವಿಯ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ನಾರಾಯಣ ಬಿ.ಪವಾರ ಅವರು ಮಾರ್ಗದರ್ಶಕರಾಗಿದ್ದರು.





ವಿಜಯಪುರ: ವಿಜಯಪುರದಲ್ಲಿ ತಂಗಿರುವ ಸಚಿವರಾದ ಎಂ.ಬಿ.ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿದ ಜನಗಣತಿ ಅಧಿಕಾರಿಗಳು ಭಾರತ ಜನಗಣತಿ 2027ರ ಮಾಹಿತಿ ವಿವರಿಸಿದರು. ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ವಲಯ ಆಯುಕ್ತರಾದ ಎಚ್.ಎಸ್.ಚಿತ್ತರಗಿ ಗಣತಿದಾರರಾದ ನೀಲಮ್ಮ ಸಜ್ಜನ ಹಾಗೂ ಮೇಲ್ವಿಚಾರಕ ಸಿದ್ದಪ್ಪ ದಾನಿ ಹಾಗೂ ಕಂದಾಯ ನಿರೀಕ್ಷಕ ಕುಮಾರ ಚವಾಣ್ ಉಪಸ್ಥಿತರಿದ್ದರು.

ಅಭಿಮಾನೋತ್ಸವಕ್ಕೆ ಭಾಗಿಯಾಗಲು ತೀರ್ಮಾನ

ಮುದ್ದೇಬಿಹಾಳ: ತಾಲೂಕು ಮಂಡಲ ಭಾರತೀಯ ಜನತಾ ಪಕ್ಷದ ವತಿಯಿಂದ ಮೇ 9ರಂದು ಶುಕ್ರವಾರ ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ಸಿದ್ದತಾ ಸಭೆಯನ್ನು ಮಾಜಿ ಶಾಸಕ, ರಾಜ್ಯ ಭಾಜಪ ರೈತ ಮೋರ್ಚ ಅಧ್ಯಕ್ಷ ಎ.ಎಸ್ ಪಾಟೀಲ್ (ನಡಹಳ್ಳಿ) ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಸಭೆಯಲ್ಲಿ ಮಾತನಾಡಿದ ಎ.ಎಸ್.ಪಾಟೀಲ್ ನಡಹಳ್ಳಿ ಅವರು, ಭಾರತೀಯ ರಾಜಕೀಯ ಇತಿಹಾಸದಲ್ಲಿ ವಿರೋಧ ಪಕ್ಷಗಳೇ ಇಲ್ಲದ ಪರಿಸ್ಥಿತಿ ಇದ್ದ ಸಂದರ್ಭದಲ್ಲಿ ಭಾಜಪದ ಏಕಾತ್ಮಕವಾದ ಸಿದ್ಧಾಂತ, ಅಖಂಡ ಹಿಂದೂತ್ವದ ಪ್ರತಿಪಾದನೆ ಮಾಡಿ ಜನರನ್ನು ಸಂಘಟನೆಗೊಳಿಸಿದ ಪಕ್ಷವಾಗಿದೆ. ದೇಶದಲ್ಲಿ ದಿನದಯಾಳ ಉಪಾಧ್ಯಾಯ ಅಟಲ್ ಬಿಹಾರಿ ವಾಜಪೇಯಿ ಎಲ್.ಕೆ.ಅಡ್ವಾಣಿ ಪಕ್ಷ ಸಂಘಟನೆ ಮಾಡಿದರೆ ರಾಜ್ಯದಲ್ಲಿ ಬಿ.ಎಸ್ ಯಡಿಯೂರಪ್ಪ ಕರ್ನಾಟಕದಲ್ಲಿ ದಕ್ಷಿಣದ ಹೆಬ್ಬಾಗಿಲನ್ನು ತೆರೆದ ಮಹಾನ್ ನಾಯಕ ಅವರ ಹೋರಾಟ ಮತ್ತು ದೂರದರ್ಶತ್ವ ಪಕ್ಷ ಇಂದು ಸಂಘಟಿತವಾಗಿದೆ ಎಂದರು. ಮಂಡಲ ಘಟಕದ ಅಧ್ಯಕ್ಷ ಜಗದೀಶ ಪಂಪಣ್ಣವರ, ಮುಖಂಡರಾದ ಎಂ.ಎಸ್.ಪಾಟೀಲ್, ಪ್ರಭು ಕಡಿ, ಕೆಂಚಪ್ಪಣ್ಣ ಬಿರಾದರ, ಸೋಮನಗೌಡ ಬಿರಾದರ, ಚನ್ನಬಸಪ್ಪ ಚೆನ್ನಿಗಾವಿಶೆಟ್ರು ಮಲಕೇಂದ್ರರಾಯ ಗೌಡ್ರು, ಗಿರೀಶಗೌಡ ಪಾಟೀಲ, ಮದನಸ್ವಾಮಿ ಹಿರೇಮಠ, ಎಂ.ಆರ್ .ಪಾಟೀಲ, ಸಂಜೀವ ಬಾಗೇವಾಡಿ, ಮುತ್ತಣ್ಣ ಹುಗ್ಗಿ, ಮಲ್ಲಯ್ಯ ಬಿರಾದರ, ಪ್ರೇಮ ಸಿಂಗ ಚೌವಾಣ, ಮಹಾಂತಗೌಡ ಗಂಗನಗೌಡರ, ವೀರೇಶ ಪಾಟೀಲ ಭಾಗವಹಿಸಿದ್ದರು.



ಮುದ್ದೇಬಿಹಾಳ: ತಾಲೂಕು ಮಂಡಲ ಭಾರತೀಯ ಜನತಾ ಪಕ್ಷದ ವತಿಯಿಂದ ಮೇ 9ರಂದು ಶುಕ್ರವಾರ ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ಸಿದ್ಧತಾ ಸಭೆಯನ್ನು ಮಾಜಿ ಶಾಸಕ, ರಾಜ್ಯ ಭಾಜಪ ರೈತ ಮೋರ್ಚ ಅಧ್ಯಕ್ಷ ಎ.ಎಸ್ ಪಾಟೀಲ್ (ನಡಹಳ್ಳಿ) ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಮಂಡಲ ಘಟಕದ ಅಧ್ಯಕ್ಷ ಜಗದೀಶ ಪಂಪಣ್ಣವರ ಸೇರಿದಂತೆ ಇತರರು ಇದ್ದರು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು: ಸಂಭ್ರಮಾಚರಣೆ

ಅಭಿವೃದ್ಧಿ ಪರ್ವ ಆರಂಭ: ಅಂಗಡಿ

ವಿಜಯಪುರ: ಪಶ್ಚಿಮ ಬಂಗಾಳ, ಅಸ್ಸಾಂ, ಪಾಂಡೇಚೇರಿಯಲ್ಲಿ ಭಾರತೀಯ ಜನತಾ ಪಕ್ಷದ ಭರ್ಜರಿ ಗೆಲುವಿನ ನಗೆ ಬೀರಿರುವ ಹಿನ್ನೆಲೆಯಲ್ಲಿ ವಿಜಯಪುರ ಗಾಂಧಿ ವೃತ್ತದ ಎದುರು ಜಮಾಯಿಸಿದ ನೂರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ವಿಜಯಪುರದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಪಶ್ಚಿಮ ಬಂಗಾಳ, ಪುದುಚೇರಿ, ಆಸ್ಸಾಂನಲ್ಲಿ ಭರ್ಜರಿ ಗೆಲುವನ್ನು ಬಿಜೆಪಿ ದಾಖಲಿಸಿದೆ, ಜನತೆ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅಪಾರ ಒಲವು ಹೊಂದಿದ್ದಾರೆ ಎಂಬುದಕ್ಕೆ ಸಾಕ್ಷಿ. ಅನೇಕ ವರುಷಗಳಿಂದ ಅಧಿಕಾರದಲ್ಲಿದ್ದ ತೃಣಮೂಲ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅರಳಿದೆ, ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಹಾಗೂ ಮಮತಾ ಬ್ಯಾನರ್ಜಿ ಅವರ ಕಾರ್ಯವೈಖರಿಯಿಂದ ಬೇಸತ್ತಿದ್ದ ಬಂಗಾಳದ ಜನತೆ ನಿರೀಕ್ಷೆಯಂತೆ ಬಿಜೆಪಿಗೆ ಬೆಂಬಲಿಸಿದ್ದಾರೆ, ಈಗ ಅಲ್ಲಿ ಅಭಿವೃದ್ಧಿ ಪರ್ವ ಆರಂಭಾಗಲಿದೆ ಎಂದರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಜಿ ಅವರ ಆಡಳಿತ ಅವಧಿಯಲ್ಲಿ ಆಗುತ್ತಿರುವ ಅಭಿವೃದ್ಧಿ ಯೋಜನೆಗಳಿಂದಾಗಿಯೇ ಜನತೆ ಬಿಜೆಪಿ ಜೊತೆ ನಿಂತಿದ್ದಾರೆ, ಅಭಿವೃದ್ಧಿಗೆ ಮತ ನೀಡಿದ್ದಾರೆ, ಇನ್ನೂ ಕಾಂಗ್ರೆಸ್ ಪಕ್ಷ ಎಲ್ಲಿಯೂ ಅಸ್ತಿತ್ವವನ್ನೇ ಕಾಪಾಡಿಕೊಳ್ಳದೇ ಅಸ್ಥಿರತೆಯಿಂದ



ನಲುಗುವಂತಾಗಿದೆ, ದೇಶ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಜನತೆ ತಕ್ಕ ಪಾಠ ಕಲಿಸಿದ್ದಾರೆ ಎಂದರು.

ಬಿಜೆಪಿ ಮುಖಂಡ ವಿಜುಗೌಡ ಪಾಟೀಲ ಮಾತನಾಡಿ, ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಗೆಲುವಿನ ನಗೆ ಬೀರಿದೆ, ಪ್ರತಿಪಕ್ಷಗಳು ಬಿಜೆಪಿಯ ಬಗ್ಗೆ ಸಾಕಷ್ಟು ಅಪ ಪ್ರಚಾರ ಮಾಡಿದರೂ ಸಹ ಜನತೆ ಅದಕ್ಕೆ ಸೊಪ್ಪು ಹಾಕದೇ ಪ್ರಧಾನಿ ಮೋದಿಜಿ ಉತ್ತಮ ಆಡಳಿತ ಕಾರಣದಿಂದಾಗಿ ಅಭಿವೃದ್ಧಿಗಾಗಿ ಬಿಜೆಪಿ ಬೆಂಬಲಿಸಿ ಜನಾದೇಶ ನೀಡಿದ್ದಾರೆ, ಈ ಗೆಲುವು ಕಾರ್ಯಕರ್ತರಲ್ಲಿ ಸಂತಸ ತರಿಸಿದೆ ಎಂದರು.

ಪಾಲಿಕೆ ಸದಸ್ಯೆ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸ್ವಪ್ನಾ ಕಣಮುಚನಾಳ ಮಾತನಾಡಿ,

ಮಹಿಳಾ ಮೀಸಲಾತಿ ವಿರೋಧಿಸಿ ಮಹಿಳಾ ರಾಜಕೀಯ ಪ್ರಾತಿನಿಧ್ಯದ ವಿರುದ್ಧವಾಗಿ ನಡೆದುಕೊಂಡ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳಿಗೆ ಮಹಿಳೆಯರು ತಕ್ಕ ಶಾಸ್ತಿ ಮಾಡಿದ್ದಾರೆ, ಮತ್ತೊಮ್ಮೆ ಪ್ರಧಾನಿ ಮೋದಿಜಿ ಅವರ ಪರಿಶುದ್ಧ ಆಡಳಿತ ಮೆಚ್ಚಿ ಬಿಜೆಪಿಗೆ ಬೆಂಬಲಿಸಿದ್ದಾರೆ ಎಂದರು.

ಡಾ.ಸುರೇಶಬಿರಾದಾರ, ಮಳುಗೌಡಪಾಟೀಲ, ಈರಣ್ಣ ರಾವೂರ, ಶಿಲ್ಪಾ ಕುದುರಗೊಂಡ, ಸಂದೀಪ ಪಾಟೀಲ, ಭೀಮಾಶಂಕರ ಹದನೂರ, ಕೃಷ್ಣಾ ಗುನ್ನಾಳಕರ, ರಾಜು ಮಗಿಮಠ, ಭರತ ಕೋಳಿ, ವಿಜಯ ಜೋಶಿ, ಪಾಪುಸಿಂಗ ರಜಪೂತ, ರಾಜೇಶ ತಾವಸೆ, ಭೀಮಸಿಂಗ್ ರಾಠೋಡ, ಶರಣಬಸಪ್ಪ ಕುಂಬಾರ, ಸಂತೋಷ ಹಲವಾಯಿ, ಅಪ್ಪು ಕುಂಬಾರ, ರಾಜು ಬಿರಾದಾರ, ಜಗದೀಶ ಮುಚ್ಚಂಡಿ, ಸಂತೋಷ ಯಂಕಪ್ಪಗೂಳ, ಪ್ರಹ್ಲಾದ ಕಾಂಬಳೆ, ವಿವೇಕ ತಾವರಗೇರಿ, ಶಿವರಾಜ ಮಡಿವಾಳ, ಮಂಥನ ಗಾಯಕವಾಡ , ಭಾರತಿ ಭುಯ್ಯಾರ, ಶಾಂತಾ ಉತ್ನಾಸಕರ, ಶಾಂತಾ ಯಳಮೇಲಿ, ಶ್ರೀದೇವಿ ಅವಧಿ, ಬಸಮ್ಮಾ ಗುಜರಿ, ಪ್ರಿಯಾಂಕಾ ಶೇರಖಾನೆ ಪಾಲ್ಗೊಂಡಿದ್ದರು.

ನೂತನ ವಿದ್ಯುತ್ ಕೇಂದ್ರ ಉದ್ಘಾಟಿಸಿದ ಮನಗೂಳಿ

ಸಿಂದಗಿ: ಮೂಲ ಸೌಕರ್ಯದಿಂದ ವಂಚಿತ ಗುಬ್ಬೇವಾಡ ಗ್ರಾಮ, ಸುತ್ತಮುತ್ತಲಿನ ಗ್ರಾಮಗಳ ಎರಡು ವರ್ಷಗಳ ಪ್ರಯತ್ನದಿಂದ ನೂತನ ವಿದ್ಯುತ್ ಕೇಂದ್ರ ನಿರ್ಮಾಣ ಮಾಡಿದ್ದು ಸಂತಸ ತಂದಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.


ತಾಲೂಕಿನ ಗುಬ್ಬೇವಾಡ ಗ್ರಾಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಗುಬ್ಬೇವಾಡ ನೂತನವಾಗಿ ನಿರ್ಮಾಣವಾದ 110 ಎಂವಿಎ, 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿ, ಈ ಭಾಗದ ರೈತರ ಹೋರಾಟದ ಫಲವಾಗಿ ಇಂದು ನೂತನ ವಿದ್ಯುತ್ ಕೇಂದ್ರ ತಲೆ ಎತ್ತಿದೆ. ರೈತರಿಗೆ ಗುಣಮಟ್ಟದ ವಿದ್ಯುತ್ ವ್ಯವಸ್ಥೆ ನೀಡುವ ಮಹದಾಸೆ ಹೊಂದಿದ್ದೇನೆ. ಈ ಭಾಗದ ಜನರಿಗೆ ಎಲ್ಲ ಮೂಲ ಸೌಲಭ್ಯ ಒದಗಿಸಲು ಶ್ರಮಿಸುತ್ತೇವೆ ಎಂದರು.

ಬಾಗಲಕೋಟೆ ಕವಿಪ್ರನಿನಿ ಅಧೀಕ್ಷಕ ಎಂಜನಿಯರ್ ರಮೇಶ ಪವಾರ, ಹೆಸ್ಕಾಂ ಎಇಇ ಚಂದ್ರಕಾಂತ ನಾಯಕ ಮಾತನಾಡಿದರು. ಅಡಿವೇಶ್ವರ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಪಿಎಂಸಿ ನಿರ್ದೇಶಕ ಸದ್ದಾಂ ಪಟೇಲ, ರೈತ ಸಂಘದ ತಾಲೂಕಾಧ್ಯಕ್ಷ ಧರ್ಮಣ್ಣ ಗಬಸಾವಳಗಿ, ದೇವರಾಜ ನರಗೋದಿ, ಮುತ್ತುಗೌಡ ಪಾಟೀಲ ಮಾತನಾಡಿದರು.

ಗ್ರಾಮಸ್ಥ ಬಾಪುಗೌಡ ಪಾಟೀಲ ಮಾತನಾಡಿ, ನಮ್ಮೂರಿಗೆ ಸರ್ಕಾರಿ ಪಪೂ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ರಸ್ತೆ ಸುಧಾರಣೆ, ಸಾರ್ವಜನಿಕ ಶೌಚಾಲಯ ಸೇರಿದಂತೆ ಇನ್ನಿತರ ಸೌಲಭ್ಯ ಮಂಜೂರು ಮಾಡಿಲು ಮನವಿ ಮಾಡಿದ್ದೇವೆ ಎಂದರು.

ಕವಿಪ್ರನಿನಿಯೋಜನಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಜಗದೀಶ ಜಾಧವ, ಕಾರ್ಯಾಚರಣೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ವಾಹೀದ ಜಹಾಗೀರ, ಹೆಸ್ಕಾಂ ಎಇಇ ಚಂದ್ರಕಾಂತ ನಾಯಕ, ರಮೇಶ ಪವಾರ, ಸಂತೋಷ ಸಾಲಿ, ಎಸ್.ವೈ.ಕೊಂಡಗೂಳಿ, ಬಸವರಾಜ ಮಾರಲಭಾವಿ, ಹುಸೇನಿ ತಾಂಬೊಳ್ಳಿ, ರಮೇಶ ಸಾವಳಸಂಗ, ಪ್ರಕಾಶ ಗೋಲಗೇರಿ, ವಿದ್ಯುತ್ ವಿತರಣಾ ಕೇಂದ್ರಕ್ಕೆ ಭೂದಾನ ಮಾಡಿದ ಬೋರಮ್ಮ ತಳವಾರ, ರಮೇಶ ಗುಬ್ಬೇವಾಡ, ನಿಂಗಪ್ಪ ಭಾವಿಕಟ್ಟಿ, ರಮೇಶ ಇಜೇರಿ, ಸಿದ್ದು ಅಂಗಡಿ ಸೇರಿದಂತೆ ಅಧಿಕಾರಿಗಳು ಇದ್ದರು.



ಮೇ 8ರಂದು ರೈತ ಜಾಗೃತಿ ಬೃಹತ್ ಸಮಾವೇಶ

ಬಸವನಬಾಗೇವಾಡಿ: ರಾಜ್ಯದ 5ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳಾಗಿದ್ದು, ಈ ಭಾಗದ ರೈತರ ಬಹುದಿನದ ಬೇಡಿಕೆಯಾದ ಆಲಮಟ್ಟಿ ಜಲಾಶಯದ ಮಟ್ಟವನ್ನು 524.266 ಮೀ ಎತ್ತರಿಸುವುದ್ದರಿಂದ ರೈತರ ಜಮೀನುಗಳಿಗೆ ನೀರು ಹರಿಯುತ್ತದೆ. ಈ ನಿಟ್ಟಿನಲ್ಲಿ ಮೇ 8ರಂದು ವಿಜಯಪುರದ ದರಬಾರ ಮೈದಾನದಲ್ಲಿ ರಾಜ್ಯಮಟ್ಟದ ರೈತ ಜಾಗೃತಿ ಬೃಹತ್ ಸಮಾವೇಶ ನೆಡಯಲಿದೆ ಎಂದು ಕ.ರಾ.ರೈ.ಸಂ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮಾವೇಶದಲ್ಲಿ ರಾಜ್ಯದ ಎಲ್ಲ ಕಡೆಯಿಂದ ರೈತರು ಭಾಗವಹಿಸಲಿದ್ದಾರೆ. ಕಬ್ಬು ಬೆಳೆಗಾರರಿಗೆ 3.5 ನೂರು ಕೋಟಿ 5.5ನೂರು ಕೋಟಿ ರೂ. ಮೀಸಲು ಇಡಬೇಕು. ಉಳ್ಳಾಗಡ್ಡಿ ಬೆಳೆದ ರೈತರು ಬೆಲೆ ಇಲ್ಲದೆ ಬೀದಿಗೆ ಬರುವಂತಾಗಿದೆ, ರೈತರ ಶ್ರಮಕ್ಕೆ ಬೆಲೆ ಸಿಗುವಂತ್ತಾಗಬೇಕು, ರಾಜ್ಯ ಹಾಗೂ ಕೇಂದ್ರ ಸರಕಾರ ಡಿಸಿಸಿ ಬ್ಯಾಂಕ್ ದಿಂದ ಸೊನ್ನೆ ಬಡ್ಡಿದರದಲ್ಲಿ ಸಾಲ ಸಿಗುವಂತೆ 1ಲಕ್ಷ ಕೋಟಿ ಇಡಬೇಕು. ಸರ್ಕಾರ ವಿದ್ಯುತ್ ಹಾಗೂ ನೀರಾವರಿಯನ್ನು ಖಾಸಗೀಕರಣ ಮಾಡಲು ಹೊರಟಿರುವುದು ಖೇದಕರ ಸಂಗತಿಯಾಗಿದೆ ಎಂದು ಆಕ್ರೋಶವ್ಯಕ್ತಪಡಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಕುಬಕಡ್ಡಿ ಮಾತನಾಡಿ ಆಲಮಟ್ಟಿ ಜಲಾಶಯ ಎತ್ತರ ಏರಿಸುವುದು 60ದಶಕದಿಂದ ಹಾಗೇ ಉಳಿದಿದೆ ಇದನ್ನು ಎತ್ತರಿಸುವಂತೆ ಲಕ್ಷಾಂತರ ರೈತರು ವಿಜಯಪುರದಿಂದ ಆಲಮಟ್ಟಿವರೆಗೆ ಪಾದಯಾತ್ರೆ ನಡೆಸಲಾಗುತ್ತದೆ ಎಂದು ಹೇಳಿದರು.

ರಾಜ್ಯ ಉಪಾಧ್ಯಕ್ಷರಾದ ಕಲ್ಲು ಸೊನ್ನದ ಮಾತನಾಡಿ ಪ್ರತಿ ಗ್ರಾಮ ಗ್ರಾಮಕ್ಕೆ ಹೋಗಿ ರೈತರನ್ನು ಜಾಗೃತಿ ಮಾಡುತ್ತಿದ್ದೇವೆ, ರೈತ ಜಾಗೃತಿಸಮಾವೇಶಕ್ಕೆ ಬಾಗೇವಾಡಿ ತಾಲೂಕಿನಿಂದ ಮೂರ್ನಾಲ್ಕು ಸಾವಿರ ಜನ ರೈತರು ಹೋಗಿ ಬೆಂಬಲ ಸೂಚಿಸಬೇಕು ಎಂದು ಹೇಳಿದರು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿದರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ, ಮಹಾದೇವ ಬನಸೋಡೆ, ಸಂಗಪ್ಪ ಟಕ್ಕೆ, ಸೋಮು ಬಿರಾದಾರ, ಕೊಲ್ಹಾರ ತಾಲೂಕಾಧ್ಯಕ್ಷ ಶಶಿಕಾಂತ ಬಿರಾದಾರ, ಮಹಾದೇವ ಗುಡದಿನ್ನಿ, ಅಮರಯ್ಯ ಹಿರೇಮಠ, ನೇಮು ರಾಠೋಡ, ರಮೇಶ ಗಚ್ಚಿನವರ, ಬಸವರಾಜ ನಾಯ್ಕರ, ಸಿದ್ದು ಕುಂಬಾರ, ಶಿವಶಂಕರ ಅಂಬಲಿ, ಭಾಗ್ಯರಾಜ ಚೌಧರಿ, ಶ್ರೈಶೈಲ ಮನಗೂಳಿ, ಸಿದ್ರಾಮ ವಡ್ಡರ, ಮಹಮ್ಮದ ಮಕಾನದಾರ, ಮುದಕಣ್ಣ ಗುಂಡಳ್ಳಿ ಸೇರಿ ಇತರರು ಇದ್ದರು.



ವಿಜಯಪುರ ಸಾಂಸ್ಕೃತಿಕ ನಗರ: ಡಾ.ಕುಶಾಲ ಬರಗೂರು

ವಿಜಯಪುರ: ಕಾವ್ಯಕ್ಕೆ ಸಂಗೀತ ಮತ್ತು ದೃಶ್ಯದ ಸ್ಪರ್ಶ ನೀಡಿದರೆ ಜನಮನ ತಲುಪುತ್ತದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾದ ಡಾ.ಕುಶಾಲ ಬರಗೂರು ಹೇಳಿದರು.

ಅವರು ನಗರದ ಗಾನಬನದ ಶ್ರೀಗುರು ಕುಮಾರೇಶ್ವರ ಸಂಗೀತ ಮಹಾವಿದ್ಯಾಲಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ಹಾಗೂ ಸಿದ್ದರಾಮೇಶ್ವರ ಟೆಲಿಫಿಲಂ ಆಶ್ರಯದಲ್ಲಿ ಹಮ್ಮಿಕೊಂಡ ಸೋಮು ಹಿಪ್ಪರಗಿ ಅವರ ವಿಜಯಪುರ ಕನ್ನಡ ಅಲ್ಬಮ್ ಸಾಂಗ್ ಲೋಕಾರ್ಪಣೆ ಹಾಗೂ ವರ್ತಮಾನ ಕಾವ್ಯ ಸಿಂಚನ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಲ್ಬಮ್ ಸಾಂಗ ಬಿಡುಗಡೆಗೊಳಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ದಾಕ್ಷಾಯಣಿ ಹುಡೇದ ಮಾತನಾಡಿಂದರು.

ಸಂಶೋಧಕ ಲಾಯಪ್ಪ ಇಂಗಳೆ ಮಾತನಾಡಿ, ವಿಜಯಪುರದಲ್ಲಿ ಎರಡು ಗುಮ್ಮಟಗಳಿವೆ. ಒಂದು ಭೌತಿಕ ಗೋಳ ಗುಮ್ಮಟ ಇನ್ನೊಂದು ಬೌದ್ಧಿಕ ವಚನ ಗುಮ್ಮಟ, ಭೌತಿಕ ಗುಮ್ಮಟವು ಪ್ರವಾಸಿಗರನ್ನು ತನ್ನತ್ತ ಸೆಳೆದರೆ, ಬೌದ್ಧಿಗ ವಚನ ಗುಮ್ಮಟವು ನಿರಂತರವಾಗಿ ಶರಣರ ಸಂದೇಶಗಳ ಮೂಲಕ ಎಲ್ಲರನ್ನು ಎಚ್ಚರಿಸುತ್ತಿವೆ ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯೆ ರಾಜೇಶ್ವರಿ ಮೋಪಗಾರ ಮಾತನಾಡಿ, ಚಿತ್ರ ಕಲಾವಿದರು ತಮ್ಮ ಲಲಿತ ಕಲೆಗಳ ಮೂಲಕ ಭಾವನೆಗಳನ್ನು ಕಟ್ಟಿಕೊಟ್ಟರೆ ಕವಿ ಸಾಹಿತ್ಯದ ಮೂಲಕ ಭಾವನೆಗಳನ್ನು



ಅಭಿವ್ಯಕ್ತಗೊಳಿಸುತ್ತಾನೆ. ಚಲನಚಿತ್ರ ನಿರ್ದೇಶಕ ಭಾವನೆಗಳಿಗೆ ಜೀವ ತುಂಬುವ ಕೆಲಸ ಮಾಡುತ್ತಾನೆ. ಪ್ರಸ್ತುತ ಸಂದರ್ಭದಲ್ಲಿ ವಿಜಯಪುರ ಕನ್ನಡ ಅಲ್ಬಮ್ ಸಾಂಗ್ ಉದಾಹರಣೆಯಾಗಿದೆ ಎಂದರು.

ಕವಿ ಸೋಮು ಹಿಪ್ಪರಗಿ ಮಾತನಾಡಿದರು. ಕಮಲಾಬಾಯಿ ಹಿಪ್ಪರಗಿ, ಲಕ್ಷ್ಮೀ ಸೇಜಾಳ, ದುಂಡಮ್ಮ ಹಿಪ್ಪರಗಿ, ರಾಮನಗೌಡ ಚೌಧ್ರಿ ಶ್ರೀಕಾಂತ ಮೆಂಡೆಗಾರ, ಭೀಮರಾಯ ಕುಂಟೋಜಿ, ಪ್ರಕಾಶ ಚೌಧ್ರಿ, ಆನಂದ ಕುಂಟೋಜಿ, ಎ.ಎಚ್.ಕೊಳಮಲಿ, ಶರಣಗೌಡ ಪಾಟೀಲ, ಉಮೇಶ ಶಿವಶರಣ, ದೀಪಕ ಶಿಂಧೆ, ಸೋಮಶೇಖರ ಕುರ್ಲೆ, ವಿನೋದ ಪಟ್ಟಣದ ಇದ್ದರು.

ಸಂಭ್ರಮದ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ: ಮೆರವಣಿಗೆ

ಇಂಡಿ: ತಾಲೂಕಿನ ಚಿಕ್ಕಮಣೂರ ಗ್ರಾಮದ ಭೀಮಾ ನದಿ ಮಧ್ಯದಲ್ಲಿರುವ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಏ.30ರಿಂದ ಸಂಭ್ರಮದಿಂದ ಜರುಗಿತು. ಗುರುವಾರ ಯಲ್ಲಮ್ಮ ದೇವಿಗೆ ಬಾಸಿಂಗ ಮೆರವಣೆಗೆ ವಿವಿಧ ವಾದ್ಯ ವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಾತ್ರಿ 9 ಗಂಟೆಗೆ ದೇವಿಯು ಮಂದಿರಕ್ಕೆ ಆಗಮಿಸಿದಳು. ರಾತ್ರಿ 10.30ಕ್ಕೆ ಪ್ರೇಮಾ ಅಫಝಲಪೂರ ಹಾಗೂ ಸಂಗಡಿಗರಿಂದ ಚೌಡಕಿ ಆಟ ಹಾಗೂ ಚೌಡಕಿ ಪದಗಳು ಜರುಗಿದವು. ಮೇ 1ರಂದು ಶುಕ್ರವಾರ ಆಗಿ ಹುಣ್ಣಿಮೆಯಂದು ಬೆಳಗ್ಗೆ 5 ಗಂಟೆಗೆ ಡಾ. ಶಂಬುಲಿಂಗ ಶ್ರೀಗಳಿಂದ ಪಡಸಾವಳಗಿ ಮತ್ತು ಉದಗಿರಮಠ ಇವರಿಂದ ದೇವಿಯ ರುದ್ರಾಭಿಷೇಕ ಜರುಗಿತು. 7 ಗಂಟೆಗೆ ದೇವಿಗೆ ವಸ್ತ್ರಾಭರಣ, 9 ಗಂಟೆಗೆ ದೇವಿಗೆ ನೈವೇದ್ಯ, ಸಾಯಂಕಾಲ 4 ಗಂಟೆಗೆ ದೇವಿಯ ಪಲ್ಲಕ್ಕಿ ಮೆರವಣಿಗೆ ನವಿಲು ಕುಣಿತ ಕರಡಿ ಕುಣಿತ ಕುದರೆ ಕುಣಿತ ಗೊಂಬೆ ಕುಣಿತ ಡೊಳ್ಳಿನ ವಾಲಗ ಸೇರಿದಂತೆ ವಿವಿಧ ವಾದ್ಯ ವೈಭವಗಳೊಂದಿಗೆ ಭೀಮಾ ನದಿಯಲ್ಲಿರುವ ದೇವಿಯ ಮಂದಿರಕ್ಕೆ ತಲುಪಿತು. 5 ಗಂಟೆಗೆ ಬಾಸಿಂಗ ಮೆರವಣಿಗೆ ದೇವಿಯ ಪಲ್ಲಕ್ಕಿ ಸ್ವಾಗತಿಸುವದು 7 ಗಂಟೆಯಿಂದ 9 ರ ವರೆಗೆ ಮದ್ದು ಸುಡುವುದು ನಂತರ ಪಲ್ಲಕ್ಕಿ ಮೆರವಣಿಗೆ ಗ್ರಾಮದಲ್ಲಿರುವ ದೇವಿಯ ಮಂದಿರಕ್ಕೆ ಆಗಮಿಸಿತು. ಹೊಸ ಪಾದಗಟ್ಟೆ ಹಾಗೂ ಬನ್ನಿ ಮಹಾಕಾಳಿ ದೇವಸ್ಥಾನದ ಹತ್ತಿರ ಕುರಿಗಳ ಭವ್ಯ ಜಾತ್ರೆ ನಡೆಯಿತು. ಮೇ 2ರಂದು ವಿದ್ಯಾಶ್ರೀ ಮಸಬಿನಾಳ ಹರದೇಶ ನಾಗೇಶ ಹಾಗೂ ಮುಕ್ತುಮಸಾಬ ಸೊನ್ನಾಳ ಅವರಿಂದ ಗೀ ಗೀ ಪದಗಳು ಜರುಗಿದವು.



ನಿರಂತರ ಹೋರಾಟ: ಅಳಲು ತೋಡಿಕೊಂಡ ಪೌರಕಾರ್ಮಿಕರು

ಸಿಂದಗಿ: ಕಳೆದ ಹಲವು ದಿನಗಳಿಂದ ನಿರಂತರವಾಗಿ ನಮ್ಮ ನೌಕರಿ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದರೂ ನಮ್ಮ ಅಳಲು ಕೇಳಲು ಯಾರು ಬಂದಿಲ್ಲ ಎಂದು ಹೊರಗುತ್ತಿಗೆಯ ಪೌರಕಾರ್ಮಿಕ ಲಲಿತಾ ಅಂತರಗಂಗಿ ಬೇಸರ ವ್ಯಕ್ತಪಡಿಸಿದರು.

ನಗರಸಭೆ ಮುಂಭಾಗದಲ್ಲಿ ಪ್ರತಿಭಟಿಸಿ ಮಾತನಾಡಿದ ಅವರು, ನಗರದ ಸಿಂದಗಿ ನಗರಸಭೆ ಕಾರ್ಯಾಲಯದ ಮುಂದೆ ದಿನನಿತ್ಯ ಪೌರಕಾರ್ಮಿಕರು ನಡೆಸಿದ ಹೋರಾಟದಲ್ಲಿ ಬೇಸರ ವ್ಯಕ್ತಪಡಿಸಿದ ಅವರು ಸುಮಾರು 15 ವರ್ಷದಿಂದ ಸಿಂದಗಿ ನಗರಸಭೆಯಲ್ಲಿ ಮನೆ-ಮನೆ ಕೆಲಸ ಹಾಗೂ ಹೊರ ಗುತ್ತಿಗೆ ಆದಾರದ ಮೇಲೆ ಕನಿಷ್ಠ ಪ್ರತಿ ತಿಂಗಳು ವೇತನ 600-1500 ಸಂಬಳ ಪಡೆದು ಕಾರ್ಯಭಾರ ಮಾಡಿದ್ದೇವೆ. ನಮಗಿಂತಲೂ ಹಿಂದೆ ಬಂದವರ ನೌಕರಿ ಖಾಯಂ ಆಗಿವೆ. ನಮ್ಮ ಹುದ್ದೆ ಇನ್ನು ಆಗಿಲ್ಲ. ಆದ್ದರಿಂದ ನಮ್ಮಗೆ ನ್ಯಾಯ ಕೊಡಿಸಿ ನಮ್ಮ ಕುಟುಂಬ ಉಳಿಸಿ ಎಂದು ಹೇಳಿದರು.

ಶಾಂತಾ ಅಂತರಗಂಗಿ ಮಾತನಾಡಿ, ನಾವು ದುಡ್ಡಿಯುತ್ತಿರುವಾಗ ಹಿಂದಿನ ಮುಖ್ಯಾಧಿಕಾರಿಗಳು ನಿಮಗೆ ಪಗಾರ ಯಾರು



ಕೋಡುತ್ತಾರ ಎಲ್ಲಿಂದ ಕೊಡಬೇಕು ಅಂತಾಃ ಹೇಳಿ ನಮಗೆ ಕೆಲಸದಿಂದ ತೆಗೆದು ಹಾಕಿದ್ದಾರೆ. ನಮಗ ಸಂಬಳ ಬೇಡ ನೌಕರಿ ತುಂಬಿಕೊಳ್ಳುವ ಸಮಯ ಬಂದಾಗ ನಮ್ಮನ್ನೇ ತೆಗೆದುಕೊಳ್ಳಿ ಎಂದರು.

ಪ್ರತಿಭಟನಾ ಸ್ಥಳಕ್ಕೆ ನಗರಸಭೆ ಪೌರಾಯುಕ್ತ ಎಸ್.ರಾಜಶೇಖರಪೌರಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರ ಆದೇಶ ನಾವೆಲ್ಲ ಅಧಿಕಾರಿಗಳು ಕಾರ್ಯನಿರ್ವಹಣೆ ಮಾಡುತ್ತೇವೆ. ಒಂದು ವೇಳೆ ಹುದ್ದೆಗಳನ್ನು ತುಂಬಿಕೊಳ್ಳಿ ಎಂದು ಸರಕಾರದಿಂದ ಆದೇಶ ಬಂದರೆ ಪ್ರಥಮ ಆದ್ಯತೆ ನಿಮಗೆ ನೀಡಲಾಗುವುದು ಎಂದು ಭರವಸೆ ನೀಡಿದರು.

ರೇಖಾ ಬಿಸನಾಳ, ರೇವಣಸಿದ್ದ ಬಿಸನಾಳ, ಜ್ಯೋತಿ ಹೊಸಮನಿ, ಅನಸುಬಾಯಿ ಬರಗಲ್ಲ, ನೀಲಮ್ಮ ಗುಂದಗಿ, ಮಲ್ಲಪ್ಪ ಸುಲ್ಪಿ, ರೇಣುಕಾ ಬರಗಲ್, ನಿಂಗಮ್ಮ ಬಿಸನಾಳ, ನೀಲವ್ವ ಬ್ಯಾಕೋಡ, ಶ್ರೀದೇವಿ ಚೌರ, ಅನಸೂಬಾಯಿ ಸುಲ್ಪಿ, ಪುಟ್ಟಪ್ಪ ಕೂಚಬಾಳ, ರಾಜು ಬಡಿಗೇರ, ಮಲಕಪ್ಪ ಮಾಣಸುಣಗಿ, ಯಲ್ಲಮ್ಮ ಕೂಚಬಾಳ, ಮಾಂತವ್ವ ಸುಲ್ಪಿ, ಶಾಂತವ್ವ ಕೂಚಬಾಳ, ಮಾದೇವಿ ಎಮ್ಮಿ, ರೇಣುಕಾ ಕಟ್ಟಿಮನಿ, ರೇಣುಕಾ ರಾಮನಳ್ಳಿ, ಶಾಂತಾ ಅಮತರಗಂಗಿ, ಶರಣಮ್ಮ ಕಟ್ಟಿಮನಿ, ಗಂಗೂಬಾಯಿ ದೇವರಮನಿ, ರೇಣುಕಾ ವಗ್ಗರ, ಮಲ್ಲಮ್ಮ ಹೊಸಮನಿ, ಕನಕಮ್ಮ ದೊಡಮನಿ, ಲಲಿತಾ ಪುರದಾಳ, ಗೀತಾ ಕಟ್ಟಿಮನಿ, ಬಾಗಮ್ಮ ಕಟ್ಟಿಮನಿ, ರಾಜು ಪುರದಾಳ, ಶರಣಮ್ಮ ತೇಲಗಬಾಳ, ಮುತ್ತು ದೊಡಮನಿ, ರೇಣುಕಾ ಮುಡ್ಡಿ ಇದ್ದರು.

ರಾಷ್ಟ್ರೀಯ ಯೋಜನೆಯಾಗಿ ಕೃಷ್ಣಾ ಮೇಲ್ದಂಡೆ ಘೋಷಿಸಿ

ವಿಜಯಪುರ: ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡುವುದು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಮಗಾರಿಗೆ 1 ಲಕ್ಷ ಕೋಟಿ ರೂ. ಅನುದಾನ ಬಿಡುಗಡೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ರೈತ ಹಿತಕ್ಕಾಗಿ ಯುಕೆಪಿ ಯೋಜನೆ ರಾಷ್ಟ್ರೀಯ ಯೋಜನೆಯಾಗಿ ಘೋಷಣೆಯಾಗಬೇಕಿರುವುದು ಅಗತ್ಯವಿದೆ. ನ್ಯಾ.ಬ್ರಿಜೇಶಕುಮಾರ ನೇತೃತ್ವದ 2ನೇ ನ್ಯಾಯಾಧೀಕರಣದ ತೀರ್ಪಿನನ್ವಯ ಜಲಾಶಯದ ನೀರಿನ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಗಂಭೀರ ಸ್ವರೂಪದ ಕ್ರಮಕೈಗೊಳ್ಳುವುದು ಅಗತ್ಯವಾಗಿದೆ ಎಂದರು.

ಸಂಘಟನೆ ಜಿಲ್ಲಾಧ್ಯಕ್ಷ ಉಮೇಶ ವಾಲೀಕಾರ ಮಾತನಾಡಿ, ರಾಜ್ಯದ ರೈತರು ಜಮೀನು ದಾರಿಗಾಗಿ ದಿನನಿತ್ಯ ಹಳ್ಳಿಗಳಲ್ಲಿ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ದಾರಿಗಾಗಿ ಹೊಡೆದಾಟಗಳು ನಡೆಯುತಿವೆ. ಕೆಲವೊಂದು ಕಡೆ ಕೊಲೆಗಳಾಗಿವೆ. ದಾರಿ ಕೊಡದ ಕಾರಣ ಜಮೀನು ಬಿತ್ತನೆ ಮಾಡದೆ ಬೀಳು ಬಿದ್ದಿವೆ. ಇದರಿಂದ ರೈತ ಕುಟುಂಬಗಳು ಉಪವಾಸ ಬೀಳುವ ಪರಸ್ಥಿತಿ ಎದುರಾಗಿದೆ. ಈ ಹಿಂದೆ 2023ರಲ್ಲಿ ಹೊರಡಸಿದ ಸರ್ಕಾರದ ಸುತ್ತೋಲೆಯನ್ನು ಮಾರ್ಪಾಡು ಮಾಡಿ ಸೂಕ್ತ ಕಾನೂನು ತಿದ್ದುಪಡಿ ಮಾಡಬೇಕು ಎಂಬ ಬೇಡಿಕೆ ಮಂಡಿಸಿದರು.

ಜಿಲ್ಲಾ ಪ್ರಧಾನಕಾರ್ಯರ್ಶಿ ಬಸವರಾಜ ಸಿದ್ದಾಪುರ ಮಾತನಾಡಿ, ರೈತರು ರಸಗೊಬ್ಬರ ಖರೀದಿ ಮಾಡಬೇಕಾದರೆ ರಾಜ್ಯ ಸರ್ಕಾರ ಕಡ್ಡಾಯವಾಗಿ ಎಫ್ ಐಡಿ ಮಾಡಿಸಬೇಕು. ಇಲ್ಲದಿದ್ದರೆ. ರಸಗೊಬ್ಬರ ದೊರೆಯುವುದಿಲ್ಲವೆಂಬ ಹೊಸ ನಿಯಮ ಜಾರಿಗೆ ತಂದಿರುವದು ಸರಿಯಲ್ಲ ಇದರಿಂದ ರೈತರಿಗೆ



ಅನ್ಯಾಯವಾಗುತ್ತಿದೆ. ಆದ್ದರಿಂದ ಎಫ್.ಐಡಿ ಕಡ್ಡಾಯ ಕೈಬಿಡಬೇಕು. ರೈತರಿಗೆ ಅಗತ್ಯವಿರುವ?ಷ್ಟು ರಸಗೊಬ್ಬರ ಒದಗಿಸಬೇಕು ಎಂದರು.

ಜಿಲಾ ಸಂಘಟನಾ ಕಾರ್ಯದರ್ಶಿ ಗುರುರಾಜ ಪಡಶೆಟ್ಟಿ ಮಾತನಾಡಿ, ರೈತರು ಬಿತ್ತನೆ ಮಾಡಿದ ಬೆಳೆಗಳು ಹಾನಿಗೊಳಗಾದ ಸಂದರ್ಭದಲ್ಲಿ ಪರಿಹಾರಕ್ಕಾಗಿ ವಿಮೆ ಕಂಪನಿಗೆ ಸಾವಿರಾರು ರೂಗಳನ್ನು ವಿಮಾ ರೂಪದಲ್ಲಿ ಕಂತು ತುಂಬಿಸಿಕೊಳ್ಳಲಾಗಿದೆ. ಬೆಳೆಗಳು ಹಾನಿಯಾಗಿದ್ದರೂ ಕೂಡಾ ವಿಮೆ ಕಂಪನಿಯವರು ಪರಿಹಾರ ನೀಡದೆ ರೈತರಿಗೆ ವಂಚಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ವಿಮೆ ಪಾವತಿಸಿದ ರೈತರಿಗೆ ಸೂಕ್ತ ಪರಿಹಾರ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು. ಬೂದಿಹಾಳ-ಪೀರಾಪೂರ ಏತ ನೀರಾವರಿ ಬಾಕಿ ಉಳಿದ ಕಾಮಗಾರಿಯನ್ನು ಶ್ರೀಘ್ರದಲ್ಲಿ ಮುಕ್ತಾಯಗೊಳಿಸಬೇಕು ಎಂದರು.

ಪಾಂಡು ಹ್ಯಾಟಿ, ಹೊನಕೇರೆಪ್ಪ ತೆಲಗಿ, ಶೆಟ್ಟೆಪ್ಪ ಲಮಾಣಿ, ಕಲ್ಲಪ್ಪ ಕುಂಬಾರ, ಸಿದ್ದು ಹಿರೇಮಠ, ಸಂಗಮೇಶ ನಿಲೇಶ ಕುರವಿನಶೆಟ್ಟಿ ಸಂಗನಗೌಡ ಪಾಟೀಲ ಶಿವಪ್ಪ ಮಾಳಗೊಂಡ, ಲಂಕೇಶ ತಳವಾರ, ಬಾಬುಶಿ ಭೋಸಲೆ, ಶಿವಾನಂದ ಬಿರಾದಾರ, ಅಪ್ಪಾಸಾ ಸೀನಖೇಡ, ಗುಡುಸಾಬ ಬರಡೋಲ, ಮಲಿಗೆಪ್ಪ ಸಾಸನೂರ ಲಂಕೆಪ್ಪ ತಳವಾರ, ಗುರಲಿಂಗಪ್ಪ ಪಡಸಲಗಿ ಪಾಲ್ಗೊಂಡಿದ್ದರು.

ಕಿರುಸುದ್ದಿ


ಮೋದಿ ಆಡಳಿತಕ್ಕೆ ಸಿಕ್ಕ ಜಯ

ಕಲಬುರಗಿ: ಪಂಚ ರಾಜ್ಯಗಳ ಚುನಾವಣೆ ಭಾರತದಲ್ಲಿ ಇತಿಹಾಸದಲ್ಲಿ ಒಂದು ಐತಿಹಾಸಿಕ ದಿನವಾಗಿದ್ದು, ಮೋದಿ ಆಡಳಿತಕ್ಕೆ ಸಿಕ್ಕ ಜಯ ಎಂದು ಮಾಜಿ ಲೋಕಸಭಾ ಸದಸ್ಯ ಡಾ. ಉಮೇಶ್ ಜಾಧವ್ ಅಭಿನಂದನೆ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಆಡಳಿತ ಹಾಗೂ ತಮಿಳುನಾಡು ಮತ್ತು ಕೇರಳಂ ರಾಜ್ಯಗಳಲ್ಲಿ ಬಿಜೆಪಿ ಗಣನೀಯವಾಗಿ ಶೇಕಡಾವಾರು ಮತ ಹೆಚ್ಚಿಸಿ ತನ್ನ ಪಾರಮ್ಯ ಮೆರೆದಿದೆ. ತಮಿಳುನಾಡಿನಲ್ಲಿ ಸನಾತನ ವಿರೋಧಿ ನಿಲುವಿನ ಮುಖ್ಯಮಂತ್ರಿ ಪರಾಭಾವದ ಜೊತೆಗೆ ಡಿಎಂಕೆಯನ್ನು ಜನತೆ ತಿರಸ್ಕರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅಮಿತ್ ಶಾ ,ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನಬಿನ್ ಸೇರಿದಂತೆ ಎಲ್ಲ ನಾಯಕರ ಹಾಗೂ ತಳಮಟ್ಟದ ಬಿಜೆಪಿ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯ ಇದಾಗಿದೆ ಎಂದರು. ರಾಜ್ಯದ ಉಪ ಚುನಾವಣೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಬಿಜೆಪಿ ವೀರೋಚಿತ ಸೋಲು ಕಂಡಿದೆ. ಆಡಳಿತಾರೂಢ ಕಾಂಗ್ರೆಸ್ ಸರಕಾರ ಹಣ ಮತ್ತು ಅಧಿಕಾರ ಬಳಸಿ ವಾಮಮಾರ್ಗದಲ್ಲಿ ಜಯ ಸಾಧಿಸಿದೆ ಎಂದು ಡಾ.ಜಾಧವ್ ದೂರಿದರು.

ಮತದಾರರ ವಿಶ್ವಾಸದ ಧ್ಯೋತಕ: ಭೂಮರಡ್ಡಿ

ಕೊಪ್ಪಳ: ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಒಕ್ಕೂಟದಲ್ಲಿ ಮತದಾರ ವಿಶ್ವಾಸ ಇಟ್ಟಿರುವುದು ನಾಲ್ಕು ರಾಜ್ಯಗಳ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣಾ ಫಲಿತಾಂಶಗಳಲ್ಲಿ ಸ್ಪಷ್ಟವಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ ಭೂಮರಡ್ಡಿ ತಿಳಿಸಿದ್ದಾರೆ.



ಪಶ್ಚಿಮ ಬಂಗಾಳದಲ್ಲಿ ಒಕ್ಕೂಟದ ಗೆಲುವು ಐತಿಹಾಸಿಕ. ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಚುನಾವಣಾ ತಂತ್ರಗಾರಿಕೆ, ಉತ್ತರ ಪ್ರದೇಶ ಮತ್ತು ಅಸ್ಸಾಂ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥ್ ಮತ್ತು ಹಿಮಂತ್ ಬಿಸ್ವ ಶರ್ಮ ಅವರ ತಳಮಟ್ಟದ ಸಂಘಟನಾ ಕಾರ್ಯ ಫಲಿಸಿದೆ. ಅಸ್ಸಾಂನಲ್ಲಿ ಮೂರನೇ ಬಾರಿಗೆ ನಮ್ಮ ಮೈತ್ರಿ ಪಕ್ಷ ಅಧಿಕಾರಕ್ಕೆ ಬಂದಿದೆ. ಪುದುಚೇರಿಯಲ್ಲಿ ಒಕ್ಕೂಟ ಭಾರಿ ಗೆಲುವು ದಾಖಲಿಸಿದೆ. ಇಂಡಿ ಒಕ್ಕೂಟ ಎನ್ ಡಿಎ ಒಕ್ಕೂಟಕ್ಕೆ ಸಮವಲ್ಲ ಎಂಬುದನ್ನು ಫಲಿತಾಂಶ ಸಾಬೀತುಪಡಿಸಿವೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೈತ್ರಿ ಪಕ್ಷದ ನಾಯಕರು ಮತ್ತು ನಮ್ಮ ಪಕ್ಷದ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣದಲ್ಲಿ ವ್ಯಾಪಕ ಪ್ರಚಾರ ಮಾಡಿದರು. ಇದರಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಮತ ಪಡೆಯಲಾಗಲಿಲ್ಲ. ಉಪಚುನಾವಣೆಗಳಲ್ಲಿ ಆಡಳಿತ ಪಕ್ಷ ಗೆಲ್ಲುವುದು ಸಹಜ. ಹಣ ಬಲ, ತೋಳ್ಬಲ ಹಾಗೂ ಅಧಿಕಾರ ದುರುಪಯೋಗಪಡಿಸಿಕೊಂಡು ಆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲವು ಸಾಧಿಸಿದೆ. ನಮ್ಮ ಮೈತ್ರಿ ಪಕ್ಷಗಳ ಒಗ್ಗಟ್ಟಿಗೆ ಮತದಾರ ವಿಶ್ವಾಸ ವ್ಯಕ್ತಪಡಿಸಿರುವುದು ಗಮನಾರ್ಹ ಎಂದು ತಿಳಿಸಿದ್ದಾರೆ.

ಶರಣರ ಆರೋಗ್ಯವೃದ್ಧಿಗಾಗಿ ಸಾಮೂಹಿಕ ಪ್ರಾರ್ಥನೆ

ಸಿಂಧನೂರು: ತಾಲೂಕಿನ ಬಂಗಾರಿ ಕ್ಯಾಂಪ್ ಸಿದ್ಧಾಶ್ರಮದ ಸಿದ್ದರಾಮೇಶ್ವರ ಶರಣರ ಆರೋಗ್ಯ ಶೀಘ್ರ ಗುಣಮುಖವಾಗಲೆಂದು ನಗರದ ಹೋಲಿ ಫ್ಯಾಮಿಲಿ ಚರ್ಚನಲ್ಲಿ ವಿಶೇಷ ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮ ಭಕ್ತಿಭಾವದಿಂದ ನಡೆಯಿತು. ದೀನ-ದಲಿತರ ಆಶಾಕಿರಣ, ಸರಳ ಸಜ್ಜನಿಕೆ ಪ್ರತಿರೂಪ, ಸರ್ವಧರ್ಮೀಯರ ಪ್ರೀತಿಗೆ ಪಾತ್ರರಾಗಿರುವ ಸಿದ್ದರಾಮೇಶ್ವರ ಶರಣರು ಇತ್ತೀಚೆಗೆ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಬಳ್ಳಾರಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ ವಿವಿಧ ಧರ್ಮದ ಜನರು, ಭಕ್ತರು ಶೀಘ್ರ ಗುಣಮುಖತೆಗೆ ಪ್ರಾರ್ಥನೆ ಸಲ್ಲಿಸಿದರು. ಆದರ ಭಾಗವಾಗಿ ಹೆಡಗಿಬಾಳ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸಿಂಧನೂರಿನಲ್ಲಿ ನಡೆಯುತ್ತಿರುವ ಉಚಿತ ಬೇಸಿಗೆ ಶಿಬಿರದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಹೋಲಿ ಫ್ಯಾಮಿಲಿ ಚರ್ಚಗೆ ಭೇಟಿ ನೀಡಿ ಶರಣರ ಆರೋಗ್ಯ ವೃದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಹೋಲಿ ಫ್ಯಾಮಿಲಿ ಚರ್ಚ ಮುಖ್ಯ ಗುರುಗಳಾದ ವಂದನೀಯ ಫಾದರ್ ಜ್ಞಾನಪ್ರಕಾಶಂ ಮಾತನಾಡಿ, ಶರಣರು ಆರೋಗ್ಯ ಶೀಘ್ರ ಸುಧಾರಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು. ಚರ್ಚನ ಸರ್ವ ಸದಸ್ಯರು, ಕ್ರೈಸ್ತ ವಿಶ್ವಾಸಿಗಳು, ವಿದ್ಯಾರ್ಥಿಗಳು, ಶಿಕ್ಷಕರು, ಭಕ್ತಾದಿಗಳು ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿದರು. ಇತ್ತೀಚಿನ ದಿನಗಳಲ್ಲಿ ಸಿದ್ದರಾಮೇಶ್ವರ ಶರಣರ ಆರೋಗ್ಯದ ಬಗ್ಗೆ ಭಕ್ತರಲ್ಲಿ ಆತಂಕ ಮನೆ ಮಾಡಿದ್ದರೂ, ಚಿಕಿತ್ಸೆ ಬಳಿಕ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬರುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು, ಅಭಿಮಾನಿಗಳು, ವಿವಿಧ ಧಾರ್ಮಿಕ ಮುಖಂಡರು ಶರಣರ ಆರೋಗ್ಯ ವೃದ್ಧಿಗಾಗಿ ದೇವಾಲಯ, ಮಸೀದಿ,ಚರ್ಚಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.



ಸಿಂಧನೂರು: ತಾಲೂಕಿನ ಬಂಗಾರಿ ಕ್ಯಾಂಪ್ ಸಿದ್ಧಾಶ್ರಮದ ಸಿದ್ದರಾಮೇಶ್ವರ ಶರಣರ ಆರೋಗ್ಯ ಶೀಘ್ರ ಗುಣಮುಖವಾಗಲೆಂದು ನಗರದ ಹೋಲಿ ಫ್ಯಾಮಿಲಿ ಚರ್ಚನಲ್ಲಿ ವಿಶೇಷ ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮ ಭಕ್ತಿಭಾವದಿಂದ ನಡೆಯಿತು.

ಕಸಾಪ ಸಂಸ್ಥಾಪನಾ ದಿನಾಚರಣೆ ಇಂದು

ಸಿಂಧನೂರು: ಕಸಾಪ ತಾಲೂಕು ಘಟಕದಿಂದ ಮೇ 5ರಂದು ಬೆಳಗ್ಗೆ 10ಕ್ಕೆ ನಗರದ ಸನ್‌ರೈಸ್ ಕಾಲೇಜಿನಲ್ಲಿ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ, ಕನ್ನಡ ಪ್ರೌಢಶಾಲೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾಲೂಕು ಘಟಕದ ಅಧ್ಯಕ್ಷ ಎಚ್.ಎಫ್. ಮಸ್ಕಿ ತಿಳಿಸಿದ್ದಾರೆ.



ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಪಿಎಂಸಿ ಮಾಜಿ ರಾಜ್ಯ ಉಪಾಧ್ಯಕ್ಷ ರಾಜಶೇಖರ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ವೀರನಗೌಡ ಗುಮಗೇರಾ ಉಪನ್ಯಾಸ ನೀಡಲಿದ್ದಾರೆ.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಸ್.ಶರಣೇಗೌಡ, ಸನ್‌ರೈಸ್ ಸಮೂಹ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ., ಕಸಾಪ ಮಾಜಿ ತಾಲೂಕು ಅಧ್ಯಕ್ಷ ಬೀರಪ್ಪ ಶಂಭೋಜಿ, ವೆಂಕನಗೌಡ ವಟಗಲ್ ,ಜಿಲ್ಲಾ ಪ್ರತಿನಿಧಿ ರಮಾದೇವಿ ಶಂಭೋಜಿ, ಮಾಜಿ ಅಧ್ಯಕ್ಷ ಸರಸ್ವತಿ ಪಾಟೀಲ, ಪಂಪಯ್ಯಸ್ವಾಮಿ ಸಾಲಿಮಠ, ವನಸಿರಿ ಫೌಂಡೇಷನ್‌ನ ಅಮರೇಗೌಡ ಮಲ್ಲಾಪುರ, ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಪಾಷಾ ಜಾಹಗೀರ್ ದಾರ್, ಮಹಿಳಾ ಮುಖಂಡರಾದ ಲಕ್ಷ್ಮೀ ಪತ್ತಾರ ಭಾಗವಹಿಸಲಿದ್ದು, ಕನ್ನಡಾಭಿಮಾನಿಗಳು, ಸಾಹಿತ್ಯ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮಸ್ಕಿ ಮನವಿ ಮಾಡಿದ್ದಾರೆ.



ಯಲಬುರ್ಗಾ: ತಾಲೂಕಿನ ಹಿರೇಅರಳಿಹಳ್ಳಿ ಗ್ರಾಮದ ರೈತ ಮುದುಕಪ್ಪ ಮೂಕಪ್ಪ ಕುರಬರಗೆ ಸೇರಿದ ಜಾನುವಾರಿಗೆ ಸಂಗ್ರಹಿಸಿಟ್ಟ ಮೂರು ಮೇವಿನ ಬಣವಿ ಆಕಸ್ಮಿಕವಾಗಿ ಬೆಂಕಿ ತಗುಲಿದ ಪರಿಣಾಮ ಜೋಳದ ಹುಲ್ಲು, ಹೊಟ್ಟು ಬೆಂಕಿಗೆ ಆಹುತಿಯಾಗಿ ಲಕ್ಷಾಂತರ ರೂ.ನಷ್ಟ ಸಂಭವಿಸಿದೆ. ಇದರಿಂದಾಗಿ ದನಕರುಗಳಿಗೆ ಮೇವು ಇಲ್ಲದಂತಾಗಿದೆ. ಈ ಬಗ್ಗೆ ಕೂಡಲೇ ಅಧಿಕಾರಿಗಳು ಗಮನಹರಿಸಿ,ಮೇವು ನಷ್ಟ ಪರಿಹಾರ ದೊರಕಿಸಿ ಕೊಡಬೇಕೆಂದು ರೈತನ ಅಳಲಾಗಿದೆ.

ಬಂಗಾಳದಲ್ಲಿ ಐತಿಹಾಸಿಕ ಜಯ | ಬಿಜೆಪಿಯಿಂದ ಸಂಭ್ರಮಾಚರಣೆ

ಮಮತಾಗೆ ತಕ್ಕ ಉತ್ತರ: ಬಗಲಿ

ಕಲಬುರಗಿ: ದಶಕಗಳಿಂದಲೂ ಪಶ್ಚಿಮ ಬಂಗಾಳದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಮಮತಾ ಬ್ಯಾನರ್ಜಿ ಗೂಂಡಾ ಆಡಳಿತಕ್ಕೆ ಬಂಗಾಳದ ಜನ ಕೊನೆಗೂ ಅಂತ್ಯ ಹಾಡಿದ್ದು, 200ಕ್ಕೂ ಅಧಿಕ ಸ್ಥಾನ ಗೆಲ್ಲುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತೀಯ ಜನತಾ ಪಕ್ಷ ಐತಿಹಾಸಿಕ ಗೆಲುವು ಸಾಧಿಸಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಹರ್ಷ ವ್ಯಕ್ತಪಡಿಸಿದರು.

ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಸೋಮವಾರ ಪಂಚ್ ರಾಜ್ಯಗಳ ಚುನಾವಣೆಯ ಫಲಿತಾಂಶದಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದ ಬಳಿಕ ಮಾತನಾಡಿ, ಬಂಗಾಳದಲ್ಲಿ ಕಳೆದ 15 ವರ್ಷಗಳಿಂದ ಮಹಿಳೆಯರು ಅಸುರಕ್ಷಿತವಾಗಿದ್ದರು. ಬಾಂಗ್ಲಾ ನುಸುಳುಕೋರರ ಬಲದಿಂದ ಅಧಿಕಾರ ನಡೆಸುತ್ತಿದ್ದ ಮಮತಾ ಬ್ಯಾನರ್ಜಿಗೆ ನಿಜವಾದ ಬಂಗಾಲದ ಭಾರತೀಯರು ತಕ್ಕ ಪಾಠ ಕಲಿಸಿದ್ದಾರೆ. ಮೋದಿ, ಅಮಿತ್ ಷಾ ಹಾಗೂ ನಿತೀನ್ ನಬಿನ್ ನೇತೃತ್ವದ ಬಿಜೆಪಿಗೆ ಇದೊಂದು ಐತಿಹಾಸಿಕ ಮೈಲುಗಲ್ಲು ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಅಮರನಾಥ ಪಾಟೀಲ ಮಾತನಾಡಿ, ಈ ದಿನ ದೇಶಕ್ಕೆ ಐತಿಹಾಸಿಕವಾದ 3ನೇ ರಾಜ್ಯಗಳಲ್ಲಿ ಬಿಜೆಪಿ ಹಾಗೂ ಮಿತ್ರ ಪಕ್ಷಗಳು ಅಭೂತಪೂರ್ವ ಜಯ ದಾಖಲಿಸುವ ಮೂಲಕ ದೇಶದ 75 ಪ್ರತಿಶತ ಭಾಗಗಳಲ್ಲಿ ಆಡಳಿತ ನಡೆಸುತ್ತಿವೆ. ಬರುವಂತಹ ದಿನಗಳಲ್ಲಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಕರ್ನಾಟಕದಲ್ಲೂ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.



> ಪಶ್ಚಿಮ ಬಂಗಾಳದ ಮತದಾರರು ನಿರೀಕ್ಷೆಗೂ ಮೀರಿ ಮತ ಹಾಕುವ ಮೂಲಕ ಮೋದಿ ಕೈ ಬಲಪಡಿಸಿದ್ದಾರೆ. ಜನ ಸಂಘದ ಸಂಸ್ಥಾಪಕರಾದ ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ ಜೀವಿತಾವಧಿಯಲ್ಲಿ ಕಂಡ ಕನಸು ಇಂದು ನನಸಾಗಿದ್ದು,ಇದಕ್ಕಿಂತ ದೊಡ್ಡ ಖುಷಿ ಭಾರತೀಯ ಜನತಾ ಪಕ್ಷಕ್ಕೆ ಮತ್ತೊಂದಿಲ್ಲ.
> ■ **ಬಸವರಾಜ ಮತ್ತಿಮಡು, ರಾಜ್ಯ ಕಾರ್ಯದರ್ಶಿ, ಶಾಸಕ**

200ಕ್ಕೂ ಅಧಿಕ ಸ್ಥಾನ ಗೆಲ್ಲುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತೀಯ ಜನತಾ ಪಕ್ಷ ಐತಿಹಾಸಿಕ ಗೆಲುವು ಸಾಧಿಸಿದೆ.

ಪ್ರಧಾನ ಕಾರ್ಯದರ್ಶಿ ಉಮೇಶ್ ಪಾಟೀಲ್, ಶಿವಯೋಗಿ ನಾಗೇನಹಳ್ಳಿ, ವಿಭಾಗ ಸಹ ಪ್ರಭಾರಿ ಶರಣಪ್ಪ ತಳವಾರ ಮುಖಂಡರಾದ ಅಂಬಾರಾಯ್ ಅಷ್ಟಗಿ, ಸಿದ್ದಾಜಿ ಪಾಟೀಲ್, ವಿದ್ಯಾಸಾಗರ ಕುಲಕರ್ಣಿ, ಧರ್ಮಣ್ಣಾ ಇಟಗಾ, ಸಂತೋಷ ಹಾದಿಮನಿ, ಗಿರಿರಾಜ್ ಯಳಮೇಲಿ, ರಾಜು ನಾಗೇನಹಳ್ಳಿ, ಶಿವಕುಮಾರ್ ಪೋಚಾಲಿ, ಡಾ.ಸುಧಾ ಹಾಲಕಾಯಿ, ಸವಿತಾ ಪಾಟೀಲ್, ಶೋಭಾ ಬಾಗೇವಾಡಿ, ಸುನಂದಾ ಪಾಟೀಲ್, ಸಪ್ನಾ ಮಂಗಲಗಿ, ರವಿಚಂದ್ರ ಕಾಂತಿಕರ್, ಬಾಬುರಾವ್ ಹಾಗರಗುಂಡಗಿ, ನಾಗರಾಜ್ ಮಹಾಗಾಂವಕರ್, ಮಲ್ಲಿಕಾರ್ಜುನ ಓಕಳಿ, ಮಹೇಶ್ ಚೌಹಾಣ್, ಶಿವ ಅಷ್ಟಗಿ ಸೇರಿದಂತೆ ಪಕ್ಷದ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಂಗ್ರೆಸ್ ನಿರ್ಗಮನದ ಕ್ಷಣಗಣನೆ ಆರಂಭ: ಸಿವಿಸಿ

ಕೊಪ್ಪಳ: ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣಾ ಫಲಿತಾಂಶ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಿಂದ ನಿರ್ಗಮಿಸುವ ಕ್ಷಣಗಣನೆ ಆರಂಭದ ಸೂಚಕ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ ಹೇಳಿದ್ದಾರೆ.



ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಸ್ತಿತ್ವದಲ್ಲಿದೆಯೇ ಎಂಬುದನ್ನು ಹುಡುಕುವ ಪರಿಸ್ಥಿತಿ ಬಂದಿದೆ. ಕೇರಳದಲ್ಲಿ ಆಡಳಿತ ವಿರೋಧದ ಅಲೆಗೆ ಮತದಾರರು ಮತ ಚಲಾಯಿಸಿದ್ದಾರೆ. ಗುಂಪುಗಾರಿಕೆ ಹಾಗೂ ದೂರದೃಷ್ಟಿ ಕೊರತೆ ನಾಯಕತ್ವದ ಫಲವಾಗಿ ಕಾಂಗ್ರೆಸ್ ಸಂಪೂರ್ಣವಾಗಿ ನೆಲ ಕಚ್ಚಿದೆ. ಕರ್ನಾಟಕದಲ್ಲಿ ಅಧಿಕಾರ ಲಾಲಸೆ ಹಾಗೂ ಒಳ ಜಗಳದಿಂದ ಆ ಪಕ್ಷ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆ ನಡೆದ ಪ್ರದೇಶಗಳಲ್ಲಿ ಎನ್‌ಡಿಎ ಒಕ್ಕೂಟದ ಮತ ಗಳಿಕೆ ಪ್ರಮಾಣ ಗಮನಾರ್ಹವಾಗಿ ಏರಿಕೆಯಾಗಿದೆ. ಒಕ್ಕೂಟದ ನಾಗಾಲೋಟ ಮುಂದುವರೆದಿದೆ. ಇದರಿಂದ ಪ್ರೇರೇಪಿತವಾಗಿ ಕರ್ನಾಟಕದಲ್ಲಿ ಮೈತ್ರಿಕೂಟ ಮತ್ತಷ್ಟು ಸಂಘಟನೆಗೊಂಡು ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಕಿತ್ತು ಎಸೆಯುವುದು ನಿಶ್ಚಿತ ಎಂದು ತಿಳಿಸಿದ್ದಾರೆ.

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಮತಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ. ಸ್ವತಃ ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಸದಸ್ಯರು ಬಾಗಲಕೋಟೆಯಲ್ಲಿ ಗೆಲುವಿಗಾಗಿ ಠಿಕಾಣಿ ಹೂಡಿದರು. ದಾವಣಗೆರೆಯಲ್ಲಿ ಆ ಪಕ್ಷದ ಸಾಂಪ್ರದಾಯಕ ಮತ ಬ್ಯಾಂಕ್ ವಿಭಜನೆಗೊಂಡಿದೆ. ಇವು ಕಾಂಗ್ರೆಸ್ ಪಕ್ಷದ ಪತನದ ಸೂಚನೆಗಳು ಎಂದು ಹೇಳಿದ್ದಾರೆ.

ಸಮರ್ಪಕ ಸೇವೆ ನೀಡಲು ಬದ್ಧ: ನವೀನ

ಕೊಪ್ಪಳ: ಬಿಜೆಪಿ ಮೂರು ರಾಜ್ಯಗಳಲ್ಲಿ ಸಾಧಿಸಿದ ಐತಿಹಾಸಿಕ ವಿಜಯ ದೇಶದ ಜನತೆ ಅಭಿವೃದ್ಧಿ, ಸುಶಾಸನ, ಪಾರದರ್ಶಕ ಆಡಳಿತದ ಮೇಲಿರುವ ಭರವಸೆ ಮತ್ತೊಮ್ಮೆ ದೃಢಪಡಿಸಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣನವರ್ ಹೇಳಿದರು. ಈ ಕುರಿತು ಪ್ರಕಟಣೆ ನೀಡಿದ ಅವರು, ಪ್ರಧಾನಿ ನರೇಂದ್ರ ಮೋದಿ ದಿಟ್ಟ ನಾಯಕತ್ವ, ಜನಪರ ಯೋಜನೆ ಜನಮನ ಗೆದ್ದಿವೆ. ಪಕ್ಷದ ಕಾರ್ಯಕರ್ತರ ಶ್ರಮ, ಸಂಘಟನೆ ಬಲ, ಜನರ ಆಶೀರ್ವಾದವೇ ಈ ವಿಜಯದ ಮೂಲಶಕ್ತಿ. ಮುಂದಿನ ದಿನಗಳಲ್ಲಿ ಜನರ ವಿಶ್ವಾಸಕ್ಕೆ ತಕ್ಕಂತೆ ಇನ್ನಷ್ಟು ಸಮರ್ಪಕ ಸೇವೆ ನೀಡಲು ಬಿಜೆಪಿ ಬದ್ಧವಾಗಿದೆ ಎಂದರು.



ಪಂಚ ರಾಜ್ಯಗಳ ಫಲಿತಾಂಶ: ಬಿಜೆಪಿಯಿಂದ ವಿಜಯೋತ್ಸವ

ಕುಷ್ಟಗಿ: ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಮಂತ್ರಿ ಅಮಿತಾ ಶಾ ಉತ್ತಮ ಆಡಳಿತದದಿಂದ ರಾಷ್ಟ್ರದಲ್ಲಿ ಕೇಸರಿಮಯ ಪರ್ವ ಶುರುವಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಮಹಾಂತೇಶ ಬದಾಮಿ ಹೇಳಿದರು.

ಪಂಚ ರಾಜ್ಯಗಳಲ್ಲಿ ಚುನಾವಣೆ ಫಲಿತಾಂಶ ಹೊರ ಬಳಿಕ ರಾಜ್ಯಗಳಲ್ಲಿ ಬಿಜೆಪಿ ಗೆಲವು ಸಾಧಿಸಿ ಇತಿಹಾಸ ಪುಟ ತೆರೆದ ಹಿನ್ನೆಲೆ ಪಟ್ಟಣದ ಮಾರುತಿ ವೃತ್ತದಲ್ಲಿ ತಾಲೂಕು ಬಿಜೆಪಿ ಮಂಡಳದ ವತಿಯಿಂದ ಸಂಭ್ರಮಿಸಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಣೆಯಲ್ಲಿ ಮಾತನಾಡಿ, ರಾಷ್ಟ್ರದಲ್ಲಿ ಒಂದು ಕಪ್ಪು ಚುಕ್ಕೆಯಿಲ್ಲದೇ ಆಡಳಿತ ನಡೆಸುವ ದಕ್ಷ ಪ್ರಾಮಾಣಿಕ ಆಡಳಿತಗಾರ ನರೇಂದ್ರ ಮೋದಿ ಉತ್ತಮ ಕಾರ್ಯಗಳಿಂದ ಬಿಜೆಪಿ ವಿವಿಧ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ. ಪಶ್ಚಿಮಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಭಾರಿ ಸರ್ಕಾರ ರಚನೆ ಮೂಲಕ ಇತಿಹಾಸ ನಿರ್ಮಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಮೊದಲನೇ ಭಾರಿಗೆ ಬಿಜೆಪಿ ಖಾತೆ ತೆರೆದು ಆಡಳಿತಕ್ಕೆ ಬಂದಿದ್ದು, ಪ್ರತಿಯೊಬ್ಬ ಭಾರತೀಯ ಕಾರ್ಯಕರ್ತರ ಹಾಗೂ ಪಕ್ಷದ ಹಿರಿಯರ ಪರಿಶ್ರಮವೇ ಕಾರಣ. ಹೀಗಾಗಿ ಕಾರ್ಯಕರ್ತರು ಬಿಜೆಪಿ ಪಕ್ಷಕ್ಕೆ ಮತ್ತಷ್ಟು ಬಲ ಹೆಚ್ಚಿಸಿದೆ. ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಅಂಗಡಿ, ಮುಖಂಡರಾದ ಸಂಗನಗೌಡ ಜೈನರ್, ಶುಖಮುನಿಗೌಡ ಗುರುವಿನ್, ಕಳಕಯ್ಯ ಗುರವಿನ್ ಸುರೇಶ ಸೇಬಿನಕಟ್ಟಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಉಮೇಶ ಯಾದವ್, ತಾಲೂಕು ಬಿಜೆಪಿ ಮಂಡಳದ ಕಾರ್ಯದರ್ಶಿ ದ್ಯಾಮಣ್ಣ ವಣಗೇರಿ ಬಸವರಾಜ ಗುಡದೂರ ಹಾಗೂ ಬಿಜೆಪಿ ಕಾರ್ಯಕರ್ತರು ಇನ್ನಿತರರು ಇದ್ದರು.



ಸಂಸ್ಕಾರ, ಶಿಸ್ತಿನಿಂದ ಪ್ರಗತಿ ಸಾಧ್ಯ: ಭಾಂಡಗೆ

ಹನುಮಸಾಗರ: ಸಮಾಜದಲ್ಲಿ ಯುವಕ- ಯುವತಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಕುಟುಂಬದ ಮೂಲ ಮೌಲ್ಯ ಉಳಿಸಲು ಪಾಲಕರೂ ಸಮಾನ ಜವಾಬ್ದಾರಿ ಹೊತ್ತಿರಬೇಕು. ಸಂಸ್ಕಾರ ಮತ್ತು ಶಿಸ್ತಿನ ಮೂಲಕವೇ ಸಮುದಾಯದಪ್ರಗತಿಸಾಧ್ಯ,ಹಾಗೂ ಪಾಲಕರು ನಿಮ್ಮ ಹೆಣ್ಣು ಮಕ್ಕಳಿಗೆ ಉಡುಗೆ ತೊಡುಗೆಗಳು ಸರಿಯಾದ ರೀತಿಯಲ್ಲಿ ಹಾಕಿಕೊಳ್ಳಲು ಹೇಳಿ, ಸಮಾಜದ ಏಕತೆ, ಸಂಪ್ರದಾಯಗಳ ಮಹತ್ವವನ್ನು ಸರಳಾಬಾಯಿ ಭಾಂಡಗೆ ವಿವರಿಸಿದರು.



ಪಟ್ಟಣದ ಅಂಬಾಭವಾನಿ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ಯುವಜನರಲ್ಲಿ ಸಂಸ್ಕಾರ ಜವಾಬ್ದಾರಿ ಹಾಗೂ ಸಾಮಾಜಿಕ ಜಾಗೃತಿ ಬೆಳೆಸುವ ಉದ್ದೇಶದಿಂದ ಎಸ್‌ಎಸ್‌ಕೆ ಸಮಾಜ ಟ್ರಸ್ಟ್ ವತಿಯಿಂದ ಆಯೋಜಿಸಿದ ಜಾಗೃತವೇ ನಮ್ಮ ಸಮಾಜದ ರಕ್ಷಣೆ ವಿಚಾರ ಸಂಕೀಣರವನ್ನು ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕ ಹನಮಂತಸಾ ನಿರಂಜನ ಮಾತನಾಡಿ, ಯುವಜನತೆ ಹಾಗೂ ಯುವತಿಯರು ತಮ್ಮ ಜೀವನದ ಮಹತ್ವದ ನಿರ್ಧಾರ ಸೂಕ್ತವಾಗಿ ತೆಗೆದುಕೊಳ್ಳಬೇಕು ಎಂದರು.

ಬಾಬು ಬಾಕಳೆರವರು ಯುವಜನತೆಗೆ ಜಾಗೃತಿ ನುಡಿ ನೀಡಿ, ಸ್ವಾವಲಂಬನೆ ಶಿಸ್ತು ಮತ್ತು ಸಂಘಟಿತ ಶಕ್ತಿ ಸಮಾಜದ ಅಭಿವೃದ್ಧಿಗೆ ಅವಶ್ಯಕಯುವಕರು ತಮ್ಮ ಜೀವನದಲ್ಲಿ ಗುರಿ ಹೊಂದಿ. ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ ಭಗೀರಥಸಾ ಪಾಟೀಲ ಮಾತನಾಡಿ, ಸಮಾಜದ ಬಾಂಧವರು ವೈಯಕ್ತಿಕ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಸಾಗಿದಾಗ ಮಾತ್ರ ಸಮುದಾಯದ ಅಭಿವೃದ್ಧಿ ಸಾಧ್ಯವೆಂದು ತಿಳಿಸಿದರು.

ಉಪಾಧ್ಯಕ್ಷ ವಿಠಲಸಾ ಶಿಂಗ್ರಿ, ಸುರೇಶ ರಾಯಬಾಗಿ, ಮಾರುತಿಸಾ ರಂಗ್ರೇಜ, ಸರಳಾಬಾಯಿ ಭಾಂಡಗೆ ಡಿ.ಸಿ. ಬಾಕಳೆ, ಬಾಬು ಬಾಕಳೆ, ಸರೋಜಾಬಾಯಿ ಶಿಂಗ್ರಿ, ರವಿಂದ್ರಸಾ ಬಾಕಳೆ, ಎಲ್ಲೂಸಾ ಬಾಕಳೆ, ರಾಜು ಮಿಷ್ಟೀನ್, ಭೀಮಸಾ ದೇವಳೆ, ಹನುಂತಸಾ ರಾಯಬಾಗಿ ಮಹಿಳಾ ಮಂಡಳ ಹಾಗೂ ಯುವಕ ಮಂಡಳ ಸದಸ್ಯರು ಇತರರು ಇದ್ದರು.

ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಶಾಸಕ ಸೂಚನೆ

ಹಟ್ಟಿಚಿನ್ನದಗಣಿ: ಯಲಗಟ್ಟಾದಿಂದ ಪೈದೊಡ್ಡಿ, ಗುರುಗುಂಟಾದಿಂದ ಗೌಡೂರು ರಸ್ತೆ, ಹಟ್ಟಿಯಿಂದ ಬಂಡೇಬಾವಿ ಗ್ರಾಮದವರೆಗೆ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ 12.50 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲು ಭೂಮಿಪೂಜೆ ನೆರವೇರಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಮುಗಿಸಲು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಶಾಸಕ ಮಾನಪ್ಪ ಡಿ.ವಜ್ಜಲ್ ಹೇಳಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಬಿಜೆಪಿ ಶಾಸಕರಿಗೆ ಅನುದಾನ ನೀಡುತ್ತಿಲ್ಲ.



ಪ್ರತಿಯೊಂದು ಅಭಿವೃದ್ಧಿಕಾಮಗಾರಿಗಳಿಗೆಅನುದಾನ ಪಡೆಯಲು ಸಿಎಂ, ಡಿಸಿಎಂ ಹಾಗೂ ಸಚಿವರ ಬಳಿ ಭಿಕ್ಷೆ ಬೇಡಿದರು ಕೂಡಾ ತಾತ್ಸಾರದಿಂದ ವರ್ತಿಸುತ್ತಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ. ಸಾಲದ ಮೊತ್ತ ಏರಿಸಿರುವುದೆ ರಾಜ್ಯ ಸರ್ಕಾರದ ಸಾಧನೆ ಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಟ್ಟಿಚಿನ್ನದಗಣೆಗೆ ಸಮೀಪದ ಬಂಡೇಬಾವಿ, ಮಾಚನೂರು ಹಾಗೂ ಯಲಗಟ್ಟಾ ಗ್ರಾಮದಲ್ಲಿ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಭಾನುವಾರ ಮಾತನಾಡಿದರು.

ಬಿಜೆಪಿ ಪ್ರಮುಖರಾದ ಗಿರಿಮಲ್ಲನಗೌಡ ಪಾಟೀಲ್ ಕರಡಕಲ್ ಮಾತನಾಡಿದರು. ಲೋಕೋಪಯೋಗಿ ಇಲಾಖೆ ಜೆಇ ಯಲಗೂರೇಶ್, ಹಸನ್‌ದೋಸ್ತ್, ಆರ್. ವೆಂಕಟೇಶ್ ಇದ್ದರು.

ನವ ಭಾರತದ ದಿಕ್ಸೂಚಿ: ಕ್ಯಾವಟರ್ ಸಂತಸ

ಕೊಪ್ಪಳ: ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಮತದಾರರು ಎನ್‌ಡಿಎ ಬೆಂಬಲಿಸುವ ಮೂಲಕ ನವ ಭಾರತಕ್ಕೆ ದಿಕ್ಸೂಚಿಯಾಗಿದ್ದಾರೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಬಿಜೆಪಿ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್ ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಈ ಫಲಿತಾಂಶ ಮೂಲಕ ಮತದಾರರು ಅಭಿವೃದ್ಧಿ, ಸ್ಥಿರತೆ, ಭದ್ರತೆಗೆ ಮನ್ನಣೆ ನೀಡಿದ್ದಾರೆ. ಇಂದು ದೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನಾಯಕತ್ವದ ಮೇಲೆ ಜನರ ವಿಶ್ವಾಸ ಮತ್ತೊಮ್ಮೆ ವ್ಯಕ್ತವಾಗಿದೆ. ಇಂದಿನ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ದೇಶಾದ್ಯಂತ ''ಮೋದಿ ಹವಾ'' ಮುಂದುವರಿದಿದೆ ಎಂಬುದನ್ನು ಸಾಬೀತುಪಡಿಸಿವೆ. ಪಶ್ಚಿಮ ಬಂಗಾಳದ ಫಲಿತಾಂಶವು ದೇಶದ ಪ್ರಜಾಪ್ರಭುತ್ವ, ನ್ಯಾಯಾಂಗ ವ್ಯವಸ್ಥೆ ಮೇಲೆ ಜನರ ನಂಬಿಕೆಗೆ ದೊಡ್ಡ ಜಯ ತಂದುಕೊಟ್ಟಿದೆ. ಮಮತಾ ಬ್ಯಾನರ್ಜಿ ಆಡಳಿತದಲ್ಲಿ ರಾಜ್ಯದ ಜನತೆ ಅನೇಕ ಸವಾಲು ಎದುರಿಸುತ್ತಿದ್ದರು. ಇದೀಗ ಬಂದಿರುವ ಫಲಿತಾಂಶವು ಆ ರಾಜ್ಯದಲ್ಲಿ ಬದಲಾವಣೆ ಆಶೆ ಮೂಡಿಸಿದ್ದು, ದೇಶದ ಜನರು ಈ ಬೆಳವಣಿಗೆ ಸ್ವಾಗತಿಸುತ್ತಿದ್ದಾರೆ.

ಇನ್ನೊಂದೆಡೆ, ರಾಜ್ಯದ ಎರಡು ವಿಧಾನಸಭಾ ಉಪಚುನಾವಣೆಗಳಲ್ಲಿ ನಮ್ಮ ಅಭ್ಯರ್ಥಿಗಳು ಜಯ ಸಾಧಿಸದಿರುವುದು ನಮಗೆ ಸ್ವಲ್ಪ ನಿರಾಶೆ ತಂದಿದೆ.

ಆದಾಗ್ಯೂ, ಇದನ್ನು ಪಾಠವಾಗಿ ತೆಗೆದುಕೊಂಡು ಮುಂದಿನ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಸಂಘಟನೆ ಬಲಪಡಿಸುವ ಕಾರ್ಯ ಇನ್ನಷ್ಟು ತೀವ್ರಗೊಳಿಸಲಾಗುತ್ತದೆ. ಬಿಜೆಪಿ ಪಕ್ಷವು ಸದಾ ಜನಸೇವೆಗೆ ಬದ್ಧವಾಗಿದ್ದು, ಜನರ ಆಶೀರ್ವಾದದೊಂದಿಗೆ ಮುಂದಿನ ದಿನಗಳಲ್ಲಿ ಉತ್ತಮ ಸಾಧನೆ ಮಾಡುವ ವಿಶ್ವಾಸ ಹೊಂದಿದೆ. ಅಸ್ಸಾಂ ರಾಜ್ಯದಲ್ಲಿ ಸತತ 3ನೇ ಬಾರಿಗೆ ಅಧಿಕಾರದ ಗದ್ದುಗೆ ಏರುವ ಮೂಲಕ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿದೆ. ಪುದುಚೇರಿಯಲ್ಲಿ ಜನರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ನಮ್ಮ ಪಕ್ಷ ಯಶಸ್ವಿಯಾಗಿದೆ. ತಮಿಳುನಾಡು, ಕೇರಳದಲ್ಲಿಯೂ ಎನ್‌ಡಿಎ ಮುಂದಿನ ದಿನಮಾನಗಳಲ್ಲಿ ದೇಶದ ಉಳಿದ ಭಾಗಗಳ ಮತದಾರರಂತೆ ಈ ರಾಜ್ಯಗಳ ಮತದಾರರು, ಎನ್‌ಡಿಎ ಕೈಹಿಡಿಯಲಿದ್ದಾರೆ ಎಂದರು.

ಶರಣರ ಚಿಂತನೆ ಅಳವಡಿಸಿಕೊಳ್ಳಿ: ಬಸವಲಿಂಗ



ಯಲಬುರ್ಗಾ: ಶರಣರ ಸಂತರ ಮಹಾತ್ಮರ ಚಿಂತನೆ ಜೀವನದಲ್ಲಿ ಅಳವಡಿಸಿಕೊಂಡು ಸಂಘದೊಂದಿಗೆ ಬದುಕಿದಾಗ ಮಾತ್ರ ಬೀಜ ಅಂಕುರ ವೃಕ್ಷದಂತೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ಬೇಲೂರು ಬಾದಾಮಿ ಡಾ.ಬಸವಲಿಂಗ ಮಾಹಂತಸ್ವಾಮಿ ಹೇಳಿದರು.

ತಾಲೂಕಿನ ಕೋಳಿಹಾಳ ಗ್ರಾಮದಲ್ಲಿ ಮಲ್ಲೀನಾಥಶರಣರಸ್ಮರಣಾರ್ಥವಾಗಿ207ನೇ ಮಾಸಿಕ ಸಂಚಾರಿ ಶಿವಾನುಭವ ಗೋಷ್ಠಿ ಹಾಗೂ ಮುದುಕಪ್ಪ ಇಂಗಳದಾಳ 19ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರವದಲ್ಲಿ ಮಾತನಾಡಿ, 12ನೇ ಶತಮಾನದಲ್ಲಿ ಅಧ್ಯಾತ್ಮಿಕ ಪ್ರಜ್ಞೆಯಿಂದ ಕೂಡಿದ ಸಾಮಾಜಿಕ ಆಂದೋಲನಕ್ಕೆ ನಾಂದಿ ಹಾಡಿದ ಬಸವಣ್ಣನವರು ಇಂದಿಗೂ ಕೋಟ್ಯಂತರ ಜನರ ಹೃದಯ ಸಿಂಹಾಸನದಲ್ಲಿ ರಾರಾಜಿಸುತ್ತಿದ್ದಾರೆ ಎಂದರು.

ಶರಣ ಸಾಹಿತಿ ದೇವಪ್ಪ ಖಾನಿಹಾಳ ಮಾತನಾಡಿ, ಶಿವನು ಬೇರೆ ಅಲ್ಲ, ಬಸವಣ್ಣನು ಬೇರೆ ಅಲ್ಲ, ಶಿವ ಅಂದರೆ ಬಸವ, ಬಸವ ಎಂದರೆ ಶಿವ ಅವಿನಾಭಾವ ಸಂಬಂಧ ಸೂಚಿಸುತ್ತದೆ. ಒಳಗಿನಸಾರಒಂದೇಯಾಗಿದೆಬೀಜದೊಳಗಿರುವ ಸೂಕ್ಷ್ಮ ಸಸಿಯೇ ಅಂಕುರ. ಹಾಗೆಯೇ, ಜಗತ್ತಿನ ಕಣಕಣದಲ್ಲಿ ದೇವರು ಅಡಗಿದ್ದಾನೆ ಬೀಜದೊಳಗೆ ಅಂಕುರವಿರ್ಪುದು ಎಂಬುದು ಬಸವಣ್ಣನವರ ಪ್ರಸಿದ್ಧ ವಚನವಾಗಿದೆ ಎಂದರು.

ಮಾತೋಶ್ರೀ ಗಂಗಮ್ಮ ಕುರಕುಂದಿ ಹಾಗೂ ನಿವೃತ್ತ ಉಪನ್ಯಾಸಕ ಟಿ.ಬಸವರಾಜ ಕುಷ್ಟಗಿ, ದೊಡ್ಡಬಸಯ್ಯ ಪೂರಾಣಿಕಮಠ, ಮಹಾದೇವಪ್ಪ ಚನ್ನಳ್ಳಿ, ಬಸವರಾಜ ತುರ್ವಿಹಾಳ, ಶರಣಪ್ಪ ಅಸಬಿ, ಹಂಪಣ್ಣ ತಾವರಗೇರಿ, ಬಸವರಾಜ ವರದಾಪುರ, ಸುಭಾಷ ಕೋರಿ, ಬಸವರಾಜಪ್ಪ ಇಂಗಳದಾಳ, ರುದ್ರಪ್ಪ ವರದಾಪುರ, ಅಮರೇಶಪ್ಪ ಬಳ್ಳಾರಿ, ಹನುಮಂತಪ್ಪ ಹುಣಶಿಹಾಳ, ಶಿವಸಂಗಪ್ಪ ಬಿಜಕಲ್, ರುದ್ರಪ್ಪ ಹಳ್ಳಿ ಮತ್ತಿತರರು ಇದ್ದರು.

ಮಸರಕಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಉತ್ತಮ ಸಾಧನೆ

ರಾಯಚೂರು: ಜಿಲ್ಲೆ ದೇವದುರ್ಗ ತಾಲೂಕಿನ ಮಸರಕಲ್ ಪ್ರಾಥಮಿಕ ಆರೋಗ್ಯ ಕೇಂದ್ರವು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಜಾರಿಯಲ್ಲಿರುವ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳ (ಎನ್‌ಕ್ಯೂಎಎಸ್) ಪರಿಶೀಲನೆಯಲ್ಲಿ ಶ್ರೇಷ್ಠ ಸಾಧನೆ ಮಾಡಿ ರಾಷ್ಟ್ರೀಯ ಮಟ್ಟದ ಗುಣಮಟ್ಟ ಪ್ರಮಾಣಪತ್ರ ಪಡೆದುಕೊಂಡಿದೆ. ಇದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಡಿಎಚ್‌ಒ ಡಾ.ಸುರೇಂದ್ರಬಾಬು ಸಂತಸ ವ್ಯಕ್ತಪಡಿಸಿದ್ದಾರೆ.

ಇತ್ತೀಚಿಗೆಕೇಂದ್ರ ತಂಡದ ಮಹಾರಾಷ್ಟ್ರದ ಡಾ.ಶ್ರೀಶೈಲ ಪಾಟೀಲ, ತಮಿಳುನಾಡಿ ಕಾವೇರಿ ಸೇಲ್ವಿ ತಂಡ ಕೈಗೊಂಡ ಸಮಗ್ರ ಮೌಲ್ಯಮಾಪನದಲ್ಲಿ ಮಸರಕಲ್ ಶೇ.91.27 ಅಂಕ ಗಳಿಸಿರುವುದು ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಎಂದರು.

ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂಲಸೌಕರ್ಯ, ರೋಗಿ ಸ್ನೇಹಿ ಸೇವೆ, ಆಸ್ಪತ್ರೆ ಸ್ವಚ್ಛತೆ, ಔಷಧ ಲಭ್ಯತೆ, ತುರ್ತು ಚಿಕಿತ್ಸಾ ವ್ಯವಸ್ಥೆ, ದಾಖಲೆ ನಿರ್ವಹಣೆ ಸೇರಿದಂತೆ ಹಲವು ಅಂಶ ಸೂಕ್ಷ್ಮವಾಗಿ ಪರಿಶೀಲಿಸಲಾಗಿತು. ಈ ಎಲ್ಲ ವಿಭಾಗಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ತೋರಿದ ಪರಿಣಾಮ ಉನ್ನತ ಅಂಕ ಪಡೆದುಕೊಳ್ಳಲಾಗಿದೆ. ಇದನ್ನು ಮಾನದಂಡವಾಗಿ ಪರಿಗಣಿಸಿ ಜಿಲ್ಲೆಯ ಉಳಿದ ಕೇಂದ್ರ ಈ ದಿಶೆಯಲ್ಲಿ ರೂಪಿಸಲಾಗುವುದು ಎಂದರು.

ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಎನ್‌ಪೋಸ್ ರ್ಮೆಂಟ್ ಅಧಿಕಾರಿ ಗ್ರಾಮೀಣ ಪ್ರದೇಶಗಳಲ್ಲಿಯೂ ಉತ್ತಮ ಮತ್ತು ಮಾನದಂಡಗಳಿಗೆ ಅನುಗುಣವಾದ ಆರೋಗ್ಯ ಸೇವೆ ಒದಗಿಸುವ ಸರ್ಕಾರ ಉದ್ದೇಶ ಈ ಸಾಧನೆ ಸ್ಪಷ್ಟಪಡಿಸುತ್ತದೆ ಎಂದರು.



ನಿಗದಿತಮಾನದಂಡಕಟ್ಟುನಿಟ್ಟಾಗಿಅನುಸರಿಸಿ, ಆಸ್ಪತ್ರೆ ಎಲ್ಲ ವಿಭಾಗಗಳಲ್ಲಿ ಗುಣಮಟ್ಟ ಕಾಪಾಡಿಕೊಂಡಿರುವುದರಿಂದಲೇ ಈ ಯಶಸ್ಸು ಸಾಧ್ಯವಾಗಿದೆ. ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ಇತರ ಆರೋಗ್ಯ ಸಿಬ್ಬಂದಿಯ ಪರಿಶ್ರಮ, ಸಮರ್ಪಣೆ ಅಡಗಿದೆ ಎಂದರು.

ಜನಪ್ರತಿನಿಧಿಗಳು, ಶಾಸಕರು, ಸಂಸದರು, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದಿಂದ ನೀಡಿದ ಮಾರ್ಗದರ್ಶನ, ಬೆಂಬಲ ಈ ಸಾಧನೆ ಮಹತ್ವದ ಪಾತ್ರವಹಿಸಿದೆ. ಇದಕ್ಕಾಗಿ ತಾಲೂಕಾಧಿರೋಗ್ಯಾಧಿಕಾರಿ ಡಾ.ಬನದೇಶ, ಆಡಳಿತ ವೈದ್ಯಾಧಿಕಾರಿ ಡಾ.ಶಂಶುದ್ದೀನ್, ಜಿಲ್ಲಾ ಗುಣಮಟ್ಟ ಭರವಸೆ ಸಲಹೆಗಾರ ಹರೀಶ್ ಪತಂಗೆ, ಸತತ ನಿಗಾವಣೆ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳ ಸಲಹೆ ಸಿಬ್ಬಂದಿಗಳಾದ ಮಲ್ಲಯ್ಯ ಹಿರೇಮಠ, ಪರವೇಜ್, ಸೇರಿದಂತೆ ಎಲ್ಲ ಸಿಬ್ಬಂದಿಗಳ ಕಠಿಣ ಪರಿಶ್ರಮದಿಂದ ಈ ಪ್ರಮಾಣ ಪತ್ರ ಪಡೆದುಕೊಳ್ಳಲು ಸಾಧ್ಯವಾಯಿತು ಎಂದರು.

ಕಿರುಸುದ್ದಿ

ಪಂಚ ರಾಜ್ಯದಲ್ಲೂ ಬಿಜೆಪಿ ಬಲ: ರೂಪೇಶ



ಹೊಸಪೇಟೆ: ಪಶ್ಚಿಮ ಬಂಗಾಳ, ಪುದುಚೇರಿ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಪೂರ್ಣ ಬಹುಮತ ಸಾಧಿಸಿದ್ದು, ಕೇರಳ ಮತ್ತು ತಮಿಳುನಾಡಿನಲ್ಲೂ ನಿರೀಕ್ಷೆಗೂ ಮೀರಿ ಜನಬೆಂಬಲ ದೊರೆತಿದೆ. ದೇಶದ ಭದ್ರತೆ ದೃಷ್ಟಿಯಿಂದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು ಅತ್ಯಂತ ಮಹತ್ವದ್ದಾಗಿದೆ ಎಂದು ಹೊಸಪೇಟೆ ನಗರಸಭೆ ಅಧ್ಯಕ್ಷ ಎನ್.ರೂಪೇಶ ಕುಮಾರ ಹೇಳಿದರು.

ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಆರಂಭ

ಹಗರಿಬೊಮ್ಮನಹಳ್ಳಿ: ತಾಲೂಕಿನಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು, ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಸಹಾಯವಾಣಿ ಸ್ಥಾಪಿಸಲಾಗಿದೆ. ದೂ: 9945681246 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಪಡಿತರ ಸಾಗಾಟ: ಅಕ್ಕಿ ವಶ




ಸಿರುಗುಪ್ಪ: ತಾಲೂಕಿನಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಣೆ ಮಾಡುತ್ತಿದ್ದ ವಾಹನಗಳನ್ನು ಆಹಾರ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಸಿರುಗುಪ್ಪ ತಾಲೂಕು ಆಹಾರ ನಿರೀಕ್ಷಕ ವಿಜಯಕುಮಾರ್ ನೇತೃತ್ವದ ತಂಡ ದಾಳಿ ನಡೆಸಿ ತೆಕ್ಕಲಕೋಟೆಯಿಂದ ಸಿರುಗುಪ್ಪ ಮಾರ್ಗವಾಗಿ 35ರಿಂದ 40 ಕೆಜಿ ತೂಕದ 50 ಚೀಲಗಳಲ್ಲಿ 48,500 ರೂ. ಮೌಲ್ಯದ ಪಡಿತರ ಅಕ್ಕಿ ಹಾಗೂ ಬಂಡ್ರಾಲ್ ಗ್ರಾಮದಿಂದ ಸಿಂಧನೂರು ಕಡೆಗೆ ಗೂಡ್ಸ್ ವಾಹನದಲ್ಲಿ 35 ರಿಂದ 40 ಕೆಜಿ ತೂಕದ 90 ಚೀಲಗಳಲ್ಲಿ 87, 250ರೂ. ಸೇರಿದಂತೆ ಒಟ್ಟು 1,35,750 ಮೌಲ್ಯದ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನ ಚಾಲಕ ಮಹೇಶ್ ಹಾಗೂ ರಜಾಕ್ ಅಲಿ ವಿರುದ್ಧ ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಾಲಿಗರಿಗೆ ಈಗ ಸ್ವಾತಂತ್ರ್ಯ: ಸಂಜೀವ ರೆಡ್ಡಿ



ವಿಜಯನಗರ: ದೇಶದ್ರೋಹಿ ಹಾಗೂ ಸಮಾಜಘಾತುಕ ಚಟುವಟಿಕೆಗಳ ಕಾರಣ ಪಶ್ಚಿಮ ಬಂಗಾಳ ಸರ್ಕಾರ ದೇಶಕ್ಕೆ ಆಘಾತಕಾರಿಯಾಗಿ ಪರಿಣಮಿಸಿತ್ತು. ಭ್ರಷ್ಟಾಚಾರ, ದಬ್ಬಾಳಿಕೆ ಸೇರಿ ಜನ ವಿರೋಧಿ ಆಡಳಿತದಿಂದ ಅಲ್ಲಿಣ ಜನ ಬೇಸತ್ತಿದ್ದರು. ಟಿಎಂಸಿಯನ್ನು ಕಿತ್ತೊಗೆದಿದ್ದರಿಂದ ಈಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ ಎಂದು ಬಿಜೆಪಿ ವಿಜಯನಗರ ಜಿಲ್ಲಾಧ್ಯಕ್ಷ ಎಸ್.ಸಂಜೀವ ರೆಡ್ಡಿ ಹೇಳಿದರು. ಬಿಜೆಪಿ ವಿಜಯದ ಕುರಿತು ಹೇಳಿದ ಅವರು, 3 ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನವಾಗಿದೆ. ಬಾಂಗ್ಲಾದೇಶ ಹಾಗೂ ರೋಹಿಂಗ್ಯಾಗಳಿಂದ ಸ್ಥಳೀಯರನ್ನು ರಕ್ಷಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಗೆಲುವು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಬಿಜೆಪಿ ಗೆಲುವು ದೇಶ ವಿರೋಧಿಗಳಿಗೆ ತಕ್ಕ ಪಾಠ



ವಿಜಯನಗರ ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಜನ ಬೆಂಬಲ ವ್ಯಕ್ತವಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಮತ್ತಷ್ಟು ಬಲಪಡಿಸಿದೆ ಎಂದು ವಿಜಯನಗರ ಮಾಜಿ ಜಿಲ್ಲಾಧ್ಯಕ್ಷ ಹಾಗೂ ಬಳ್ಳಾರಿ ವಿಭಾಗ ಸಹ ಪ್ರಭಾರಿ ಚನ್ನಬಸವನಗೌಡ ಪಾಟೀಲ್ ಹೇಳಿದರು. ಬಿಜೆಪಿ ಗೆಲುವಿನ ಉದ್ದೇಶಿಸಿ ಮಾತನಾಡಿ ಅವರು, ಪಶ್ಚಿಮ ಬಂಗಾಳದಲ್ಲಿ ಪಾಕಿಸ್ತಾನ, ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಆಶ್ರಯ ನೀಡುತ್ತಿದ್ದ ದೇಶದ್ರೋಹಿ ಶಕ್ತಿಗಳನ್ನು ಜನತೆ ಅಧಿಕಾರದಿಂದ ದೂರವಿಟ್ಟಿದ್ದಾರೆ. ಅಲ್ಲದೇ, ಶೇ.33ರಷ್ಟು ಮಹಿಳಾ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದ ಕಾಂಗ್ರೆಸ್ ಹಾಗೂ ಅದರ ಮೈತ್ರಿ ಪಕ್ಷಗಳಿಗೆ ಜನತೆ ತಕ್ಕ ಪಾಠ ಕಲಿಸಿದ್ದಾರೆ. ಇದು ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯ ದಿಕ್ಸೂಚಿಯಾಗಿದೆ ಎಂದರು.



ಬಳ್ಳಾರಿ: ತಾಲೂಕಿನ ಸಿರಿಗೆರೆ ಗ್ರಾಮದಲ್ಲಿನ ಕೆರೆ ಅಭಿವೃದ್ಧಿ ಪಡಿಸಿ ಜನರ ಅನುಕೂಲಕ್ಕಾಗಿ ಆಧಾರ್ ಸೇವಾ ಕೇಂದ್ರ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಗ್ರಾಮದ ನಿಮಗಾಗಿ ನಾವು ಸಂಸ್ಥೆ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಸಂಸ್ಥೆ ಪದಾಧಿಕಾರಿಗಳಾದ ಕೊಳ್ಳಿ ಶೇಖರ್, ಹಳ್ಳಿ ಮರದ ನಾಗರಾಜ್, ಶಿವಾಜಿ ರಾವ್, ಪುನೀತ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹೊಸಪೇಟೆಯಲ್ಲಿ ಬಿಜೆಪಿ ಸಂಭ್ರಮಾಚರಣೆ

ವಿಜಯನಗರ: ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಗೆಲುವು ಸಾಧಿಸಿದ್ದರಿಂದ ಹೊಸಪೇಟೆಯಲ್ಲಿ ಬಿಜೆಪಿ ವಿಜಯೋತ್ಸವವನ್ನು ನಗರದ ಡಾ.ಪುನೀತ್ ರಾಜ್‌ಕುಮಾರ್ ಸರ್ಕಲ್‌ನಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿ, ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಿಸಿದರು. ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ವಕ್ತಾರ ಅಶೋಕ ಜೀರೆ, ಪ್ರಧಾನಿ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಹಾಗೂ ಅಮಿತ್ ಶಾ ಸೇರಿದಂತೆ ಬಿಜೆಪಿ ನಾಯಕರ, ಕಾರ್ಯಕರ್ತರ ಪರಿಶ್ರಮದ ಫಲವಾಗಿ 3ರಾಜ್ಯಗಳಲ್ಲಿ ಜಯ ಸಾಧಿಸಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಸಹ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು. ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್ ಮಾತನಾಡಿ, ಪಶ್ಚಿಮ ಬಂಗಾಳದ ಜನ ಬಿಜೆಪಿಗೆ ಅಭೂತಪೂರ್ವ ಗೆಲುವು ನೀಡುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ ಎಂದರು. ಹೊಸಪೇಟೆ ಮಂಡಲ ಅಧ್ಯಕ್ಷ ಶಂಕರ್ ಮೇಟಿ ಮಾತನಾಡಿದರು. ನಗರಸಭೆ ಉಪಾಧ್ಯಕ್ಷ ಬಿ.ಜೀವರತ್ನಂ, ಸದಸ್ಯ ಎಸ್.ಎಲ್ ಆನಂದ್, ಪಕ್ಷದ ಪ್ರಮುಖರಾದ ಬಸವರಾಜ ನಲತ್ವಾಡ್, ಗುಜ್ಜಲ್ ಶ್ರೀನಿವಾಸ, ರಾಮಾಜೀ ನಾಯ್ಕ್, ಕಿಚಡಿ ಕೊಟ್ರೇಶ್, ಜಗದೀಶ್ ಕಮಟಗಿ, ರೇವಣ್ಣ ಸಿದ್ದಪ್ಪ, ಮಂಡಲ ಪ್ರಧಾನ ಕಾರ್ಯದರ್ಶಿ ಮಧುರಚನ್ನ ಶಾಸ್ತ್ರಿ ಹಿರೇಮಠ್, ಎಚ್ ನಟರಾಜ್, ದ್ವಾರಕೀಶ್, ಡಿ.ತಿರುಮಲೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ಎಂ.ಬಿ.ಉಮಾದೇವಿ, ಕಾರ್ಯದರ್ಶಿ ಶಾಂತಮ್ಮ ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಕಾರ್ಯಕರ್ತರು ಪಾಲ್ಗೊಂಡಿದ್ದರು.



ಕುರುಗೋಡು: ಸಮೀಪದ ದೇವಲಾಪುರ ಗ್ರಾಮದಲ್ಲಿ ಕಂಡಲೇರು ಗೋತ್ರದ ನೀಲಿಗಿರಿ ಪಟ್ಟದ ನೀಲಿಗಿರೇಶ್ವರ, ವಸಿಗೇರಪ್ಪ, ಮಲ್ಲೇಶ್ವರ, ಬೀರಲಿಂಗೇಶ್ವರ, ಹೀರಲಿಂಗೇಶ್ವರ, ನೀಲಿಗಿರೇಶ್ವರ ಸಿರವಾರ, ನೀಲಿಗಿರೇಶ್ವರ ಹುಲಕುರ್ತಿ, ಮಲೇಶ್ವರ ಹುಲಕುರ್ತಿ, ಮುರುಗಿಸಿದ್ದೇಶ್ವರ ಹುಲಕಿರ್ತಿ ದೇವರ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು.

ಪಂಚ ರಾಜ್ಯಗಳ ಚುನಾವಣೆ | ಬಿಜೆಪಿ ಸಂಭ್ರಮಾಚರಣೆ

ಪ.ಬಂಗಾಳನಲ್ಲಿ ಅರಳಿದ ಕಮಲ

ಬಳ್ಳಾರಿ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಅಸ್ಸಾಂ, ಪಾಂಡಿಚೇರಿ, ವಿಶೇಷವಾಗಿ ಪಶ್ಚಿಮ ಬಂಗಾಳ ನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, ಈ ಗೆಲುವಿನ ಗಾಳಿ ರಾಜ್ಯಕ್ಕೂ ಬೀಸಲಿದೆ. ಇದು ದೇಶದ ಕಾರ್ಯಕರ್ತರ ಗೆಲುವಾಗಿದೆ. ರಾಜ್ಯದ ಮೇಲು ಈ ಗಾಳಿ ಬೀಸಲಿದೆ. ಈ ಫಲಿತಾಂಶ ಗಮನಿಸಿದರೆ, ಇಡೀ ದೇಶ ಬಿಜೆಪಿ ಪರವಾಗಿದೆ. ಈ ಶಕ್ತಿ ರಾಜ್ಯ, ಜಿಲ್ಲೆಯಲ್ಲಿ ಅಪ್ಪಳಿಸಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಹೇಳಿದರು.

ಪಶ್ಚಿಮ ಬಂಗಾಳ, ಪಾಂಡಿಚೇರಿ, ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಇಲ್ಲಿನ ಬಿಜೆಪಿ ಕಾರ್ಯಕರ್ತರು ನಗರದ ಹೃದಯ ಭಾಗ ರಾಯಲ್ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸೋಮವಾರ ವಿಜಯೋತ್ಸವ ಆಚರಣೆಯಲ್ಲಿ ಮಾತನಾಡಿದರು.

ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ ಮಾತನಾಡಿ, ಪ್ರಧಾನಿಮಂತ್ರಿ ನರೇಂದ್ರ ಮೋದಿ ಜನಪರ ಆಡಳಿತಕ್ಕೆ ಪಂಚರಾಜ್ಯಗಳ ಚುನಾವಣೆಯಲ್ಲಿ ಜನರು ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ. ಇದು ಸಂತಸ ಮೂಡಿಸಿದೆ. ಮೋದಿ ತಂತ್ರದಲ್ಲಿ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಕಮಲ ಅರಳಿದ್ದು, ಸ್ವಂತ ಬಲದ ಮೇಲೆ ಅಧಿಕಾರ ಚುಕ್ಕಾಣಿ ಹಿಡಿದಿದೆ. ಈ ಗೆಲುವಿನ ಓಟ ರಾಜ್ಯದಲ್ಲೂ ಮುಂದುವರಿಯಲಿದ್ದು, ಮತ್ತೆ ನಾವು ಇದೇ ಸ್ಥಳದಲ್ಲೇ ಸಂಭ್ರಮಾಚರಣೆ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಾಜಿ ಸಂಸದ ಸಣ್ಣ ಫಕೀರಪ್ಪ, ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ, ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಕೆ.ಹನುಮಂತಪ್ಪ, ಗುಡಿಗಂಟೆ ಹನುಮಂತಪ್ಪ, ಬಿಜೆಪಿ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಡಾ.ಅರುಣಾ ಕಾಮಿನೇನಿ ಸೇರಿದಂತೆ ಅನೇಕ ಗಣ್ಯರು, ನೂರಾರು ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಕೆ.ರಾಮಲಿಂಗಪ್ಪ, ಅಡವಿಸ್ವಾಮಿ, ಓಂ ಪ್ರಕಾಶ್, ಮಲ್ಲೇಶ್ ಕುಮಾರ್, ಎಚ್.ಓಬಳೇಶ್, ಹನುಮೇಶ ಉಪ್ಪಾರ, ಹಲಕುಂದಿ ವೀರನಗೌಡ, ಶಂಕ್ರಪ್ಪ, ರಾಘವೇಂದ್ರ ಎಸ್.ಚಲುವಾದಿ, ಹನುಮಂತಪ್ಪ ಕೋಳೂರು, ಎರಂಗಳಿ ತಿಮ್ಮಾರೆಡ್ಡಿ, ಶರಣು ಆರ್.ಸೋಮನಗೌಡ, ರಬಿಯಾ, ಡಾ.ರೇಣುಕಾ ಸೇರಿದಂತೆ ವಿವಿಧ ಗಣ್ಯರು, ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.



ರಾಜ್ಯದಲ್ಲಿ ಕಾಂಗ್ರೆಸ್ ಸಂಪೂರ್ಣ ಧೂಳಿಪಟ

ಪಂಚರಾಜ್ಯಗಳ ಚುನಾವಣೆಯಲ್ಲಿ ಅಸ್ಸಾಂ, ಪುದುಚೇರಿ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ ಜನವಿರೋಧಿ ಸರ್ಕಾರಕ್ಕೆ ಜನರು ತಕ್ಕ ಪಾಠ ಕಲಿಸಿದ್ದಾರೆ. ಬಿಜೆಪಿ ದೇಶದ ಜನರ ಪರವಾಗಿದೆ. ನಮ್ಮ ಮೋದಿ ಹಾಗೂ ಅಮಿತ್ ಶಾ ಅವರ ತಂತ್ರಕ್ಕೆ ಕಾಂಗ್ರೆಸ್ ಸಂಪೂರ್ಣ ನೆಲಕಚ್ಚಿದೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲೂ ಕಾಂಗ್ರೆಸ್ ಸಂಪೂರ್ಣ ಧೂಳಿಪಟವಾಗಲಿದೆ.

ಬುದ್ಧರ ತತ್ವ, ಆದರ್ಶ ಪಾಲಿಸಿ: ಡಿಸಿ

ಯಾದಗಿರಿ: ಭಗವಾನ್ ಗೌತಮ ಬುದ್ಧರ ತತ್ವ-ಸಿದ್ಧಾಂತಗಳು ವಿಶ್ವದಲ್ಲಿ ಪ್ರಭಾವ ಬೀರಿದ್ದು, ನಾಗರಿಕತೆ ಬದಲಾವಣೆಯಲ್ಲಿಯೂ ಅವರ ಮೂಲ ಸಿದ್ಧಾಂತಗಳು ಅಪಾರ ಕೊಡುಗೆ ನೀಡಿವೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಹೇಳಿದರು.

ನಗರದ ಲುಂಬಿನಿ ಉದ್ಯಾನವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಭಗವಾನ್ ಬುದ್ಧ ಜಯಂತ್ಯುತ್ಸವ ಸಮಿತಿ ಇವರ ಸಹಯೋಗದಲ್ಲಿ ಆಯೋಜಿಸಿದ ಭಗವಾನ್ ಬುದ್ಧ ರ ಜಯಂತ್ಯುತ್ಸವದಲ್ಲಿ ಬುದ್ಧರ ಭಾವಚಿತ್ರ, ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಧೀಕ್ಷಾ ಭೂಮಿಗೆ ಹೋಗುವ ನಾಗರಿಕರಿಗೂ ಸರ್ಕಾರ ಇಂದು ಅನುವು ಮಾಡಿಕೊಟ್ಟಿದ್ದು, ಈ ಧರ್ಮ ಸಮಾಜದ ಮೇಲೂ ಅಗಾಧವಾದ ಪ್ರಭಾವ ಬೀರುತ್ತಿದೆ ಎಂದರು.

ಸಾಹಿತಿ ರವೀಂದ್ರನಾಥ ಹೊಸಮನಿ ಉಪನ್ಯಾಸ ನೀಡಿದರು.

ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಮಾತನಾಡಿ, ಭಗವಾನ್ ಗೌತಮ್ ಬುದ್ಧ ವಿಶ್ವಕ್ಕೆ ಶಾಂತಿ ಸಂದೇಶ ಸಾರಿದರು. ಸತ್ಯ,ಅಹಿಂಸೆ, ಶಾಂತಿಮಂತ್ರ, ಪ್ರೀತಿ, ಕರುಣೆ, ಪ್ರಜ್ಞೆಗಳ ಬಗ್ಗೆ ದಾರಿ ತೋರಿದರು. ಬೌದ್ಧ ಧರ್ಮ ವಿಶ್ವದ ಅನೇಕ ದೇಶಗಳಲ್ಲಿ ವ್ಯಾಪಿಸಿದೆ. ಭಾರತ ಮಹಾನ್ ದೇಶ ಎಂದೆನಿಸಲು ಗೌತಮ್ ಬುದ್ಧ ಕಾರಣ ಎಂದು ಹೇಳಿ ಬುದ್ಧನ ಆದರ್ಶ ತತ್ವ ಸಿದ್ಧಾಂತ ಜೀವನದಲ್ಲಿ ಪಾಲಿಸಿದಲ್ಲಿ ಜೀವನ ಯಶಸ್ವಿಗೆ ಸಹಕಾರಿಯಾಗಲಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಪಂ ಸಿಇಒ ಲವೀಶ್ ಒರಡಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಬೌದ್ಧ ಧರ್ಮ ಗುರು ಬಂತೇಜಿ , ಸಮಿತಿ ಅಧ್ಯಕ್ಷ ಬಾಬುರಾವ್ ಬುತಾಳೆ, ಉಪಸ್ಥಿತರಿದ್ದರು. ಮಂಜುನಾಥ ಗುರಸಣಗಿ ಸ್ವಾಗತಿಸಿದರು.

> ಜಾತಿ ವ್ಯವಸ್ಥೆಯನ್ನು ಪ್ರಪ್ರಥಮ ಬಾರಿಗೆ ವಿರೋಧಿಸಿದವರು ಗೌತಮ ಬುದ್ಧರು. ಭಗವಾನ್ ಬುದ್ಧರ ಅಹಿಂಸಾ ಮಾರ್ಗ, ತತ್ವಜ್ಞಾನವು ಎಲ್ಲರ ಜೀವನಕ್ಕೆ ಸಂದೇಶವಾಗಿದೆ.
>
> ■ **ಹರ್ಷಲ್ ಭೋಯರ್, ಡಿಸಿ**



ಬಿಜೆಪಿ ಗೆಲುವು ಐತಿಹಾಸಿಕ: ಚಿಂಚೋಳಿ

ಹುಣಸಗಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದ ಪ್ರಯುಕ್ತ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಬಿಜೆಪಿ ಮುಖಂಡ ವಿರೇಶ ಸಾಹು ಚಿಂಚೋಳಿ ಮಾತನಾಡಿ, ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನವಾಗಿದೆ. ಐದು ರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಐತಿಹಾಸಿಕ ಗೆಲುವು ದಾಖಲಿಸಿದೆ. ಪಶ್ಚಿಮ ಬಂಗಾಳದ ಜನ ಬಿಜೆಪಿಗೆ ಅಭೂತಪೂರ್ವ ಗೆಲುವು ನೀಡುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ. ಮುಕ್ತ, ನ್ಯಾಯ ಸಮ್ಮತ ಚುನಾವಣೆ ಹಾಗೂ ಹಿಂದೂಗಳ ಒಗ್ಗಟ್ಟಿನ ಪ್ರಯತ್ನದ ಪ್ರತಿಫಲ ಇದಾಗಿದೆ ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಸಂಗಣ್ಣ ಸಾಹು ವೈಲಿ ಮಾತನಾಡಿ, 3 ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನವಾಗಿದೆ. ದೇಶದ್ರೋಹಿ ಹಾಗೂ ಸಮಾಜಘಾತುಕ ಚಟುವಟಿಕೆಗಳ ಕಾರಣ ಪಶ್ಚಿಮ ಬಂಗಾಳ ಸರ್ಕಾರ ದೇಶಕ್ಕೆ ಆಘಾತಕಾರಿಯಾಗಿ ಪರಿಣಮಿಸಿತ್ತು. ಭ್ರಷ್ಟಾಚಾರ, ದಬ್ಬಾಳಿಕೆ ಸೇರಿ ಜನ ವಿರೋಧಿ ಆಡಳಿತದಿಂದ ಅಲ್ಲಿಯ ಜನ ಬೇಸತ್ತಿದ್ದರು. ಟಿಎಂಸಿಯನ್ನು ಕಿತ್ತೊಗೆದಿದ್ದರಿಂದ ಈಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೇಲಪ್ಪ ಗುಳಗಿ ಮಾತನಾಡಿ, ಪ್ರಧಾನಿ ಮೋದಿ ನಾಯಕತ್ವದಲ್ಲಿ ದೇಶ ಎತ್ತರಕ್ಕೆ ಏರುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಘಟನೆ ಶಕ್ತಿಯಿಂದ ಪಕ್ಷ ಇನ್ನಷ್ಟು ಬಲಿಷ್ಠವಾಗಿದೆ. ಈ ಗೆಲುವು ಕೇವಲ ರಾಜಕೀಯ ಜಯವಲ್ಲ, ಇದು ಜನರ ವಿಶ್ವಾಸದ ಪ್ರತಿಫಲ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ ಎಂದರು.

ಅಮರಣ್ಣ ದೇಸಾಯಿ, ಕಿಡಗೆಣ್ಣಯ್ಯ ದೇಸಾಯಿಗುರು, ವೀರೂಪಾಕ್ಷಯ್ಯ ಸ್ಥಾವರಮಠ,ಮಲ್ಲುಹೆಬ್ಬಾಳ,ನಾಗಯ್ಯಸ್ವಾಮಿ ದೇಸಾಯಿಗುರು, ಗುರಲಿಂಗಣ್ಣ ಸಜ್ಜನ್, ಆನಂದಮುತ್ಯಾ ಹೀರೇಮಠ, ಚಂದ್ರಶೇಖರ್ ಪಟ್ಟಣಶೆಟ್ಟಿ, ಹಳ್ಳೆಪ್ಪ ಗುತ್ತೇದಾರ, ಮಲ್ಲಿಕಾರ್ಜುನ ದೇಸಾಯಿ, ಅನೀಲ್ ಬಳಿ, ಶಿವರುದ್ರ ದೇಸಾಯಿ, ಆನಂದ ಬಾರಿಗಿಡ, ಗೋಪಾಲ ಹುಲಿಮನಿ, ಸಿದ್ದು ಮೇಲಿನಮನಿ, ಬಾಬು ರಾಠೋಡ, ಅಶೋಕ ನಗನೂರ, ಮಲ್ಲು ದೇಸಾಯಿ ಸೇರಿದಂತೆ ಇನ್ನಿತರರು ಇದ್ದರು.



ಕಾರ್ಮಿಕರಿಗೆ ನರೇಗಾ ಯೋಜನೆ ಸಮರ್ಪಕವಾಗಿ ತಲುಪಲಿ: ಶೈನಾಜ್

ಹೂವಿನಹಡಗಲಿ: ಕಳೆದ ಮೂರು ವರ್ಷಗಳಿಂದ ಮಹಾತ್ಮ ಗಾಂಧಿ ನರೇಗಾ ಯೋಜನೆ ಸರಿಯಾಗಿ ಅನುಷ್ಠಾನವಾಗುತ್ತಿಲ್ಲ. ದುಡಿಯುವ ಕೈಗಳಿಗೆ ನೂರು ದಿನಗಳ ಕೆಲಸ ಸಿಗುತ್ತಿಲ್ಲ 15 ದಿನಗಳ ಒಳಗಾಗಿ ಬರಬೇಕಾದ ಕೂಲಿ ಮೂರು ತಿಂಗಳು ನಾಲ್ಕು ತಿಂಗಳುಗಳಾದರು ಪಾವತಿಯಾಗಿಲ್ಲ, ನರೇಗಾ ಕಾರ್ಮಿಕರ ಕೈಪ್ಪಿದೆ ಎಂಬ ಭಯ ಕಾರ್ಮಿಕರಿಗೆ ಎದುರಾಗುತ್ತಿದೆ. ಕೆಲಸದ ಭದ್ರತೆ ಇಲ್ಲದಂತಾಗಿದೆ ಎಂದು ಗ್ರಾಕೋಸ್ ಜಿಲ್ಲಾ ಕಾರ್ಯಕರ್ತೆ ಶೈನಾಜ್ ಬೇಗಂ ಹೇಳಿದರು.

ತಾಲೂಕಿನ ಸೋಗಿ ಗ್ರಾಮದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಗ್ರಾಕೂಸ್ ಇವರಿಂದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಸಚಿವ ಪ್ರಿಯಾಂಕ ಖರ್ಗೆಗೆ ತಲುಪುವಂತೆ ತಾಪಂ ಎಡಿ ಮೂಲಕ ತಾಪಂ ಅಧಿಕಾರಿ ಜಿ. ಪರಮೇಶ್ವರಪ್ಪ ಇವರಿಗೆ ಮಹಾತ್ಮ ಗಾಂಧಿ ನರೇಗಾ ಸಮರ್ಪಕ ಅನುಷ್ಠಾನಕ್ಕಾಗಿ ಮನವಿ ಸಲ್ಲಿಸಿ ಮಾತನಾಡಿದರು.

ನರೇಗಾ ಸಮರ್ಪಕ ಅನುಷ್ಠಾನಕ್ಕಾಗಿ ನಮ್ಮ ಹಕ್ಕುಗಳನ್ನು ಕಾನೂನಾತ್ಮಕವಾಗಿ ಕೇಳುತ್ತಿದ್ದೇವೆ. ಈ ವರ್ಷದ ಕ್ರಿಯಾಯೋಜನೆ ಅನುಮೋದನೆ ಕೊಡಿ ನಂತರ ಕೆಲಸ ಕೊಡಿ, 600ರೂ. ದಿನಗೂಲಿ ಮೊತ್ತ ಹೆಚ್ಚಿಸಿ, ಕೆಲಸದ ಸ್ಥಳದಲ್ಲಿ ಮೃತರಾದರೆ ಕಾರ್ಮಿಕರ ಕುಟುಂಬಕ್ಕೆ 10 ಲಕ್ಷ ರೂ. ಒದಗಿಸಬೇಕು. ಬಾಕಿ ಕೂಲಿ ಹಣ ಕೂಡಲೇ ಪಾವತಿ ಮಾಡಿ, 6.30% ಬಿಸಿಲಿನ ತಾಪಮಾನವಿದ್ದು ಕಡಿಮೆ ಕೆಲಸಕ್ಕೆ ಆದೇಶ ಮಾಡಿಕೊಡಿ. ಈ ಎಲ್ಲ ಮಹಾತ್ಮ ಗಾಂಧಿ ನರೇಗಾ ಯೋಜನೆ ಸಮರ್ಪಕವಾಗಿ ದುಡಿಯುವ ಕೈಗಳಿಗೆ ಮುಟ್ಟಬೇಕು ಎಂದರು.

ಗ್ರಾಕೋಸ್ ಸಂಘಟನೆ ತಾಲೂಕು ಅಧ್ಯಕ್ಷ ಐನಳ್ಳಿ ಮಹಾಬಲೇಶ್, ಜಿಲ್ಲಾ ಕಾರ್ಯಕರ್ತ ಮಲ್ಲೇಶ್, ತಾಲೂಕು ಕಾರ್ಯಕರ್ತರಾದ ಕೆ. ಮಹಮ್ಮದ್, ಇಲಾಜ್, ಎಚ್. ಮಂಜುನಾಥ್, ವೀರೇಶ್, ಜಿ.ಸಿ.ಬಸವನಗೌಡ, ನರೇಗಾ ಕೂಲಿ ಕಾರ್ಮಿಕರು ಇತರರಿದ್ದರು.



ಸಿಹಿ ಹಂಚಿ ಬಿಜೆಪಿ ಸಂಭ್ರಮಾಚರಣೆ

ಯಾದಗಿರಿ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸೋಂನಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದ ಹಿನ್ನೆಲೆ ಯಾದಗಿರಿ ಜಿಲ್ಲಾ ಬಿಜೆಪಿ ಸಂಭ್ರಮಾಚರಣೆ ಮಾಡಲಾಯಿತು ಪಶ್ಚಿಮ ಬಂಗಾಳದಲ್ಲಿ ಪಡೆದ ಜಯಕ್ಕಾಗಿ ದೀದಿ ಹೋದ್ರು, ದುರ್ಗಾ ಬಂದರು ಎಂಬ ಘೋಷಣೆಯೊಂದಿಗೆ ಸಂಭ್ರಮಾಚರಣೆ ನಡೆಸಿದರು.

ನಗರದ ಸುಭಾಷ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಈ ವೇಳೆ, ಬಿಜೆಪಿ ಪಕ್ಷಕ್ಕೆ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ಜಯಕಾರ ಹಾಕಿದರು.

ಈ ವೇಳೆ ಮಾತನಾಡಿದ ಮುಖಂಡರು, ದೇಶದಲ್ಲಿ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಮತದಾರರು ಸ್ಪಷ್ಟವಾಗಿ, ಮೋದಿ ಜೀ ಹಾಗೂ ಭಾರತೀಯ ಜನತಾ ಪಕ್ಷದ ಪರವಾಗಿ ನಿಲುವನ್ನು ವ್ಯಕ್ತಪಡಿಸುವುದನ್ನು ಫಲಿತಾಂಶದ ಮೂಲಕ ನೋಡುತ್ತಿದ್ದೇವೆ ಎಂದಿದ್ದಾರೆ.

ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿ ಮುದ್ನಾಳ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಅಲೆಮಾರಿ ಅರೆಅಲೆಮಾರಿ ನಿಗಮದ ಮಾಜಿ ಅಧ್ಯಕ್ಷ ದೇವಿಂದ್ರನಾಥ ನಾದ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರುಕುಂದಿ, ವೆಂಕಟರೆಡ್ಡಿ ಅಬ್ಬೆತುಮಕೂರು, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ನಗರಸಭೆ ಮಾಜಿ ಅಧ್ಯಕ್ಷ ವಿಲಾಸ್ ಪಾಟೀಲ್, ಯುಡ ಮಾಜಿ ಅಧ್ಯಕ್ಷ ರುದ್ರುಗೌಡ ಪಾಟೀಲ್, ಡಾ.ಶರಣರಡ್ಡಿ ಕೊಡ್ಲ, ಶ್ರೀ ದೇವಿ ಶೆಟ್ಟಿಹಳ್ಳಿ, ರಮಾದೇವಿ ಕಾವಲಿ, ಸ್ವಾಮಿದೇವ ದಾಸನಕೇರಿ, ರಮೇಶ್ ದೊಡಮನಿ, ರಾಜುಸ್ವಾಮಿ ಅನಂಪಲೀ, ಅಪ್ಪಣ್ಣ ಜೈನ್ ,ಮಂಜುನಾಥ ಜಡಿ,ಗೊವಿಂದಪ್ಪ ಖಾನಾಪುರ, ಚನ್ನವಿರಯ್ಯ ಸ್ವಾಮಿ, ಲಕ್ಷ್ಮೀಪುತ್ರ ಮಾಲಿಪಾಟೀಲ,ಮೋನೇಶ ಬೇಳಿಗೇರ,ದೇವಿಂದ್ರಪ್ಪ ಯರಗೋಳ, ಮಹದೇವಪ್ಪ ಗಣಪುರ, ಸಾಬು ಬಗಲಿ, ಮಲ್ಲುಸ್ವಾಮಿ ಗುರುಸುಣಗಿ, ಶಿವರಾಜ ಗುತ್ತೇದಾರ್, ಸಾಲು ಯಡ್ಡಳ್ಳಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.



ಪಂಚ ರಾಜ್ಯಗಳ ಚುನಾವಣೆ: ಬಿಜೆಪಿ ವಿಜಯೋತ್ಸವ

ಸಿರುಗುಪ್ಪ: ಪಂಚರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ಕಾರ್ಯಕರ್ತರು, ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಅವರ ನೇತೃತ್ವದಲ್ಲಿ ನಗರದ ಗಾಂಧೀ ವೃತ್ತದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು, ಗಣ್ಯರು ಪರಸ್ಪರ ಸಿಹಿ ತಿನ್ನಿಸುವ ಮೂಲಕ ವಿವಿಧ ಘೋಷಣೆ ಕೂಗಿ ಸಂಭ್ರಮಾಚರಣೆ ನಡೆಸಿದರು.

ನಗರದಲ್ಲಿ ಕೆಲಕಾಲ ಪಟಾಕಿ ಸದ್ದು ಎಲ್ಲರ ಗಮನಸೆಳೆಯಿತು. ಈ ವೇಳೆ ಭಾರತ ಮಾತಾ ಕೀ ಜೈ, ಬಿಜೆಪಿ ಜಿಂದಾಬಾದ್ ಘೋಷಣೆಗಳು ಮೊಳಗಿದವು. ಇದಕ್ಕೂ ಮುನ್ನ ಪಕ್ಷದ ಅನೇಕ ಗಣ್ಯರು, ನೂರಾರು ಕಾರ್ಯಕರ್ತರು ಮಹಾತ್ಮ ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಮಾತನಾಡಿ, ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ ದಾಖಲೆ ನಿರ್ಮಿಸಿದೆ. ನಮ್ಮ ಬಿಜೆಪಿ ಗೆಲುವಿನ ಓಟ ಮುಂದುವರೆದಿದ್ದು, ಅದು ರಾಜ್ಯಕ್ಕೂ ಅಪ್ಪಳಿಸಲಿದೆ, ಇದರಲ್ಲಿ ಅನುಮಾನವೇ ಬೇಡ. ಆನೆ ನಡೆದಿದ್ದೇ ದಾರಿ ಎನ್ನುವ ರೀತಿಯಲ್ಲಿ ಪಶ್ಚಿಮ ಬಂಗಾಳನಲ್ಲಿ ಮಮತಾ ಬ್ಯಾನರ್ಜಿ ಅವರ ಸರ್ವಾಧಿಕಾರಿ ಧೋರಣೆಗೆ ಅಲ್ಲಿನ ಜನರು ಮತದಾನ ಮಾಡುವ ಮೂಲಕ ಉತ್ತರ ನೀಡಿದ್ದಾರೆ. ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರಗೃಹ ಸಚಿವ ಅಮಿತ್ ಶಾ ಜೋಡಿ ತಂತ್ರದಿಂದ ಭಾರತೀಯ ಜನತಾ ಪಾರ್ಟಿ ಮೊದಲ ಬಾರಿಗೆ ಸ್ಪಷ್ಟ ಬಹುಮತ ಪಡೆಯುವ ಮೂಲಕ ಇತಿಹಾಸ ಸೃಷ್ಟಿಸಿದೆ. ನಮ್ಮ ಮೋದಿ ಅವರ ನೇತರತ್ವದ ಕೇಂದ್ರ ಸರ್ಕಾರದ ಸಾಧನೆ ಜನತೆ ಮೆಚ್ಚಿದ್ದು, ಇಡೀ ದೇಶವೇ ನಮ್ಮ ಮೋದಿ ನಾಯಕತ್ವ ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದ್ದಾರೆ. ರಾಜ್ಯದಲ್ಲಿ ಮತ್ತೆ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನ ಪಡೆಯುವ ಮೂಲಕ ಅಧಿಕಾರದ ಗದ್ದುಗೆ ಏರಲಿದೆ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ವೀರನಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮನಗೌಡ, ನಗರ ಸಭೆ ಸದಸ್ಯರಾದ ಮೇಕಲ್ ವೀರೇಶ್, ಮೋಹನ್ ರೆಡ್ಡಿ, ಮಹದೇವಪ್ಪ, ಬಿ.ಜಿ.ಹುಲಗಪ್ಪ, ಮುದಿಯಪ್ಪ, ಅಂಜಿ, ಗಾದಿಲಿಂಗ, ಬಸವರಾಜ, ಗಂಗಾಧರ, ದೇವೇಂದ್ರ, ಹುಲುಗಪ್ಪ, ರಾಜ, ವೀರೇಶ, ದ್ಯಾಮನಗೌಡ ಸೇರಿದಂತೆ ನೂರಾರು ಕಾರ್ಯಕರ್ತರು, ವಿವಿಧ ಮುಖಂಡರು ಭಾಗವಹಿಸಿದ್ದರು.



> ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿ ದಾಖಲೆ ಸೃಷ್ಟಿಸಿದೆ. ಇದು ನಮ್ಮ ಕಾರ್ಯಕರ್ತರ ಗೆಲುವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಜೋಡಿಗೆ ಮೆಚ್ಚಿ, ಕೇಂದ್ರ ಸರ್ಕಾರದ ಸಾಧನೆ ಮೆಚ್ಚಿ ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ. ಪಂಚ ರಾಜ್ಯಗಳ ಬಿಜೆಪಿ ಗೆಲುವಿನ ಓಟ ರಾಜ್ಯದಲ್ಲೂ ಮುಂದುವರೆಯಲಿದೆ, ಇದರಲ್ಲಿ ಅನುಮಾನವೇ ಬೇಡ.
>
> ■ **ಎಂ.ಎಸ್.ಸೋಮಲಿಂಗಪ್ಪ, ಮಾಜಿ ಶಾಸಕರು ಸಿರುಗುಪ್ಪ.**

ಕಾರ್ಖಾನೆ ಕಪ್ಪು ಧೂಳು: ಕ್ರಮಕ್ಕೆ ಆಗ್ರಹ

ಕುರುಗೋಡು: ಸಮೀಪದ ಕುಡತಿನಿ ಸುತ್ತ-ಮುತ್ತಲಿನರುವ ವಿವಿಧ ಕಾರ್ಖಾನೆಗಳಿಂದ ಹೊರಬಿಡುವ ಕಪ್ಪು ಧೂಳಿನಿಂದ ಊರಲ್ಲೆಲ್ಲಾ ಕಪ್ಪು ಧೂಳುಮಯವಾಗಿದೆ. ಮನೆಯ ಹೊರಗೆ ಒಳಗಡೆ ಧೂಳಿನಿಂದ ಮಿಶ್ರವಾಗಿರುವ ಗಾಳಿಯನ್ನೇ ಉಸಿರಾಡುವ ಪರಿಸ್ಥಿತಿ ಉದ್ಭವವಾಗಿ ಪರಿಸರ ಮಾಲಿನ್ಯವಾಗಿ ಹದಗೆಟ್ಟುಹೋಗಿದೆ. ಕೂಡಲೇ ಈ ಸಂಬಂಧಪಟ್ಟವರನ್ನು ಕರೆಯಿಸಿ ವಾಸ್ತವಾಂಶ ತಿಳಿಸಬೇಕೆಂದು ನಮ್ಮ ಕರ್ನಾಟಕ ಸೇನೆ ವತಿಯಿಂದ ಕೋರಿ ಆರಕ್ಷಕ ಠಾಣೆ ಕುಡುತಿನಿ ಇವರಿಗೆ ಮನವಿ ನೀಡಲಾಯಿತು.

ಈ ವೇಳೆ ನಮ್ಮ ಕರ್ನಾಟಕ ಸೇನಾ ಕುಡುತಿನಿ ಘಟಕದ ಅಧ್ಯಕ್ಷ ಬಾವಿ ಅಂಬರೀಶ್ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷ ತಿಮ್ಮಪ್ಪ ಮತ್ತು ಬಳ್ಳಾರಿ ಜಿಲ್ಲಾ ಅಧ್ಯಕ್ಷರು ಭಾವಿ ಶಿವಕುಮಾರ್ ಹಾಗೂ ಪೋಲೀಸ್ ಠಾಣೆ ಸಿಬ್ಬಂದಿ ಇತರರು ಇದ್ದರು.



ಸಾಮೂಹಿಕ ವಿವಾಹಗಳಿಂದ ಆರ್ಥಿಕ ಹೊರೆ ಕಡಿಮೆ: ಗಣೇಶ

ಕುರುಗೋಡು: ಸಾಮೂಹಿಕ ವಿವಾಹ ಕಾರ್ಯಕ್ರಮಗಳಿಂದ ಬಡವರ ಆರ್ಥಿಕ ಹೊರೆ ತಗ್ಗುತ್ತದೆ. ಇದರಿಂದ ವರದಕ್ಷಿಣೆ ಪಿಡುಗು ಕಡಿಮೆಯಾಗುವ ಮೂಲಕ ಜೀವನ ಸುಮಧುರವಾಗಿರುತ್ತದೆ ಎಂದು ಶಾಸಕ ಜೆ.ಎನ್.ಗಣೇಶ ಹೇಳಿದರು.

ಸಮೀಪದ ದೇವಲಾಪುರ ಗ್ರಾಮದಲ್ಲಿ ಕಂಡಲೇರು ಗೋತ್ರದ ನೀಲಿಗಿರಿ ಪಟ್ಟದ ದೇವರ, ನೀಲಿಗಿರೇಶ್ವರ ಪಟ್ಟದ ದೇವರು, ವಸಿಗೇರಪ್ಪ, ಮಲ್ಲೇಶ್ವರ, ಬೀರಲಿಂಗೇಶ್ವರ, ಹೀರಲಿಂಗೇಶ್ವರ, ನೀಲಿಗಿರೇಶ್ವರ ಸಿರವಾರ, ನೀಲಿಗಿರೇಶ್ವರ ಹುಲಕುರ್ತಿ, ಮಲೇಶ್ವರ ಹುಲಕುರ್ತಿ, ಮುರುಗಿಸಿದ್ದೇಶ್ವರ ಹುಲಕಿರ್ತಿ ದೇವರ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನೂತನ ವಧು-ವರರಿಗೆ ಆಶೀರ್ವಾದಿಸಿದ ನಂತರ ಮಾತನಾಡಿದರು.

ಪಟ್ಟದ ದೇವರ ಕಾರ್ಯಕ್ರಮದ ಸಾನ್ನಿಧ್ಯದಲ್ಲಿ ಮದುವೆಯಾದವರು ಗುರುಹಿರಿಯರನ್ನು ಗೌರವಿಸುವ ಮೂಲಕ ಆದರ್ಶ ದಂಪತಿಗಳಾಗಿ ಬಾಳಬೇಕು'ಎಂದು ತಿಳಿಸಿದರು.

ಹರಿಗಿಡೋಣ ಅಭಿನವ ಒಡೆಯರು ಸಿದ್ದಲಿಂಗಸ್ವಾಮಿ, ಶರಣಯ್ಯ ಸ್ವಾಮಿ, ರೋಹಿತ್ ಸ್ವಾಮಿ, ಗುರುಲಿಂಗಯ್ಯ ಶ್ರೀಗಳು, ಅಮಾಜಯ್ಯಸ್ವಾಮಿ, ವಿರುಪಾಕ್ಷಯ್ಯ ಸ್ವಾಮಿ, ಜಂಬಯ್ಯಶ್ರೀಗಳು ದಿವ್ಯ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ, ಉಚಿತ ಸಾಮೂಹಿಕ ನೆರವೇರಿದವು.ಬೆಳಿಗ್ಗೆ ಸಕಲ ವಾದ್ಯ ವೈಭವಗಳೊಂದಿಗೆ ಗಂಗೆಪೂಜೆ ಮತ್ತು ಮೆರವಣಿಗೆ ನಡೆಯಿತು. ನಂತರದ ಸಾಮೂಹಿಕ ವಿವಾಹದಲ್ಲಿ 33 ಜೋಡಿಗಳು ನೂತನ ವಸಂತಕ್ಕೆ ಕಾಲಿಟ್ಟರು.

ಕೆ.ಶ್ರೀನಿವಾಸರಾವ್, ಗೌಡ್ರು ಮರೇಗೌಡ, ಗೌಡ್ರು ಅಂಜಿನಪ್ಪ, ಸಮೂದಾಯದ ಹಿರಿಯ ಹಾಗೂ ಸೋಮಲಾಪುರ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯ ನಿರ್ವಾಹಕ ಗೌಡ್ರು ಡಿಂಡಿನ್ ಉಮೇಶಗೌಡ ಸೇರಿದಂತೆ ಕಂಡಲೇರು ಗೋತ್ರದ ಸಹೋದರರು, ಇತರೆ ಮುಖಂಡರು ಇದ್ದರು.